ಸಂಪುಟ: 09 ಸಂಚಿಕೆ: 228 ಪುಟಗಳು: 14 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ 216ನೇ ಫಲಪುಷ್ಪ ಪ್ರದರ್ಶನ ಆರಂಭಗೊಂಡಿದ್ದು, 30 ಲಕ್ಷ ಹೂವುಗಳಿಂದ ಸಂವಿಧಾನಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಜೀವನ, ಸಾಧನೆ ಮತ್ತು ಕಾರ್ಯಗಳ ಪುಷ್ಪ ಚಿತ್ತಾರ ಅನಾವರಣಗೊಂಡಿದೆ.

ಪುಟ ತೆರೆದಂತೆ...

ಬಿಡದೀ ಮಾತ್ರೆಯ ಹುಚ್ಚು, ದಿನಗಳೆದಂತೆ ಇನ್ನಷ್ಟು ಹೆಚ್ಚು!
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ಆ ಪುಟ್ಟಜೀವಿಯ ಮೈಮೇಲೆ ಬೆಳಕಿನ ಬಾಸುಂಡೆ!
ಶಶಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

ದಾರಿದೀಪೋಕ್ತಿ

ನಿಮ್ಮ ಸಂತೋಷ ಮತ್ತು ನೆಮ್ಮದಿ ಬೇರೆಲ್ಲೋ ಇದೆ ಎಂದು ಭಾವಿಸಿದರೆ, ಈಗ ನೀವಿರುವ ತಾಣದಲ್ಲಿ ನೆಮ್ಮದಿಯಾಗಿ ಇರಲು ಸಾಧ್ಯವೇ ಇಲ್ಲ. ಸಂತೋಷ ಮತ್ತು ನೆಮ್ಮದಿ ಬೇರೆಲ್ಲೋ ಇದೆಯೆಂದು ಅರಸಿಕೊಂಡು ಹೋಗುವುದರಲ್ಲಿ ಅರ್ಥವೇ ಇಲ್ಲ. ಅವು ಇರುವುದಾದರೆ ನಿಮ್ಮಲ್ಲಿಯೇ ಇವೆ.

ವಕ್ರತುಂಡೋಕ್ತಿ

ಪಾಸ್ಟ್, ಪ್ರೆಸೆಂಟ್ ಮತ್ತು ಫ್ಯೂಚರ್ ಬಾರ್‌ಗೆ ಹೋದರೆ ಪರಿಸ್ಥಿತಿ ಟೆನ್ಸ್.

ಎರಡು ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸುವ ಲೆಕ್ಕಾಚಾರ | ಸಮಾವೇಶದಲ್ಲಿಯೇ ಬಿಜೆಪಿ ಹಗರಣ ಬಹಿರಂಗಕ್ಕೆ ನಿರ್ಧಾರ

ಮೈಸೂರಿನಲ್ಲಿಂದು ಸಿದ್ದು ಜನಾಂದೋಲನ

ಬೆಂಗಳೂರು/ಮೈಸೂರು: ಮುಡಾ, ವಾಲ್ಮೀಕಿ ಹಗರಣವನ್ನು ಮುಂದಿಟ್ಟುಕೊಂಡು ಬಿಜೆಪಿ-ಜೆಡಿಎಸ್ ನಾಯಕರು ಆರಂಭಿಸಿರುವ ಪಾದಯಾತ್ರೆಗೆ ಸಡ್ಡು ಹೊಡೆದು, ಇಂದು ಸಾಂಸ್ಕೃತಿಕ ನಗರಿ ಮೈಸೂರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಲಪ್ರದರ್ಶನಕ್ಕೆ ವೇದಿಕೆಯಾಗಲಿದೆ.

ದೋಸ್ತಿಗಳ ಪಾದಯಾತ್ರೆಗೆ ಪ್ರತಿಯಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆದ ಜನಾಂದೋಲನ ಯಾತ್ರೆಯ ಸಮಾರೋಪ ಸಮಾರಂಭ ಶುಕ್ರವಾರ ಮೈಸೂರಿನಲ್ಲಿ ಆಯೋಜಿಸಲಾಗಿದೆ. ಮಹಾರಾಜ ಕಾಲೇಜಿನ ಮೈದಾನದಲ್ಲಿ ಸುಮಾರು ಎರಡ ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸಿ, ಬೃಹತ್ ಸಮಾವೇಶ ನಡೆಸಲು ಸಕಲ ಸಿದ್ಧತೆಗಳನ್ನು ಕಾಂಗ್ರೆಸ್ ಮಾಡಿಕೊಂಡಿದೆ.

ತಮ್ಮ ಮೇಲೆ ಬಂದಿರುವ ಆರೋಪಕ್ಕೆ ಪ್ರತ್ಯುತ್ತರವಾಗಿ ಈ ಶಕ್ತಿ ಪ್ರದರ್ಶನದ ಮೂಲಕ ತಿರುಗೇಟು ನೀಡಲು ಸಜ್ಜಾಗಿದ್ದಾರೆ. ಸಮಾರೋಪ ಸಮಾರಂಭದಲ್ಲಿ ಬಿಜೆಪಿ-ಜೆಡಿಎಸ್ ಕಾಲದ ಹಗರಣಗಳ ಕುರಿತು ಪ್ರಸ್ತಾಪ ಮಾಡಲಿದ್ದು, ಪ್ರಮುಖವಾಗಿ ಯಡಿಯೂರಪ್ಪ ಹಾಗೂ ದೇವೇಗೌಡರ ಕುಟುಂಬದ ವಿರುದ್ಧ ಪ್ರಮುಖ ಆರೋಪ ಮಾಡಲು ತೀರ್ಮಾನಿಸಲಾಗಿದೆ.

ಈಗಾಗಲೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆದಿದ್ದ ಜನಾಂದೋಲನ ಯಾತ್ರೆಯಲ್ಲಿ ಬಿಜೆಪಿ-ಜೆಡಿಎಸ್ ಸರಕಾರ ಹಲವು ಅಕ್ರಮಗಳ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಇದೀಗ ಶುಕ್ರವಾರದ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆ ಸಮೇತ, ಬಿಜೆಪಿ, ಜೆಡಿಎಸ್ ಅವಧಿಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಮಾತನಾಡುವ ಸಾಧ್ಯತೆಯಿದೆ. ಇದರೊಂದಿಗೆ ಮುಡಾದಿಂದ ಯಾರ ಅವಧಿಯಲ್ಲಿ ಯಾವ ನಾಯಕರು ಸೈಟ್‌ಗಳನ್ನು ಪಡೆದಿದ್ದಾರೆ? ಬಿಜೆಪಿ, ಜೆಡಿಎಸ್‌ನ ನಾಯಕರು ಯಾರೆಲ್ಲ ಇದ್ದಾರೆ ಎನ್ನುವುದನ್ನು ಬಹಿರಂಗಪಡಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಜನಾಂದೋಲನದ ಸಮಾರೋಪ ಸಮಾರಂಭ ನಡೆಯುವ ಮೈಸೂರಿನ ಮಹಾರಾಜ ಕಾಲೇಜಿನ ಮೈದಾನಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಜಮೀರ್ ಅಹಮದ್, ಎಚ್.ಸಿ.ಮಹದೇವಪ್ಪ ಭೇಟಿ ನೀಡಿ ಪರಿಶೀಲಿಸಿದರು.

ಎರಡು ಲಕ್ಷಕ್ಕೂ ಹೆಚ್ಚು ಜನ ಭಾಗಿ

ಮೈಸೂರು ಸಮಾವೇಶಕ್ಕೆ ಸುತ್ತಲಿನ 6 ಜಿಲ್ಲೆಯ ಶಾಸಕರು ಹಾಗೂ ಸಚಿವರಿಗೆ ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಲಾಗಿದೆ. ಸಮಾವೇಶದಲ್ಲಿ 2 ಲಕ್ಷ ಜನ ಸೇರುವ ನಿರೀಕ್ಷೆಯಿದ್ದು, 6 ಜಿಲ್ಲೆಯ ಜನರನ್ನು ಕರೆತರಲು ಸೂಚನೆ ನೀಡಲಾಗಿದೆ. ಮೈಸೂರು, ಮಂಡ್ಯ, ಕೊಡಗು, ಹಾಸನ, ಚಾಮರಾಜನಗರ, ರಾಮನಗರ ಜಿಲ್ಲೆಯಿಂದ 2 ಲಕ್ಷ ಜನ ಸೇರುವ ನಿರೀಕ್ಷೆಯಿದ್ದು, ಪ್ರತಿ ಹಳ್ಳಿಗಳಿಂದ ಎರಡು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಕರೆತರಲು ಸೂಚನೆ ನೀಡಲಾಗಿದೆ.

ಕಾಂಗ್ರೆಸ್ ಜನಾಂದೋಲನ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯ ಜನರನ್ನು ಸೇರಿಸಬೇಕು ಎಂಬ ಗುರಿ ಹಾಕಿಕೊಂಡಿದ್ದೇವೆ. ಎಷ್ಟು ಸಾಧ್ಯವೋ ಅಷ್ಟು ಮಂದಿಯನ್ನು ಕರೆದುಕೊಂಡು ಬರುವಂತೆ ಶಾಸಕರಿಗೆ ತಿಳಿಸಲಾಗಿದೆ. ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವ ರಾಜ್ಯದಲ್ಲಿಯೇ ದೊಡ್ಡ ದಾಖಲೆ ಬರೆದಿತ್ತು. ಇಲ್ಲಿ ನಡೆಯುತ್ತಿರುವ ಸಮಾವೇಶ ಮೈಸೂರಿನ ಇತಿಹಾಸದಲ್ಲೇ ದಾಖಲೆ ಬರೆಯಲಿದೆ.
- ಯತೀಂದ್ರ ಸಿದ್ದರಾಮಯ್ಯ ವಿಧಾನ ಪರಿಷತ್ ಸದಸ್ಯ

ವಿಡಿಯೊ ಪ್ರದರ್ಶನಕ್ಕೆ ಸಿದ್ಧತೆ: ನಾಯಕರ ಭಾಷಣಕ್ಕೂ ಮೊದಲು ಮೊದಲು ರಾಜ್ಯ ರಾಜಕೀಯ ಇತಿಹಾಸದಲ್ಲಿ ಯಡಿಯೂರಪ್ಪ ಹಾಗೂ ಕುಮಾರಸ್ವಾಮಿ ನಡುವೆ ನಡೆದ ಟಾಕ್‌ಫೈಟ್ ವಿಡಿಯೊ ತುಣುಕುಗಳ ಪ್ರದರ್ಶನ ಮಾಡುವ ಸಾಧ್ಯತೆಯಿದೆ. ಈ ಮೂಲಕ ಅಧಿಕಾರಕ್ಕಾಗಿ ದೋಸ್ತಿಗಳಾಗಿರುವ ಬಿಜೆಪಿ-ಜೆಡಿಎಸ್ ನಾಯಕರ ನಡುವೆ ಈ ಹಿಂದೆ ಏರ್ಪಟ್ಟಿದ್ದ ವಾಕ್ಸಮರವನ್ನು ಬಹಿರಂಗಪಡಿಸುವ ಲೆಕ್ಕಾಚಾರದಲ್ಲಿದ್ದಾರೆ.

→ 4

ಮೊಹಮ್ಮದ್ ಯೂನಸ್ ಪದಗ್ರಹಣ

ಢಾಕಾ: ನೊಬೆಲ್ ಶಾಂತಿ ಪುರಸ್ಕೃತ ಮೊಹಮ್ಮದ್ ಯೂನಸ್ ಅವರು ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಖ್ಯಸ್ಥರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಮೊಹಮ್ಮದ್ ಯೂನಸ್ ಅವರೊಂದಿಗೆ 15 ಸಲಹೆಗಾರರು ಕೂಡ ಪ್ರಮಾಣವಚನ ಸ್ವೀಕರಿಸಿದ್ದಾರೆ. ಬಾಂಗ್ಲಾದೇಶದಲ್ಲಿ ಹೊಸದಾಗಿ ಚುನಾವಣೆ ನಡೆದು, ನೂತನ ಸರಕಾರ ಅಸ್ತಿತ್ವಕ್ಕೆ ಬರುವವರೆಗೆ ಮೊಹಮ್ಮದ್ ಯೂನಸ್ ಅವರೇ ಹಂಗಾಮಿ ಪ್ರಧಾನಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

ವಿಧೇಯಕಕ್ಕೆ ಪ್ರತಿಪಕ್ಷಗಳಿಂದ ಭಾರೀ ವಿರೋಧ

ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆ ಜಂಟಿ ಸದನ ಸಮಿತಿಗೆ ಶಿಫಾರಸು

ದೆಹಲಿ: ಬಹುಚರ್ಚಿತ ವಕ್ಫ್ ತಿದ್ದುಪಡಿ ಮಸೂದೆಯನ್ನು ಕೇಂದ್ರ ಸಚಿವ ಕಿರಣ್ ರಿಜಿಜು ಸಂಸತ್‌ನಲ್ಲಿ ಗುರುವಾರ ಮಂಡಿಸಿದ್ದು, ಪ್ರತಿ ಪಕ್ಷಗಳು ಈ ಮಸೂದೆಗೆ ವಿರೋಧ ವ್ಯಕ್ತಪಡಿಸಿದ್ದರಿಂದ ಪರಿಶೀಲನೆಗಾಗಿ ಜಂಟಿ ಸಂಸದೀಯ ಸಮಿತಿಗೆ ಕೇಂದ್ರ ಸರಕಾರ ಕಳುಹಿಸಿದೆ.

ವಕ್ಫ್ ಕಾಯಿದೆ-1995ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಹಾಗೂ ವಕ್ಫ್ ಕಾಯಿದೆ-1995 ಅನ್ನು ಏಕೀಕೃತ ವಕ್ಫ್ ನಿರ್ವಹಣೆ, ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ ಕಾಯಿದೆ -1995 ಎಂದು ಮರುನಾಮಕರಣ ಮಾಡುವ ಗುರಿಯೊಂದಿಗೆ ಕೇಂದ್ರ ಸರಕಾರ ಮಸೂದೆ ಮಂಡನೆ ಮಾಡಿದೆ. ಈ ಮಸೂದೆಗೆ ಪ್ರತಿಪಕ್ಷಗಳು ಭಾರೀ ವಿರೋಧ ವ್ಯಕ್ತಪಡಿಸಿದ್ದು, ತಕ್ಷಣ ಇದನ್ನು ಹಿಂಪಡೆಯುವಂತೆ ಆಗ್ರಹಿಸಿವೆ. → 4



1955ರ ತಿದ್ದುಪಡಿ ಮಸೂದೆ ಜಾರಿಗೆ ಬರುವುದರಿಂದ 1923ರ ಮುಸಲ್ಮಾನ್ ವಕ್ಫ್ ಕಾಯಿದೆ ರದ್ದು ಮಾಡುವ ಅಗತ್ಯವಿದೆ. ತಿದ್ದುಪಡಿ ಕಾಯಿದೆ ಸಂಬಂಧ ಮುಸಲ್ಮಾನರ ದಾರಿ ತಪ್ಪಿಸುತ್ತಿದ್ದಾರೆ. ಸದ್ಯ ಇರುವ ಕಾಯಿದೆಯಲ್ಲಿ ಹಲವು ತಪ್ಪುಗಳು ಇರುವುದರಿಂದ ಕಾಯಿದೆಯ ಅದರ ಉದ್ದೇಶ ಪೂರೈಸುವಲ್ಲಿ ವಿಫಲವಾಗಿದೆ. **- ಅಮಿತ್ ಶಾ** ಕೇಂದ್ರ ಗೃಹ ಸಚಿವ

ಕಾಂಗ್ರೆಸ್ ವಿರೋಧ

ವಕ್ಫ್ ಬೋರ್ಡ್ ಕಾನೂನು ತಿದ್ದುಪಡಿ ತರಲು ಮುಂದಾಗಿರುವ ಕೇಂದ್ರದ ಕ್ರಮವನ್ನು ಸಂವಿಧಾನದ ತತ್ವಗಳಲ್ಲಿ ನಂಬಿಕೆಯಿರಿಸಿರುವ ಕಾಂಗ್ರೆಸ್ ಸಂಪೂರ್ಣವಾಗಿ ವಿರೋಧಿಸುತ್ತದೆ ಎಂದು ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ. ಬಿಜೆಪಿ ಹಾಗೂ ಎನ್‌ಡಿಎಯವರಿಗೆ ಅಲ್ಪಸಂಖ್ಯಾತರ ಮೇಲೆ ಕೋಪವಿರುವಂತಿದೆ. ಬಿಜೆಪಿಯವರು ಎಂದಿಗೂ ಜಾತ್ಯತೀತತೆ, ಸಾಮಾಜಿಕ ನ್ಯಾಯದ ಪರವಾಗಿ ನಿಂತವರಲ್ಲ. ಬಿಜೆಪಿ ಮೊದಲಿನಿಂದಲೂ ಕೋಮುವಾದಿ ಪಕ್ಷವಾಗಿಯೇ ಗುರುತಿಸಿಕೊಂಡಿದ್ದು, ಜಾತ್ಯತೀತ ತತ್ವವನ್ನು ನಂಬುವುದಿಲ್ಲ. ಮತಾಂತರ ನಿಷೇಧ ಕಾನೂನು, ಗೋಹತ್ಯೆ ತಿದ್ದುಪಡಿಗಳನ್ನು ಜಾರಿಗೆ ತಂದ ಬಿಜೆಪಿಯವರು ಇಂದು ವಕ್ಫ್ ಬೋರ್ಡ್ ತಿದ್ದುಪಡಿ ಪ್ರಯತ್ನಕ್ಕೂ ಕೈಹಾಕಿದ್ದಾರೆ. ವಕ್ಫ್ ಬೋರ್ಡ್ ಕಾನೂನು ಆ ಸಮುದಾಯದ ವೈಯಕ್ತಿಕ ಕಾನೂನಾಗಿದ್ದು, ಅದರಲ್ಲಿ ಮಧ್ಯಪ್ರವೇಶಿಸುವುದು ಸಂವಿಧಾನಬಾಹಿರ. ಸಂವಿಧಾನದ ತತ್ವಗಳಲ್ಲಿ ನಂಬಿಕೆಯಿರಿಸಿರುವ ಕಾಂಗ್ರೆಸ್, ಇಂಡಿ ಒಕ್ಕೂಟ ವಿರೋಧಿಸುತ್ತೇವೆ ಎಂದರು.

ಒಂದೇ ವೇದಿಕೆಯಲ್ಲಿ ಕೈ, ಕಮಲ-ದಳ ಬಲ ಪ್ರದರ್ಶನ

ಅರಮನೆ ನಗರಿಯಲ್ಲಿ ಮೂರೂ ಪಕ್ಷಗಳ ಕುಸ್ತಿ

ಬೆಂಗಳೂರು: ಮೂರೂ ರಾಜಕೀಯ ಪಕ್ಷಗಳ ಶಕ್ತಿ ಪ್ರದರ್ಶನಕ್ಕೆ ಮೈಸೂರಿನ ಮಹಾರಾಜ ಮೈದಾನದಲ್ಲಿ ವೇದಿಕೆ ಸಿದ್ದವಾಗಿದ್ದು, ಎರಡು ದಿನಗಳಲ್ಲಿ ಎರಡು ಬೃಹತ್ ಸಮಾವೇಶಕ್ಕೆ ಸಾಂಸ್ಕೃತಿಕ ನಗರಿ ಸಜ್ಜಾಗಿದೆ.

ಮುಡಾ, ವಾಲ್ಮೀಕಿ ನಿಗಮ ಅಕ್ರಮ ಮುಂದಿಟ್ಟುಕೊಂಡು ಬಿಜೆಪಿ-ಜೆಡಿಎಸ್ ಆರಂಭಿಸಿದ ಪಾದಯಾತ್ರೆಗೆ ಪ್ರತಿಯಾಗಿ ಕಾಂಗ್ರೆಸ್ ಆರಂಭಿಸಿದ್ದ ಜನಾಂದೋಲನ ಯಾತ್ರೆಯ ಸಮಾರೋಪ ಸಮಾರಂಭ ಶುಕ್ರವಾರ ನಡೆದರೆ, ಶನಿವಾರ ಅದೇ ವೇದಿಕೆಯಲ್ಲಿ ಬಿಜೆಪಿ-ಜೆಡಿಎಸ್ ಪಾದಯಾತ್ರೆಯ ಕಾರ್ಯಕ್ರಮ ನಡೆಯಲಿದೆ.

ಈಗಾಗಲೇ ಬೆಂಗಳೂರಿನಿಂದ ಪಾದಯಾತ್ರೆ ಆರಂಭಿಸಿದ್ದು, ಶುಕ್ರವಾರ ಮೈಸೂರು ತಲುಪಲಿದೆ. ದೋಸ್ತಿ ಪಕ್ಷಗಳ ಪಾದಯಾತ್ರೆ ನಂತರ ಶನಿವಾರ ಮೈಸೂರಿನಲ್ಲಿ ಎರಡೂ ಪಕ್ಷಗಳು ಒಟ್ಟಾಗಿ ಜನಾಂದೋಲನ ಸಮಾವೇಶ ಆಯೋಜಿಸಲಾಗಿದೆ. ಒಟ್ಟಾರೆ ಸಾಂಸ್ಕೃತಿಕ ನಗರಿ ಮೈಸೂರು ರಾಜಕೀಯ ಶಕ್ತಿ ಕೇಂದ್ರವಾಗಿ ಮಾರ್ಪಟ್ಟಿದ್ದು, ಶುಕ್ರವಾರ ಮತ್ತು ಶನಿವಾರ ಎರಡು ಬೃಹತ್ ಸಮಾವೇಶಗಳು ಒಂದೇ ಸ್ಥಳದಲ್ಲಿ ನಡೆಯುತ್ತಿದೆ. ವಿಶೇಷ ಎಂದರೆ ಎರಡು ರಾಜಕೀಯ ಪಕ್ಷಗಳ ಕಾರ್ಯಕ್ರಮಕ್ಕೆ ಒಂದೇ ವೇದಿಕೆ ಬಳಕೆಯಾಗುತ್ತಿದೆ. ಭಾರೀ ಸಂಖ್ಯೆಯಲ್ಲಿ ಜನರು ಸೇರಲಿದ್ದಾರೆ.

ಇಂದು ಮೈಸೂರು ತಲುಪಲಿರುವ ಮೈತ್ರಿ ಪಕ್ಷಗಳ ಪಾದಯಾತ್ರೆ

ಗುರುವಾರ ರಾತ್ರಿ ಶ್ರೀರಂಗಪಟ್ಟಣವನ್ನು ತಲುಪಿರುವ ಬಿಜೆಪಿ ಪಾದಯಾತ್ರೆ ಶುಕ್ರವಾರ ರಾತ್ರಿ ವೇಳೆಗೆ ಮೈಸೂರು ತಲುಪಲಿದೆ. ಶುಕ್ರವಾರ ಪಾದಯಾತ್ರೆಯ ಕೊನೆಯ ದಿನವಾಗಿರುವುದರಿಂದ ಅತಿಹೆಚ್ಚು ಸಂಖ್ಯೆಯಲ್ಲಿ ಜನ ಸೇರಿಸುವ ಬಿಜೆಪಿ-ಜೆಡಿಎಸ್ ನಾಯಕರು ಚಿಂತನೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನನ್ನ ವಿರುದ್ಧ ಕುಸ್ತಿ ಗೆದ್ದಿದೆ, ನಾನು ಸೋತೆ: ಫೋಗಟ್

ಕ್ರೀಡಾ ಬದುಕಿಗೆ ಕಣ್ಣೀರ ವಿದಾಯ

ದೆಹಲಿ: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 50 ಕಿಲೋ ತೂಕದ ವಿಭಾಗದಲ್ಲಿ ಸ್ಪರ್ಧಿಸಲು ಅನರ್ಹಗೊಂಡ ಬೆನ್ನಲ್ಲೇ ಕುಸ್ತಿಪಟು ವಿನೇಶಾ ಫೋಗಟ್ ಕುಸ್ತಿಗೆ ನಿವೃತ್ತಿ ಘೋಷಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಅವರು, 'ಕುಸ್ತಿ ನನ್ನ ವಿರುದ್ಧ ಪಂದ್ಯವನ್ನು ಗೆದ್ದಿದೆ. ನಾನು ಸೋತೆ. ನಿಮ್ಮ ಕನಸುಗಳು ಮತ್ತು ನನ್ನ ಧೈರ್ಯ ಛಿದ್ರವಾಗಿದೆ. ನನಗೆ ಈಗ ಹೆಚ್ಚಿನ ಶಕ್ತಿ ಇಲ್ಲ. ಗುಡ್ ಬೈ ಕುಸ್ತಿ 2001-2024. ನಿಮ್ಮೆಲ್ಲರಿಗೂ ನಾನು ಎಂದೆಂದಿಗೂ ಋಣಿಯಾಗಿರುತ್ತೇನೆ. ಕ್ಷಮಿಸಿ' ಎಂದು ಬರೆದಿದ್ದಾರೆ.

ನ್ಯಾಯಾಲಯಕ್ಕೆ ಮೇಲ್ಮನವಿ: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 50 ಕಿಲೋ ತೂಕದ ವಿಭಾಗದ ಫೈನಲ್ ಪಂದ್ಯದಲ್ಲಿ ಸ್ಪರ್ಧಿಸಲು ಅನರ್ಹಗೊಂಡ ಬೆನ್ನಲ್ಲೇ ಕುಸ್ತಿಪಟು ವಿನೇಶ್ ಫೋಗಟ್ ಅವರು ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಜಂಟಿಯಾಗಿ ಬೆಳ್ಳಿ ಪದಕ ಹಸ್ತಾಂತರಿಸುವಂತೆ ಕೋರಿದ್ದಾರೆ.

4 ಕೋಟಿ ರು. ಬಹುಮಾನ ಘೋಷಣೆ: ಒಲಿಂಪಿಕ್ಸ್‌ನಲ್ಲಿ ಇತಿಹಾಸ ನಿರ್ಮಿಸಿದ ವಿನೇಶಾ ಫೋಗಟ್ ಅವರಿಗೆ ಹರಿಯಾಣ ಸರಕಾರ 4 ಕೋಟಿ ರು. ಬಹುಮಾನ ಘೋಷಿಸಿದೆ. ಇದರೊಂದಿಗೆ ಒಲಿಂಪಿಕ್ ಬೆಳ್ಳಿ ಪದಕ ವಿಜೇತೆ ಮಾದರಿಯಲ್ಲೇ ತವರಿನಲ್ಲಿ ಸ್ವಾಗತ ಕೋರಲು ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂದು ಎಕ್ಸ್‌ನಲ್ಲಿ ಹರಿಯಾಣ ಸಿಎಂ ನಯಾಬ್ ಸಿಂಗ್ ಸೈನಿ ಮಾಹಿತಿ ಹಂಚಿಕೊಂಡಿದ್ದಾರೆ

ಅಮನ್‌ಗೆ ಸೋಲು

ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಪ್ಯಾರಿಸ್ ಒಲಿಂಪಿಕ್ಸ್ ಪುರುಷರ 57 ಕೆ.ಜಿ ಫ್ರೀಸ್ಟೈಲ್ ವಿಭಾಗದಲ್ಲಿ ಭಾರತದ ಕುಸ್ತಿಪಟು ಅಮನ್ ಸೆಹ್ರಾವತ್ ಸೆಮಿಫೈನಲ್‌ನಲ್ಲಿ ಸೋಲು ಅನುಭವಿಸಿದ್ದಾರೆ. ಆದರೆ ಅಮನ್ ಅವರಿಗೆ ಮಗದೊಂದು ಅವಕಾಶ ಇರಲಿದ್ದು, ಕಂಚಿನ ಪದಕಕ್ಕಾಗಿ ಅಖಾಡಕ್ಕಿಳಿಯಲಿದ್ದಾರೆ. ಗುರುವಾರ ರಾತ್ರಿ ನಡೆದ ಸೆಮಿಫೈನಲ್ ಪಂದ್ಯದಲ್ಲಿ 21 ವರ್ಷದ ಅಮನ್ ಅವರು ಅಗ್ರ ಶ್ರೇಯಾಂಕಿತ ಜಪಾನ್ ರೇ ಹಿಗುಚಿ ವಿರುದ್ಧ 0-10ರ ಅಂತರದಲ್ಲಿ ಸೋಲು ಅನುಭವಿಸಿದ್ದಾರೆ.

ಅಂತಿಮ್‌ಗೆ ಗಡಿಪಾರು ಭೀತಿ

ನಿಯಮ ಉಲ್ಲಂಘಿಸಿ ಗುರುತಿನ ಚೀಟಿಯನ್ನು ದುರುಪಯೋಗ ಪಡಿಸಿಕೊಂಡಿದ್ದಕ್ಕಾಗಿ ಕುಸ್ತಿಪಟು ಅಂತಿಮ್ ಪಂಘಲ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಿಂದ ಗಡಿಪಾರು ಭೀತಿ ಎದುರಿಸುತ್ತಿದ್ದಾರೆ. ತಮಗೆ ಸೇರಿದ ವಸ್ತುಗಳನ್ನು ತೆಗೆದುಕೊಂಡು ಬರುವಂತೆ ಹೇಳಿ ಅಂತಿಮ್ ತಮ್ಮ ಸಹೋದರಿಯನ್ನು ಒಲಿಂಪಿಕ್ಸ್ ಕ್ರೀಡಾ ಗ್ರಾಮಕ್ಕೆ ಕಳುಹಿಸಿದ್ದರು. ಈ ವೇಳೆ ಗುರುತಿನ ಚೀಟಿಯನ್ನು ಸಹೋದರಿಗೆ ಕೊಟ್ಟಿದ್ದರು. ಕ್ರೀಡಾ ಗ್ರಾಮದಿಂದ ಹೊರ ಹೋಗುವ ವೇಳೆ ಸಹೋದರಿ ಭದ್ರತಾ ಸಿಬ್ಬಂದಿಗೆ ಸಿಕ್ಕಿಬಿದ್ದಿದ್ದಾರೆ. ಈ ವೇಳೆ ನಿಯಮ ಉಲ್ಲಂಘನೆ ಮಾಡಿರುವುದು ಬೆಳಕಿಗೆ ಬಂದಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಆ.10 ರಂದು ಪಾದಯಾತ್ರೆ ಸಮಾರೋಪ
ಸುದ್ದಿ

ಅಂದೇ ಮುಖಂಡರುಗಳ ಆರೋಪ - ಪ್ರತ್ಯಾರೋಪಗಳಿಗೂ ಸಮಾರೋಪ ನಡೆಯುತ್ತಾಂತ...!

ನಾಮನಿರ್ದೇಶಿತರ ಸಂಖ್ಯೆ 3ಕ್ಕೆ ಹೆಚ್ಚಳ ಅಸಿಂಧು: ಹೈ ತೀರ್ಪು

ಬೆಂಗಳೂರು: ಸಹಕಾರ ಸಂಘಗಳ ಕಾಯಿದೆಯ ಸೆಕ್ಷನ್ 128ಎಗೆ ಮಾಡಿರುವ ತಿದ್ದುಪಡಿಯು ಸಂವಿಧಾನಬಾಹಿರ ಎಂದು ಹೈಕೋರ್ಟ್ ತೀರ್ಪು ನೀಡಿದೆ. ಎಸ್‌ಸಿ, ಎಸ್‌ಟಿಗೆ ಮೀಸಲು ಖಾತ್ರಿಪಡಿಸುವ ಮೂಲಕ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗಳಲ್ಲಿ ಮೀಸಲು ಆಧಾರದ ಮೇಲೆ ಸರಕಾರದ ನಾಮನಿರ್ದೇಶಿತರ ಸಂಖ್ಯೆಯನ್ನು ಮೂರಕ್ಕೆ ಹೆಚ್ಚಿಸುವ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆಯನ್ನು ಸರಕಾರ ಅಂಗೀಕರಿಸಿತ್ತು. ಈ ತಿದ್ದು ಪಡಿ ಕಾಯಿದೆ ಸಂವಿಧಾನ ಬಾಹಿರ ಎಂದು ತೀರ್ಪು ನೀಡಿದೆ.

ಉಮಾಶ್ರೀ ಸೇರಿ 93 ಮಂದಿಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ಮೂರು ವರ್ಷಗಳ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ನಟಿ ಉಮಾಶ್ರೀ, ನಾಟಕಕಾರ ಎಚ್.ಎಸ್.ಶಿವಪ್ರಕಾಶ್, ರಂಗಕರ್ಮಿ ಕೋಟಿಗಾನಹಳ್ಳಿ ರಾಮಯ್ಯ ಜೀವಮಾನ ಸಾಧನೆ ಪ್ರಶಸ್ತಿಗೆ (ಗೌರವ ಪ್ರಶಸ್ತಿ) ಆಯ್ಕೆಯಾಗಿದ್ದಾರೆ. ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜ ಮೂರ್ತಿ ಅವರು ಗುರುವಾರ ಪ್ರಶಸ್ತಿ ಪುರಸ್ಕೃತರ ಪಟ್ಟಿ ಬಿಡುಗಡೆ ಮಾಡಿದರು. ಜೀವಮಾನ ಸಾಧನೆ ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಹಾಗೂ ನಟರಾಜ ವಿಗ್ರಹ ಒಳಗೊಂಡಿದೆ.

ಮುಂದಿನ ವಾರ 3 ಪಾಲಿಕೆ ಚುನಾವಣೆ ಅಧಿಸೂಚನೆ ಪ್ರಕಟ

ಬೆಂಗಳೂರು: ಮೈಸೂರು, ಶಿವಮೊಗ್ಗ, ತುಮಕೂರು ಮಹಾನಗರ ಪಾಲಿಕೆಗಳ ಚುನಾವಣೆಗೆ ಮುಂದಿನ ವಾರ ಅಧಿಸೂಚನೆ ಹೊರಡಿಸಲಾಗುವುದು ಎಂದು ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಗದಿಗೆಪ್ಪ ಸಣ್ಣಬಸಪ್ಪ ಸಂಗ್ರೇಶಿ ಹೇಳಿದರು. ಅವಧಿ ಮುಕ್ತಾಯಗೊಂಡ ಸ್ಥಳೀಯ ಸಂಸ್ಥೆಗಳಿಗೆ ನಿಗದಿತ ಅವಧಿಯ ಒಳಗೆ ಸರಕಾರವು ಕ್ಷೇತ್ರ ಹಾಗೂ ಮೀಸಲು ಅಧಿಸೂಚನೆ ಹೊರಡಿಸದೇ ಇದ್ದಾಗ ಹಿಂದಿನ ಕ್ಷೇತ್ರ ವಿಂಗಡಣೆ ಹಾಗೂ ಮೀಸಲು ಅನ್ವಯವೇ ಚುನಾವಣೆ ನಡೆಸಬಹುದು ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿ ಭಟ್ಟಾಚಾರ್ಯ ನಿಧನ

ಕೋಲ್ಕತ್ತ: ವೃದ್ಧಾಪ್ಯ ಸಂಬಂಧಿತ ಕಾಯಿಲೆಗಳಿಂದ ಬಳಲುತ್ತಿದ್ದ ಪಶ್ಚಿಮ ಬಂಗಾಳದ ಮಾಜಿ ಸಿಎಂ ಬುದ್ಧದೇವ್ ಭಟ್ಟಾಚಾರ್ಯ (80)ಗುರುವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಅವರು ಪತ್ನಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಭಟ್ಟಾಚಾರ್ಯ 2000ರಿಂದ 2011ರವರೆಗೆ ಪ.ಬಂಗಾಳದ ಮುಖ್ಯಮಂತ್ರಿ ಆಗಿದ್ದರು. 2011ರಲ್ಲಿ ಭಟ್ಟಾಚಾರ್ಯ ನೇತೃತ್ವದ ಸಿಪಿಐ (ಎಂ) ಪಕ್ಷ ವಿಧಾನಸಭಾ ಚುನಾವಣೆಯಲ್ಲಿ ಸೋಲುಂಡಿತು. ನಂತರ ಅವರು ಸಾರ್ವಜನಿಕ ಕಾರ್ಯಕ್ರಮಗಳಿಂದ ದೂರ ಉಳಿದಿದ್ದರು.

ಹಾಕಿಯಲ್ಲಿ ಕಂಚು: ಶ್ರೀಜೇಶ್‌ಗೆ ಜಯದ ವಿದಾಯ

ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತ ಪುರುಷರ ಹಾಕಿ ತಂಡವು ಕಂಚಿನ ಪದಕ ಜಯಿಸಿದೆ. ಗುರುವಾರ ನಡೆದ ಕಂಚಿನ ಪದಕಕ್ಕಾಗಿನ ಪಂದ್ಯದಲ್ಲಿ ಭಾರತ ತಂಡವು ಸ್ಪೇನ್ ವಿರುದ್ಧ 2-1 ಗೋಲುಗಳ ಅಂತರದ ಗೆಲುವು ದಾಖಲಿಸಿತು. ಭಾರತದ ಪರ ಎರಡೂ ಗೋಲು ದಾಖಲಿಸಿದ (30 ಹಾಗೂ 33ನೇ ನಿಮಿಷ) ನಾಯಕ ಹರ್ಮನ್‌ಪ್ರೀತ್ ಸಿಂಗ್ ಗೆಲುವಿನ ರೂವಾರಿಯೆನಿಸಿದರು. ಇದರೊಂದಿಗೆ ಹಾಕಿ ದಿಗ್ಗಜ ಗೋಲ್ ಕೀಪರ್ ಪಿ.ಆರ್.ಶ್ರೀಜೇಶ್ ಅವರು ಗೆಲುವಿನೊಂದಿಗೆ ವಿದಾಯ ಸಲ್ಲಿಸಿದ್ದಾರೆ.

550 ಎಕರೆ ಗಣಿ ಭೂಮಿ ಕಾನೂನುಬಾಹಿರ ಮಂಜೂರು ಆರೋಪ

ಎಚ್‌ಡಿಕೆ ವಿರುದ್ಧ ಪ್ರಾಸಿಕ್ಯೂಷನ್ ರಾಜಭವನದಲ್ಲೇ ಉಳಿದ ಕಡತ

ಬೆಂಗಳೂರು: ಬಳ್ಳಾರಿ ಜಿಲ್ಲೆ ಸಂಡೂರಿನಲ್ಲಿ 550 ಎಕರೆ ಗಣಿ ಭೂಮಿಯನ್ನು ಕಾನೂನು ಬಾಹಿರವಾಗಿ ವಿನೋದ್ ಗೋಯಲ್ ಎಂಬುವವರಿಗೆ ಮಂಜೂರು ಮಾಡಲು ಸಹಕರಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಕುಮಾರಸ್ವಾಮಿ ಅವರ ವಿರುದ್ಧ ಸಂಬಂಧಿತ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲು ಅನುಮತಿ ಕೋರಿ ಲೋಕಾಯುಕ್ತ ಪೊಲೀಸರು 2023ರ ಸೆಪ್ಟೆಂಬರ್‌ನಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್‌ರಿಗೆ ಪತ್ರ ಬರೆದಿದ್ದಾರೆ. ಹತ್ತು ತಿಂಗಳಾದರೂ ರಾಜ್ಯಪಾಲರು ಕಡತವನ್ನು ತಮ್ಮಲ್ಲೇ ಉಳಿಸಿಕೊಂಡಿರುವುದು ಬೆಳಕಿಗೆ ಬಂದಿದೆ.

2006ರಲ್ಲಿ ಬಿಜೆಪಿ-ಜೆಡಿಎಸ್ ಸಮ್ಮಿಶ್ರ ಸರಕಾರವಿದ್ದಾಗ ಸಿಎಂ ಆಗಿದ್ದ ಕುಮಾರಸ್ವಾಮಿ ಅವರು ಎಂಸಿ ಆರ್ ನಿಯಮಾವಳಿಗಳನ್ನು ಉಲ್ಲಂಘಿಸಿ ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳ ಜತೆಗೂಡಿ ವಿನೋದ್ ಗೋಯಲ್ ಎಂಬ ವ್ಯಕ್ತಿಗೆ ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಎನ್‌ಇಬಿ ವಲಯದಲ್ಲಿ 550 ಎಕರೆ ಭೂಮಿ ಮಂಜೂರು ಮಾಡಲು ಒಳಸಂಚು ರೂಪಿಸಿದ್ದಾರೆ ಎಂಬುದು ಆರೋಪವಾಗಿದೆ. ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಮಾಲೀಕ ವಿನೋದ್ ಗೋಯಲ್ ಎಂದು ಸುಳ್ಳು ದಾಖಲೆ ಸೃಷ್ಟಿಸಲು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಾರ್ಯದರ್ಶಿ ಕೆ.ಜಯಚಂದ್ರ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಬಿ.ಟಿ.ಜವರೇಗೌಡ ಸಹಕರಿಸಿದ ಆರೋಪಕ್ಕೆ ಗುರಿಯಾಗಿದ್ದಾರೆ. → 4

- ಸಮ್ಮಿಶ್ರ ಸರಕಾರವಿದ್ದಾಗ ಎಂಸಿಆರ್ ನಿಯಮಾವಳಿ ಉಲ್ಲಂಘಿಸಿದ ಆರೋಪ
- ಪ್ರಕರಣದಲ್ಲಿ ಕುಮಾರಸ್ವಾಮಿಯವರನ್ನು 2ನೇ ಆರೋಪಿ ಮಾಡಿ ಎಸ್‌ಐಟಿ ಖಟ್ಲೆ
- ಪ್ರಾಸಿಕ್ಯೂಷನ್ ಕೋರಿದ ಲೋಕಾಯುಕ್ತ ಮನವಿಗೆ ರಾಜ್ಯಪಾಲರ ಮೌನ

ವಿಧಾನಸೌಧದಲ್ಲಿ ಈಶ್ವರ ಖಂಡ್ರೆ, ಭೇಟಿ ಮಾಡಿದ ಪವನ್ ಕಲ್ಯಾಣ್

ಕುಮ್ಕಿ ಆನೆಗೆ ಆಂಧ್ರ ಬೇಡಿಕೆ

ಬೆಂಗಳೂರು: ಮಾನವ-ಪ್ರಾಣಿ ಸಂಘರ್ಷ ನಿಯಂತ್ರಣಕ್ಕೆ ಕುಮ್ಕಿ ಆನೆ ನೀಡುವಂತೆ ಆಂಧ್ರ ಪ್ರದೇಶ ಸರಕಾರ ರಾಜ್ಯ ಸರಕಾರಕ್ಕೆ ಮನವಿ ಮಾಡಿದ್ದು, ಈ ಸಂಬಂಧ ಶೀಘ್ರದಲ್ಲಿಯೇ ತೀರ್ಮಾನ ಕೈಗೊಳ್ಳಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ಈ ಸಂಬಂಧ ಚರ್ಚಿಸಲು ಆಂಧ್ರಪ್ರದೇಶ ಡಿಸಿಎಂ ಪವನ್ ಕಲ್ಯಾಣ್, ಸಿಎಂ ಸಿದ್ದರಾಮಯ್ಯ, ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದಾರೆ. ಈ ಬಗ್ಗೆ ಉನ್ನತಮಟ್ಟದ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಭರವಸೆ ನೀಡಿದ್ದಾರೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಈಶ್ವರ್ ಖಂಡ್ರೆ ಅವರು, ಮಾನವ-ಪ್ರಾಣಿ ಸಂಘರ್ಷ ನಿಯಂತ್ರಣಕ್ಕೆ ಕುಮ್ಕಿ ಆನೆ ನೀಡುವಂತೆ ಆಂಧ್ರಪ್ರದೇಶ ಮನವಿ ಮಾಡಿದ್ದು, ಜನರ ಭಾವನೆಗೆ ಚ್ಯುತಿ ಆಗದಂತೆ ಉನ್ನತ ಮಟ್ಟದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು. ಬೇರೆ ರಾಜ್ಯಗಳಿಗೆ ಆನೆ ನೀಡುವುದು ಸಾಮಾನ್ಯ ಪ್ರಕ್ರಿಯೆ. ಆದರೆ ದಸರಾ ಆನೆ ಯಾವುದೇ ರಾಜ್ಯಕ್ಕೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಆಂಧ್ರದಲ್ಲಿ ಕಾಡಾನೆ ಸಮಸ್ಯೆ ಹೆಚ್ಚಾಗಿದ್ದು, ಹೀಗಾಗಿ ಕರ್ನಾಟಕದಲ್ಲಿ ಆನೆಗಳ ಹಾವಳಿ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮ, ರೈಲ್ವೆ ಬ್ಯಾರಿಕೇಡ್ ಅಳವಡಿಕೆಯ ಯಶಸ್ಸು ಕಾಡಾನೆ ಸೆರೆ ಕಾರ್ಯಾಚರಣೆ, ಆನೆ ಪಳಗಿಸುವುದು ಮತ್ತು ಮಾವುತರ ತರಬೇತಿ ಕುರಿತಂತೆ ಚರ್ಚಿಸಲು ಆಂಧ್ರಪ್ರದೇಶದ ಡಿಸಿಎಂ ಪವನ್ ಕಲ್ಯಾಣ್ ಉನ್ನತ ಅರಣ್ಯಾಧಿಕಾರಿಗಳೊಂದಿಗೆ ಆಗಮಿಸಿದ್ದಾರೆ. → 4

ಆಂಧ್ರಪ್ರದೇಶ ಡಿಸಿಎಂ ಪವನ್ ಕಲ್ಯಾಣ್ ಜತೆ ಸಭೆ ನಡೆಸಿದ ಸಚಿವ ಈಶ್ವರ್ ಖಂಡ್ರೆ.

ಆಂಧ್ರವೇ ಇರಲಿ, ಮಹಾರಾಷ್ಟ್ರವೇ ಆಗಿರಲಿ, ಆನೆ ಸೆರೆ ಕಾರ್ಯಾಚರಣೆ ನಡೆಯುವಾಗ ಪಶುವೈದ್ಯರು, ಮಾವುತರು, ಕಾವಾಡಿಗರು ಮತ್ತು ಅಧಿಕಾರಿಗಳ ತಂಡ ಕಳುಹಿಸಿ ಎಂದು ತಿಳಿಸಲಾಗುತ್ತದೆ. ಆನೆ ಸೆರೆ ಕಾರ್ಯಾಚರಣೆ ಕಣ್ಣಾರೆ ಕಾಣಲು ಇದರಿಂದ ಸಾಧ್ಯವಾಗಲಿದ್ದು, ಬಳಿಕ ಆನೆ ಹಿಡಿದು ಹೇಗೆ ಪಳಗಿಸಲಾಗುತ್ತದೆ ಎಂಬುದನ್ನೂ ಪ್ರತ್ಯಕ್ಷ ನೋಡುತ್ತಾರೆ. ಹೊರ ರಾಜ್ಯದ ಮಾವುತರಿಗೂ ಆ ಆನೆ ಹೇಗೆ ನಿರ್ವಹಿಸಬೇಕು ಎಂದು ತಿಳಿಯುತ್ತದೆ. ಆಗ ಮುಂದಿನ ಕಾರ್ಯಾಚರಣೆ ಅವರೇ ನಿರ್ವಹಿಸಲು ಸಾಧ್ಯವಾಗುತ್ತದೆ.
- ಈಶ್ವರ ಖಂಡ್ರೆ ಅರಣ್ಯ ಸಚಿವ

ಜ್ಯೋತಿ ಸವಾಲು ಅಂತ್ಯ

ಮಹಿಳೆಯರ 100 ಮೀ. ಹರ್ಡಲ್ಸ್‌ನ ರೆಪೆಷಾಜ್ ಸುತ್ತಿನಲ್ಲಿ ಪ್ರಭಾವಿ ಎನಿಸಿಕೊಳ್ಳುವಲ್ಲಿ ಜ್ಯೋತಿ ಯರ್ರಾಜಿ ವಿಫಲರಾಗಿದ್ದಾರೆ. 13.17 ಸೆಕೆಂಡ್‌ಗಳಲ್ಲಿ ನಾಲ್ಕನೇಯವರಾಗಿ ಜ್ಯೋತಿ ಗುರಿ ಮುಟ್ಟಿದರು. ಆ ಮೂಲಕ ಸೆಮಿಫೈನಲ್‌ಗೆ ಪ್ರವೇಶಿಸುವಲ್ಲಿ ವಿಫಲರಾಗಿದ್ದಾರೆ. ರೆಪೆಷಾಜ್ ಸುತ್ತಿನಲ್ಲಿ ಅಗ್ರ 2 ಸ್ಥಾನ ಪಡೆದ ಸ್ಪರ್ಧಿಗಳು ಸೆಮಿಫೈನಲ್ ತಲುಪಿದ್ದಾರೆ.

ಚಾನುಗೆ ತಪ್ಪಿದ ಅವಕಾಶ

ವೆಯ್ಟ್ ಲಿಫ್ಟಿಂಗ್ ತಾರೆ ಮೀರಾ ಬಾಯಿ ಚಾನು ಸತತ ಎರಡನೇ ಒಲಿಂಪಿಕ್ಸ್ ಕ್ರೀಡಾ ಕೂಟದಲ್ಲಿ ಪದಕ ಪಡೆಯುವ ಅವಕಾಶವನ್ನು ತಪ್ಪಿಸಿಕೊಂಡರು. ಕಳೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದ ಚಾನು ಈ ಬಾರಿ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟು ಕೊಂಡರು. ಕಂಚಿನ ಪದಕ ಗೆದ್ದ ತಮ್ಮ ಥಾಯ್ಲೆಂಡ್ ಎದುರಾಳಿಗಿಂತ ಕೇವಲ ಒಂದು ಕೆ.ಜಿ. ಕಡಿಮೆ ಭಾರ ಎತ್ತುವ ಮೂಲಕ ಚಾನು ಒಲಿಂಪಿಕ್ಸ್ ಪದಕದ ಕನಸು ಭಗ್ನಗೊಂಡಿತು.

ಸಮಾಚಾರ ಸಣ್ಣದಲ್ಲ

ಐದು ದಿನ ಬಾರಿ ಮಳೆ

ಬೆಂಗಳೂರು: ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತವಾದ ಹಿನ್ನೆಲೆ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಮುಂದಿನ 5 ದಿನ ಮಳೆಯಾಗುವ ಮುನ್ಸೂಚನೆಯನ್ನು ಭಾರತೀಯ ಹವಾಮಾನ ಇಲಾಖೆ ನೀಡಿದೆ. ಉತ್ತರ ಒಳನಾಡು, ದಕ್ಷಿಣ ಒಳನಾಡು, ಕಾರವಳಿ ಭಾಗಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಇಂದು ಕರಾವಳಿಯ ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಭಾಗದಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದ್ದು, ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ. ಬೆಳಗಾವಿ, ಬೀದರ್, ಕಲಬುರಗಿ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಒಳನಾಡಿನ ಜಿಲ್ಲೆಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗಲಿದೆ. ಬೀದರ್, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹಗುರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಗ್ರೂಪ್-ಎ ಹುದ್ದೆಗಳಿಗೆ ಕೆಇಎ ಮೂಲಕ ಪರೀಕ್ಷೆ

ಬೆಂಗಳೂರು: ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿರುವ ಗ್ರೂಪ್-'ಎ'ನ 650 ಸಹಾಯಕ ಪ್ರಾಧ್ಯಾಪಕರು ಮತ್ತು 1200 ನರ್ಸ್‌ಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೂಲಕ ನೇಮಕ ಮಾಡಿಕೊಳ್ಳುವಂತೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಸೂಚಿಸಿದ್ದಾರೆ. ಈ ಸಂಬಂಧ ವಿಕಾಸಸೌಧದಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ವೈದ್ಯಕೀಯ ಕಾಲೇಜು ಸಂಸ್ಥೆಗಳ ಮುಖ್ಯಸ್ಥರು ನೇಮಕಾತಿ ನಡೆಸುತ್ತಿದ್ದ ಪ್ರಸ್ತುತ ನೇಮಕಾತಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳುವ ಉದ್ದೇಶದಿಂದ ಸ್ಪರ್ಧಾತಕ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕವೇ ಭರ್ತಿ ಮಾಡಿಕೊಳ್ಳಬೇಕೆಂದು ನಿರ್ದೇಶನ ನೀಡಿದ್ದಾರೆ. ರಾಜ್ಯಾದ್ಯಂತ 22 ವೈದ್ಯಕೀಯ ಕಾಲೇಜುಗಳು ಮತ್ತು 11 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಸೇರಿದಂತೆ ವೈದ್ಯಕೀಯ ಶಿಕ್ಷಣ ಇಲಾಖೆ ಅಡಿಯಲ್ಲಿ ಬರುತ್ತಿವೆ. ಈ ಹುದ್ದೆಗಳನ್ನು ನಿಯಮದಂತೆ ಯಾವುದೇ ಮುಲಾಜಿಗೊಳಗಾಗದೇ ಭರ್ತಿ ಮಾಡಬೇಕು. ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ಖಾಲಿ ಇರುವ ಹುದ್ದೆಗಳಿಗೆ ಪರೀಕ್ಷೆಗಳನ್ನು ನಡೆಸಲು ಕೆಇಎಗೆ ಅಗತ್ಯವಾದ ಸಹಕಾರ ನೀಡಬೇಕು ಜತೆಗೆ ಇಲಾಖೆಯ ನೇಮಕಾತಿ ಬೈಲಾಗಳನ್ನು ತಿದ್ದುಪಡಿ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಬಿಎಂಟಿಸಿ ಬಸ್ ನಿರ್ವಾಹಕ ಅಮಾನತು

ಬೆಂಗಳೂರು: ಬಿಎಂಟಿಸಿ ಬಸ್‌ನಲ್ಲಿ ಪ್ರಯಾಣಿಕರೊಬ್ಬರಿಗೆ 5 ರು. ಚಿಲ್ಲರೆ ಕೊಡದೆ, ಅವರ ಮೇಲೆಯೇ ಹಲ್ಲೆ ನಡೆಸಿದ ಹಿನ್ನೆಲೆಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಬಿಎಂಟಿಸಿ ಬಸ್ ನಿರ್ವಾಹಕ ಅನ್ನು ಅಮಾನತುಗೊಳಿಸಿದೆ. ಈ ಕುರಿತು ಬಿಎಂಟಿಸಿ ಆದೇಶ ಹೊರಡಿಸಿ ಪ್ರಕಟಣೆ ತಿಳಿಸಿದೆ. ಆಗಸ್ಟ್ 6ರಂದು ಘಟನೆ ನಡೆದಿದ್ದು, ಕ್ಷಿಪ್ರವಾಗಿ ಬಸ್ ನಿರ್ವಾಹಕ ವಿರುದ್ಧ ಬಿಎಂಟಿಸಿ ಕ್ರಮ ತೆಗೆದುಕೊಂಡಿದೆ. ಬಿಎಂಟಿಸಿ ಬಸ್‌ನಲ್ಲಿ ಅಭಿನವ್ ರಾಜ್ ಎಂಬ ಯುವಕ ಪ್ರಯಾಣಿಸುತ್ತಿದ್ದರು. ಅವರು 15 ರು. ಟಿಕೆಟ್‌ಗೆ 20 ರು. ನೀಡಿದ್ದರು. 5 ರು. ಚಿಲ್ಲರೆ ವಾಪಸ್ ಕೇಳಿದಾಗ ಪ್ರಯಾಣಿಕನ ಮೇಲೆ ನಿರ್ವಾಹಕ ರೇಗಾಡಿದ್ದಾರೆ. ಆಗ ಇಬ್ಬರ ಮಧ್ಯೆ ವಾಗ್ವಾದ ನಡೆದಿದೆ. ಇದೇ ಕೋಪದಲ್ಲಿ ನಿರ್ವಾಹಕ ಪ್ರಯಾಣಿಕನ ಮೇಲೆ ಹಲ್ಲೆ ನಡೆಸಿದ್ದಾರೆ. ಇದರ ವಿಡಿಯೊ ಮಾಡಿಕೊಂಡಿದ್ದ ಅಭಿನವ್ ರಾಜ್, ಬಿಎಂಟಿಸಿಗೆ ದೂರು ನೀಡಿದ್ದರು. ಅದರಂತೆ, ಅಮಾನತು ಮಾಡಲಾಗಿದೆ.

ಜಯನಗರ: ಫ್ಯಾನ್ಸಿ ನಂಬರ್ ಹರಾಜು

ಬೆಂಗಳೂರು: ಜಯನಗರ ಆರ್‌ಟಿಒಗೆ ಸೇರಿದ ಫ್ಯಾನ್ಸಿ ನಂಬರ್ ಹರಾಜು ಪ್ರಕ್ರಿಯೆ ಬುಧವಾರ ಮಧ್ಯಾಹ್ನ 12 ಗಂಟೆಗೆ ಶಾಂತಿನಗರ ರಾಜ್ಯ ಸಾರಿಗೆ ಇಲಾಖೆಯ ಕಚೇರಿಯಲ್ಲಿ ನಡೆಯಿತು. ಫ್ಯಾನ್ಸಿ ನಂಬರ್ ಹರಾಜು ಪ್ರಕ್ರಿಯೆ ಸುಮಾರು ಎರಡ್ಮೂರು ಗಂಟೆಗಳ ಕಾಲ ನಡೆಯಿತು. ಇದರಲ್ಲಿ ಸುಮಾರು 50ಕ್ಕೂ ಹೆಚ್ಚು ಜನರು ಭಾಗಿಯಾಗಿದ್ದು, ತಮ್ಮ ಲಕ್ಕಿ ನಂಬರ್‌ಗಾಗಿ ಬೆಂಗಳೂರಿನ ಕೋಟಿ ಕುಳಗಳು ಲಕ್ಷ ಲಕ್ಷ ಹರಾಜು ಕೂಗಿದರು. ಕೆಎ05-ಎನ್‌ಎಂ/0001 ನಂಬರ್ 4 ಲಕ್ಷದ 85 ಸಾವಿರ ರುಪಾಯಿಗೆ ಸೇಲ್ ಆಗಿದ್ದರೆ, ಕೆಎ-05- ಎನ್‌ಎಂ 9999 ನಂಬರ್ 2 ಲಕ್ಷದ 5 ಸಾವಿರ ರು.ಗೆ ಹರಾಜಾಗಿದೆ. ಹೀಗೆ ಸುಮಾರು 62 ಫ್ಯಾನ್ಸಿ ನಂಬರ್‌ಗಳನ್ನು ಹರಾಜಿಗಿಡಲಾ ಗಿದ್ದು, ಇದರಿಂದ ರಾಜ್ಯ ಸಾರಿಗೆ ಇಲಾಖೆಗೆ ಹರಿದು ಬಂತು ಕೋಟ್ಯಾಂತರ ರುಪಾಯಿ ಹರಿದುಬಂದಿದೆ. 0001, 0027, 99, 999, 0555, 0,333 4444, ,6666,1111,777,8888,8055, 4444,2727,3333 5999, 6999, 0099 , 0555, 9999, 9000 ಮತ್ತು 9099, 4599 ಈ ಫ್ಯಾನ್ಸಿ ನಂಬರ್‌ಗಳ ಪೈಕಿ ಕೆಎ-05-ಎನ್‌ಎಮ್/0001 ನಂಬರ್ 4 ಲಕ್ಷದ 85 ಸಾವಿರ ರುಪಾಯಿಗೆ ಸೇಲ್ ಆಗಿದ್ದರೆ, ಕೆಎ-05-ಎನ್‌ಎಮ್/9999 ನಂಬರ್ 2 ಲಕ್ಷದ 5 ಸಾವಿರ ರುಪಾಯಿ ಹರಾಜಾಯಿತು.

{ಯತೀಂದ್ರ ಸಿದ್ದರಾಮಯ್ಯ} ಎಂಎಲ್ಸಿ

ದೆಹಲಿ ಹೈಕಮಾಂಡ್‌ನಿಂದ ನಮ್ಮ ತಂದೆಗೆ ಕ್ಲೀನ್ ಚಿಟ್ ಸಿಕ್ಕಿದೆ. ಜನರಿಂದ ಆಯ್ಕೆಯಾದ ಸರಕಾರವನ್ನು ಸುಳ್ಳು ಆರೋಪ ಮಾಡಿ ಬೀಳಿಸೋ ಕುತಂತ್ರಕ್ಕೆ ನಾವು ಬಿಡಲ್ಲ. ಅದರ ವಿರುದ್ಧ ಏನು ಬೇಕೋ ಆ ಹೋರಾಟವನ್ನು ನಮ್ಮ ಪಕ್ಷದವರು ಮಾಡುತ್ತಾರೆ. ಹೈಕಮಾಂಡ್ ಮುಖ್ಯಮಂತ್ರಿಗಳಿಗೆ ನಮ್ಮ ಬೆಂಬಲ ಕೊಡ್ತೀವಿ ಅಂತಾ ಹೇಳಿದ್ದಾರೆ.

ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಸಿದ್ದರಾಮಯ್ಯ ಚಾಲನೆ | ಅಂಬೇಡ್ಕರ್ ಜೀವನ ಸಾರ್ವಜನಿಕರಿಗೆ ತಿಳಿಸಬೇಕಿದೆ: ಸಿಎಂ

30 ಲಕ್ಷ ಹೂಗಳಿಂದ ಅರಳಿದ ಅಂಬೇಡ್ಕರ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಉದ್ಯಾನ ನಗರಿಯ ಪ್ರವಾಸಿಗರ ಆಕರ್ಷಣೆಯ ಕೇಂದ್ರ ಲಾಲ್‌ಬಾಗ್‌ನಲ್ಲಿ 30 ಲಕ್ಷ ಹೂವುಗಳಿಂದ ಸಂವಿಧಾನಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಜೀವನ, ಸಾಧನೆ ಅರಳಿದೆ. ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ 216ನೇ ಫಲಪುಷ್ಪ ಪ್ರದರ್ಶನ ಆರಂಭಗೊಂಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಚಾಲನೆ ನೀಡಿದರು.

ಆ. 8 ರಿಂದ 19ರವರೆಗೆ ಫಲಪುಷ್ಪ ಪ್ರದರ್ಶನ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫಲಪುಷ್ಪ ಪ್ರದರ್ಶನಕ್ಕೆ ಹಸಿರು ನಿಶಾನೆ ತೋರಿದರು. ಈ ವೇಳೆ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ, ರಾಮಲಿಂಗಾರೆಡ್ಡಿ, ಜಮೀರ್ ಅಹ್ಮದ್ ಸೇರಿದಂತೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಫಲಪುಷ್ಪ ಉದ್ಘಾಟನೆ ಬಳಿಕ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ , ಭಾರತೀಯ ಸಮಾಜಕ್ಕೆ ಅಂಬೇಡ್ಕರ್ ಅವರ ಕೊಡುಗೆ ಅಪಾರವಾಗಿದೆ. ಈ ನಿಟ್ಟಿನಲ್ಲಿ ಇನ್ನಷ್ಟು ಜನರಿಗೆ ಅವರ ಸಂದೇಶ ತಲುಪಿಸಲು ಈ ಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

ಬಿ.ಆರ್. ಅಂಬೇಡ್ಕರ್ ಯಾರು? ಅಂಬೇಡ್ಕರ್ ಆರಂಭಿಕ ಜೀವನ, ರಾಜಕೀಯ ಜೀವನ, ಸಂವಿಧಾನ, ಅವರ ಹೋರಾಟ ಬದುಕು, ಬೌದ್ಧ ಧರ್ಮ ಸ್ವೀಕಾರ, ಸಂಸತ್‌ನಲ್ಲಿ ಮಾಡಿರುವ ಭಾಷಣ ಹೀಗೆ ಎಲ್ಲವನ್ನೂ ಈ ಪ್ರದರ್ಶನದಲ್ಲಿ ತಿಳಿಸಿಕೊಡುವ ಪ್ರಯತ್ನ ಮಾಡಲಾಗಿದೆ ಎಂದು ಸಿಎಂ ತಿಳಿಸಿದರು.

ಸಾಮಾಜಿಕ ಸಮಾನತೆಯ ಹರಿಕಾರಡಿ

ಡಾ.ಬಿ.ಆರ್.ಅಂಬೇಡ್ಕರ್ ಭಾರತದ ಸಾಮಾಜಿಕ ಸಮಾನತೆಯ ಹರಿಕಾರ. ಸಾಮಾಜಿಕವಾಗಿ ಬಹಿಷ್ಕಾರಕ್ಕೆ ಒಳಗಾದ ದೀನ ದಲಿತರ ಏಳಿಗೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಅವರ ಆದರ್ಶಗಳು ಎಲ್ಲ ವರ್ಗದ ಜನರಿಗೂ ಮಾದರಿ ಮಾತ್ರವಲ್ಲದೆ ಅವರು ಎಂದಿಗೂ ಪ್ರಸ್ತುತ ಎಂದು ಅಭಿಪ್ರಾಯಪಟ್ಟರು.ಅಂಬೇಡ್ಕರ್ ಅವರ ಸಂವಿಧಾನದ ಮೂಲಕ ಭಾರತವನ್ನು ಸಮಾನತೆ, ಸಮತೆ, ಭ್ರಾತೃತ್ವ ಮತ್ತು ಜಾತ್ಯತೀತ ಪರಿಕಲ್ಪನೆಗಳ ಅಡಿಯಲ್ಲಿ ನಿರ್ಮಿಸುವುದಕ್ಕೆ ಅಡಿಪಾಯ ಹಾಕಿದರು ಎಂದು ಮುಖ್ಯಮಂತ್ರಿ ಬಣ್ಣಿಸಿದರು.

ಲಾಲ್ ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಿದ ಸಿಎಂ ಸಿದ್ದರಾಮಯ್ಯ

ನಾನಾ ಬಗೆಯ ಹೂವುಗಳಿಂದ ಅಲಂಕಾರ



30 ಲಕ್ಷಕ್ಕೂ ಅಧಿಕ ವಿವಿಧ ಬಗೆಯ ಹೂಗಳಿಂದ ಪುಷ್ಪಾಲಂಕಾರ ಮಾಡಲಾಗಿದೆ. ಬಾಲ್ಯ, ವಿದ್ಯಾಭ್ಯಾಸ, ಯೌವನ, ಹೋರಾಟ ಈ ಎಲ್ಲದರ ಮಾಹಿತಿಯೂ ಇಲ್ಲಿ ಲಭ್ಯವಿದೆ ಎಂದರು. ಅಂಬೇಡ್ಕರ್‌ರ ಸಂವಿಧಾನ ಸದಾ ಕಾಲ ಪ್ರಸ್ತುತ ಸಿದ್ದರಾಮಯ್ಯ ನುಡಿದರು. ಇದೇ ವೇಳೆ ಅಂಬೇಡ್ಕರ್ ಅವರ ಮೊಮ್ಮಗ ಯಶವಂತ್ ಭೀಮರಾವ್ ಅಂಬೇಡ್ಕರ್ ಅವರನ್ನು ಸನ್ಮಾನಿಸಲಾಯಿತು.

ವಾಹನಗಳ ನಿಲುಗಡೆಗೆ ಎಲ್ಲೆಲ್ಲಿ ಅವಕಾಶ?

- ಮರೀಗೌಡ ರಸ್ತೆ - ಆಲ್ ಅಮೀನ್ ಕಾಲೇಜು ಆವರಣದಲ್ಲಿ ದ್ವಿಚಕ್ರ ವಾಹನಗಳ ನಿಲುಗಡೆ.
- ಕೆ.ಎಚ್. ರಸ್ತೆ- ಶಾಂತಿನಗರ ಬಿಎಂಟಿಸಿ ಬಸ್ ನಿಲ್ದಾಣದ ಮೇಲೆ ನಾಲ್ಕು ಚಕ್ರದ ವಾಹನಗಳ ನಿಲುಗಡೆ.
- ಮರೀಗೌಡ ರಸ್ತೆ - ಹಾಪ್ಕಾಮ್ಸ್ ನಲ್ಲಿ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳನ್ನು ನಿಲ್ಲಿಸಲು ಅವಕಾಶ.
- ಜೆ.ಸಿ. ರಸ್ತೆ - ಕಾರ್ಪೊರೇಶನ್ ಪಾರ್ಕಿಂಗ್ ಸ್ಥಳಗಳಲ್ಲಿ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ವ್ಯವಸ್ಥೆ

ಶುಲ್ಕ ಎಷ್ಟು?

ವಯಸ್ಕರಿಗೆ ಟಿಕೆಟ್ ಶುಲ್ಕ 80 ರು. ಇರಲಿದೆ. ಮಕ್ಕಳಿಗೆ 30 ರು, ರಜಾ ದಿನಗಳಲ್ಲಿ ವಯಸ್ಕರಿಗೆ 100 ರು. ಇದೆ. ಇನ್ನು ಶಾಲಾ ಮಕ್ಕಳಿಗೆ ಸಂಪೂರ್ಣ ಉಚಿತವಾಗಿದೆ. ಉಳಿದಂತೆ ಇತರ ಮಕ್ಕಳಿಗೆ 30 ರುಪಾಯಿ ಪ್ರವೇಶ ಶುಲ್ಕ ಇರಲಿದೆ.

ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗೆ ಡಾ.ಅಂಬೇಡ್ಕರ್ ಪ್ರತಿಮೆ ಮತ್ತು ಸಂವಿಧಾನದ ಪ್ರತಿ ನೀಡಿ ಗೌರವಿಸಲಾಯಿತು.

ಲಾಲ್ ಬಾಗ್‌ನಲ್ಲಿ ಪ್ರವಾಸಿಗರಿಂದ ಸೆಲ್ಫಿ....

- ಕುಡಿಯುವ ನೀರಿಗಾಗಿ 18 ಕಡೆ ವ್ಯವಸ್ಥೆ
- ಹೆಚ್ಚುವರಿ ಸಂಚಾರಿ ಶೌಚಾಲಯ ವ್ಯವಸ್ಥೆ
- ಸುರಕ್ಷತೆಯ ದೃಷ್ಟಿಯಿಂದ 136 ಸಿಸಿ ಕ್ಯಾಮೆರಾ, 400 ಪೊಲೀಸರ ನಿಯೋಜನೆ
- ಆಂಥೋರಿಯಂ, ಲಿಲ್ಲಿ, ಆರ್ಕಿಡ್, ಜರ್ಬೆರಾ, ಸೇವಂತಿಗೆ ಸೇರಿದಂತೆ 200 ಪ್ರಭೇದದ 30-32 ಲಕ್ಷ ಹೂಗಳ ಬಳಕೆ

ರೇವ್ ಪಾರ್ಟಿ: ಚಾರ್ಜ್‌ಶೀಟ್‌ಗೆ ಸಿಸಿಬಿ ಸಿದ್ಧತೆ

ಬೆಂಗಳೂರು: ರೇವ್ ಪಾರ್ಟಿ ಪ್ರಕರಣ ಸಂಬಂಧ ಸಿಸಿಬಿ ಪೊಲೀಸರ ತನಿಖೆ ಪೂರ್ಣಗೊಂಡಿದ್ದು, ಚಾರ್ಜ್‌ಶೀಟ್ ಸಲ್ಲಿಕೆಗೆ ಸಿದ್ಧತೆ ಮಾಡಿಕೊಂಡಿದ್ದಾರೆ.

ರೇವ್ ಪಾರ್ಟಿಯಲ್ಲಿ ಭಾಗವಹಿಸಿದ್ದ ತೆಲುಗು ನಟಿ ಹೇಮಾ ಸೇರಿ 85ಕ್ಕೂ ಹೆಚ್ಚು ಜನರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆಗೆ ತಯಾರಿ ಮಾಡಿಕೊಳ್ಳಲಾಗಿದೆ. ಹೇಮಾ ವಿರುದ್ಧವೂ ಸಾಕ್ಷಿಗಳಿದ್ದು, ಸಿಸಿಬಿ ಚಾರ್ಜ್ ಫ್ರೇಮ್ ಮಾಡಿದೆ. ಈಕೆ ಡ್ರಗ್ಸ್ ಸೇವನೆ ಮಾಡಿದ್ದಕ್ಕೆ ಸಾಕ್ಷಿ ಲಭ್ಯವಾಗಿದೆ.

ಡ್ರಗ್ಸ್ ಸೇವನೆ ಮಾಡಿದ್ದೂ ಅಲ್ಲದೇ ಪೊಲೀಸರ ತನಿಖೆ ವೇಳೆ ದಿಕ್ಕುತಪ್ಪಿಸುವ ಕೆಲಸ ಮಾಡಿದ್ದಾಳೆ. ಪೊಲೀಸರಿಗೆ ತನಿಖೆ ವೇಳೆ ಸುಳ್ಳು ಮಾಹಿತಿ ನೀಡಿದ್ದಾಳೆ. ಪ್ರಭಾವ ಬಳಸಿ ತನಿಖೆಯಿಂದ ತಪ್ಪಿಸಿಕೊಳ್ಳುವ ಯತ್ನ ಮಾಡಿರುವ ಬಗ್ಗೆಯೂ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖ ಮಾಡಲಾಗಿದೆ. ತಾನು ರೇವ್‌ಪಾರ್ಟಿಯಲ್ಲಿ ಭಾಗವಹಿಸಿಯೇ ಇಲ್ಲ ಎಂದು ಈಕೆ ಪಾರ್ಟಿಯ ಸ್ಥಳದಿಂದಲೇ ಮಾಧ್ಯಮಗಳಿಗೆ ವಿಡಿಯೋ ಕಳಿಸಿ ದಿಕ್ಕುತಪ್ಪಿಸುವ ಯತ್ನ ಮಾಡಿದ್ದಳು. ಪಾರ್ಟಿ ಆಯೋಜನೆ ಮಾಡಿದ್ದ ಐವರು ಸೇರಿ 85ಕ್ಕೂ ಹೆಚ್ಚು ಜನರ ವಿರುದ್ಧ ಚಾರ್ಜ್‌ಶೀಟ್ ಮಂಡಿಸಲಾಗುತ್ತಿದೆ. ಇನ್ನೂ ಕೆಲವೇ ದಿನದಲ್ಲಿ ನ್ಯಾಯಾಲಯಕ್ಕೆ ಇದನ್ನು ಸಿಸಿಬಿ ಸಲ್ಲಿಸಲಿದೆ. ಪಾರ್ಟಿಯಲ್ಲಿ 85ಕ್ಕೂ ಹೆಚ್ಚು ಜನರು ಭಾಗವಹಿಸಿರುವುದು ಪತ್ತೆಯಾಗಿತ್ತು. ಪಕ್ಕದ ಆಂಧ್ರಪ್ರದೇಶದ ಅನೇಕ ಪ್ರಭಾವಿಗಳು, ಶ್ರೀಮಂತ ಉದ್ಯಮಿಗಳು ಈ ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು.

ರೇವ್ ಪಾರ್ಟಿ ಪ್ರಕರಣದಲ್ಲಿ ನಟಿ ಹೇಮಾ ಅವರನ್ನು ಬಂಧಿಸಲಾಗಿತ್ತು. 14 ದಿನ ನ್ಯಾಯಾಂಗ ಬಂಧನವನ್ನು ಕೋರ್ಟ್ ಆಕೆಗೆ ವಿಧಿಸಿತ್ತು. ನಂತರ ಜಾಮೀನು ಮಂಜೂರಾಗಿತ್ತು. ಬೆಂಗಳೂರು ಗ್ರಾಮಾಂತರ ಎನ್‌ಡಿಪಿಎಸ್ ವಿಶೇಷ ಕೋರ್ಟ್ ನಟಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ನಟಿ ಹೇಮಾಳಿಂದ ಯಾವುದೇ ಮಾದಕವಸ್ತು ವಶಕ್ಕೆ ಪಡೆಯಲಾಗಿಲ್ಲ. ಹಲವು ದಿನಗಳ ನಂತರ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ ಎಂದು ಹೇಮಾ ಪರ ವಕೀಲ ಮಹೇಶ್ ಕಿರಣ್ ಶೆಟ್ಟಿ ವಾದ ಮಂಡಿಸಿದ್ದಾರೆ. ಹೀಗಾಗಿ ನಟಿ ಷರತ್ತುಬದ್ಧ ಜಾಮೀನು ನೀಡಲಾಗಿದೆ. ಈ ಪ್ರಕರಣದಲ್ಲಿ ವಿಚಾರಣೆಗೆ ಆಗಮಿಸಿದ್ದ ನಟಿಯನ್ನು ಜೂ.3ರಂದು ಬಂಧಿಸಲಾಗಿತ್ತು.

ಮುಡಾ: ಸಿಎಂ ಸೇರಿ ಐವರ ವಿರುದ್ಧ ದೂರು

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ಅಕ್ರಮವಾಗಿ 14 ನಿವೇಶನ ಪಡೆದಿದ್ದಾರೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಸೇರಿ ಐವರು ಆರೋಪಿಗಳ ವಿರುದ್ಧ ವಿಶೇಷ ತನಿಖಾ ದಳ ಅಥವಾ ಬೇರಾವುದೇ ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆಗೆ ಆದೇಶಿಸಬೇಕು ಎಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಗುರುವಾರ ಖಾಸಗಿ ದೂರು ಸಲ್ಲಿಕೆಯಾಗಿದೆ.

ಮೈಸೂರಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಸಲ್ಲಿಸಿರುವ ಖಾಸಗಿ ದೂರಿನಲ್ಲಿ ಮುಖ್ಯಮಂತ್ರಿ ಸಿದ್ದಾರಾಮಯ್ಯ, ಅವರ ಪತ್ನಿ ಪಾರ್ವತಿ, ಭಾವಮೈದುನ ಮಲ್ಲಿಕಾರ್ಜುನಸ್ವಾಮಿ, ಜೆ.ದೇವರಾಜು ಹಾಗೂ ಇತರೆ ಹೆಸರಿನಡಿ ಐವರನ್ನು ಆರೋಪಿಗಳನ್ನಾಗಿಸಲಾಗಿದೆ. ದೂರನ್ನು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಸ್ವೀಕರಿಸಿದ್ದು, ಶುಕ್ರವಾರ ವಿಚಾರಣೆ ನಡೆಸುವುದಾಗಿ ತಿಳಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ವಿರುದ್ಧ ಅಭಿಯೋಜನಾ ಮಂಜೂರಾತಿ ಕೋರಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಮನವಿ ಸಲ್ಲಿಸಿದ್ದು, ಅದು ಪರಿಗಣನೆಗೆ ಬಾಕಿ ಇದೆ. ಸಿದ್ದರಾಮಯ್ಯ ಅವರು ಕ್ರಮ ತೆಗೆದುಕೊಂಡಿರುವುದು ಅಥವಾ ಶಿಫಾರಸ್ಸು ಮಾಡಿರುವುದಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿಲ್ಲವಾದ್ದರಿಂದ ಭ್ರಷ್ಟಾಚಾರ ನಿರೋಧ ಕಾಯಿದೆ ಸೆಕ್ಷನ್ 17ಎ ಅಡಿ ಸಕ್ಷಮ ಪ್ರಾಧಿಕಾರದಿಂದ (ರಾಜ್ಯಪಾಲರು) ಪೂರ್ವಾನುಮತಿ ಬೇಕಿಲ್ಲ. ಕಾನೂನಿನ ತೊಡಕು ಇಲ್ಲದೇ ಈ ನ್ಯಾಯಾಲಯವು ದೂರನ್ನು ಮೆರಿಟ್ ಮೇಲೆ ಪರಿಗಣಿಸಬಹುದಾಗಿದೆ ಎಂದು ವಿವರಿಸಲಾಗಿದೆ.

ಸಿದ್ದರಾಮಯ್ಯ ಮತ್ತು ಇತರೆ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಸೆಕ್ಷನ್‌ಗಳಾದ 120ಬಿ, 166, 403, 406, 420, 426, 465, 468, 340, 351 (ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್‌ಗಳಾದ 61, 188, 314, 316, 318, 324, 336, 340, ಮತ್ತು 351), ಭ್ರಷ್ಟಾಚಾರ ನಿರೋಧಕ ಕಾಯಿದೆ 1988ರ ಸೆಕ್ಷನ್ 9 13, ಬೇನಾಮಿ ಆಸ್ತಿ ವರ್ಗಾವಣೆ ನಿಷೇಧ ಕಾಯಿದೆ 1988 ಮತ್ತು ಕರ್ನಾಟಕ ಭೂಮಿ ವಶ (ಗ್ರಾ್ಯಬಿಂಗ್) ಕಾಯಿದೆ 2011ರ ಸೆಕ್ಷನ್ 34ರ ಅಡಿ ಸಂಜ್ಞೇ ಪರಿಗಣಿಸಿ, ಸಿಬಿಐ ಅಥವಾ ರಾಜ್ಯ ಸರಕಾರ/ಲೋಕಾಯುಕ್ತ ಪೊಲೀಸ್ ವಿಭಾಗದ ಅಡಿಗೆ ಬಾರದ ಬೇರಾವುದೇ ಸ್ವತಂತ್ರ ತನಿಖಾ ಸಂಸ್ಥೆಗೆ ಸಿಆರ್‌ಪಿಸಿ ಸೆಕ್ಷನ್ 202 ಜತೆಗೆ ಬಿಎನ್‌ಎಸ್‌ಎಸ್ ಸೆಕ್ಷನ್ 225 ಅಡಿ ತನಿಖೆ ನಡೆಸಲು ಆದೇಶಿಸಬೇಕು. ಆನಂತರ ಆರೋಪಿಗಳಿಗೆ ಸಮನ್ಸ್ ಜಾರಿಮಾಡಿ, ಕಾನೂನಿನ ಅಡಿ ಶಿಕ್ಷೆಗೆ ಗುರಿ ಪಡಿಸಬೇಕು ಎಂದು ಕೋರಲಾಗಿದೆ.

ಎಚ್.ಡಿ.ರೇವಣ್ಣ, ಪ್ರಜ್ವಲ್ ಅರ್ಜಿ ವಿಚಾರಣೆ ಆ. 29ಕ್ಕೆ

ಬೆಂಗಳೂರು: ಲೈಂಗಿಕ ಕಿರುಕುಳ ಪ್ರಕರಣದಲ್ಲಿ ತಮ್ಮ ವಿರುದ್ಧದ ಆರೋಪದ ಸಂಬಂಧ ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಲು ಕೋರಿ ಮಾಜಿ ಸಚಿವ ಎಚ್.ಡಿ. ರೇವಣ್ಣ, ಹಾಗೂ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಆ.29ಕ್ಕೆ ಮುಂದೂಡಿದೆ.

ಅರ್ಜಿ ವಿಚಾರಣೆ ಆಗಸ್ಟ್ 29ರವರೆಗೂ ಮುಂದೂಡಿರುವುದರಿಂದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜೈಲಿನಲ್ಲಿ ಇರುವುದು ನಿಶ್ಚಿತ. ಪ್ರತ್ಯೇಕ ಅರ್ಜಿಗಳನ್ನು ಜಾಮೀನು ಹಾಗೂ ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಲಾಗಿತ್ತು. ತಮ್ಮ ವಿರುದ್ಧದ ಲೈಂಗಿಕ ಕಿರುಕುಳದ ದೂರುಗಳ ಎಫ್‌ಐಆರ್ ರದ್ದುಪಡಿಸಲು ಅರ್ಜಿಗಳಲ್ಲಿ ಕೋರಲಾಗಿತ್ತು.

ಅಶ್ಲೀಲ ವಿಡಿಯೊ ಅಸಲಿ: ಈ ನಡುವೆ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಲ್ಲಿ ಬಂಧಿತರಾಗಿರುವ ಮಾಜಿ ಸಂಸದ ಪ್ರಜ್ವಲ್ ಅವರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಅಶ್ಲೀಲ ವಿಡಿಯೊಗಳು ಅಸಲಿಯಾಗಿವೆ. ವಿಡಿಯೊ ಗಳನ್ನು ತಿರುಚಿಲ್ಲ ಎಂಬುದಾಗಿ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯು ತಿಳಿಸಿದೆ. ಇದರಿಂದಾಗಿ ಪ್ರಕರಣದ ಕುರಿತು ಇನ್ನಷ್ಟು ತನಿಖೆ ನಡೆಸಲು ಎಸ್‌ಐಟಿಗೆ ಆನೆಬಲ ಬಂದಂತಾಗಿದೆ.



ರೌಡಿ ಹೊಟ್ಟೆ ಮಂಜನ ಬಂಧನ

ಬೆಂಗಳೂರು: 40 ಪ್ರಕರಣಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಆರೋಪಿ ಹೊಟ್ಟೆಮಂಜು ಕೊನೆಗೂ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ.

ಮಂಜೇಶ್ ಅಲಿಯಾಸ್ ಹೊಟ್ಟೆಮಂಜು ಬಂಧಿತ ಆರೋಪಿ. ಈ ಹೊಟ್ಟೆ ಮಂಜುನನ್ನು ಸಿನಿಮೀಯ ರೀತಿಯಲ್ಲಿ ಬೈಕ್ ಅಡ್ಡಗಟ್ಟಿದ ಪೊಲೀಸರು ಲಾಕ್ ಮಾಡಿದ್ದಾರೆ. ಆರೋಪಿ ಚಿನ್ನಾಭರಣ ಧರಿಸಿರುವ ವೃದ್ಧೆಯರನ್ನೆ ಗುರಿ ಮಾಡುತ್ತಿದ್ದ. ಪಿಂಚಣಿ, ವೃದ್ಧಾಪ್ಯ ವೇತನ, ಅಂಚೆಕಚೇರಿಗಳಲ್ಲಿ ಹಣ ಬರುವ ಹಾಗೆ ಮಾಡುತ್ತೇನೆ ಎಂದು ನಂಬಿಸುತ್ತಿದ್ದ. ಮಾರ್ಗಮಧ್ಯೆ ಬೈಕ್ ನಿಲ್ಲಿಸಿ ಮಸಲತ್ತು ಮಾಡುತ್ತಿದ್ದ. ಚಿನ್ನಾಭರಣವನ್ನು ಬಿಚ್ಚಿ ನನ್ನ ಕೈಯಲ್ಲಿ ಕೊಡಿ ಎಂದು ನಂಬಿಸುತ್ತಿದ್ದ. ಕೈಗೆ ಚಿನ್ನಾಭರಣ ಸಿಕ್ಕಿದ್ದೇ ತಡ ಕ್ಷಣಾರ್ಧದಲ್ಲಿ ಪರಾರಿಯಾಗುತ್ತಿದ್ದ ಕೊರಟಗೆರೆ, ಮಧುಗಿರಿ, ಬೆಂಗಳೂರು, ಬೆಂಗಳೂರು ಗ್ರಾಮಾಂತರ ಸೇರಿ ವಿವಿಧ ಪೊಲೀಸ್ ಠಾಣೆಗಳಲ್ಲಿ 40 ಪ್ರಕರಣಗಳು ಈತನ ಮೇಲಿವೆ.

ಕರ್ನಾಟಕ ನಾಟಕ ಅಕಾಡೆಮಿಯ ಮೂರು ವರ್ಷಗಳ ಪ್ರಶಸ್ತಿ ಪ್ರಕಟ | 75 ಮಂದಿಗೆ ವಾರ್ಷಿಕ ಪ್ರಶಸ್ತಿ

ಉಮಾಶ್ರೀ, ಶಿವಪ್ರಕಾಶ್, ಕೆ.ರಾಮಯ್ಯ ಸೇರಿ ಮೂವರಿಗೆ ಜೀವಮಾನ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ಮೂರು ವರ್ಷಗಳ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದೆ. ನಟ ಪ್ರಕಾಶ್ ರೈ, ನಟಿ ಉಮಾಶ್ರೀ, ನಾಟಕಕಾರರಾದ ಎಚ್.ಎಸ್. ಶಿವಪ್ರಕಾಶ್ ಹಾಗೂ ರಂಗಕರ್ಮಿ ಕೋಟಿ ಗಾನಹಳ್ಳಿ ರಾಮಯ್ಯ ಅವರು ಜೀವಮಾನ ಸಾಧನೆ ಪ್ರಶಸ್ತಿ'ಗೆ (ಗೌರವ ಪ್ರಶಸ್ತಿ) ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ 93 ಮಂದಿ ಪ್ರಶಸ್ತಿ ಪುರಸ್ಕೃತರ ಪಟ್ಟಿ ಬಿಡುಗಡೆ ಮಾಡಿದರು.

ಜೀವಮಾನ ಸಾಧನೆ ಪ್ರಶಸ್ತಿ ತಲಾ ₹ 50 ಸಾವಿರ ನಗದು ಹಾಗೂ ನಟರಾಜ ವಿಗ್ರಹ ಒಳಗೊಂಡಿದೆ. ವಾರ್ಷಿಕ ಪ್ರಶಸ್ತಿಗೆ 75 ಮಂದಿ ಭಾಜನರಾಗಿದ್ದು, ತಲಾ ₹ 25 ಸಾವಿರ ನಗದು ಹಾಗೂ ನಟರಾಜ ವಿಗ್ರಹ ಒಳಗೊಂಡಿವೆ.

ಕೆ. ರಾಮಯ್ಯ

ಶಿವಪ್ರಕಾಶ್

ಪ್ರಕಾಶ್ ರೈ

75 ಮಂದಿಗೆ 2022-23 ಸಾಲಿನ ವಾರ್ಷಿಕ ಪ್ರಶಸ್ತಿ

ಅಚ್ಯುತ್ ಕುಮಾರ್, ಲಕ್ಷ್ಮೀಪತಿ ಕೋಲಾರ, ರಮೇಶ್ ಪಂಡಿತ್ , ಆಶಾರಾಣಿ ಆಡುಗೋಡಿ , ಶ್ರೀನಿವಾಸ್ ರಮೇಶ್ ಬೇಗಾರ್, ವೀರಭದ್ರಾಚಾರ್, ಪ್ರಕಾಶ್ ಆರ್., ಶಂಕರ ಹಲಗತ್ತಿ , ಎಲ್.ಎಚ್. ರಂಗನಾಥ್, ಅನುಪಮ ಎಚ್. (ಅಂಬಿಕಾ), ಬಸವರಾಜ ಮುರುಗೋಡ , ಬಿ. ಎಂ.ಎಸ್.ಪ್ರಭು , ಬೇಲೂರು ರಘುನಂದನ್, ಮಂಜುನಾಥ ತಿಮ್ಮಣ್ಣ ಭಟ್ಟ , ಕೆ.ಎಂ. ಕೃಷ್ಣಮೂರ್ತಿ, ಅನಿಲ್ ಕುಮಾರ್, ಗ್ಯಾರಂಟಿ ರಾಮಣ್ಣ ,ನೂರ್ ಅಹಮ್ಮದ್ ಶೇಖ್, ಕೊಟ್ರಯ್ಯ ಹಿರೇಮಠ, ಗಂಗಮ್ಮ ಅರೇರ ,ಎನ್.ಎಚ್. ಶಿವಕುಮಾರ್, ಎಸ್.ಎ.ಖಾನ್ ,ನಂದಿತಾ ಯಾದವ್, ಗುರಯ್ಯ ಸ್ವಾಮಿ ,

2023-24ನೇ ಸಾಲಿನ ವಾರ್ಷಿಕ ಪ್ರಶಸ್ತಿ

ಬಿ.ಸುರೇಶ್, ಜೆರ್ರಿ ಅನಂತರಾಮ್, ಮುರುಡಯ್ಯ, ಮಯ ಬ್ರಹ್ಮಾಚಾರ್, ರಜನಿ ಗರುಡ, ನೀಲಗುಂದ ಬಸವನಗೌಡ ,ವೈಮೃತ್ಯುಂಜಯ ,ಪವಿತ್ರಾ ಮಹಾದೇವ , ವೆಂಕಪ್ಪ ಕಂಬಾಗಿ ,ಕೆ. ಹುಸೇನ್ ಸಾಬ್, ಪ್ರಸಾದ್ ಕುಂದೂರು ,ಕೆ.ಜಿ.ಮಹಾಬಲೇಶ್ವರ, ದೇವರಾಜ್ ದೇವನಹಳ್ಳಿ, ವೆಂಕಟೇಶ್ 26 ಮಂದಿಗೆ ಪ್ರಶಸ್ತಿ ಘೋಷಿಸಲಾಗಿದೆ.

2024-25ನೇ ಸಾಲಿನ ವಾರ್ಷಿಕ ಪ್ರಶಸ್ತಿ

ಪ್ರಕಾಶ್ ರಾಜ್, ಸಂಚಯ ಗಣೇಶ್ , ಆರ್. ಶ್ರೀನಾಥ್ ,ಎಚ್.ಎನ್.ದ್ಯಾಮೇಶ್ , ತೋಟಪ್ಪ ಕಾಮನೂರು, ಚಂದ್ರಶೇಖರ್ ಹೊನ್ನಾಳಿ , ಕೆ.ಪಿ.ಅಶ್ವಥ್ ನಾರಾಯಣ ,ಅಬ್ರಾಹಿಂ ಡಿ. ಸಿಲ್ವಾ, ಸಿದ್ದಪ್ಪ ರೊಟ್ಟಿ ,ರಾಯಪ್ಪ ಅನಂತಕಲ್, ವಸಂತ್ ಅಮೀನ್, ಚಂದ್ರಶೇಖರ ವಸ್ತ್ರದ ,ಎ. ಮುನಿನಾರಾಯಣ, ಚಂದ್ರಶೇಖರ ಆಚಾರ್, ಸಿದ್ಧರಾಜು ಮಲ್ಲಿಕಾರ್ಜುನ ಜಿ. ಬಿ.ಎಸ್. ವಿದ್ಯಾರಣ್ಯ, ಅಪ್ಪಣ್ಣ ರಾಮದುರ್ಗ ,ಶಶಿಧರ್ ಮಾಲರಾಣಿ ಬೆಳವಣಕಿ, ರೇಣುಕಾ ಬಾವಳ್ಳಿ ,ರಂಗಸ್ವಾಮಿ ಗಿರಿಜಾ ಸಿದ್ಧಿ ,ಕೋಟೆ ಅನಂತು ಚಾಂದಿನಿ (ಲಿಂಗತ್ವ ಅಲ್ಪಸಂಖ್ಯಾತೆ)

15 ಮಂದಿಗೆ ದತ್ತಿನಿಧಿ ಪ್ರಶಸ್ತಿ ಅಕಾಡೆಮಿಯ ದತ್ತಿನಿಧಿ ಪ್ರಶಸ್ತಿಗೆ ಮೂರು ವರ್ಷಗಳಿಂದ 15 ಮಂದಿ ಆಯ್ಕೆಯಾಗಿದ್ದು ಈ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಹಾಗೂ ನಟರಾಜ ವಿಗ್ರಹ ಹೊಂದಿವೆ.

ಕಲ್ಚರ್ಡ್ ಕಮೆಡಿಯನ್ ಕೆ.ಹಿರಣ್ಣಯ್ಯ ದತ್ತಿ ಪುರಸ್ಕಾರ'ಕ್ಕೆ ಲಕ್ಷ್ಮಣ ಸುವರ್ಣ ವಿರೂಪಾಕ್ಷಯ್ಯ ಸ್ವಾಮಿ ಚನ್ನಬಸಪ್ಪ ಶಿವಪ್ಪ ಕಾಳೆ ನಟರತ್ನ ಚಿಂದೋಡಿ ವೀರಪ್ಪನವರ ದತ್ತಿ ಪುರಸ್ಕಾರ'ಕ್ಕೆ ಬಲರಾಮ ಹೇಮಾ ಮಾಲಿನಿ ನಂದರಾಣೆ ಕೋಲ್ಕತ್ತ ಪದ್ಮಶ್ರೀ ಚಿಂದೋಡಿ ಲೀಲಾ ದತ್ತಿ ಪುರಸ್ಕಾರ ಪ್ರಶಸ್ತಿಗೆ ಟಿ. ತಿಮ್ಮೇಶ್ ರೇವಣ್ಣ ಬಿ.ಎಸ್. ಲಕ್ಷ್ಮಯ್ಯ ಕೆ. ರಾಮಚಂದ್ರಯ್ಯ ದತ್ತಿನಿಧಿ ಪುರಸ್ಕಾರ'ಕ್ಕೆ ನರಸಿಂಹ ಪ್ರಸಾದ್ ಬಿ. ರುದ್ರೇಶ್ ಸಿದ್ಧಲಿಂಗಸ್ವಾಮಿ ಹಾಗೂ ಮಾಲತಿಶ್ರೀ ಮೈಸೂರು ದತ್ತಿನಿಧಿ ಪುರಸ್ಕಾರ'ಕ್ಕೆ ಶಂಕರ ಜಿ. ಹಿಪ್ಪರಗಿ ಫ್ಲೋರಾ ಅಚ್ಯುತ್ ಮತ್ತು ಎಚ್.ಬಿ. ಶಿವಲಿಂಗಮೂರ್ತಿ ಆಯ್ಕೆಯಾಗಿದ್ದಾರೆ.

4 ಅಂತಸ್ತಿನ ಕಟ್ಟಡವೇರಿದ ವಿವಾಹಿತನ ರಕ್ಷಣೆ

ಬೆಂಗಳೂರು: ಹೊಸದಾಗಿ ನಿರ್ಮಾಣವಾಗಿದ್ದ ನಾಲ್ಕಂತಸ್ತಿನ ಕಟ್ಟಡವೇರಿದ ಯುವಕನೊರ್ವ ಆತ್ಮಹತ್ಯೆಗೆ ಯತ್ನಿಸಲು ಮುಂದಾದ ಘಟನೆ ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜು ಹಿಂಭಾಗದಲ್ಲಿ ನಡೆದಿದೆ. ನಾನು ತುಂಬಾ ಚೆನ್ನಾಗಿ ಓದುತ್ತಿದ್ದೆ, ಆದರೆ ನನ್ನನ್ನು ಮೆಂಟಲ್ ಆಸ್ಪತ್ರೆಗೆ ಸೇರಿಸಿದ್ದಾರೆ. ನಾನು ಈಗ ಇಲ್ಲಿಂದ ಹಾರಿ ಸಾಯುತ್ತೇನೆ ಎಂದು ಬೆದರಿಕೆ ಹಾಕಿದ್ದ. ಜತೆಗೆ ನನ್ನ ತಾಯಿ ಬೈದರು, ಯಾವುದೇ ಕಾರಣಕ್ಕೂ ನಾನು ವಾಪಸ್ ಬರುವುದಿಲ್ಲ ಎಂದು ಹಠ ಹಿಡಿದಿದ್ದ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಪೊಲೀಸರು ಯುವಕನನ್ನು ಕೆಳಗೆ ಇಳಿಸಲು ಎಷ್ಟೇ ಮನವೊಲಿಸಿದರೂ ಸಾಧ್ಯವಾಗಲಿಲ್ಲ. ಏಣಿ ಹಾಕಲು ಹೋದರೆ, ತಳ್ಳುವ ಕೆಲಸ ಮಾಡಿದ್ದ. ಈ ವೇಳೆ ನನ್ನ ಪತ್ನಿಯನ್ನು ಕರೆಸಿ ಎಂದು ಪಟ್ಟು ಹಿಡಿದಿದ್ದ. ಬಳಿಕ ಅಗ್ನಿಶಾಮಕ ವಾಹನ ಆಗಮಿಸಿ ಏಣಿ, ಬಲೆಗಳನ್ನು ತಂದು ಕಾರ್ಯಾಚರಣೆ ನಡೆಸಿದರು.

ಸತತ ಮೂರು ಗಂಟೆಗಳ ಕಾಲ ಸತಾಯಿಸಿದ್ದ ಯುವಕನನ್ನು ಪೊಲೀಸರು ಕಟ್ಟಡದಿಂದ ಇಳಿಸಿ ಬಳಿಕ ಪೊಲೀಸರು ವಿಚಾರಣೆ ನಡೆಸಿದಾಗ, ನಾನು ಹೆಸರು ಮಂಜುನಾಥ್ ಎಂದು ಹುಣಸಮಾರನಹಳ್ಳಿಯವನು ಎಂದು ಮಾಹಿತಿ ನೀಡಿದ್ದಾನೆ. ಆಸ್ತಿಯ ವಿಚಾರವಾಗಿ ಕಿರುಕುಳ ಕೊಡುತ್ತಿದ್ದಾರೆ. ಗಾಂಜಾ ಸೇವಿಸುತ್ತೀಯಾ ಎಂದು ಚಿಕಿತ್ಸೆ ಕೊಡಿಸಲು ಕೆ.ಜಿ ಹಳ್ಳಿಯ ಜನರಲ್ ಆಸ್ಪತ್ರೆಗೆ ಸೇರಿಸಿದ್ದರು. ಕುಟುಂಬಸ್ಥರು ನನ್ನ ಹೆಂಡತಿಯನ್ನು ನನ್ನಿಂದ ದೂರ ಮಾಡಿದ್ದರು ಎಂದು ದೂರಿದ್ದಾನೆ.

ಕರೆ ವಿವರ ಕಳವು: ಸಿಐಡಿ ಪೊಲೀಸ್ ಸೇರಿ ಇಬ್ಬರ ಸೆರೆ

ಬೆಂಗಳೂರು: ನಗರದಲ್ಲಿ ಖಾಸಗಿ ಡಿಟೆಕ್ಟಿವ್ ಏಜೆನ್ಸಿಗಳ ಹೆಸರಿನಲ್ಲಿ ಅಕ್ರಮವಾಗಿ ಸಾರ್ವಜನಿಕರಿಂದ ಮೊಬೈಲ್ ಸಿಡಿಆರ್ (ಕರೆ ವಿವರಗಳ ದಾಖಲೆ) ರಹಸ್ಯವಾಗಿ ಆಲಿಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಪೊಲೀಸ್ ಸಿಬ್ಬಂದಿ ಸೇರಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಸಿಐಡಿ ಪೊಲೀಸ್ ಸಿಬ್ಬಂದಿ ಮುನಿರತ್ನ ಹಾಗೂ ಪ್ರಕರಣದ ಕಿಂಗ್ ಪಿನ್ ನಾಗೇಶ್ವರ ರೆಡ್ಡಿ ಬಂಧಿತರು. ಮೇ ತಿಂಗಳಲ್ಲಿ ಮಹಾನಗರಿ ಡಿಟೆಕ್ಟಿವ್ ಹಾಗೂ ಸೆಕ್ಯೂರಿಟಿ ಸೆಲ್ಯೂಷನ್ ಸಂಸ್ಥೆ, ರಾಜಧಾನಿ ಕಾರ್ಪೊರೇಟ್ ಸರ್ವಿಸ್ ಎಂಬ ಹೆಸರಿನ ಕಚೇರಿಗಳಲ್ಲಿ ಪರಿಶೀಲನೆ ನಡೆಸಿ ಅನಧಿಕೃತವಾಗಿ ಸಿಡಿಆರ್ ಪಡೆಯುತ್ತಿದ್ದ ಆರೋಪದಡಿ ಮೂರು ಪ್ರಕರಣಗಳನ್ನು ದಾಖಲಿಸಿ ಆರೋಪಿಗಳಾದ ಪುರುಷೋತ್ತಮ, ಸತೀಶ್ ಕುಮಾರ್, ತಿಪ್ಪೇಸ್ವಾಮಿ, ಮಹಾಂತಗೌಡ, ರೇವಂತ, ಗುರುಪಾದಸ್ವಾಮಿ, ಶ್ರೀನಿವಾಸ ಮತ್ತು ಭರತ್ ಎಂಬವರನ್ನು ಬಂಧಿಸಲಾಗಿತ್ತು.

ಬಂಧಿತ ನಾಗೇಶ್ವರ ರೆಡ್ಡಿಗೆ ಸಿಡಿಆರ್ ನೀಡುತ್ತಿದ್ದ ಆರೋಪದಡಿ ಸಿಐಡಿ ಪೊಲೀಸ್ ಸಿಬ್ಬಂದಿ ಮುನಿರತ್ನ ಎಂಬಾತನನ್ನು ಸೆರೆ ಹಿಡಿಯಲಾಗಿದೆ. ಮುನಿರತ್ನ ಹಲವು ವರ್ಷಗಳಿಂದ ಸಿಐಡಿ ಟೆಕ್ನಿಕಲ್ ಸೆಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದ. ಹಿರಿಯ ಅಧಿಕಾರಿಗಳು ಪ್ರಕರಣ ಸಂಬಂಧ ಅಧಿಕೃತವಾಗಿ ಸಿಡಿಆರ್ ಪಡೆಯಲು ಸರ್ವಿಸ್ ಪ್ರೊವೈಡರ್‌ಗಳಿಗೆ ನೀಡುವ ಪತ್ರದಲ್ಲಿ ತನಗೆ ಬೇಕಾದ ಫೋನ್ ನಂಬರ್‌ಗಳನ್ನು ಸೇರಿಸಿ ಸಿಡಿಆರ್ ಪಡೆಯುತ್ತಿದ್ದ. ಸಿಡಿಆರ್ ಬಂದ ನಂತರ ಅಧಿಕೃತ ಸಿಡಿಆರ್‌ಗಳನ್ನು ಅಧಿಕಾರಿಗಳಿಗೆ ನೀಡಿ ಅನಧಿಕೃತ ಸಿಡಿಆರ್‌ಗಳನ್ನು ನಾಗೇಶ್ವರ ರೆಡ್ಡಿಗೆ ನೀಡುತ್ತಿದ್ದ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

ಪೊಲೀಸ್ ಅಧಿಕಾರಿಗಳ ಕರೆಗಳ ಸಿಡಿಆರ್ ಮಾರಾಟ: ಈ ಸಿಡಿಆರ್ ಪಡೆಯುತ್ತಿದ್ದವರು ಹೆಚ್ಚಾಗಿ ಪತಿ-ಪತ್ನಿ ಮತ್ತು ಪ್ರೇಮಿಗಳು ಸಂಬಂಧದಲ್ಲಿ ಅನುಮಾನ ಮೂಡಿ ತಮ್ಮ ಪ್ರೀತಿಪಾತ್ರರು ಯಾರ ಸಂಪರ್ಕದಲ್ಲಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಕರೆ ವಿವರವನ್ನು ಅನಧಿಕೃತವಾಗಿ ಪಡೆದುಕೊಳ್ಳುತ್ತಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ಅಷ್ಟೇ ಅಲ್ಲದೆ ಉದ್ಯಮಿಗಳು, ರಾಜಕೀಯ ವ್ಯಕ್ತಿಗಳು ತಮ್ಮ ಎದುರಾಳಿಗಳ ಸಿಡಿಆರ್ ಪಡೆದ ಶಂಕೆ ವ್ಯಕ್ತವಾಗಿದೆ. ಇದರಲ್ಲಿ ಕೆಲವು ಪೊಲೀಸ್ ಅಧಿಕಾರಿಗಳ ಪತ್ನಿಯರು ತಮ್ಮ ಪತಿಯ ಕರೆಗಳ ವಿವರವನ್ನು ಏಜೆನ್ಸಿ ಮೂಲಕ ಪಡೆದ ಬಗ್ಗೆ ಮಾಹಿತಿ ಬೆಳಕಿಗೆ ಬಂದಿದೆ.

ಏನಿದು ಸಿಡಿಆರ್

ಮೊಬೈಲ್ ಬಳಕೆದಾರರ ಕರೆ ವಿವರಗಳ ಸಂಪೂರ್ಣ ಮಾಹಿತಿಯನ್ನು ಸಿಡಿಆರ್ ಒಳಗೊಂಡಿರುತ್ತದೆ. ಯಾರು, ಯಾರಿಗೆ, ಯಾವ ಸಮಯದಲ್ಲಿ ಕರೆಮಾಡಿದ್ದರು. ಎಷ್ಟು ಸಮಯ ಮಾತನಾಡಿದ್ದರು ಎಂಬುದು ಉಲ್ಲೇಖವಾಗಿರುತ್ತದೆ. ಪ್ರಕರಣಗಳ ತನಿಖೆ ಸಂದರ್ಭದಲ್ಲಿ ಮಾತ್ರ ಅನುಮಾನಾಸ್ಪದ ವ್ಯಕ್ತಿಗಳ ಸಿಡಿಆರ್ ಪರಿಶೀಲಿಸಲು ಪೊಲೀಸರಿಗೆ ಅವಕಾಶವಿದೆ. ಅವರು ಸಹ ಕೆಲವು ನಿಯಮಗಳನ್ನು ಪಾಲಿಸಬೇಕು. ಅವರನ್ನು ಹೊರತುಪಡಿಸಿ ಇತರರು ಸಿಡಿಆರ್ ಸಂಗ್ರಹಿಸಿದ್ದರೆ ಅಪರಾಧವಾಗುತ್ತದೆ.

ಸಿಡಿಆರ್ ಅಕ್ರಮ ನಡೆದಿದ್ದು ಹೇಗೆ?

ಅಪರಾಧ, ಕೌಟುಂಬಿಕ ಕಲಹ, ವೈಷಮ್ಯ, ಹಣಕಾಸು ವ್ಯವಹಾರ ಸೇರಿದಂತೆ ಹಲವು ಬಗೆಯ ಪ್ರಕರಣಗಳ ದೂರುದಾರರು ಹಾಗೂ ಸಂತ್ರಸ್ತರನ್ನು ಆರೋಪಿಗಳು ಸಂಪರ್ಕಿಸುತ್ತಿದ್ದರು. ಪೊಲೀಸರು ಮಾಡುವ ಕೆಲಸವನ್ನು ತಾವೇ ಮಾಡಿಕೊಡುವುದಾಗಿ ಹೇಳಿ ನಂಬಿಸುತ್ತಿದ್ದರು. ಆಂತರಿಕ ತನಿಖೆ ನಡೆಸಿ ಪುರಾವೆ ಸಮೇತ ವರದಿ ನೀಡುವು ದಾಗಿ ಹೇಳುತ್ತಿದ್ದರು. ಇದಕ್ಕಾಗಿ ಶುಲ್ಕ ಸಹ ನಿಗದಿಪಡಿಸಿದ್ದರು. ಪ್ರಕರಣಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ಮೊಬೈಲ್ ನಂಬರ್ ಸಂಗ್ರಹಿಸು ತ್ತಿದ್ದ ಆರೋಪಿಗಳು, ಕೆಲವರ ಸಹಾಯ ದಿಂದ ಸಿಡಿಆರ್ ಪಡೆದುಕೊಳ್ಳುತ್ತಿ ದ್ದರು. ತಮ್ಮ ಗ್ರಾಹಕರಿಗೆ ಅದೇ ಸಿಡಿಆರ್ ನೀಡುತ್ತಿ ದ್ದರು. ಅದನ್ನು ಬಳಸಿಕೊಂಡು ಹಲವರು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದರು. ಕೆಲವರು, ಸಿಡಿಆರ್ ಮುಂದಿಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರೆಂಬ ಬಗ್ಗೆಯೂ ಮಾಹಿತಿ ಇದೆ ಎಂದು ಪೊಲೀಸ್ ಅಧಿಕಾರಿ ವಿವರಿಸಿದರು.

ಸಿದ್ದರಾಮಯ್ಯ ರಾಜೀನಾಮೆಯೇ ಪರಿಹಾರ

ಪಾದಯಾತ್ರೆಗೆ ಬೆಚ್ಚಿದ ಕಾಂಗ್ರೆಸ್

ಭ್ರಷ್ಟ ಕಾಂಗ್ರೆಸ್ ಹಗರಣಗಳ ಸರ್ಕಾರ

ಬೆಂಗಳೂರು: ಕಾಂಗ್ರೆಸ್ ಸರ್ಕಾರವನ್ನು ಜನ-ಸಾಮಾನ್ಯರು ಪ್ರಶ್ನಿಸುವ ಮಟ್ಟಿಗೆ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣ, ಮುಡಾ ನಿವೇಶನಗಳ ಹಂಚಿಕೆ ಅಕ್ರಮವು ಚರ್ಚೆಯ ಕೇಂದ್ರ ಬಿಂದುವಾಗಿ ರಾಷ್ಟ್ರಮಟ್ಟದಲ್ಲೂ ಗಮನಸೆಳೆದಿವೆ.

'ಅಹಿಂದ' ಹೆಸರು ಹೇಳಿಕೊಂಡು ಅಧಿಕಾರ, ಸಾಮಾಜಿಕ ನ್ಯಾಯದ ಬಗ್ಗೆ ಪುಂಖಾನುಪುಂಖವಾಗಿ ಸಾರುತ್ತಾ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಈ ಹಗರಣಗಳು ಸುತ್ತುವರಿದಿವೆ. ಭ್ರಷ್ಟಚಾರಮುಕ್ತ ಆಡಳಿತ ಕೊಡುತ್ತೇವೆ ಎಂದು ಭರವಸೆಯಿತ್ತವರು, ಅಧಿಕಾರದ ಗದ್ದುಗೆ ಏರಿದ 15 ತಿಂಗಳಲ್ಲಿ ಹೀಗಾ ಮಾಡೋದು? ಎಂದು ಜನರು ನೇರವಾಗಿ ಕೇಳುತ್ತಿದ್ದಾರೆ. ಭ್ರಷ್ಟ ಸರ್ಕಾರದ ವಿರುದ್ಧ ಜನರ ಪರವಾಗಿ ಧ್ವನಿ ಎತ್ತುವುದು ಪ್ರತಿಪಕ್ಷಗಳ ಜವಾಬ್ದಾರಿ.

» **ಸರ್ಕಾರ ಅಸ್ಥಿರಗೊಳಿ ಸುವ ಹೇಳಿಕೆ ಹಾಸ್ಯಾಸ್ಪದ**

ಪ್ರತಿಪಕ್ಷಗಳ ಹೋರಾಟವು ತಮ್ಮನ್ನೇ ಗುರಿ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾವಿಸುವುದು ಏಕೆ? ಸಿದ್ದರಾಮಯ್ಯ ಹೆಸರು ತಳುಕು ಹಾಕಿಕೊಂಡ ಕಾರಣ ಅವ್ಯವಹಾರ, ಅಕ್ರಮಗಳನ್ನು ಮಟ್ಟಹಾಕಬೇಕಾದ ಸರ್ಕಾರ ಕೈಚೆಲ್ಲಿ ಕುಳಿತಿದೆ ಎಂಬ ಸಂದೇಹ ಬಲವಾಗಿದೆ. ಎರಡೂ ಹಗರಣಗಳ ಬಗ್ಗೆ ವಿಧಾನ ಮಂಡಲದಲ್ಲಿ ಸರ್ಕಾರ ಸ್ಪಷ್ಟವಾಗಿ ಉತ್ತರಿಸಲಿಲ್ಲ. ಮುಡಾ ವಿಚಾರ ಪ್ರಸ್ತಾಪಿಸಿದಾಗ ಚರ್ಚೆಗೂ ಅವಕಾಶ ಕೊಡದೆ ಮುಖ್ಯಮಂತ್ರಿ ಓಡಿ ಹೋದರು. ಇದು, ಹಗರಣಗಳಲ್ಲಿ ಮುಖ್ಯಮಂತ್ರಿ ಭಾಗಿಯಾಗಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಸ್ಪಷ್ಟಪಡಿಸಿತು. ವಂಚಿತ ಜನರ ನ್ಯಾಯಕೊಡಿಸಲು ಬೀದಿಗೆ ಇಳಿದರೆ, ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನವೆಂದು ಕಾಂಗ್ರೆಸ್ ನಾಯಕರು ಹೇಳುತ್ತಿರುವುದು ಹಾಸ್ಯಾಸ್ಪದ.

ಅನುಮಾನಾಸ್ಪದ ನಡೆ: ವಾಲ್ಮೀಕಿ ಹಗರಣ, ಮುಡಾ ಅಕ್ರಮ ಬಯಲಿಗೆ ಬಂದ ಹೊಸತರಲ್ಲಿ ಸಿದ್ದರಾಮಯ್ಯ ನಡೆ-ನುಡಿ ಎರಡೂ ಅನುಮಾನಾಸ್ಪದವೇ ಸರಿ. ವಾಲ್ಮೀಕಿ ತನಿಖೆಗೂ ಮುನ್ನವೇ ಅಂದಿನ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರಗೆ ಕ್ಲೀನ್‌ಚಿಟ್ ಕೊಟ್ಟು, ನಂತರ ಸಚಿವ ಸ್ಥಾನಕ್ಕೆ ರಾಜೀನಾಮೆ ಪಡೆದರು. ಆಡಳಿತದ ಚುಕ್ಕಾಣಿ ಹಿಡಿಯುತ್ತಲೇ ಬಿಜೆಪಿ ಆಡಳಿತಾವಧಿಯ ಟೆಂಡರ್‌ಗಳು, ಆದೇಶಗಳ ರದ್ದು ಇಲ್ಲವೇ ತಡೆಹಿಡಿಯಲಾಯಿತು. ಅದೇ ರೀತಿ 50:50 ನಿವೇಶನ ಹಂಚಿಕೆ ನಿಯಮವನ್ನು ರದ್ದು ಮಾಡಲು ಅವಕಾಶವಿತ್ತಲ್ಲ, ಹಾಗೆ ಮಾಡುವ ಬದಲು ಸಿದ್ದರಾಮಯ್ಯ ತಮ್ಮನ್ನು ರಕ್ಷಿಸಿಕೊಳ್ಳುವ ಗುರಾಣಿಯಾಗಿ ಬಳಸಿಕೊಳ್ಳುತ್ತಿದ್ದಾರೆ. ವರ್ಗಾವಣೆ ದಂಧೆಯಿಂದ ಹಿಡಿದು ಬಯಲಾದ ಅಕ್ರಮಗಳವರೆಗೆ ಕಾಂಗ್ರೆಸ್ ಸರ್ಕಾರ ಹಗರಣಗಳ ಸರದಾರ ಎನ್ನುವುದು ದೃಢಪಟ್ಟಿದೆ. ಸತ್ಯಾಂಶ ಹೊರಬರಲು ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆಯೊಂದೇ ಪರಿಹಾರವಾಗಿದೆ.

ಶೋಷಿತ ಸಮುದಾಯದ ಅಧಿಕಾರಿ/ಸಿಬ್ಬಂದಿ ಸಾವು

- ಅಕ್ರಮ ಹಣ ವರ್ಗಾವಣೆಗೆ 'ಬಲಿಪಶು'ವಾಗಲು ಸಿದ್ಧವಿಲ್ಲದೆ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧೀಕ್ಷಕ ಚಂದ್ರಶೇಖರನ್ ಆತ್ಮಹತ್ಯೆಗೆ ಶರಣು
- ವರ್ಗಾವಣೆ ದಂಧೆಯ ದಾಹ ತಣಿಸಲು ಪ್ರಯತ್ನಿಸಿ ಸೋತ ಯಾದಗಿರಿ ಪಿಎಸ್‌ಐ ಪರಶುರಾಮ್ ಅನುಮಾನಾಸ್ಪದ ಸಾವು
- ಅಕ್ರಮ ಮರಳು ಸಾಗಣೆ ತಡೆಗೆ ಮುಂದಾದ ಕಲಬುರಗಿ ಜಿಲ್ಲೆ ನೆಲೋಗಿ ಠಾಣೆಯ ಮುಖ್ಯಪೇದೆ ಮಯೂರ ಎನ್ನುವವರ ಮೇಲೆ ವಾಹನ ಚಲಾಯಿಸಿ ಹತ್ಯೆ
- ಕಲಬುರಗಿ ಜಿಲ್ಲೆಯ ಶಹಪುರ ಉಪವಲಯ ಅರಣ್ಯಾಧಿಕಾರಿ ಹಿಂದುಳಿದ ವರ್ಗಕ್ಕೆ ಸೇರಿದ ಮಹೇಶ್ ಕನಕಟ್ಟೆ ಬರ್ಬರ ಕೊಲೆ

ಯಶಸ್ವಿ ಯಾತ್ರೆಯ ಹಿಂದಿನ ಶಕ್ತಿ

ಬೆಂಗಳೂರಿನಿಂದ ಮೈಸೂರು ವರೆಗಿನ ಪಾದಯಾತ್ರೆ ರೂಪಿಸುವುದು ಕಷ್ಟಕರವಲ್ಲ, ಆದರೆ ಅದರ ಅನುಷ್ಠಾನ ಮಾಡುವುದು ಸಲೀಸಲ್ಲ. ಆದರೆ ಪಕ್ಷದ ಮುಖಂಡರು, ಕಾರ್ಯಕರ್ತರನ್ನೊಳಗೊಂಡ ಸಮನ್ವಯ ಸಮಿತಿ ರಚಿಸಿ ಆಮೂಲಕ ಯಶಸ್ವಿ ನಿರ್ವಹಣೆ ಮಾಡಲಾಗಿದೆ. ಬಿಜೆಪಿ-ಜೆಡಿಎಸ್ ಸಮನ್ವಯ ಸಮಿತಿ, ಮಾರ್ಗ ನಿರ್ವಹಣಾ ಸಮಿತಿ, ಮಾಧ್ಯಮ, ಸಮಾರೋಪ, ಪ್ರಚಾರ, ರಕ್ಷಣೆ, ಅಡ್ವಾನ್ಸ್ ಟೀಮ್, ಕಾನ್ ವೇ, ಊಟ ಉಪಾಹಾರ, ಕುಡಿಯುವ ನೀರು, ಪಾನೀಯ, ವಸತಿ, ಮಧ್ಯಾಹ್ನ ವಿಶ್ರಾಂತಿ, ಸಾಮಾಜಿಕ ಜಾಲತಾಣ, ಘೋಷಣೆ ಮತ್ತು ಭಜನೆ, ವೈದ್ಯಕೀಯ, ಕಲಾತಂಡ, ಪ್ರಮುಖರ ಸಂಪರ್ಕ, ವಾಹನ, ಸ್ವಚ್ಛತೆ, ದಲಿತ ಸಂಘಟನೆಗಳ ಸಂಪರ್ಕ ಹೀಗೆ 21 ತಂಡಗಳು ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ರಚನೆಯಾಗಿ, ತಮ್ಮ ಕರ್ತವ್ಯ ನಿರ್ವಹಿಸಿದ್ದವು.

- ಪ್ರತಿ ದಿನ ಒಂದೊಂದು ಮೋರ್ಚಾಗೆ ಜವಾಬ್ದಾರಿ, ರಾಜ್ಯವ್ಯಾಪಿ ಪದಾಧಿಕಾರಿಗಳ ಉಪಸ್ಥಿತಿ
- ಪ್ರತಿ ಜಿಲ್ಲೆಯಿಂದ ತಲಾ 100 ಕಾರ್ಯಕರ್ತರಂತೆ 3000 ಮಂದಿ ಪೂರ್ಣ ಯಾತ್ರೆಯಲ್ಲಿ ಭಾಗಿ
- ಪ್ರತಿ ದಿನ ಎಂಟು ವಿಧಾನಸಭಾ ಕ್ಷೇತ್ರದಿಂದ ಕಾರ್ಯಕರ್ತರು ಯಾತ್ರೆಗೆ ಸಾಥ್
- ಪ್ರತಿ ಹೊತ್ತಿಗೆ 15 ಸಾವಿರ ಮಂದಿಗೆ ಊಟ ಉಪಾಹಾರ ವ್ಯವಸ್ಥೆ
- ಪ್ರತಿ ಹಂತದಲ್ಲೂ ಯುವ ಸ್ವಯಂಸೇವಕರ ನಿಗಾ ವ್ಯವಸ್ಥೆ, ಪ್ರಕೋಷ್ಠಗಳ ಜವಾಬ್ದಾರಿ
- ರಾಜ್ಯದ ವಿವಿಧ ಕಡೆಗಳಿಂದ ಆಗಮಿಸಿದ್ದ ಕಾರ್ಯಕರ್ತರಿಗೆ ಅಚ್ಚುಕಟ್ಟಾದ ವಸತಿ ವ್ಯವಸ್ಥೆ
- ಪ್ರತಿ ದಿನ ಬೆಳಗ್ಗೆ ಉಪಾಹಾರ, ಮಧ್ಯಾಹ್ನ- ರಾತ್ರಿ ಭೋಜನದಲ್ಲಿ ವಿಶೇಷತೆ
- ಕಾರ್ಯಕರ್ತರ ಆರೋಗ್ಯ ಗಮನಿಸಲು ವಿಶೇಷ ತಂಡ, ತುರ್ತು ಸೇವೆಗೆ ಆಂಬ್ಯುಲೆನ್ಸ್ ಬಳಕೆ
- ಯಾತ್ರೆ ಸಾಗುವ ಮಾರ್ಗದುದ್ದಕ್ಕೂ ಅಡೆತಡೆ ಬರದಂತೆ ನೋಡಿಕೊಳ್ಳಲು ಯುವಮೋರ್ಚಾ ತಂಡ
- ಮುಡಾ ಹಾಗೂ ವಾಲ್ಮೀಕಿ ನಿಗಮದಲ್ಲಿ ನಡೆದ ಹಗರಣದ ಬಗ್ಗೆ ಜನರಿಗೆ ಮಾಹಿತಿ ನೀಡಲು ವ್ಯವಸ್ಥೆ

ಹಗರಣಗಳು ಹೂರಣ, ಸಿಎಂ ಶಾಮೀಲು ಕಾರಣ

ಭ್ರಷ್ಟಾಚಾರಕ್ಕೆ ಸೆಡ್ಡು ಹೊಡೆದ ಮೈಸೂರು ಚಲೋ | ಬಿ.ವೈ.ವಿಜಯೇಂದ್ರ ಸಾರಥ್ಯಕ್ಕೆ ಸಿಕ್ಕ ಫಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸರ್ಕಾರದ ಹಗರಣಗಳ ವಿರುದ್ಧ ಜನಜಾಗೃತಿ ಮೂಡಿಸಲು ಹಾಗೂ ಪ್ರಧಾನ ಪ್ರತಿಪಕ್ಷ ವಾಗಿ ಜವಾಬ್ದಾರಿ ನಿರ್ವಹಿಸುವ ಪ್ರಯತ್ನದ ಭಾಗವಾಗಿ ನಡೆದಿರುವ ಮೈಸೂರು ಚಲೋ ಪಾದಯಾತ್ರೆ ನಿರೀಕ್ಷೆಗೂ ಮೀರಿ ಯಶಸ್ಸು ಕಂಡಿದೆ. ಮುಡಾ ವಿಚಾರದಲ್ಲಿ ಮೈಸೂರಿನಲ್ಲಿ ಹೋರಾಟ ನಡೆಸಲು ಹೊರಟುನಿಂತ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಯಾವಾಗ ರಾಜ್ಯ ಸರ್ಕಾರ ಬೆಂಗಳೂರಿನಲ್ಲೇ ತಡೆದು ಹೋರಾಟ ಹತ್ತಿಕ್ಕಲು ಮುಂದಾಯಿತೋ ಆಗಲೇ ಹಗರಣದ ಬಗೆಗಿನ ಅನುಮಾನ ಇನ್ನಷ್ಟು ದೃಢಪಟ್ಟಿದ್ದಲ್ಲದೇ ಹೋರಾಟ ತೀವ್ರಗೊಳ್ಳುವುದಕ್ಕೂ ಕಾರಣವಾಯಿತು.

ನಿರಂತರ ಹೋರಾಟ: ಬರಗಾಲ ನಿರ್ವಹಣೆ ವೈಫಲ್ಯ, ಅಭಿವೃದ್ಧಿ ಶೂನ್ಯ, ಬೆಲೆಗಳ ಏರಿಕೆ ವಿರುದ್ಧ ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆ ಗಂಟೆ ಬಾರಿಸಲು ಬಿಜೆಪಿ ಒಂದಿಲ್ಲೊಂದು ಚಳವಳಿ ನಡೆಸುತ್ತಲೇ ಬಂದಿದೆ. ಮೊದಲ ಆರು ತಿಂಗಳು ಅವಕಾಶ ಕೊಡಬೇಕು ಎಂದು ಪ್ರತಿಪಕ್ಷ ಬಯಸಿತ್ತು. ಆದರೆ ಕಾಂಗ್ರೆಸ್ ಪಕ್ಷ ಸ್ವಯಂ ಘೋಷಣೆಯಂತೆ ಅಧಿಕಾರಕ್ಕೆ ಬಂದ ತಕ್ಷಣ ಗ್ಯಾರಂಟಿಗಳನ್ನು ಜಾರಿಗೆ ತರಲಿಲ್ಲ. ಕೊಟ್ಟ ಮಾತಿನಂತೆ ನಡೆದುಕೊಳ್ಳುವಂತೆ ಹೇಳುವುದಕ್ಕೂ ಹೋರಾಟ ಮಾಡಬೇಕಾಯಿತು. ಒತ್ತಡಕ್ಕೆ ಮಣಿದ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿತು.

ಹಗರಣಗಳ ಹೆಬ್ಬಾಗಿಲು: ಅಲ್ಪಾವಧಿಯಲ್ಲಿ ಜನರ ವಿಶ್ವಾಸ ಕಳೆದುಕೊಂಡಿದ್ದಕ್ಕೆ ಕಲಿಯುವ ಬದಲು 'ಸಾಧ್ಯವಾದಷ್ಟು ಬಾಚಿಕೊ' ಎನ್ನುವ ಅಘೋಷಿತ ಸೂಚನೆ ಪರಿಣಾಮ ಹಗರಣಗಳ ಹೆಬ್ಬಾಗಿಲು ತೆರೆದು ಬಿಟ್ಟಿದೆ. ಪರಿಶಿಷ್ಟ ಜಾತಿ, ಪಂಗಡಗಳ ಉಪ ಯೋಜನೆ ಅನುದಾನ ಅನ್ಯ ಉದ್ದೇಶಕ್ಕೆ ಬಳಸಿಕೊಂಡು ಪರಿಶಿಷ್ಟ ಸಮುದಾಯಗಳಿಗೆ ವಂಚಿಸಿತು. ವಾಲ್ಮೀಕಿ ನಿಗಮ ಮತ್ತು ಮುಡಾ ಅಕ್ರಮದ ವಿರುದ್ಧ ಕೈಗೆತ್ತಿಕೊಂಡ ಪ್ರತಿಭಟನೆಯನ್ನು ಪೊಲೀಸ್ ಬಲ ಬಳಸಿ ಹತ್ತಿಕ್ಕಲು ಪ್ರಯತ್ನಿಸಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಫಲಾಯನವು ಭ್ರಷ್ಟಾಚಾರದ ವಿರುದ್ಧ ಸೆಡ್ಡು ಹೊಡೆಯಲು ಹುರಿದುಂಬಿಸಿತು. ಮಳೆಗಾಲದಲ್ಲೂ 130 ಕಿ.ಮೀ. ದೂರ ಅಂತರದ 'ಮೈಸೂರು ಚಲೋ ಪಾದಯಾತ್ರೆ,'ಗೆ ಸರ್ಕಾರದ ಹಗರಣಗಳು ಹೂರಣ, ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಮೀಲು ಕಾರಣ.

ಶನಿವಾರ ಸಮಾರೋಪ

ಮೈಸೂರು ಚಲೋ ಪಾದಯಾತ್ರೆ ಶನಿವಾರ ಬೃಹತ್ ಸಮ್ಮೇಳನದ ಮೂಲಕ ಸಮಾರೋಪಗೊಳ್ಳಲಿದ್ದು, ರಾಜ್ಯ, ಕೇಂದ್ರ ನಾಯಕರು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಲಕ್ಷ ಲಕ್ಷ ಸಂಖ್ಯೆಯಲ್ಲಿ ಭಾಗವಹಿಸಿ ಹಗರಣಗಳ ಕಾಂಗ್ರೆಸ್ ಸರ್ಕಾರವನ್ನು ಕೊನೆಗೊಳಿಸಬೇಕಿದೆ.

07 ದಿನಗಳ ಪಾದಯಾತ್ರೆ

130 ಕಿಮೀಗಳ ದೂರ ಅಂತರ

07 ಕಡೆ ಬಹಿರಂಗ ಸಮಾವೇಶ

07 ನಗರಪಟ್ಟಣಗಳಲ್ಲಿ ಜನಜಾತ್ರೆ

ಕಾರ್ಯಕರ್ತರೊಂದಿಗೆ ರಸ್ತೆ ಬದಿ ಗೂಡಂಗಡಿಯಲ್ಲಿ ಕಾಫಿ ಸೇವಿಸಿ ಸಿಂಪ್ಲಿಸಿಟ್ ಮೆರೆದರು.

ಪರಿವರ್ತನೆಯ ಗಾಳಿ

ಬಿಜೆಪಿ-ಜೆಡಿಎಸ್ ಜಂಟಿ ಪಾದಯಾತ್ರೆಗೆ ಕಾಂಗ್ರೆಸ್ ಪಕ್ಷದ ಜನಾಂದೋಲನ ಪ್ಲಸ್ ಪಾಯಿಂಟ್ ಆಗಿದೆ. ಭ್ರಷ್ಟಾಚಾರದ ವಿರುದ್ಧ ಹೋರಾಟವೆಂಬ ಸಂದೇಶ ರವಾನೆಯಾಗಿ ಪರಿವರ್ತನೆ ಗಾಳಿ ಬೀಸಿದೆ.

ಕಾಂಗ್ರೆಸ್‌ಗೆ ನಡುಕ

ಚುನಾವಣೆಗಳಿಲ್ಲದ ಹೊತ್ತಲ್ಲದಿದ್ದರೂ ಪಾದಯಾತ್ರೆ ಶುರುವಾದ ದಿನದಿಂದಲೇ ನಿರೀಕ್ಷೆಗೆ ಮೀರಿ ಜನ ಸ್ಪಂದಿಸಲಾರಂಭಿಸಿದರು. ರಾಜಕೀಯ ಲಾಭಕ್ಕಲ್ಲವೆಂದು ಜನರಿಗೆ ಮನವರಿಕೆ ಮಾಡಿಕೊಡುವಲ್ಲಿ 'ಮೈಸೂರು ಚಲೋ' ಯಶಸ್ವಿಯಾಗಿದೆ. ಭ್ರಷ್ಟಾಚಾರ ವಿರುದ್ಧದ ಹೋರಾಟ ತಾರ್ಕಿಕ ಅಂತ್ಯ ಕಾಣಿಸುವುದಕ್ಕೆಂದು ಸ್ವಯಂ ಸ್ಫೂರ್ತಿಯಿಂದ ಭಾಗಿಯಾಗುತ್ತಿದ್ದಾರೆ. ಭಾರಿ ಪ್ರಮಾಣದಲ್ಲಿ ಜನರ ಜಮಾವಣೆ ಕಾಂಗ್ರೆಸ್‌ಗೆ ನಡುಕ ಹುಟ್ಟಿಸಿದೆ ಎನ್ನುವುದಕ್ಕೆ ಆ ಪಕ್ಷದ ಜನಾಂದೋಲನ ಯಾತ್ರೆಯೇ ಸಾಕ್ಷಿ.

ಬೆಸುಗೆಯ ಹೊಸಗೆ

ಲೋಕಸಭೆ ಚುನಾವಣೆಯಾಚೆಗೂ ಬಿಜೆಪಿ-ಜೆಡಿಎಸ್ ಒಂದಾಗಿ ಪಾದಯಾತ್ರೆ ಇಳಿದಿರುವುದು ಉಭಯ ಪಕ್ಷಗಳ ಬೆಸುಗೆ ಮತ್ತಷ್ಟು ಗಟ್ಟಿಗೊಳಿಸಿದೆ. ಲೋಕಸಭೆ ಚುನಾವಣೆ ಮಾತ್ರ ಮೈತ್ರಿ ಸೀಮಿತವಲ್ಲ, ಆಳುವ ಪಕ್ಷದ ಲೋಪದೋಷ ಎತ್ತಿ ತೋರಿಸಿ, ಸರ್ಕಾರದ ಕಿವಿ ಹಿಂಡುತ್ತೇವೆ ಎಂದು ಹೇಳಿದಂತೆ ಹೆಜ್ಜೆ ಹಾಕುತ್ತಿರುವುದು ಜನರಲ್ಲಿ ವಿಶ್ವಾಸ ಹೆಚ್ಚಿಸಿದೆ.

ವಾಲ್ಮೀಕಿ ಹಗರಣ ಏನು-ಎತ್ತ?

187.5 ಕೋಟಿ ರೂ. ಹಗರಣ

16 ಉದ್ಯಮಗಳ ಹೆಸರಿಗೆ ಕಾರಣ ಇಲ್ಲದೇ ದೊಡ್ಡ ಮೊತ್ತ ವರ್ಗ

4-6 ಕೋಟಿ ರೂ.ನಂತೆ ದೊಡ್ಡ ಮೊತ್ತ ವರ್ಗ

ಸಿದ್ದರಾಮಯ್ಯ ಹೇಗೆ ಹೊಣೆಗಾರರು

ಬೆಂಗಳೂರು: ಕಾಂಗ್ರೆಸ್ ಸರ್ಕಾರ ರಚನೆಯಾಗಿ ಒಂದು ವರ್ಷ ಪೂರ್ಣಗೊಂಡ ಸಂದರ್ಭದಲ್ಲಿಯೇ ವಾಲ್ಮೀಕಿ ಹಗರಣ ಹೊರಬಿದ್ದಿತು. ಈ ಸರ್ಕಾರ ಬಂದಾಗಲೆಲ್ಲ ಹಗರಣ ಎಂದು ಪ್ರತಿಪಕ್ಷದ ಆರೋಪಕ್ಕೆ ತಕ್ಕಂತೆ ಈ ಪ್ರಕರಣದಲ್ಲಿ 'ರೆಡ್ ಹ್ಯಾಂಡ್' ಹಾಗಿ ಸಿಕ್ಕಿಬಿದ್ದಿತು. ಹಗರಣ ನಡೆದೇ ಇಲ್ಲ ಎಂದು ಹೇಳುವ ಸ್ಥಿತಿಯಲ್ಲಿ ಸರ್ಕಾರವಿಲ್ಲ. ಪರಿಶಿಷ್ಟ ಪಂಗಡದ ಜನರಿಗೆ ವಿವಿಧ ಯೋಜನೆಗಳಡಿ ತಲುಪಬೇಕಿದ್ದ ಹಣದ ಮೇಲೆ ಕಣ್ಣಿಟ್ಟು, ಅದನ್ನು ಬೇನಾಮಿ ಖಾತೆಗೆ ವರ್ಗಾಯಿಸಲು ವ್ಯವಸ್ಥೆ ರೂಪಿಸಿರುವುದು ಇದರಿಂದ ಸ್ಪಷ್ಟವಾಗಿ ಗೋಚರಿಸಿದೆ. ಮುಖ್ಯವಾಗಿ ಪ್ರಭಾವಿಗಳ ಹಸ್ತಕ್ಷೇಪ ಇಲ್ಲದೆ ಇಷ್ಟೊಂದು ಧೈರ್ಯವಾಗಿ ಹಣ ವರ್ಗಾವಣೆ ಅಸಾಧ್ಯದ ಮಾತು. ಒಟ್ಟಾರೆ 187.5 ಕೋಟಿ ರೂ. ಹಗರಣದಲ್ಲಿ, 94.5 ಕೋಟಿ ರೂ.ಗಳನ್ನು 16 ಉದ್ಯಮಗಳಿಗೆ 4-6 ಕೋಟಿ ರೂ. ವರ್ಗಾವಣೆಯಾಗಿರುವುದು ಕಂಡುಬಂದಿದೆ, ರಾಜ್ಯದಲ್ಲಿ 3 ಕೋಟಿ ರೂ.ಗೂ ಹೆಚ್ಚಿನ ಹಣ ಬಿಡುಗಡೆಯಾಗಬೇಕಾದಂತಹ ಸಂದರ್ಭದಲ್ಲಿ ಕಡತಗಳನ್ನು ಸರ್ಕಾರದ ಹಣಕಾಸು ಇಲಾಖೆಗೆ ಕಳಿಸುವುದು ವಾಡಿಕೆ, ಈ 16 ಉದ್ಯಮಗಳಿಗೆ ಕೊಟ್ಟಿರುವ ಮೊತ್ತ ಕನಿಷ್ಠ 4.12 ಕೋಟಿ ರೂ., ಗರಿಷ್ಠ 5.98 ಕೋಟಿ ರೂ., ಅಂದರೆ ಇದರ ಕಡತಗಳು ಹಣಕಾಸು ಸಚಿವಾಲಯಕ್ಕೆ ಹೋಗಿರುವುದು ಕಂಡು ಬರುತ್ತದೆ. ಅಂದ ಮೇಲೆ ಸಿಎಂ ಮೂಗಿನ ನೇರಕ್ಕೇ ಹಣ ವರ್ಗಾವಣೆಯಾಗಿದೆ ಎಂದರ್ಥ. ಇದೇ ಕಾರಣಕ್ಕೆ ಹಣಕಾಸು ಸಚಿವರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದಕ್ಕೆ ನೇರ-ಹೊಣೆ ಆಗುತ್ತಾರೆ ಎಂಬುದರಲ್ಲಿ ಅನುಮಾನವೇ ಇಲ್ಲ. ಇಷ್ಟೇ ಅಲ್ಲದೆ ಕೇಂದ್ರ ಸರ್ಕಾರ ರಾಜ್ಯದ ಪರಿಶಿಷ್ಟ ಪಂಗಡಗಳಿಗೆ ಅಭಿವೃದ್ಧಿಗೊಳ್ಳಲು 2022-23 ನೇ ಸಾಲಿನಲ್ಲಿ 42.97 ಕೋಟಿ ರೂ. ಮತ್ತು 2023-24ನೇ ಸಾಲಿನಲ್ಲಿ 40.70 ಕೋಟಿ ಮೂಲಸೌಕರ್ಯ ಅಭಿವೃದ್ಧಿ ಮತ್ತು ವಸತಿ ಸ್ಥಳ ಅಭಿವೃದ್ಧಿಗೊಳ್ಳಲು ನೀಡಿರುವ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಕಳೆದ 13 ತಿಂಗಳಲ್ಲಿ ಕೊಟ್ಟಿಲ್ಲ ಎನ್ನುವುದು ಗಮನಾರ್ಹವಾದಂತಹ ವಿಚಾರ. ಅಂದರೆ ಈ 83 ಕೋಟಿ ರೂ. ಗಳನ್ನೂ ಇದೇ ರೀತಿ ನುಂಗಿದ್ದಾರೆ ಎಂಬ ಅನುಮಾನವಿದೆ.

40 ದಿನ ತಡವೇಕೆ? ಚಾರ್ಜ್‌ಶೀಟ್‌ನಲ್ಲಿ ಹೆಸರಿಲ್ಲವೇಕೆ?

ಬೇನಾಮಿ ಹಣ ವರ್ಗಾವಣೆ ಕಾರಣಕ್ಕೆ ಜಾರಿ ನಿರ್ದೇಶನಾಲಯ ತನಿಖೆ ಆರಂಭಿಸುತ್ತಿದ್ದಂತೆ ರಾಜ್ಯ ಸರ್ಕಾರ ರಚಿಸಿದ್ದ ಎಸ್‌ಐಟಿ ಮಾಜಿ ಸಚಿವ ನಾಗೇಂದ್ರರನ್ನು ವಿಚಾರಣೆಗೆ ಕರೆಸಿ ವಿಚಾರಣೆ ಶಾಸ್ತ್ರ ಮಾಡಿತು. ಅಚ್ಚರಿ ಎಂದರೆ ಎಸ್‌ಐಟಿ ತನಿಖೆ ಆರಂಭಿಸಿ 40 ದಿನಗಳವರೆಗೂ ನಾಗೇಂದ್ರರ ತಂಟೆಗೆ ಹೋಗಿರಲಿಲ್ಲ. ನಿಗಮದ ಅಧ್ಯಕ್ಷ ಶಾಸಕ ಬಸನಗೌಡ ದದ್ದಲ್ ಬಗ್ಗೆ ಯಾವ ಸುಳಿವೂ ಇದ್ದಿಲ್ಲ. ಈಗ ಎಸ್‌ಐಟಿ ಮಧ್ಯಂತರ ಚಾರ್ಜ್ ಶೀಟ್‌ನಲ್ಲಿ ನಾಗೇಂದ್ರ ಹೆಸರಾಗಲಿ, ದದ್ದಲ್ ಹೆಸರಾಗಲಿ ಉಲ್ಲೇಖವೇ ಇಲ್ಲ. ಇದು ಅನುಮಾನಕ್ಕೆ ಇನ್ನಷ್ಟು ಪುಷ್ಟಿ ನೀಡಿದೆ.

ಮುಚ್ಚಿಹಾಕುವ ಹುನ್ನಾರ!

ವಾಲ್ಮೀಕಿ ನಿಗಮದ ಅಧಿಕಾರಿ ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಳ್ಳದೇ ಹೋಗಿದ್ದರೆ ಇಡೀ ಪ್ರಕರಣ ಮುಚ್ಚೇ ಹೋಗುತ್ತಿತ್ತು. ಸರ್ಕಾರದ ಹಣ ಬೇನಾಮಿ ಖಾತೆಗೆ ವರ್ಗಾವಣೆಯಾಗಿದ್ದು ಸರ್ಕಾರವೇ ರಚಿಸಿದ ಎಸ್‌ಐಟಿಯಿಂದಲೇ ಪತ್ತೆಯಾಯಿತು. ಸಹಕಾರಿ ಸಂಸ್ಥೆಯಲ್ಲಿ ಇರುವ ಹಣವೂ ನಮಗೇ ಸೇರಿದ್ದು ಎಂದು ಸರ್ಕಾರ ವಾದಿಸುತ್ತಿದೆ. ಈ ಮೂಲಕ ಇದೊಂದು ಗಂಭೀರ ಪ್ರಕರಣ ಅಲ್ಲವೇ ಅಲ್ಲ ಎಂದು ಹಾರಿಕೆ ಉತ್ತರ ನೀಡಿ ತಿಪ್ಪೇ ಸಾರಿಸಲು ಹೊರಟಂತಿದೆ.

ಉತ್ತರ ಸಿಗದ ಪ್ರಶ್ನೆಗಳು?

1. ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವಾಗ ಅಷ್ಟು ಮೊತ್ತ ನಿಗಮಕ್ಕೆ ವರ್ಗವಾಗಿದ್ದು ಏಕೆ?
2. ನೀತಿ ಸಂಹಿತೆ ಜಾರಿಯಲ್ಲಿದ್ದಾಗಲೇ ನಿಗಮದಿಂದ ತರಾತುರಿಯಲ್ಲಿ ಹಣ ವರ್ಗಾವಣೆ ಅನುಮಾನವಲ್ಲವೇ?
3. ರಾಜ್ಯದಲ್ಲೇ ಹಣ ವರ್ಗಾವಣೆಯಾದರೆ ಅನುಮಾನ ಬರುತ್ತದೆಂದು ತೆಲಂಗಾಣಕ್ಕೆ ವರ್ಗ ಮಾಡಿದ್ದು ಅನುಮಾನ ಹುಟ್ಟಿಸುವುದಿಲ್ಲವೇ?
4. 3 ಕೋಟಿ ರೂ. ಹೆಚ್ಚಿನ ಮೊತ್ತ 16 ಖಾತೆಗಳಿಗೆ ಹೋಗುವಾಗ ಹಣಕಾಸು ಇಲಾಖೆ ಗಮನಕ್ಕೆ ಬಾರದೇ ಇದ್ದದ್ದು ಹೇಗೆ?
5. ಸರ್ಕಾರದ ಹಣ 100 ಕೋಟಿ ರೂ. ಬೇನಾಮಿ ಖಾತೆಗೆ ಯಾರ ಅನುಮತಿ ಪಡೆಯದೆ ವರ್ಗವಾಗಲು ಸಾಧ್ಯವೇ?
6. ಸರ್ಕಾರಕ್ಕೂ ಹಣ ವರ್ಗವಣೆಗೂ ಸಂಬಂಧವೇ ಇಲ್ಲ ಎಂಬ ಸಮಜಾಯಿಷಿ ಹಣಕಾಸು ಖಾತೆ ಹೊಂದಿದವರ ಲೋಪ ಎನಿಸಿಕೊಳ್ಳುತ್ತದೆ ಅಲ್ಲವೇ?
7. ಸಂಚಿನ ಭಾಗದಲ್ಲಿ ದೊಡ್ಡ ಕೈಗಳಿಲ್ಲದೆಯೇ ಸಣ್ಣಪುಟ್ಟವರು ಕೈಯಾಡಿಸುತ್ತಾರೆಂದು ಹೇಗೆ ತಾನೆ ನಂಬಲು ಸಾಧ್ಯ?
8. ಸರ್ಕಾರದ ಅಸಲಿ ಖಾತೆಯಿಂದ ಬೇನಾಮಿ ಖಾತೆಗೆ ವರ್ಗವಾದ ಹಣಒಟ್ಟು ಭ್ರಷ್ಟಾಚಾರದ ಭಾಗವೇ ಅಲ್ಲವೇ?

ಸಿಎಂ ಉತ್ತರಿಸಬೇಕಾಗಿರುವ ಪ್ರಶ್ನೆಗಳು

- 1998ರಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯಿಂದ ಸರ್ವೆ ನಂ.464 ಕೆಸರೆ ಗ್ರಾಮ ಈ ಭೂಮಿಯನ್ನು ಕೈ ಬಿಡಲಾಗಿತ್ತು ಎನ್ನುವ ಆದೇಶ ಇದೆ ಎಂದು ಹೇಳುತ್ತಾರಾದರೆ ಯಾವ ಮಾನದಂಡದಲ್ಲಿ ಈ ಭೂಮಿಯನ್ನು ಭೂಸ್ವಾಧೀನದಿಂದ ಕೈ ಬಿಡಲಾಗಿತ್ತು?
- 2017 ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದರು, ಮುಡಾ ಇನ್ನು ಮುಂದೆ ನಿವೇಶನಗಳ ಹಂಚಿಕೆಯ ಪ್ರಕ್ರಿಯೆಗಳನ್ನು ರಾಜ್ಯ ಸರ್ಕಾರಕ್ಕೆ ಕಳಿಸಬೇಕಿಲ್ಲ ಎಂದು ಆದೇಶ ಮಾಡಿದ್ದವರು ಮುಖ್ಯಮಂತ್ರಿಗಳಾಗಿ ತಾವಲ್ಲವೇ?
- 50:50 ಅನುಪಾತದಲ್ಲಿ ಪರಿಹಾರ ಎಂದು ಮುಡಾ ನಿಯಮ ಮಾಡಿಕೊಂಡಿದ್ದು ಇನ್ನು ಮುಂದಿನ ಭೂಸ್ವಾಧೀನಕ್ಕೆ. ಆದರೆ ಹಿಂದಿನ ಎಲ್ಲ ಪ್ರಕರಣಕ್ಕೂ ಅದೇ ಪರಿಹಾರ ಅನುಪಾತ ಅನ್ವಯಿಸುವ ಸಿದ್ದರಾಮಯ್ಯ ಮುಡಾ, ಕೆಎಚ್‌ಬಿ, ಬಿಡಿಎ ಅಥವಾ ಇನ್ನಿತರೆ ಸಂಸ್ಥೆಗಳು ವಶಪಡಿಸಿಕೊಂಡ ಎಲ್ಲ ಕಡೆಯೂ ಇದೇ ರೀತಿಯ ಅನುಪಾತದಲ್ಲಿ ಅನ್ವಯಿಸಲು ಒಪ್ಪಿಗೆ ಕೊಡುತ್ತಾರಾ?

5000 ಕೋಟಿ ರೂ. ಹಗರಣ

ಇದು ಕೇವಲ 14 ನಿವೇಶನದ ವಿಚಾರವಲ್ಲ. ಸಿದ್ದರಾಮಯ್ಯ ಸರ್ಕಾರ ರಚನೆಯಾದ ಬಳಿಕ ಮುಡಾದಿಂದ ಹಂಚಿಕೆಯಾದ ಎಲ್ಲ ನಿವೇಶನಗಳ ಬಗೆಗೂ ತನಿಖೆ ಅತ್ಯವಶ್ಯಕವಾಗಿ ಕಾಣಿಸುತ್ತಿದೆ. ಸರಿಸುಮಾರು ಐದು ಸಾವಿರ ಕೋಟಿ ಮೊತ್ತದ ಹಗರಣವಾಗಿದೆ. ಇದರಲ್ಲಿ ಸಿಎಂ ಅಷ್ಟೇ ಅಲ್ಲ ಸಂಬಂಧಪಟ್ಟ ಸಚಿವರು ಪಾಲುದಾರರು ಎಂಬುದಲ್ಲಿ ಅನುಮಾನವಿಲ್ಲ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಪಾರದರ್ಶಕ ತನಿಖೆ ನಡೆದರೆ ಅವರೂ ಕೂಡ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವ ಪರಿಸ್ಥಿತಿ ಬರಲಿದೆ. ಒಂದು ಲಕ್ಷ ಜನರಿಗೆ ಸೈಟ್ ಸಿಗದೇ ಹೋದರು ಸಿಎಂ ಸಿದ್ದರಾಮಯ್ಯಗೆ 14 ಸೈಟ್ ಸಿಗುತ್ತದೆ ಎಂಬುದು ಸೋಜಿಗದ ಸಂಗತಿ.

ಜನರು ಅರಿಯಬೇಕಾದ ಸಂಗತಿಗಳು

- ಸಿದ್ದರಾಮಯ್ಯ ಕುಟುಂಬ ಜಮೀನು ಖರೀದಿ ಮಾಡಿದಾಗ ಕೆಸರೆಯಲ್ಲಿ ಕೃಷಿ ಜಮೀನೇ ಇರಲಿಲ್ಲ.
- 2001ರಲ್ಲಿಯೇ ಬಡಾವಣೆ ಆಗಿತ್ತು, ಆ ಹೆಸರಿನಲ್ಲಿ ಸೈಟು ಮಾಡಿ ಜನರಿಗೆ ಹಂಚಿಕೆಯಾಗಿತ್ತು.
- ಯಾರಿಗೋ ಹಂಚಿಕೆಯಾಗಿದ್ದ ನಿವೇಶನವನ್ನು ತಮ್ಮ ಕುಟುಂಬದ ಕೃಷಿ ಜಮೀನೆಂದು ಮಾಡಿಸಿಕೊಂಡಿದ್ದು ಹೇಗೆ? | ಕೃಷಿ ಭೂಮಿ ಇಲ್ಲದೇ ಇರುವ ಜಾಗ ಕೃಷಿ ಜಮೀನು ಎಂದು ಮಾರಾಟ ಮಾಡಬಹುದೇ? ಪ್ರಭಾವಿಗಳ ಶಿಫಾರಸು ಇಲ್ಲದೇ ಹೀಗೆಲ್ಲ ಸಾಧ್ಯವೇ?
- ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ವರದಿ ಕೊಟ್ಟಿದ್ದಾರೋ ಅಥವಾ ಕೃಷಿ ಭೂಮಿ ಎಂದು ನಕಲಿ ದಾಖಲೆ ಸೃಷ್ಟಿಸಲಾಗಿದೆಯೇ?
- ನಮ್ಮ ಕುಟುಂಬದ ಜಮೀನು ಮುಡಾಗೆ ಬಿಟ್ಟುಕೊಡಬೇಕೇ ಎಂದು ಸಿಎಂ ಪ್ರಶ್ನಿಸಿದ್ದರು. ಇಲ್ಲದ ಕೃಷಿ ಭೂಮಿಯನ್ನು ಹೇಗೆ ಬಿಟ್ಟು ಕೊಡಲು ಸಾಧ್ಯ?

ಮುಡಾ ಅಕ್ರಮದ ಆಳ-ಅಗಲವೆಷ್ಟು?

ಸಿಎಂ ಸಿದ್ದರಾಮಯ್ಯ ಪಾಲೆಷ್ಟು

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ)ನಡೆದಿರುವ ನಿವೇಶನ ಹಂಚಿಕೆ ಅಕ್ರಮದ ಆಳ-ಅಗಲ ಲೆಕ್ಕಕ್ಕೇ ಸಿಗುತ್ತಿಲ್ಲ. ಜಮೀನು ಸಂಬಂಧ ನಕಲಿ ದಾಖಲೆ ಸೃಷ್ಟಿ, ಸ್ವಜನ ಪಕ್ಷಪಾತ, ಇಲ್ಲದ ಭೂಮಿಗೆ ಪರಿಹಾರ ರೂಪದಲ್ಲಿ ನಿವೇಶನ ಪಡೆಯುವಿಕೆ, ಪರಿಹಾರ ಪಡೆಯುವಾಗಲೂ ನಿಯಮಗಳ ಸ್ಪಷ್ಟ ಉಲ್ಲಂಘನೆ ಸೇರಿ ಹಲವು ಅಕ್ರಮ ವಿಕ್ರಮ ಸಾಧಿಸಿ ರುವುದು ನಿಚ್ಚಳವಾಗಿದೆ. ನಿವೇಶನ ಪಡೆದಾಗ ನಮ್ಮ ಸರ್ಕಾರ ಇರಲಿಲ್ಲ, ನಾವು ಕೈಯಾಡಿಸಿದ್ದರ ಬಗ್ಗೆ ದಾಖಲೆಯೂ ಇಲ್ಲ, ತುಂಡು ಕಾಗದವೂ ಇಲ್ಲ ಎಂದು ಪ್ರಕರಣದಿಂದ ನುಣುಚಿಕೊಳ್ಳಲು ಸಾಧ್ಯವಾಗುವುದಿಲ್ಲ, ಜನರಿಗೆ ಉತ್ತರ ಕೊಡಲೇ ಬೇಕಾಗುವ ಸಂದರ್ಭ ಬಂದಿದೆ. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ 14 ನಿವೇಶನ ಪಡೆದುಕೊಂಡಿದ್ದು ಸಾಮಾನ್ಯ ವಿಷಯವೇನಲ್ಲ. ಈ ನಿವೇಶನ ಪಡೆದ ವಿಧಾನ, ಅದಕ್ಕೂ ಮುನ್ನ ಯಾವ ಉದ್ದೇಶಕ್ಕೆ ಪರಿಹಾರ ಪಡೆದರು, ಯಾವ ಸಂದರ್ಭದಲ್ಲಿ ಪಡೆದರು, ಯಾವ ಭೂಮಿಗೆ ಪರ್ಯಾಯ ಪಡೆದರು ಎಂಬುದನ್ನು ಕೆದಕುತ್ತಾ ಹೋದಾಗ ಅನೇಕ ಅನುಮಾನಾಸ್ಪದ ಸಂಗತಿ ಕಾಣಸಿಗುತ್ತವೆ. ದರ್ಖಾಸ್ತ್ ಮಂಜೂರು ಆಗಿರುವ ಭೂಮಿಯನ್ನು ಮಲ್ಲಿಕಾರ್ಜುನ ಸ್ವಾಮಿಗೆ ಜವರ ಅವರ ಮಗ ದೇವರಾಜ್ ಬರೆದುಕೊಟ್ಟಾಗ ಪಹಣಿ ಯಾರ ಹೆಸರಿನಲ್ಲಿ ಬರುತ್ತಿತ್ತು? ಹಾಗೆಯೇ ಮಲ್ಲಿಕಾರ್ಜುನ್ ಸ್ವಾಮಿಯವರು ಪಾರ್ವತಮ್ಮ ಸಿದ್ದರಾಮಯ್ಯನವರಿಗೆ ದಾನಪತ್ರ ಮಾಡಿಕೊಟ್ಟಾಗ ಪಹಣಿ ಯಾರ ಹೆಸರಿನಲ್ಲಿ ಬರುತ್ತಿತ್ತು? ಎಂದು ಕೆದಕಿದರೆ, ಎಲ್ಲ ದಾಖಲೆಗಳ ಪ್ರಕಾರ ಮುಡಾ ಹೆಸರಿನಲ್ಲಿ ಬರುತಿತ್ತು ಎಂದಿದೆ. ಹಾಗಿದ್ದರೆ ಭೂಮಿ ಅಸಲಿ ತನದ ಬಗ್ಗೆಯೇ ಅನುಮಾನ ಬರುತ್ತದೆ. 1998ರಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯಿಂದ ಸರ್ವೆ ನಂ.464 ಕೆಸರೆ ಗ್ರಾಮ ಈ ಭೂಮಿಯನ್ನು ಕೈ ಬಿಡಲಾಗಿತ್ತು ಎಂಬ ವಾದ ಮುಖ್ಯಮಂತ್ರಿಯವರು ಮುಂದಿಡುತ್ತಿದ್ದಾರೆ. ಈ ರೀತಿ ಕೈಬಿಟ್ಟ ಸಂದರ್ಭದಲ್ಲಿ ಅದು ವ್ಯವಸಾಯ ಜಮೀನಾಗಿತ್ತು, ಇದು 2004ರಲ್ಲಿ ವ್ಯವಸಾಯೇತರ ಜಮೀನು ಭೂಪರಿವರ್ತನೆಗೊಂಡಿದೆ, ಅದೂ ಈಗಾಗಲೇ ತೀರಿಕೊಂಡಿದ್ದ ಭೂ ಸ್ವತ್ತಿನ ನೈಜ ಮಾಲೀಕರಾದಂತಹ ನಿಂಗ ಎನ್ನುವವರ ಹೆಸರಿನಲ್ಲೇ ಆಗಿದೆ. ಹಾಗಿದ್ದ ಮೇಲೆ ತೀರಿಕೊಂಡವರ ಹೆಸರಿನಲ್ಲಿ ಭೂ ಪರಿವರ್ತನೆ ಸಾಧ್ಯವೇ ಎಂಬ ಪ್ರಶ್ನೆ ಏಳುತ್ತದೆ. ಬಿಜೆಪಿಯ ಅವಧಿಯಲ್ಲಿ ಅಕ್ರಮ ನಡೆದಿದ್ದು ಎಂದು ಆರೋಪಿಸುತ್ತಿದ್ದಾರೆ. ಬಿಜೆಪಿಯ ಅವಧಿಯಲ್ಲಿ ಬೆಳಕಿಗೆ ಬಂದಂತಹ ಪ್ರಕರಣಕ್ಕೆ 2022 ನವೆಂಬರ್‌ನಲ್ಲಿ ಒಂದು ತನಿಖಾ ಸಂಸ್ಥೆಯನ್ನು ನೇಮಿಸಿ, ಯಾವ ರೀತಿ ಅಕ್ರಮಗಳು ಆಗಿವೆ ಎಂದು ವರದಿ ನೀಡುವಂತೆ ಸರ್ಕಾರ ಆದೇಶ ಮಾಡಿತು, ಆ ವರದಿ 2023 ಅಕ್ಟೋಬರ್ ಅಂದರೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಒಪ್ಪಿಸಿದ ಮೇಲೆ ಯಾವ ರೀತಿ ಕ್ರಮಕೈಗೊಂಡರು ಎಂಬುದಕ್ಕೂ ಉತ್ತರವಿಲ್ಲ.

ಸಮಾಚಾರ ಸಣ್ಣದಲ್ಲ

ತಲೆಕೆಳಗಾಗಿ ಕೋತಿ ಸರ್ಕಸ್: ವೈರಲ್



ಕಲಬುರಗಿ: ಕೋತಿಯೊಂದು ತಲೆ ಕೆಳಗೆಮಾಡಿ ಹೆಸರು ಬೆಳೆದ ಜಮೀನಿನಲ್ಲಿ ಓಡಾಡುತ್ತಿರುವ ವಿಡಿಯೊಂದು ವೈರಲ್ ಆಗಿ ನೋಡುಗರಿಗೆ ಅಚ್ಚರಿ ಮೂಡಿಸಿದೆ. ಚಿಂಚೋಳಿ ತಾಲೂಕಿನ ಯಲಕ ಪಳ್ಳಿಯ ಖತಲಪ್ಪ ಎಂಬ ರೈತನಿಗೆ ಸೇರಿದ ಜಮೀನಿನಲ್ಲಿ ಗುರುವಾರ ಬೆಳ್ಳಂಬೆಳಗ್ಗೆ ಯೋಗದ ಭಂಗಿಯಲ್ಲಿ ಕೋತಿ ಸರ್ಕಸ್ ಮಾಡಿದ್ದು, ಇದೀಗ ಕೋತಿ ತಲೆಕೆಳಗಾಗಿ ಓಡಾಡುತ್ತಿದ್ದ ವಿಡಿಯೊ ಎಲ್ಲೆಡೆ ವ್ಯಾಪಕವಾಗಿ ವೈರಲ್ ಆಗಿದೆ. ಕೋತಿಯ ತಲೆಕೆಳಗೆ ಮಾಡಿರುವ ವಿಡಿಯೊ ನೋಡಿದ ಜಿಲ್ಲೆಯ ಜನರು ತಮ್ಮ ವಾಟ್ಸಾಪ್ ,ಇನ್ಸ್ಟಾಗ್ರಾಮ್ ಹಾಗೂ ಫೇಸ್‌ಬುಕ್ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಮದುವೆ ದಿನವೇ ಪತ್ನಿ ಕೊಂದ ಪತಿ ಆತ್ಮಹತ್ಯೆ

ಕೋಲಾರ: ಮದುವೆ ಆದ ಮರುಗಳಿಗೆಯೇ ಪತ್ನಿಯನ್ನು ದಾರುಣವಾಗಿ ಕೊಚ್ಚಿ ಹಾಕಿದ ಪ್ರಕರಣದಲ್ಲಿ ಆತ್ಮಹತ್ಯೆ ಟ್ವಿಸ್ಟ್ ಸಿಕ್ಕಿದ್ದು ಇದು ದಂಪತಿ ಹೊಡೆದಾಟವಲ್ಲ ಎಂಬ ತರ್ಕಕ್ಕೆ ಪೊಲೀಸರು ಬಂದಿದ್ದಾರೆ. ಗಾಯಾಳು ನವೀನ್ ಗುರುವಾರ ಮಧ್ಯಾಹ್ನ ಕೋಲಾರದ ಮೆಡಿಕಲ್ ಕಾಲೇಜಿನಲ್ಲಿ ಕೊನೆಯುಸಿರೆಳೆದಿದ್ದಾನೆ. ಕೆಜಿಎಫ್ ತಾಲೂಕಿನ ಚಂಬರಸನಹಳ್ಳಿಯಲ್ಲಿ ಬುಧವಾರ ಬೆಳಗ್ಗೆ ಮದುವೆ ಆಗಿದ್ದ ನವೀನ್-ಲಿಖಿತ ಸಂಜೆ ವೇಳೆಗೆ ಹೊಡೆದಾಡಿಕೊಂಡಾಗ ಪತ್ನಿ ಕೊಲೆ ಆಗಿದ್ದು ಪತಿಗೂ ಏಟು ಬಿದ್ದ ಪರಿಣಾಮ ಆಸ್ಪತ್ರೆ ಪಾಲಾಗಿದ್ದಾನೆ ಎಂಬ ಸನ್ನಿವೇಶ ಸೃಷ್ಟಿ ಆಗಿತ್ತು. ಆದರೆ ಪೊಲೀಸರ ತನಿಖೆಯಿಂದ ಇದು ದಂಪತಿ ಗಲಾಟೆಯಲ್ಲ, ಬದಲಿಗೆ ನವೀನ್ ಕ್ಷುಲ್ಲಕ ಕಾರಣಕ್ಕಾಗಿ ಪತ್ನಿ ಕತ್ತು ಕೊಯ್ದು ನಂತರ ಕಾಡಿದ ಪಾಪಪ್ರಜ್ಞೆಯಿಂದಾಗಿ ಅದೇ ಮಚ್ಚಿನಲ್ಲಿ ತಾನೂ ಹೊಡೆದುಕೊಂಡು ಮೃತಪಟ್ಟಿದ್ದಾನೆಂಬ ಅಂಶ ದೃಢಪಟ್ಟಿದೆ.

ಸ್ಥಳೀಯ ಸಂಸ್ಥೆ ಮೀಸಲಿನಲ್ಲಿ ತಂತ್ರಾಂಶದ ಅವಾಂತರ..!

ಗೊಂದಲದ ಗೂಡಾದ ಮೀಸಲು ನಿಗದಿ | ಪರಿಶಿಷ್ಟರಿಗೆ ಅನ್ಯಾಯ, ಕಾಂಗ್ರೆಸಿಗರ ಆಕ್ರೋಶ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ವರ್ಷಕ್ಕೂ ಹೆಚ್ಚಿನ ಕಾಲ ಅಧಿಕಾರ ವಂಚಿತವಾಗಿದ್ದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನದ ಮೀಸಲು ಗೊಂದಲದ ಗೂಡಾಗಿದ್ದು, ಪಟ್ಟಣಗಳ ಜನಪ್ರತಿನಿಧಿಗಳಿಗೆ ಅಧಿಕಾರ ಮರೀಚಿಕೆಯಾಗುವ ಸಾಧ್ಯತೆ ಇದೆ.

ಒಟ್ಟು 5 ವರ್ಷಗಳ ಅವಧಿಯಲ್ಲಿ ಮೊದಲ 30 ತಿಂಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನದ ಅವಧಿ ಮುಗಿದ ಬಳಿಕ ಎರಡನೇ ಅವಧಿಯ 30 ತಿಂಗಳಿಗೆ ಅಧ್ಯಕ್ಷ, ಉಪಾಧ್ಯಕ್ಷ ಮೀಸಲು ನಿಗದಿಯಲ್ಲಿ ಭಾರಿ ಗೊಂದಲ ಕಾಣಿಸಿಕೊಂಡಿದ್ದು, ಇದರಿಂದ ಬರೀ ಪ್ರತಿಪಕ್ಷಗಳು ಮಾತ್ರವಲ್ಲದೆ, ಆಡಳಿತಾರೂಢ ಕಾಂಗ್ರೆಸ್ ಶಾಸಕರು, ಪರಿಷತ್ ಸದಸ್ಯರೇ ಆಕ್ರೋಶಗೊಂಡಿದ್ದಾರೆ.

ಅಂದರೆ, ವರ್ಷದ ನಂತರ ನಿಗದಿಯಾಗಿರುವ 61 ನಗರಸಭೆ, 123 ಪುರಸಭೆ ಹಾಗೂ 117 ಪಟ್ಟಣ ಪಂಚಾಯಿತಿಗಳ ಅಧ್ಯಕ್ಷ, ಉಪಾಧ್ಯಕ್ಷರ ಮೀಸಲು ಬಹುತೇಕ ಕಡೆ ನಿಯಮಕ್ಕೆ ವಿರುದ್ಧವಾಗಿವೆ ಎನ್ನುವ ದೂರುಗಳು ಬಂದಿದ್ದು, ಇದನ್ನು ವಿರೋಧಿಸಿ ಆಕಾಂಕ್ಷಿಗಳು, ಸ್ಥಳೀಯ ಸಂಸ್ಥೆಗಳ ಸದಸ್ಯರು ಬೀದಿಗಿಳಿಯಲು ಸಜ್ಜಾಗಿದ್ದಾರೆ. ಅಷ್ಟೇ ಅಲ್ಲ, ಅನೇಕರು ಇದನ್ನು ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರುವ ಚರ್ಚೆಯನ್ನೂ ನಡೆಸಿದ್ದಾರೆ. ಹೀಗೇನಾದರೂ ನಡೆದಿದ್ದೇ ಆದರೆ ಎರಡನೇ ಅವಧಿಯ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳ ಅಧಿಕಾರ ಕಣ್ಣೆದುರೇ ಕಾಣೆಯಾಗುವ ಸಾಧ್ಯತೆ ಇದೆ.

ಏಕೆಂದರೆ, ನಗರಾಭಿವೃದ್ಧಿ ಇಲಾಖೆ (ಪೌರಾಡಳಿತ) ಈ ಬಾರಿ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳ ಮೀಸಲು ನಿಗದಿಗೆ ಎನ್‌ಐಸಿ ತಂತ್ರಾಂಶದ ಮೂಲಕ ಮಾಡಲಾಗಿದ್ದು, ಇದರಿಂದ ಸಾಕಷ್ಟು ಗೊಂದಲವಾಗಿದೆ ಎನ್ನಲಾಗಿದೆ. ಬಹುತೇಕ ಅನೇಕ ವರ್ಷಗಳಿಂದ ಸಾಮಾನ್ಯ ವರ್ಗವೇ ಇರುವಂತೆ ಮಾಡಲಾಗಿದೆ. ಕೆಲವೆಡೆ ಪರಿಶಿಷ್ಟ ಹಿಂದುಳಿದ ವರ್ಗವೇ ಹೆಚ್ಚಿನ ರೀತಿಯಲ್ಲಿ ಪುನಾರಾವರ್ತನೆಯಾಗಿದೆ. ಮಹಿಳೆಯರಿಗೆ ನಿರೀಕ್ಷಿತ ರೀತಿಯಲ್ಲಿ ಅವಕಾಶ ಸಿಗದಂತೆ ಮಾಡಲಾಗಿದೆ.

ವಿಚಿತ್ರ ಎಂದರೆ ಕೆಲವು ನಗರಸಭೆ ಮತ್ತು ಪುರಸಭೆಗಳಲ್ಲಿ ಆ ಸಂಸ್ಥೆ ಅಸ್ತಿತ್ವಕ್ಕೆ ಬಂದಾಗಿನಿಂದ ಒಮ್ಮೆಯೂ ಪರಿಶಿಷ್ಟ ಜಾತಿ ಅಧಿಕಾರಕ್ಕೆ ಬಾರದಂತೆ ಮಾಡಲಾಗಿದೆ. ಬಹುತೇಕ ಹೆಚ್ಚಿನ ಸ್ಥಳೀಯ ಸಂಸ್ಥೆಗಳಲ್ಲಿ ಸಾಮಾನ್ಯ ವರ್ಗವೇ ಇರುವಂತೆ ಕಾಯ್ದುಕೊಳ್ಳಲಾಗಿದೆ. ಇದರಿಂದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಗಳು ಇಲಾಖೆ ವಿರುದ್ಧ ಸಿಟ್ಟಾಗಿದ್ದು, ಸಂಬಂಧಿಸಿದ ಸಚಿವರು ಮತ್ತು ಅಧಿಕಾರಿಗಳನ್ನು ಪ್ರಶ್ನಿಸುತ್ತಿದ್ದಾರೆ.

ಇದರ ಮಧ್ಯೆ, ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರ 30 ತಿಂಗಳ ಅಧಿಕಾರವಧಿಯಲ್ಲಿ ಈಗಾಗಲೇ 15 ತಿಂಗಳು ಕಳೆದಿದ್ದು, ಈಗ 2ನೇ ಅವಧಿಗೆ ಆಯ್ಕೆಯಾದ ಅಧ್ಯಕ್ಷ-ಉಪಾಧ್ಯಕ್ಷರಿಗೆ 30 ತಿಂಗಳ ಬದಲು ಕೇವಲ 15 ತಿಂಗಳು ಮಾತ್ರ ಸಿಗಲಿದೆ. ಕಾರಣ, 2019ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದಿತ್ತು.ಆಗ ಅಧ್ಯಕ್ಷ-ಉಪಾಧ್ಯಕ್ಷರಾಗಿದ್ದವರ 180ಕ್ಕೂ ಹೆಚ್ಚು ಸಂಸ್ಥೆಗಳ ಅಧಿಕಾರ ಅವಧಿ 2025ರ ನವೆಂಬರ್‌ನಲ್ಲಿ ಮುಕ್ತಾಯಗೊಳ್ಳಲಿದೆ. ಹೀಗಾಗಿ 186ಕ್ಕೂ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷ ಅಧಿಕಾರ ಮೊಟಕಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಸ್ಥೆಗಳು ಅನಾಥವಾಗಿದ್ದು ಏಕೆ?

ನಗರ ಸ್ಥಳೀಯ ಸಂಸ್ಥೆಗಳ ಎರಡನೇ ಅವಧಿಯ 30 ತಿಂಗಳಿಗೆ ಅಧ್ಯಕ್ಷ, ಉಪಾಧ್ಯಕ್ಷ ಮೀಸಲನ್ನು ವರ್ಷದ ಹಿಂದೆಯೇ ನಿಗದಿ ಮಾಡಬೇಕಿತ್ತು. ಮೀಸಲು ವಿಚಾರ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಗೆ ಇದ್ದ ಕಾರಣ ಮೀಸಲು ನಿಗದಿ ಮಾಡಲು ಸರಕಾರಕ್ಕೆ ಸಾಧ್ಯವಾಗಿರಲಿಲ್ಲ. ಈ ಮಧ್ಯೆ, ಸ್ಥಳೀಯ ಸಂಸ್ಥೆಗಳಲ್ಲಿ ಓಬಿಸಿ ವರ್ಗಗಳಿಗೆ ರಾಜಕೀಯ ಮೀಸಲು ನೀಡುವ ಬಗ್ಗೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿತ್ತು. ಈ ಹಿನ್ನಲೆಯಲ್ಲಿ ರಾಜ್ಯ ಸರಕಾರ ನ್ಯಾ. ಭಕ್ತವತ್ಸಲ ಆಯೋಗ ರಚಿಸಿತ್ತು. ಅದರ ವರದಿ ಸಲ್ಲಿಕೆಯಾಗಬೇಕಾದ ಹಿನ್ನಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಮೀಸಲು ನಿಗದಿ ನನೆಗುದಿಗೆ ಬಿದ್ದಿತ್ತು. ಇದರಿಂದ ಅಧ್ಯಕ್ಷ, ಉಪಾಧ್ಯಕ್ಷರನ್ನು ಕಾಣದೆ ಅನಾಥವಾಗಿದ್ದ ಸ್ಥಳೀಯ ಸಂಸ್ಥೆಗಳಲ್ಲಿ ಆಡಳಿತ ಅಧಿಕಾರಿಗಳದ್ದೇ ಕಾರುಬಾರಾಗಿತ್ತು. ಈ ಅಧಿಕಾರಿಗಳು ಚುನಾಯಿತಿ ಸದಸ್ಯರ ಸಭೆಗಳನ್ನೇ ಕರೆಯದೆ ತಮ್ಮದೇ ಅಧಿಕಾರಿಗಳ ಸಭೆ ನಡೆಸಿ ತೀರ್ಮಾನ ಮಾಡಿಕೊಳ್ಳುತ್ತಿದ್ದರು. ಇದರಿಂದ ಅನೇಕ ಸಂಸ್ಥೆಗಳಲ್ಲಿ ಅಕ್ರಮಗಳು ನಡೆದು ತನಿಖೆಗಳಾಗುತ್ತಿವೆ. ಅನೇಕ ಅಧಿಕಾರಿಗಳು ಅಮಾನತುಗೊಂಡಿದ್ದಾರೆ.

ಅಧ್ಯಕ್ಷ, ಉಪಾಧ್ಯಕ್ಷ ಮೀಸಲು ನಿಗದಿಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ತೀರಾ ಅನ್ಯಾಯವಾಗಿದೆ.ಈ ಸರಕಾರ ಮಾತನಾಡುವುದು ದಲಿತ ಪರ. ಆದರೆ ಆ ಸಮುದಾಯಕ್ಕೇ ಅಧಿಕಾರವೇ ಸಿಗದಂತೆ ಮಾಡುತ್ತಿದೆ. ಇದನ್ನು ನೋಡಿದರೆ ಮೀಸಲು ವಿರೋಧಿಸಿ ಸದಸ್ಯರು ಕೋರ್ಟ್ ಮೆಟ್ಟಿಲೇರಲಿ. ಸದ್ಯಕ್ಕೆ ಚುನಾವಣೆ ನಡೆಸುವುದೇ ಬೇಡ ಎಂಬಂತಿದೆ.

-ಎ.ಮಂಜು ಅರಕಲಗೂಡು ಕ್ಷೇತ್ರದ ಶಾಸಕ

ಕಡೂರಿನ ಮೇಲೆ ಕೆಟ್ಟ ಕೋಪ!

ಚಿಕ್ಕಮಗಳೂರು ಜಿಲ್ಲೆಯ ಕಡೂರು ಪುರಸಭೆಯಲ್ಲಿ ಕಳೆದ 25 ವರ್ಷಗಳಿಂದಲೂ ಪರಿಶಿಷ್ಟ ಜಾತಿಗೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ಮೀಸಲು ನಿಗದಿಯಾಗಿಲ್ಲ. ಹೀಗಾಗಿ ಈ ಖಂಡಿತವಾಗಿಯೂ ಪರಿಶಿಷ್ಟ ಜಾತಿಯೇ ನಿಗದಿಯಾಗುತ್ತದೆ ಎಂದು ನಿರೀಕ್ಷಿಸಿದ್ದ ಪಟ್ಟಣದ ಜನತೆಗೆ ನಿರಾಶೆಯಾಗಿದೆ. ಇದರಿಂದ ಸ್ಥಳೀಯ ಶಾಸಕರೂ ಸೇರಿದಂತೆ ಜಿಲ್ಲೆಯ ಅನೇಕ ರಾಜಕೀಯ ಮುಖಂಡರೂ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಇದರ ವಿರುದ್ಧ ದಲಿತ ಸಂಘಟನೆಗಳು ಸಂಬಂಧಿಸಿದ ಸಚಿವರು ಮತ್ತು ಅಧಿಕಾರಿಗಳ ವಿರುದ್ಧ ಹೋರಾಟ ನಡೆಸುವುದಾಗಿಯೂ ಹೇಳಿದ್ದಾರೆ.

ಕುಮ್ಕಿ ಆನೆಗೆ ಆಂಧ್ರ ಬೇಡಿಕೆ

← ಮೊದಲಪುಟದಿಂದ

ಸುಮಾರು ಒಂದು ಗಂಟೆಗಳ ಕಾಲ ಎರಡೂ ರಾಜ್ಯಗಳ ಅರಣ್ಯಾಧಿಕಾರಿಗಳೊಂದಿಗೆ ಉತ್ತಮ ಮತ್ತು ಉಪಯುಕ್ತ, ಫಲಪ್ರದವಾದ ಚರ್ಚೆ ನಡೆದಿದ್ದು, ಇದೇ 12ರಂದು ವಿಶ್ವ ಆನೆ ದಿನದಂದು ಮಾನವ-ಆನೆ ಸಂಘರ್ಷ ನಿರ್ವಹಣೆ ಕುರಿತಂತೆ ಜಿಕೆವಿಕೆಯಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಿದೆ ಎಂದರು.

ಕರ್ನಾಟಕಕ್ಕೂ ಆಂಧ್ರಪ್ರದೇಶಕ್ಕೂ ಮೊದಲಿನಿಂದಲೂ ಅವಿನಾಭಾವ ಸಂಬಂಧವಿದೆ. ತೆಲುಗು ಮತ್ತು ಕನ್ನಡ ಭಾಷೆಯ ಲಿಪಿಯಲ್ಲಿ ಸಾಮ್ಯತೆ ಇದೆ. ರಾಷ್ಟ್ರಕವಿ ಕುವೆಂಪು ಅವರ ಅರಣ್ಯಕ್ಕೆ ಹಾಡು ಹಾಡುವ ಮುನ್ನ ನಾನು ನನ್ನ ಮನದ ಮುಂದೆ ನಿಲ್ಲುತ್ತೇನೆ ಎಂಬ ಸಾಲುಗಳನ್ನು ಉಲ್ಲೇಖಿಸಿ ತಮಗೆ ಈ ಸಭೆಯಿಂದ ಕನ್ನಡ ಕಲಿಯುವ ಪ್ರೇರಣೆ ಲಭಿಸಿದೆ. ಶ್ರೀಶೈಲ ಮತ್ತು ತಿರುಪತಿಯಲ್ಲಿ ಕರ್ನಾಟಕದ ಭಕ್ತಾದಿಗಳಿಗೆ ಅನುಕೂಲತೆ ಕಲ್ಪಿಸಲು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು.

- ಪವನ್ ಕಲ್ಯಾಣ ಆಂಧ್ರ ಉಪಮುಖ್ಯಮಂತ್ರಿ

21ರಂದು ಗಜ ಪಯಣ

ಮೈಸೂರು ದಸರಾ ಮಹೋತ್ಸವ ದಲ್ಲಿ ಆನೆಗಳೇ ಪ್ರಧಾನ ಆಕರ್ಷಣೆಯಾಗಿದ್ದು, ವಿಜಯದಶಮಿಯ ದಿನ ನಡೆಯುವ ಜಂಬೂ ಸವಾರಿ ವಿಶ್ವ ವಿಖ್ಯಾತವಾಗಿದೆ. ಇದೇ ಆಗಸ್ಟ್ 21ರಂದು ವೀರನಹೊಸಹಳ್ಳಿಯಲ್ಲಿ ಕಾಡಿನಿಂದ ನಾಡಿಗೆ ತರುವ ಗಜ ಪಯಣ ಕಾರ್ಯಕ್ರಮ ಶಾಸ್ತ್ರೋಕ್ತವಾಗಿ ನಡೆಯಲಿದೆ ಎಂದು ಸಚಿವ ಖಂಡ್ರೆ ಮಾಹಿತಿ ನೀಡಿದರು. ಆನೆ ಕಾರ್ಯಾಚರಣೆಯಲ್ಲಿ ಅಪಾಯವಿದ್ದು, ಹಿಂದೆ ಆನೆ ಹಿಡಿಯಲು ಖೆಡ್ಡಾ ತೋಡಲಾಗುತ್ತಿತ್ತು. ಈಗ ಅರೆವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲಾಗುತ್ತದೆ. ಇದು ಕೂಡ ಅತ್ಯಂತ ಅಪಾಯಕಾರಿಯಾಗಿದ್ದು, ಇತ್ತೀಚೆಗಷ್ಟೇ ಹೆಸರಾಂತ ಶಾರ್ಪ್ ಶೂಟರ್ ವೆಂಕಟೇಶ್ ಆನೆಗೆ ಅರವಳಿಕೆ ಚುಚ್ಚುಮದ್ದು ನೀಡುವಾಗ ಭೀಮ ಆನೆಗೆ ಬಲಿಯಾಗಿದ್ದರು ಎಂದು ತಿಳಿಸಿದರು.

...ಪ್ರಾಸಿಕ್ಯೂಷನ್‌ಗೆ ಮನವಿ

← ಮೊದಲಪುಟದಿಂದ

ಎಚ್‌ಡಿಕೆ 2ನೇ ಆರೋಪಿ: ಈ ಪ್ರಕರಣದಲ್ಲಿ ಎಸ್‌ಐಟಿ ಅಧಿಕಾರಿಗಳು ವಿನೋದ್ ಗೋಯಲ್ ಅವರನ್ನು ಪ್ರಥಮ ಆರೋಪಿಯೆಂದೂ, ಎಚ್. ಡಿ. ಕುಮಾರಸ್ವಾಮಿ ಅವರನ್ನು 2ನೇ ಆರೋಪಿಯೆಂದೂ, ಕೆ.ಜಯಚಂದ್ರ ಹಾಗೂ ಜವರೇಗೌಡ ಅವರನ್ನು ಕ್ರಮವಾಗಿ 3 ಮತ್ತು 4ನೇ ಆರೋಪಿಗಳನ್ನಾಗಿ ದಾಖಲಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಐಪಿಸಿ ಸೆಕ್ಷನ್‌ಗಳಾದ 420, 465, 468, 409 ಜತೆಗೆ 120 ಬಿ ಮತ್ತು ಐಪಿಸಿ ಸೆಕ್ಷನ್ 511, ಭ್ರಷ್ಟಾಚಾರ ನಿರೋಧಕ ಕಾಯಿದೆ ಸೆಕ್ಷನ್ 13(2) ಜತೆಗೆ 13(1)(ಡಿ) ಮತ್ತು ಎಂಎಂಆರ್‌ಡಿ ಕಾಯಿದೆಯ ಸೆಕ್ಷನ್‌ಗಳಾದ 21(2) ಮತ್ತು 23 ಅಡಿ ದಾಖಲಾಗಿರುವ ಪ್ರಕರಣದಲ್ಲಿ ಸಂಬಂಧಿತ ನ್ಯಾಯಾಲಯಕ್ಕೆ ಆರೋಪ ಪಟ್ಟಿಸಲು ಅಭಿಯೋಜನಾ ಮಂಜೂರು ನೀಡುವಂತೆ ರಾಜ್ಯಪಾಲರಿಗೆ ಲೋಕಾಯುಕ್ತ ಪೊಲೀಸರು 2023ರ ಸೆಪ್ಟೆಂಬರ್‌ನಲ್ಲಿ ಮನವಿ ಮಾಡಿದ್ದಾರೆ.

ಏನಿದು ಪ್ರಕರಣ?: ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಎನ್‌ಇಬಿ ರೇಂಜ್ ಪ್ರದೇಶದಲ್ಲಿ ಮೆಸರ್ಸ್ ಚೌಗಲೆ ಮತ್ತು ಕಂಪನಿಯು ಗಣಿಗಾರಿಕೆಗೆ ಮಂಜೂರು ಪಡೆದು ಆನಂತರ ಸರಕಾರಕ್ಕೆ 550 ಎಕರೆ ಅಧ್ಯರ್ಪಣೆ ಮಾಡಿದ ಪ್ರದೇಶಕ್ಕೆ ಗಣಿ ಗುತ್ತಿಗೆ ಮಂಜೂರಿಗಾಗಿ 2006ರ ಏಪ್ರಿಲ್‌ನಲ್ಲಿ ಒಟ್ಟು 29 ಅರ್ಜಿದಾರರು ತಮ್ಮ ಸಂಸ್ಥೆ, ಕಂಪನಿ ಹೆಸರಿನಲ್ಲಿ ಬೇರೆ ಬೇರೆ ವಿಸ್ತೀರ್ಣಗಳಿಗೆ ಅರ್ಜಿ ಸಲ್ಲಿಸಿದ್ದವು. ಈ ಅರ್ಜಿಗಳಲ್ಲಿ ಮಹಾರಾಷ್ಟ್ರದ ಮೂಲದ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರ ಸೋಮನಾಥ ವಿ. ಸಾಕ್ರೆ ಅವರು ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಹೆಸರಿನಡಿ ಗಣಿ ಗುತ್ತಿಗೆ ಪಡೆಯಲು ಅರ್ಜಿ ಸಲ್ಲಿಸಿದ್ದರು. ಸಾಕ್ರೆ ಮತ್ತು ರಾಜಕುಮಾರ್ ಅಗರವಾಲ್ ಎಂಬುವವರು ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಸಂಸ್ಥೆ ಆರಂಭಿಸಿದ್ದು, ಗಣಿ ಗುತ್ತಿಗೆ ಬಯಸಿ ಅರ್ಜಿ ಎರಡು ಡಿಡಿ ಅಥವಾ ಚೆಕ್‌ಗಳನ್ನು 2006 ಏಪ್ರಿಲ್ 12ರಂದು ಬರೆದ ಪತ್ರ, ನಕಾಶೆಯೊಂದಿಗೆ 2006ರ ಏಪ್ರಿಲ್ 17ರಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು. ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಹೆಸರಿನಡಿ ಎಸ್ ವಿ ಸಾಕ್ರೆ ಸಲ್ಲಿಸಿದ್ದ ಅರ್ಜಿಯಲ್ಲಿ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಸಂಸ್ಥೆಯ ರೂಪುರೇಷೆಗಳು ಹಾಗೂ ಪಾಲುದಾರರ ಬಗ್ಗೆ ಇರುವ ಅಸ್ಪಷ್ಟತೆಯ ಲಾಭ ಪಡೆಯುವ ಉದ್ದೇಶದಿಂದ ವಿನೋದ್ ಗೋಯಲ್ ಎಂಬ ವ್ಯಕ್ತಿಯು ಸರಕಾರಿ ಅಧಿಕಾರಿ ಗಳಾದ ಜಯಚಂದ್ರ, ಜವರೇಗೌಡ ಜತೆ ಶಾಮೀಲಾಗಿ, ಸುಳ್ಳು ದಾಖಲೆ ಸೃಷ್ಟಿಸಿ, ಆ ದಾಖಲೆ ಆಧರಿಸಿ, ಹೈಕೋರ್ಟ್‌ನಲ್ಲಿ ದಾವೆ ಹೂಡಿ, ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಹೆಸರಿಗೆ ಗಣಿ ಗುತ್ತಿಗೆ ನೀಡುವಂತೆ ಮತ್ತು ಎಸ್.ವಿ. ಸಾಕ್ರೆ ಹೆಸರಿನ ಬದಲು ವಿನೋದ್ ಗೋಯೆಲ್ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ ಮಾಲೀಕರು ಎಂದು ಮಾಡಿ, ಗಣಿ ಗುತ್ತಿಗೆ ಪಡೆಯಲು ಯತ್ನಿಸಿದ್ದಾರೆಂಬುದು ಆರೋಪವಾಗಿದೆ.

ನಮಸ್ತೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.
ನೋಂದಣಿ ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ಸೌಹಾರ್ದ/ನೋಂದಣಿ/109/4393/2019-20
ನಂ.16, 3ನೇ ಮಹಡಿ, ಶ್ರೀ ನಂಜುಂಡೇಶ್ವರ ಕಾಂಪ್ಲೆಕ್ಸ್, 10ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು 560 003.
ಐದನೇ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರ 2023-24
ಸಹಕಾರಿಯ 2023-24ನೇ ಸಾಲಿನ ಸರ್ವಸದಸ್ಯರ ಸಭೆಯನ್ನು **ದಿನಾಂಕ: 25.08.2024ರ ಭಾನುವಾರ ಬೆಳಿಗ್ಗೆ 10:30 ಗಂಟೆಗೆ,** ಸಹಕಾರಿಯ ಆವರಣದಲ್ಲಿ ಅಧ್ಯಕ್ಷರಾದ ಶ್ರೀಮತಿ ರಾಜಿತಾ ಕಾಡೆ ಅರವಿಂದ್ ರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ತಾವು ಸದರಿ ಸಭೆಗೆ ಹಾಜರಾಗಬೇಕೆಂದು ವಿನಂತಿ. ಸದಸ್ಯರುಗಳಿಗೆ ಅಂಚೆ ಮೂಲಕ ನೋಟೀಸನ್ನು ಕಳುಹಿಸಲಾಗಿದ್ದು ನೋಟೀಸ್ ತಲುಪದ ಸದಸ್ಯರು ಈ ಪ್ರಕಟಣೆಯನ್ನು ಸಭೆಯ ಆಹ್ವಾನವೆಂದು ಭಾವಿಸಿ ಸಭೆಯಲ್ಲಿ ಭಾಗವಹಿಸುವುದು. ಹೆಚ್ಚಿನ ವಿವರಗಳಿಗೆ ಸಹಕಾರಿಯನ್ನು ಸಂಪರ್ಕಿಸುವುದು.
ಸ್ಥಳ: ಬೆಂಗಳೂರು
ದಿನಾಂಕ: 08.08.2024
– ಆಡಳಿತ ಮಂಡಳಿ

ಸಿರಿಶಂಕರಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.
ನೋಂದಣಿ ಸಂಖ್ಯೆ: ಜೆಆರ್‌ಬಿ/ಆರ್‌ಜಿಎನ್/ಸೌಕಾ/04/4057/2016-17
ನಂ.77, 4ನೇ ಮೇನ್, 4ನೇ ಕ್ರಾಸ್, ಕಾಶಿನಗರ, ಯಲಚೇನಹಳ್ಳಿ, ಕನಕಪುರ ಮುಖ್ಯ ರಸ್ತೆ, ಬೆಂಗಳೂರು-560078. ಮೊಬೈಲ್: 9060996038
ಒಂಭತ್ತನೇ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರ 2023-24
ಸಹಕಾರಿಯ 2023-24ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ದಿನಾಂಕ: 25.08.2024 **ಭಾನುವಾರ ಬೆಳಿಗ್ಗೆ 11.00 ಗಂಟೆಗೆ,** ಸಹಕಾರಿಯ ಆವರಣದಲ್ಲಿ ಅಧ್ಯಕ್ಷರಾದ ಶ್ರೀಮತಿ ಮಂಜುಳ ಜೆ.ಪಿ. ರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ತಾವು ಸದರಿ ಸಭೆಗೆ ಹಾಜರಾಗಬೇಕೆಂದು ವಿನಂತಿ. ಸದಸ್ಯರುಗಳಿಗೆ ಅಂಚೆ ಮೂಲಕ ನೋಟೀಸನ್ನು ಕಳುಹಿಸಲಾಗಿದ್ದು ನೋಟೀಸ್ ತಲುಪದ ಸದಸ್ಯರು ಈ ಪ್ರಕಟಣೆಯನ್ನು ಸಭೆಯ ಆಹ್ವಾನವೆಂದು ಭಾವಿಸಿ ಸಭೆಯಲ್ಲಿ ಭಾಗವಹಿಸುವುದು. ಹೆಚ್ಚಿನ ವಿವರಗಳಿಗೆ ಸಹಕಾರಿಯನ್ನು ಸಂಪರ್ಕಿಸುವುದು.
ಆಡಳಿತ ಮಂಡಳಿ ಅನುಮತಿ ಮೇರೆಗೆ
ಸ್ಥಳ: ಬೆಂಗಳೂರು
ದಿನಾಂಕ: 08.08.2024
ಭರಣಿ ಸಿ ಗೌಡ.,
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ಸರ್ಕಾರ
ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ.
ಸಂ.ಚಿಜಿಆ/ಹೆಚ್.ಎಂ.ಎಸ್ (2)/459/2024-25 ದಿನಾಂಕ: 06-08-2024
ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
2024-25ನೇ ಸಾಲಿಗೆ ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ ಇಲ್ಲಿಗೆ ಅವಶ್ಯಕವಾಗಿ ಬೇಕಾಗಿರುವ ಆರ್ಥೋ ಇಂಪ್ಲಾಂಟ್‌ಗಳನ್ನು ಸರಬರಾಜು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999-2000ರ 'ಪ್ರಕಾರ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಮೂಲ ಉತ್ಪಾದಕ/ಅಧಿಕೃತ ಸರಬರಾಜುದಾರ ಸಂಸ್ಥೆಗಳಿಂದ ಸರಬರಾಜು ಪಡೆಯಲು ಮರು ಟೆಂಡರ್ ಕರೆಯಲಾಗಿದೆ.
ಟೆಂಡರಿನ ಘಟನಾವಳಿಗಳು:- (1) Tender reference No: CGH/HMS(2)/459/2024-25 DATED:- 06-08-2024 (CALL-2) (2) Amount put to tender Rs.25,00000/- (3) EMD amount Rs. 62,500/- (4) Availability of tender document 06-08-2024 To 16-08-2024 before 05:00 PM, IST upload all documents is compulsory else will be disqualified. (5) Last date and time for receipt bid document 16-08-2024 before 05:00 PM, IST all documents must be attested by the agency (6) Time, date and place of opening of tender (Technical Bid): 17-08-2024 at 5:30 PM, IST Chigateri District Hospital, Davangere (7) Time, date and place of opening of tender (Financial Bid): After Completion of technical bid process (8) Address for communication: Chigateri District Hospital, Davangere
ವಾಸಾಇ/ದಾವಣಗೆರೆ/233/ಕೆಎಸ್‌ಎಂಸಿಎ/2024-25
ಸಹಿ/- ಅಧೀಕ್ಷಕರು/ಜಿಲ್ಲಾ ಶಸ್ತ್ರ ಚಿಕಿತ್ಸಕರು, ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ನವನಗರ, ಹುಬ್ಬಳ್ಳಿ-580025.
ನ್ಯಾಕ 'ಎ' ಶ್ರೇಣಿ ಮಾನ್ಯತೆ
ಫೋನ್/ಫ್ಯಾಕ್ಸ್: 0836-2222392 ಜಾಲತಾಣ: www.kslu.karnataka.gov.in
0836-2223392 ಇ-ಮೇಲ್: kslu.registrar@gmail.com
ಸಂಖ್ಯೆ: ಕರಾಕಾವಿ/ದಾಸ್ತಾನು/2024-25/1130 ದಿನಾಂಕ: 08-08-2024
ಟೆಂಡರ್ ಪ್ರಕಟಣೆ
(KPPP ಪೋರ್ಟಲ್ ಮೂಲಕ)
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಗ್ರಂಥಾಲಯ ವಿಭಾಗಕ್ಕೆ ಅವಶ್ಯವಿರುವ ಕಾನೂನು ಪುಸ್ತಕಗಳ ಖರೀದಿಗಾಗಿ ಮಾನ್ಯ ಕುಲಪತಿಗಳ ಪರವಾಗಿ ಕುಲಸಚಿವರು, ಕ.ರಾ.ಕಾ.ವಿ., ಹುಬ್ಬಳ್ಳಿ ಇವರು ಟೆಂಡರ್‌ನ್ನು, ಕರ್ನಾಟಕ ಸರ್ಕಾರದ KPPP ಪೋರ್ಟಲ್ https//kppp.karnataka.gov.in ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ.
ಸ್ಟ್ಯಾಂಡರ್ಡ್ ಟೆಂಡರ್ ಡೊಕ್ಯೂಮೆಂಟ್‌ದಂತೆ ಮೌಲ್ಯಮಾಪನ ಮಾಡಲಾಗುವದು. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ. ಹೆಚ್ಚಿನ ವಿವರಗಳಿಗಾಗಿ KPPP ಪೋರ್ಟಲ್ (https//kppp.karnataka.gov.in) ಅಥವಾ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 13-08-2024 ರಂದು ಬೆಳಿಗ್ಗೆ 10.30** ಗಂಟೆಯವರೆಗೆ.
ಸಹಿ/- ಕುಲಸಚಿವರು
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ
ವಾ.ಸಾ.ಇ/ಧಾರವಾಡ/258/ದೇಶಪಾಂಡೆಪಬ್ಲಿಸಿಟಿ/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:ಡಿಬಿ:KW- 2 3& 4:ಟೆಂ:2024-25:1343
ದಿನಾಂಕ: 08.08.2024.
ಅಲ್ಪಾವಧಿ ಟೆಂಡರ್ ಪ್ರಕಟಣೆ
2024-25ನೇ ಸಾಲಿನ ಲೆಕ್ಕ ಶೀರ್ಷಿಕೆ: **3054-03-337-0-05-200** – ರಾಜ್ಯ ಹೆದ್ದಾರಿಗಳ ನಿರ್ವಹಣೆ ಮತ್ತು ಲೆಕ್ಕ ಶೀರ್ಷಿಕೆ: **3054-04-337-0-10-200**-ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಅಡಿಯಲ್ಲಿ ಮಂಜೂರಾದ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ KW-2 3 & 4 ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಒಟ್ಟು 19 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ: **12109, 12064, 12063, 12084, 12085, 12082, 12101, 12106, 12105, 12104, 12071, 12081, 12099, 12100, 12083, 12088, 12089, 12086, & 12090**) ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ: 19-08-2024 ಸಮಯ 16.00** ಗಂಟೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 20-08-2024 ಸಮಯ 16.30** ಗಂಟೆ ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 22-08-2024 ಸಮಯ 11.00** ಗಂಟೆ, ಕನಿಷ್ಠ ಅಂದಾಜು ಮೊತ್ತ ರೂ. **30.00 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. 369.00 ಲಕ್ಷಗಳು ಇರುತ್ತದೆ.** ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಆರ್ಥಿಕ ಬಿಡ್ ತರೆಯುವ ದಿನಾಂಕ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು http://kppp.karnataka.gov.in ನೋಡಿಕೊಳ್ಳುವುದು/ ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ವಿಶೇಷ ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಬದಲಾವಣೆಯಾದಲ್ಲಿ, ಮರು ಟೆಂಡರ ಆಹ್ವಾನಿಸಿದಲ್ಲಿ ಹಾಗೂ ಇತರೆ ಬದಲಾವಣೆಯಾದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/234/ಕೆಎಸ್‌ಎಂಸಿಎ/2024-25

ಪಟ್ಟಣ ಪಂಚಾಯತ ಕಾರ್ಯಾಲಯ, ಅಂಕಲಗಿ – ಅಕ್ಕತಂಗೇರಹಾಳ
ತಾ॥ ಗೋಕಾಕ, ಜಿ॥ ಬೆಳಗಾವಿ, ದೂರವಾಣಿ : 08332-262 371.
ಸಂಖ್ಯೆ : ಪ.ಪಂ.ಅ.ಅ.ಲೋ.ಇ./ಎಸ್.ಬಿ.ಎಮ್.2./ಟೆ.ಪ್ರ./2024-25
ದಿನಾಂಕ : 08-08-2024
ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ)
ಪಟ್ಟಣ ಪಂಚಾಯತ ಅಂಕಲಗಿ ಅಕ್ಕತಂಗೇರಹಾಳ ವ್ಯಾಪ್ತಿಯಲ್ಲಿನ ಸನ್ 2024-25 ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ 2.0 ಅನುದಾನದಡಿಯ ಕಾಮಗಾರಿಗಳಿಗೆ, ಅರ್ಹ ಸಿವ್ಹಿಲ್ ಗುತ್ತಿಗೆದಾರರು ಮತ್ತು ಪೂರೈಕೆದಾರರಿಂದ ಕೆ.ಡಬ್ಲ್ಯೂ – 1, 2 ಮತ್ತು ಕೆ.ಜಿ. – 1, 2 ರ ಪ್ರಕಾರ ಐಟಂವಾರು ಒಟ್ಟು – 15 ಪ್ಯಾಕೇಜಗಳ ಕಾಮಗಾರಿಗಳನ್ನು ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ನಿಗಧಿಪಡಿಸಿದ ಟೆಂಡರ್ ದಾಖಲಾತಿಯನ್ನು ಕೆ.ಪಿ.ಪಿ.ಪಿ. ಪೋರ್ಟಲ್‌ನಿಂದ ನಿಗಧಿತ ಶುಲ್ಕ ಪಾವತಿಯೊಂದಿಗೆ ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು ಇ.ಎಂ.ಡಿ. ಮೊತ್ತದೊಂದಿಗೆ ಭರ್ತಿ ಮಾಡಿದ ಟೆಂಡರುಗಳನ್ನು ದಿನಾಂಕ : 26-08-2024 ರ ಸಂಜೆ 5.30 ಘಂಟೆಯೊಳಗಾಗಿ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ಸದರಿ ಟೆಂಡರಿನ ಪ್ರೀ ಬಿಡ್ ಮೀಟಿಂಗನ್ನು ದಿನಾಂಕ : 22-08-2024 ರಂದು ಮಧ್ಯಾಹ್ನ 12.00 ಘಂಟೆಗೆ ಪಟ್ಟಣ ಪಂಚಾಯತ ಕಾರ್ಯಾಲಯದಲ್ಲಿ ನಿಗದಿಪಡಿಸಲಾಗಿದೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 28-08-2024 ರಂದು ಮುಂಜಾನೆ 11 ಘಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್‌ನ್ನು ತೆರೆಯವ ದಿನಾಂಕ : 02-09-2024 ರಂದು ಮುಂಜಾನೆ 11 ಘಂಟೆಗೆ (ತಾಂತ್ರಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ನಂತರ) ಆರ್ಥಿಕ ಬಿಡ್‌ನ್ನು ತೆರೆಯಲಾಗುವದು ಕಾಮಗಾರಿಗಳ ಟೆಂಡರ್ ಪಡೆಯಲು ಬೇಕಾದ ಅರ್ಹತೆ ಹಾಗೂ ಇತರೆ ಷರತ್ತುಗಳನ್ನು ಟೆಂಡರ್ ಫಾರಂಗಳಲ್ಲಿ ವಿವರವಾಗಿ ನಮೂದಿಸಲಾಗಿದೆ ವಿವರವಾದ ಟೆಂಡರ್ ಪ್ರಕಟಣೆಯನ್ನು ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಹಾಗೂ ಕಛೇರಿ ದೂರವಾಣಿ ಸಂಖ್ಯೆ : 08332-262371 ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ ಕಾಮಗಾರಿ ವಿವರ ಹಾಗೂ ಷರತ್ತುಗಳು www.kppp.karnataka.gov.in ಅಥವಾ ಈ ಕಛೇರಿ ವೆಬ್‌ಸೈಟ್ : www.ankalagi-akkatangerahal.town.mrc.gov.in ಇದರಲ್ಲಿ ಪಡೆಯಬಹುದು.
ಸಹಿ/- ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ, ಅಂಕಲಗಿ-ಅಕ್ಕತಂಗೇರಹಾಳ.
ಸಹಿ/- ಆಡಳಿತಾಧಿಕಾರಿ, ಪಟ್ಟಣ ಪಂಚಾಯತ, ಅಂಕಲಗಿ-ಅಕ್ಕತಂಗೇರಹಾಳ.
ಡಿಐಪಿಆರ್/ಬೆಳಗಾವಿ/573/ಮಣಿಪಾಲ್/2024-25

..ಸದನ ಸಮಿತಿಗೆ ಶಿಫಾರಸು

← ಮೊದಲಪುಟದಿಂದ

ಏನೆಲ್ಲ ತಿದ್ದುಪಡಿ?: ಯಾವುದಾದರೂ ಒಂದು ಆಸ್ತಿಯನ್ನು ವಕ್ಫ್ ಮಂಡಳಿಗೆ ಸೇರಿಸಲು ಪಾರದರ್ಶಕ ನಿಯಮಗಳ ಪಾಲನೆಗೆ ಕೇಂದ್ರ ಸರಕಾರ ಹೆಚ್ಚಿನ ಆದ್ಯತೆ ನೀಡುತ್ತಿದೆ. ಅದ ರಲ್ಲೂ, ಯಾವುದಾದರೂ ಒಂದು ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಘೋಷಿಸುವ ಪರಮಾಧಿಕಾರ ತೆಗೆಯಲಿದೆ. ಇನ್ನು, ವಕ್ಫ್ ಆಸ್ತಿಗಳ ಮೇಲೆ ನಿಗಾ ಇರಿಸುವ ಅಧಿಕಾರವನ್ನು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ನೀಡಲು ಕೇಂದ್ರ ಸರಕಾರ ತೀರ್ಮಾನಿಸಿದೆ ಎಂದು ತಿಳಿದುಬಂದಿದೆ.

ಇದುವರೆಗೆ ವಕ್ಫ್ ಮಂಡಳಿಯಲ್ಲಿ ಹೆಣ್ಣು ಮಕ್ಕಳ ಸಹಭಾಗಿತ್ವವೇ ಇರಲಿಲ್ಲ. ಹಾಗಾಗಿ, ಪ್ರತಿಯೊಂದು ರಾಜ್ಯಗಳ ವಕ್ಫ್ ಮಂಡಳಿಗಳಲ್ಲಿ ಹೆಣ್ಣುಮಕ್ಕಳಿಗೂ ಸ್ಥಾನ ನೀಡುವುದು. ರಾಜ್ಯ ಗಳ ಮಂಡಳಿಗಳಲ್ಲಿ ಕನಿಷ್ಠ ಇಬ್ಬರು ಮಹಿಳೆ ಯರಿಗೆ ಸ್ಥಾನ ನೀಡುವುದು. ಕೇಂದ್ರ ಸಮಿತಿ ಗಳಲ್ಲೂ ಇಬ್ಬರೂ ಹೆಣ್ಣುಮಕ್ಕಳು ಇರಬೇಕು ಎಂಬ ನಿಯಮ ಜಾರಿಗೆ ತರುವುದು. ಮುಸ್ಲಿ ಮರು ಕೂಡ ವಕ್ಫ್ ಆಸ್ತಿಯನ್ನು ಸೃಷ್ಟಿಸಬಹುದು ಎಂಬ ನಿಯಮ ಜಾರಿಗೊಳಿಸುವುದು ಸೇರಿ ಹಲವು ತಿದ್ದುಪಡಿಗಳಿಗೆ ಪ್ರಸ್ತಾವನೆ ರಚಿಸಲಾಗಿದೆ ಎನ್ನಲಾಗಿದೆ.



ವಕ್ಫ್ ತಿದ್ದುಪಡಿ ಮಸೂದೆಯಲ್ಲಿ ಯಾವುದೇ ಧಾರ್ಮಿಕ ಸಂಸ್ಥೆಯ ಸ್ವಾತಂತ್ರ್ಯದಲ್ಲಿ ಮಧ್ಯಪ್ರವೇಶಿಸುವ ಅಂಶ ಇಲ್ಲ. ಸಂವಿಧಾನದ ಯಾವುದೇ ಅಂಶದ ಉಲ್ಲಂಘನೆಯಾಗಿಲ್ಲ. ಅಲ್ಲದೆ, 1955ರ ವಕ್ಫ್ ಕಾಯಿದೆ ಬಗ್ಗೆ ಮರುಪರಿಶೀಲಿಸಬೇಕೆಂದು ಜಂಟಿ ಸದನ ಸಮಿತಿಯೇ ಶಿಫಾರಸು ಮಾಡಿದೆ. ಆದರೆ, ಪ್ರತಿಪಕ್ಷಗಳು ಈ ಸಂಬಂಧ ರಾಜಕೀಯ ಮಾಡುತ್ತಿವೆ. ಮಸೂದೆ ಬಗ್ಗೆ ತಪ್ಪು ಮಾಹಿತಿ ನೀಡಿ ಜನರ ದಾರಿ ತಪ್ಪಿಸುತ್ತಿವೆ.

- ಕಿರಣ್ ರಿಜಿಜು ಕೇಂದ್ರದ ಅಲ್ಪಸಂಖ್ಯಾತ ಸಚಿವ

ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ನೇರ ದಾಳಿ

ಕಾಂಗ್ರೆಸ್ ಸಂಸದ ಕೆ.ಸಿ.ವೇಣುಗೋಪಾಲ್ ಮಾತನಾಡಿ, ನಾವು ಹಿಂದೂಗಳು. ಆದರೆ ನಮ್ಮ ಧರ್ಮದ ಜತೆಗೆ ನಾವು ಇತರ ಧರ್ಮಗಳ ನಂಬಿಕೆಯನ್ನು ಗೌರವಿಸುತ್ತೇವೆ. ಈ ಮಸೂದೆಯು ಮಹಾರಾಷ್ಟ್ರ, ಹರಿಯಾಣ ಚುನಾವಣೆಗಳ ದೃಷ್ಟಿಯಿಂದ ಮಂಡನೆ ಮಾಡಲಾಗಿದೆ. ಕಳೆದ ಬಾರಿ ಭಾರತದ ಜನತೆ ನಿಮಗೆ ಪಾಠ ಕಲಿಸಿದ್ದು ನಿಮಗೆ ಅರ್ಥವಾಗುತ್ತಿಲ್ಲ. ಇದು ಒಕ್ಕೂಟ ವ್ಯವಸ್ಥೆಯ ಮೇಲಿನ ದಾಳಿ. ಈ ಮಸೂದೆಯು ಸಂವಿಧಾನದ ಮೇಲಿನ ಮೂಲಭೂತ ದಾಳಿಯಾಗಿದೆ. ಈ ಮಸೂದೆಯ ಮೂಲಕ, ಅವರು ಮುಸ್ಲಿಮೇತರರೂ ವಕ್ಫ್ ಆಡಳಿತ ಮಂಡಳಿಯ ಸದಸ್ಯರಾಗಬೇಕೆಂಬ ನಿಬಂಧನೆಯನ್ನು ಹಾಕುತ್ತಿದ್ದಾರೆ. ಇದು ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ನೇರ ದಾಳಿ ಎಂದು ಹೇಳಿದ್ದಾರೆ.

ಇಂದು ಕೈ ಬಲ ಪ್ರದರ್ಶನ

← ಮೊದಲಪುಟದಿಂದ

ಹಿಂದೆ ಕುಮಾರಸ್ವಾಮಿ ಕುಟುಂಬದ ವಿರುದ್ಧ ಯಡಿಯೂರಪ್ಪ ಮಾಡಿದ್ದ ಆರೋಪಗಳನ್ನು, ದೇವೇಗೌಡರ ಕುಟುಂಬಕ್ಕೆ ಸಂಬಂಧಿಸಿದ 42 ಸೈಟ್‌ಗಳ ಕುರಿತು ಬಿಜೆಪಿ ನೀಡಿದ್ದ ಜಾಹೀರಾತನ್ನು ಕೈ ಪಡೆ ದೊಡ್ಡ ದೊಡ್ಡ ಫ್ಲೆಕ್ಸ್ ಮಾಡಿ ಹಾಕಲಿದೆ ಎನ್ನಲಾಗಿದೆ. ಮೈಸೂರು ನಗರದ ಉದ್ದಕ್ಕೂ ಬಿಜೆಪಿ ನೀಡಿದ್ದ ಜಾಹೀರಾತಿನ ಪ್ರತಿಯನ್ನು ಬ್ಯಾನರ್ ಮಾಡಿ ಕಾಂಗ್ರೆಸ್ ಹಾಕಲಿದೆ ಎಂದು ತಿಳಿದುಬಂದಿದೆ. ಆ ಮೂಲಕ ಜೆಡಿಎಸ್- ಬಿಜೆಪಿ ನಾಯಕರಿಗೆ ಮುಜುಗರ ಸೃಷ್ಟಿಸುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ಇದೆ.

ದೋಷಾರೋಪ ಪಟ್ಟಿ ಸಲ್ಲಿಸಲು ಸಿದ್ಧತೆ: ಶುಕ್ರವಾರ ಸಮಾರೋಪ ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಬಿಜೆಪಿ-ಜೆಡಿಎಸ್ ಕಾಲದ ಹಲವು ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಸಾಧ್ಯತೆಯಿದೆ. ದೋಸ್ತಿ ಪಕ್ಷಗಳು ಅಧಿಕಾರದಲ್ಲಿದ್ದಾಗ 21 ಹಗರಣಗಳು ನಡೆದಿವೆ ಎಂದು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆರೋಪಿಸಿದ್ದು, ಈ ಹಗರಣಗಳ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಒದಗಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಸ್ಥಳ ಪರಿಶೀಲಿಸಿದ ನಾಯಕರು: ಶುಕ್ರವಾರದ ಕಾರ್ಯಕ್ರಮದಲ್ಲಿ ಭಾಗವಹಿಸಲು ಗುರುವಾರವೇ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಮೈಸೂರಿಗೆ ತೆರಳಿದ್ದಾರೆ. ಗುರುವಾರ ಸಂಜೆ ಸಿಎಂ, ಡಿಸಿಎಂ ಮೈದಾನಕ್ಕೆ ತೆರಳಿ ಕಾರ್ಯಕ್ರಮದ ರೂಪುರೇಷೆ ಬಗ್ಗೆ ಪರಿಶೀಲನೆ ನಡೆಸಿದರು.

ಬೇಕಿದ್ದರೆ ಸೈಟ್ ವಾಪಸು ಪಡೆಯಲಿ

ಮುಡಾ ಪ್ರಕರಣವನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಟೀಕಿಸುತ್ತಿರುವ ಬಿಜೆಪಿ-ಜೆಡಿಎಸ್ ನಾಯಕರ ವಿರುದ್ಧ ಆಕ್ರೋಶ ಹೊರಹಾಕಿರುವ ಸಿದ್ದರಾಮಯ್ಯ ಅವರು, ಖಾಸಗಿ ವಾಹಿನಿಯ ಸಂದರ್ಶನ ಒಂದರಲ್ಲಿ, ತಮ್ಮ ಪತ್ನಿಗೆ ಬಂದಿರುವ 14 ನಿವೇಶನಗಳು ಅಕ್ರಮ ಎನ್ನುವುದಾದರೆ ವಾಪಸು ಪಡೆಯಲಿ ಎಂದು ಸವಾಲು ಹಾಕಿದ್ದಾರೆ.

ನಗರಸಭಾ ಕಾರ್ಯಾಲಯ, ಅರಸೀಕೆರೆ.
ದೂ ಸಂ: 08174-232201 ಫ್ಯಾಕ್ಸ್ ನಂ: 08174-233274 ಈ ಮೇಲ್ ವಿಳಾಸ: itstaff_ulb_arasikere@yahoo.com ವೆಬ್‌ಸೈಟ್ ವಿಳಾಸ: www.arasikeretown.mrc.gov.in
ನಂ:ನ.ಸ.ಅ./ಕಿ.ಅ/ಸಿ.ಆರ್/81/2024-25 ದಿನಾಂಕ : 08/08/2024.
ಟೆಂಡರ್ ಪಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)
ಅರಸೀಕೆರೆ ನಗರಸಭಾ ವ್ಯಾಪ್ತಿಯಲ್ಲಿ 15ನೇ ಹಣಕಾಸು ಯೋಜನೆ ಮತ್ತು ಎಸ್.ಎಫ್.ಸಿ ಮುಕ್ತನಿಧಿ ಅನುದಾನದಡಿ ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ http// www.kppp.portal.gov.in ಪೋರ್ಟಲ್ ಮೂಲಕ ಆನ್ ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ವಿವರಗಳು ಈ ಕೆಳಕಂಡಂತ್ತಿರುತ್ತದೆ.

ಕ್ರ.ಸಂ	ಕಾಮಗಾರಿ ವಿವರ	ವರ್ಗ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1.	DMA/2024-25/WS/WORK_INDENT21554-CALL-2	ಪ.ಪಂಗಡ	8.25
2.	DMA/2024-25/WS/WORK_INDENT21555-CALL-2	ಸಾಮಾನ್ಯ	9.75
3.	DMA/2024-25/EL/WORK_INDENT25457	ಸಾಮಾನ್ಯ	28.60
4.	DMA/2024-25/WS/WORK_INDENT25454	ಸಾಮಾನ್ಯ	7.00
5.	DMA/2024-25/WS/WORK_INDENT25456	ಸಾಮಾನ್ಯ	8.00
6.	DMA/2024-25/WS/WORK_INDENT25453	ಸಾಮಾನ್ಯ	20.00
7.	DMA/2024-25/OW/WORK_INDENT25451	ಸಾಮಾನ್ಯ	6.51
8.	DMA/2024-25/OW/WORK_INDENT25449	ಸಾಮಾನ್ಯ	11.88
9.	DMA/2024-25/EL/WORK_INDENT25464	ಪ.ಜಾತಿ	12.50
10.	DMA/2024-25/EL/WORK_INDENT25467	ಪ.ಜಾತಿ	1.42
11.	DMA/2024-25/OW/WORK_INDENT25466	ಪ.ಪಂಗಡ	16.00
12.	DMA/2024-25/RD/WORK_INDENT25409	ಸಾಮಾನ್ಯ	8.32
13.	DMA/2024-25/RD/WORK_INDENT25410	ಸಾಮಾನ್ಯ	8.32
14.	DMA/2024-25/RD/WORK-INDEN25408	ಪ.ಜಾತಿ	8.32
15.	DMA/2024-25/EL/WORK_INDENT25470	ಸಾಮಾನ್ಯ	10.00
16	DMA/2024-25/WS/WORK_INDENT25460	ಸಾಮಾನ್ಯ	10.00

ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26-08-2024 ಸಂಜೆ 17:30 ಗಂಟೆಗೆ.
ಸಹಿ/-ಪೌರಾಯುಕ್ತರು ನಗರಸಭೆ ಅರಸೀಕೆರೆ.
ವಾಸಾಸಂಇ/ಹಿಸನಿ/ಹಾಸನ/275/ಕೆಎಸ್‌ಎಂಸಿಎ/2024-25

ಕಾರುಗಳ ಡಿಕ್ಕಿ: ಆರು ಮಂದಿಗೆ ಗಾಯ

ಕೊಲ್ಹಾರ: ವಿಜಯಪುರ ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿಯ ಹಳ್ಳದ ಗೆಣ್ಣೂರು ಕ್ರಾಸ್ ಹತ್ತಿರ ಎರಡು ಕಾರುಗಳು ಮುಖಾಮುಖಿ ಡಿಕ್ಕಿಯಾಗಿ ಆರು ಜನ ಗಾಯಗೊಂಡಿರುವ ಘಟನೆ ಗುರುವಾರ ನಡೆದಿದೆ. ವಿಜಯಪುರದಿಂದ ಬಾಗಲಕೋಟೆ ಹಾಗೂ ಬಾಗಲಕೋಟೆಯಿಂದ ವಿಜಯಪುರದ ಕಡೆಗೆ ಹೋಗುವ ಕಾರುಗಳು ಮುಖಾಮುಖಿ ಡಿಕ್ಕಿಯಾಗಿವೆ. ಪರಿಣಾಮ 6 ಜನರಿಗೆ ಗಾಯಗಳಾಗಿದ್ದು, ವಿಜಯಪುರ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗೆ ರವಾನಿಸಲಾಗಿದೆ. ಘಟನೆಯಲ್ಲಿ ಗಾಯಗೊಂಡಿರುವವರ ವಿವರಗಳು ತಿಳಿದು ಬಂದಿಲ್ಲ. ಘಟನಾ ಸ್ಥಳಕ್ಕೆ ಕೊಲ್ಹಾರ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಟ್ವೀಟೂ-ಖಾರಾ

ಕಾಂಗ್ರೆಸ್ ಪಕ್ಷ
ಕರ್ನಾಟಕ ಘಟಕ

ಕರ್ನಾಟಕ ಕಂಡ ಅತ್ಯಂತ ಸಾಚಾ ರಾಜಕಾರಣಿ ಎಂದುಕೊಳ್ಳುವ ಎಚ್.ಡಿ. ಕುಮಾರಸ್ವಾಮಿ ಅವರ ವಿರುದ್ಧ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ರಾಜ್ಯಪಾಲರ ಅನುಮತಿ ಕೋರಿತ್ತು ಕರ್ನಾಟಕ ಲೋಕಾಯುಕ್ತ.
ಬ್ರದರ್ ಸ್ವಾಮಿಗಳೇ . ಕರ್ನಾಟಕದ ಭೂಮಿಯ ಒಡಲನ್ನು ಬಗೆಯಲು ನಿಮಗೆ ಎಲ್ಲಿಲ್ಲದ ಆಸಕ್ತಿ ಎನ್ನುವುದು ಬಹಳ ಹಿಂದೆಯೇ ನಿರೂಪಿತವಾಗಿದೆಯಲ್ಲವೇ ? ಈಗ ಕೇಂದ್ರ ಸಚಿವರಾಗಲು ಅದೆಷ್ಟು ಲಾಬಿ ನಡೆಸಿದ್ದಿರೋ ಆ ದೇವರಿಗೇ ಗೊತ್ತು..!

ಕೀರ್ತನ್ ಕೃಷ್ಣ
ಕೆ.ಆರ್. ನಗರ

2013-18ರಲ್ಲಿ ನಿಮ್ಮದೇ ಪಕ್ಷ ಅಧಿಕಾರದಲ್ಲಿತ್ತು.ಆಗ ಏನ್ ಮಾಡ್ತಾ ಇದ್ರಿ..? ಆರೋಪ ನಿಜವಾಗಿದ್ರೆ ಇಷ್ಟು ಹೊತ್ತಿಗೆ ಎಚ್‌ಡಿಕೆಗೆ ಶಿಕ್ಷೆ ಆಗಬೇಕು. ಯಾಕ್ ಆಗಿಲ್ಲ.? ನಿಮ್ಮ ಈ ತರಹದ ಟ್ವೀಟ್ ನೋಡಿದರೆ ಪಾದಯಾತ್ರೆ ಬಿಸಿ ಮುಟ್ಟಿರೋ ಹಾಗೆ ಕಾಣುತ್ತಿದೆ.

ಸಮಾಚಾರ ಸಣ್ಣದಲ್ಲ

ಬಾಗಲಕೋಟೆಯ ಯೋಧ ಹುತಾತ್ಮ

ಬಾಗಲಕೋಟೆ: ಪಶ್ಚಿಮ ಬಂಗಾಳದಲ್ಲಿ ಬಾಗಲಕೋಟೆ ಮೂಲದ ಬಿಎಸ್‌ಎಫ್ ಯೋಧರೊಬ್ಬರು ಹುತಾತ್ಮರಾಗಿದ್ದಾರೆ. ಬುಧವಾರ ಬೆಳಗ್ಗೆ ಗುಂಡು ತಗುಲಿ

ಅವರು ಹುತಾತ್ಮರಾಗಿದ್ದಾರೆ ಎಂದು ಸೇನೆಯ ಮೂಲಗಳು ತಿಳಿಸಿವೆ. ಹುತಾತ್ಮ ಯೋಧನನ್ನು ಗುಳೇದ ಗುಡ್ಡದ ತಾಲ್ಲೂಕಿನ ಕಟಗೇರಿ ಉಮೇಶ್ ದಬಗಲ್ (33) ಎಂದು ಗುರುತಿಸಲಾಗಿದೆ. ಅವರು 13 ವರ್ಷಗಳಿಂದ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಪ್ರಸ್ತುತ ಅವರು ಬಿಎಸ್‌ಎಫ್ 05 ಬಟಾಲಿಯನ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಶುಕ್ರವಾರ ಅವರ ಪಾರ್ಥಿವ ಶರೀರ ಸ್ವಗ್ರಾಮಕ್ಕೆ ತಲುಪಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೇಣು ಬಿಗಿದು ವಿದ್ಯಾರ್ಥಿ ಆತ್ಮಹತ್ಯೆ

ಬಂಟ್ವಾಳ: ಸ್ಪಷ್ಟವಾದ ಕಾರಣವಿಲ್ಲದೆ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಯೋರ್ವ ಮನೆಯ ಬಚ್ಚಲು ಕೋಣೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಬುಧವಾರ ರಾತ್ರಿ ವೇಳೆ ನಡೆದಿದೆ. ಬೆಂಜನ ಪದವು ಕರಾವಳಿ ಸೈಟ್ ನಿವಾಸಿ ಉದಯ ಆಚಾರ್ಯ ಅವರ ಮಗ ಭವಿಷ್ಯ ಆಚಾರ್ಯ (15) ಆತ್ಮಹತ್ಯೆ ಮಾಡಿಕೊಂಡ ಬಾಲಕ. ಬಡಕಬೈಲಿನ ಖಾಸಗಿ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯಾಗಿದ್ದ ಈತ ಕಲಿಕೆ ವಿಚಾರದಲ್ಲಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬುದನ್ನು ಮನೆಯವರು ಶಂಕಿಸಿದ್ದಾರೆ. ಬುಧವಾರ ರಾತ್ರಿ ಸ್ನಾನಮಾಡಲೆಂದು ಬಚ್ಚಲುಮನೆಗೆ ತೆರಳಿದ ಮಗ ಎಷ್ಟು ಹೊತ್ತಾದರೂ ಹೊರಗೆ ಬರದಿದ್ದುದನ್ನು ಕಂಡ ತಾಯಿ ಬಾಗಿಲು ಬಡಿದರೂ ತೆಗೆಯದ ಹಿನ್ನೆಲೆಯಲ್ಲಿ ಬಾಗಿಲು ಮುರಿದು ಒಳಗೆ ನುಗ್ಗಿದಾಗ ಈತ ನೇಣಿಗೆ ಶರಣಾಗಿರುವುದು ಗೊತ್ತಾಗಿದೆ. ಕೂಡಲೇ ಬಾಲಕನನ್ನು ತುಂಬೆ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಪರೀಕ್ಷೆ ನಡೆಸಿದಾಗ ಆತ ಮೃತಪಟ್ಟ ಬಗ್ಗೆ ವೈದ್ಯರು ತಿಳಿಸಿದ್ದಾರೆ. ಬಂಟ್ವಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆಗಳ ಸುರಕ್ಷತೆಗೆ ಮೈಲಿಗೂಲಿಗಳ ನೇಮಕ

ಶಿರಹಟ್ಟಿ: ರಾಜ್ಯದಲ್ಲಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಸುರಕ್ಷತೆಗೆ ಪ್ರತಿ 30 ಕಿ.ಮೀ.ಗೆ ಒಬ್ಬರಂತೆ 1,500 ಮಂದಿ ಮೈಲುಗೂಲಿಗಳನ್ನು ನೇಮಕ ಮಾಡಲಾಗುವುದು' ಎಂದು ಲೋಕೋಪ ಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಸ್ತೆಯಲ್ಲಿ ನೀರು ನಿಂತರೆ ತಕ್ಷಣ ಹೊರಹಾಕುವುದು, ಗುಂಡಿ ಬಿದ್ದರೆ ಮುಚ್ಚುವುದು, ಒತ್ತುವರಿ ಆಗದಂತೆ ನಿಗಾ ವಹಿಸುವುದು ಅವರ ಕೆಲಸ. ಇದು ಯಶಸ್ವಿಯಾದರೆ, ಮುಂದಿನ ದಿನಗಳಲ್ಲಿ ಇನ್ನಷ್ಟು ಮೈಲುಗೂಲಿಗಳನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

{ **ಪ್ರಮೋದ್ ಮುತಾಲಿಕ್** } ಶ್ರೀರಾಮಸೇನೆ ಮುಖ್ಯಸ್ಥ

ಹಿಂಸಾಚಾರ ಪೀಡಿತ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಹಾಗೂ ಅವರ ಆಸ್ತಿಪಾಸ್ತಿ, ಮಂದಿರಗಳ ಮೇಲಿನ ದಾಳಿ ಕುರಿತು ಪ್ರಧಾನಮಂತ್ರಿ ನರೇಂದ್ರ ಮೋದಿ ಮೌನ ಸರಿಯಲ್ಲ. ಹಿಂದೂಗಳ ಮೇಲಿನ ಹಲ್ಲೆ, ಭಾರತದ ಧ್ವಜಕ್ಕೆ ಅಗೌರವ ತೋರಿ ರವೀಂದ್ರನಾಥ ಟ್ಯಾಗೋರ್ ಅವರ ಪ್ರತಿಮೆಯನ್ನು ಧ್ವಂಸಗೊಳಿಸಿರುವುದು ಅತ್ಯಂತ ಖಂಡನೀಯ.



ಸಿದ್ದರಾಮಯ್ಯ ರಾಜೀನಾಮೆ ನೀಡುವವರೆಗೂ ಹೋರಾಟ ನಿಲ್ಲದು: ವಿಜಯೇಂದ್ರ

ರಾಜ್ಯ ಸರಕಾರದಿಂದ ದಲಿತರಿಗೆ ಅನ್ಯಾಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ದೋಸ್ತಿ ಪಡೆ ನಡೆಸುತ್ತಿರುವ ಮೈಸೂರು ಚಲೋ ಪಾದಯಾತ್ರೆ 6ನೇ ದಿನಕ್ಕೆ ಕಾಲಿಟ್ಟಿದ್ದು, ತೂಬಿನಕೆರೆ ಗ್ರಾಮದಿಂದ ಪಾದಯಾತ್ರೆ ಪ್ರಾರಂಭವಾಗಿ ಸಂಜೆ ಶ್ರೀರಂಗಪಟ್ಟಣದಲ್ಲಿ ಅಂತ್ಯಗೊಂಡಿದ್ದು, ಪಾದಯಾತ್ರಿಗಳು ಅಲ್ಲೇ ವಾಸ್ತವ್ಯ ಹೂಡಿದ್ದಾರೆ.

ತೂಬಿನಕೆರೆಯಲ್ಲಿ ಪಾದಯಾತ್ರೆಗೆ ಶಂಖನಾದ ಮಾಡುವ ಮೂಲಕ ಚಾಲನೆ ನೀಡಲಾಗಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಸಂಸದ ಬಿ.ವೈ. ರಾಘವೇಂದ್ರ, ಶಾಸಕ ಡಾ. ಸಿ.ಎನ್. ಅಶ್ವತ್ಥ್ ನಾರಾಯಣ ಮತ್ತಿತರ ಮುಖಂಡರು ಭಾಗವಹಿಸಿದ್ದರು.ಎರಡೂ ಪಕ್ಷಗಳ ಶಾಸಕರು, ಮುಖಂಡರು, ಕಾರ್ಯಕರ್ತರು ಭಾಗಿಯಾಗಿದ್ದರು.

ಸರಕಾರದ ವಿರುದ್ಧ ಘೋಷಣೆ ಕೂಗಿದ ಬಿಜೆಪಿ-ಜೆಡಿಎಸ್ ಬಾವುಟ ಹಿಡಿದು ಉತ್ಸಾಹ ಹುರುಪಿನಿಂದ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡುವವರೆಗೂ ಹೋರಾಟ ನಿಲ್ಲುವುದಿಲ್ಲ. ಈ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಿದ್ದಾರೆ. ಅವರು ರಾಜೀನಾಮೆ ನೀಡಲೇಬೇಕು ಎಂದು ಪಾದಯಾತ್ರಿಗಳು ಕೂಗುತ್ತಾ ಸರಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗುತ್ತಾ, ಬಿಜೆಪಿ ಹಾಗೂ ಜೆಡಿಎಸ್ ಪರ ಜೈಕಾರದ ಘೋಷಣೆಗಳನ್ನು ಹಾಕುತ್ತಾ ಸಾಗಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ವಾಲ್ಮೀಕಿ ನಿಗಮದ ಹಗರಣ, ಮೂಡ ಹಗರಣ ಮತ್ತು ಎಸ್ಸಿ, ಎಸ್ಟಿಗಳಿಗೆ ಮೀಸಲಿಟ್ಟ ಹಣ ಬೇರೆ ಉದ್ದೇಶಕ್ಕೆ ಬಳಸಿದ ಪ್ರಕರಣದಲ್ಲಿ ತಪ್ಪಿತಸ್ಥರು ಮುಖ್ಯಮಂತ್ರಿಯೇ ಇರಲಿ; ಅಥವಾ ಯಾರೇ ಇರಲಿ. ಅವರಿಗೆ ಸರಿಯಾದ ಶಿಕ್ಷೆ ಆಗಲೇಬೇಕು. ಆಗ ಮಾತ್ರ ಮುಂದಿನ ದಿನಗಳಲ್ಲಿ ಪರಿಶಿಷ್ಟರ ಸಮುದಾಯಕ್ಕೆ ಮೀಸಲಿಟ್ಟ ಒಂದು ರೂಪಾಯಿ ಲೂಟಿ ಮಾಡಲೂ ಹಿಂದೆ ಮುಂದೆ ನೋಡುತ್ತಾರೆ. ಇವರಿಗೆ ಶಿಕ್ಷೆ ಲಭಿಸಿದಾಗ ಬುದ್ಧಿ ಬರಲಿದೆ ಎಂದು ತಿಳಿಸಿದ್ದಾರೆ.

ನಾಡಿನ ದೀನದಲಿತರು, ಪರಿಶಿಷ್ಟ ಜಾತಿ, ಪಂಗಡಗಳಿಗೆ ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರ ಅನ್ಯಾಯ ಮಾಡಿದೆ. ಅವರ ಅಭಿವೃದ್ಧಿಗೆ ಮೀಸಲಿಟ್ಟ ಹಣ ಲೂಟಿ ಮಾಡಿದ್ದಾರೆ. ಅಂಥ ಸಮುದಾಯಗಳಿಗೆ ಹಣ ವಾಪಸ್ ತರಬೇಕು. ಅವರ ಅಭಿವೃದ್ಧಿಗಾಗಿಯೇ ಹಣ ಬಳಕೆ ಆಗಬೇಕು ಎಂಬ ಉದ್ದೇಶ ತಮ್ಮದು. ರಾಜ್ಯದ ಬಿಜೆಪಿ ಅಧ್ಯಕ್ಷನಾಗಿ ಪರಿಶಿಷ್ಟ ಸಮುದಾಯಗಳಿಗೆ ನ್ಯಾಯ ದೊರಕಿಸಿಕೊಡಲು ಈ ಹೋರಾಟ ಕೈಗೆತ್ತಿಕೊಂಡಿದ್ದು, ನಿಮ್ಮ ಧ್ವನಿಯಾಗಿ ನಾವು ಇವತ್ತು ಹೋರಾಟ ಮಾಡುತ್ತಿದ್ದೇವೆ. ದಲಿತ ಸಮುದಾಯ, ದಲಿತ ಸಂಘಟನೆಗಳು ಧ್ವನಿ ಎತ್ತದೆ ಇರುವ ಕಾರಣ ಅನಿವಾರ್ಯವಾಗಿ ನಾವು ಹೋರಾಟಕ್ಕೆ ಇಳಿದಿದ್ದೇವೆ. ದಲಿತ ಸಮುದಾಯದಲ್ಲಿ ಮುಗ್ಧರಿದ್ದಾರೆ. ಅವರಿಗೆ ಅನ್ಯಾಯ ಆಗಬಾರದು. ವಿಪಕ್ಷವಾಗಿ ಬಿಜೆಪಿ- ಜೆಡಿಎಸ್ ಹೋರಾಟಕ್ಕೆ ಇಳಿಯದೆ ಇದ್ದಲ್ಲಿ ದೇವರು ಮೆಚ್ಚುವುದಿಲ್ಲ ಎಂಬ ಉದ್ದೇಶದಿಂದ ಹೋರಾಟವನ್ನು ಕೈಗೆತ್ತಿಕೊಂಡಿದ್ದಾಗಿ ವಿವರಿಸಿದರು.



ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ನಡೆಸುತ್ತಿರುವ ಮೈಸೂರು ಚಲೋ ಪಾದಯಾತ್ರೆಯಲ್ಲಿ ದೋಸ್ತಿ ನಾಯಕರು ಶ್ರೀರಂಗಪಟ್ಟಣದಲ್ಲಿ ಶಕ್ತಿ ಪ್ರದರ್ಶಿಸಿದರು.

ಯಾರೇ ಕಿಡಿಗೇಡಿಗಳು ಬಂದು ಏನೇ ಚೇಷ್ಟೆ ಮಾಡಿದರೂ ಕಾರ್ಯಕರ್ತರು ತಾಳ್ಮೆ ಕಳೆದುಕೊಳ್ಳಬಾರದು. ನಮ್ಮ ಉದ್ದೇಶ ಪಾದಯಾತ್ರೆ, ನಮ್ಮ ಹೋರಾಟ ಮೂಡಾ, ವಾಲ್ಮೀಕಿ ಹಗರಣಗಳ ವಿರುದ್ಧ ಹೋರಾಟವಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಮತ್ತು ಮಾಜಿ ಪ್ರಧಾನಿ ದೇವೇಗೌಡರ ಸಂಬಂಧ ತುಂಬಾ ಅತ್ಯುತ್ತಮವಾಗಿದೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಯಾವುದೇ ಕಾರಣಕ್ಕೂ ಬೇರೆ ಬೇರೆ ರೀತಿಯ ಘಟನೆಗಳಿಗೆ ಅವಕಾಶ ಕೊಡಬಾರದು, ಕಾರ್ಯಕರ್ತರು ತಾಳ್ಮೆಯಿಂದ ಸಮಾಧಾನಕರವಾಗಿ ವರ್ತನೆ ಮಾಡಬೇಕು.
-**ನಿಖಿಲ್ ಕುಮಾರಸ್ವಾಮಿ** ಯುವ ಜನತಾದಳ ಅಧ್ಯಕ್ಷ

ಮುಖ್ಯಮಂತ್ರಿಗಳೇನು ಮುಚ್ಚಿಟ್ಟಿದ್ದಾರೋ ಅದನ್ನು ಮೊದಲು ಬಿಚ್ಚಿಡಲಿ. ಮೈಸೂರು ಮುಡಾ ಪ್ರಕರಣದಲ್ಲಿ ಸಾವಿರಾರು ಕೋಟಿ ಬೆಲೆಬಾಳುವ ನಿವೇಶನ ಲೂಟಿ ಮಾಡಿದ ಇವರ ಸರಕಾರ ರಾಜ್ಯದ ಜನರಿಗೆ ಸತ್ಯವನ್ನು ಬಿಚ್ಚಿಡಲಿ. ವಾಲ್ಮೀಕಿ ನಿಗಮದ ಹಗರಣದಲ್ಲಿ ಮುಖ್ಯಮಂತ್ರಿಗಳ ಪಾಲೇನಿದೆ, ಪಾತ್ರ ಏನು, ಎಷ್ಟು ಪಾಲು ಹೈಕಮಾಂಡಿಗೆ, ರಾಹುಲ್ ಅವರ ಕುಟುಂಬಕ್ಕೆ ಹೋಗಿದೆ ಎಂದು ಬಿಚ್ಚಿಡಲಿ. ಆಮೇಲೆ ನಮ್ಮದರ ಬಗ್ಗೆ ಚಿಂತನೆ ಮಾಡಲಿ.
- **ಬಿ.ವೈ.ವಿಜಯೇಂದ್ರ** ಬಿಜೆಪಿ ರಾಜ್ಯಾಧ್ಯಕ್ಷ

ಹೋರಾಟಕ್ಕೆ ದಲಿತರು ಸಂಪೂರ್ಣ ಬೆಂಬಲ ಇರಲಿ

ಹೋರಾಟಕ್ಕೆ ದಲಿತರು ಸಂಪೂರ್ಣ ಬೆಂಬಲ ಇರಬೇಕು. ಇದೇ 10ರಂದು ಬೆಳಿಗ್ಗೆ 10.30ಕ್ಕೆ ಮೈಸೂರಿನಲ್ಲಿ 1 ಲಕ್ಷಕ್ಕೂ ಹೆಚ್ಚು ಸಂಖ್ಯೆಯಲ್ಲಿ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಿದ್ದು, ರಾಜ್ಯದ ಮೂಲೆಮೂಲೆಗಳಿಂದ ಜನರು ಬರಲಿದ್ದು, ಆ ದಿನ ಪರಿಶಿಷ್ಟ ಸಮುದಾಯದ ಪ್ರತಿನಿಧಿಗಳು, ಸಂಘ, ಸಂಸ್ಥೆಗಳು ದೊಡ್ಡ ಸಂಖ್ಯೆಯಲ್ಲಿ ಬಂದು ಹೋರಾಟಕ್ಕೆ ಬೆಂಬಲ ಕೊಡಬೇಕು. ನಮಗೆ ಶಕ್ತಿ ತುಂಬಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮನವಿ ಮಾಡಿದರು.

ಆ.30ರಿಂದ ಮೂರು ದಿನ ಸಮ್ಮೇಳನ ಆಯೋಜನೆ

ಅಕ್ಕ ಸಮ್ಮೇಳನದಲ್ಲಿ ಥಟ್ ಅಂತ ಹೇಳಿ!

ವರ್ಜೀನಿಯಾ (ಅಮೆರಿಕ): ಆ.30ರಿಂದ ಮೂರುದಿನಗಳ ಕಾಲ ನಡೆಯಲಿರುವ 12ನೇ ಅಕ್ಕ ವಿಶ್ವ ಸಮ್ಮೇಳನದಲ್ಲಿ ಈ ಬಾರಿ ಥಟ್ ಅಂತ ಹೇಳಿ ಕ್ವಿಜ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ರಿಚ್ಮಂಡ್ ಕನ್ನಡ ಸಂಘ ಮತ್ತು ವಾಷಿಂಗ್ಟನ್ ಡಿಸಿ ಪ್ರದೇಶದ ಕಾವೇರಿ ಕನ್ನಡ ಸಂಘಗಳ ಸಹಯೋಗದಲ್ಲಿ ಆಯೋಜಿಸಿರುವ ಸಮ್ಮೇಳನದಲ್ಲಿ ಈ ಬಾರಿ 'ಥಟ್ ಅಂತ ಹೇಳಿ!' ರಸಪ್ರಶ್ನೆ ಕಾರ್ಯಕ್ರಮ ಪ್ರಮುಖ ಆಕರ್ಷಣೆಯಾಗಲಿದೆ. ದೂರದರ್ಶನ ಚಂದನ ವಾಹಿನಿಯಲ್ಲಿ ನಿರಂತರ ಪ್ರಸಾರವಾಗುತ್ತ ದಾಖಲೆ ನಿರ್ಮಿಸಿರುವ ಈ ಜನಪ್ರಿಯ ಕಾರ್ಯಕ್ರಮದ ನಿರ್ವಾಹಕ ಡಾ. ನಾ. ಸೋಮೇಶ್ವರ ಅವರನ್ನು 'ಅಕ್ಕ' ಸಮ್ಮೇಳನದ ವಿಶೇಷ ಅತಿಥಿಯಾಗಿ ಆಹ್ವಾನಿಸಲಾಗಿದೆ ಎಂದು ತಿಳಿಸಲಾಗಿದೆ.

ಸಮ್ಮೇಳನಾರ್ಥಿಗಳಿಗಾಗಿ ಥಟ್ ಅಂತ ಹೇಳಿ ಕ್ವಿಜ್‌ನ ಪ್ರವೇಶದ ಸುತ್ತು ಸಮ್ಮೇಳನ ನಡೆಯುವ ಸ್ಥಳದಲ್ಲೇ ಲಿಖಿತ ಪರೀಕ್ಷೆಯ ಮೂಲಕ ನಡೆಯುತ್ತದೆ. ಅದರಲ್ಲಿ ಆಯ್ಕೆಯಾಗಿ ಬರುವ ಎಂಟು ಮಂದಿಯನ್ನು ತಲಾ ನಾಲ್ಕರ ಎರಡು ಗುಂಪುಗಳಾಗಿ, ಟಿವಿಯಲ್ಲಿ ನಡೆಯುವಂತೆಯೇ ಕ್ವಿಜ್ ಕಾರ್ಯಕ್ರಮದ ಮೂಲಕ ಮೌಖಿಕ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಇದರಲ್ಲಿ ಹೆಚ್ಚು ಅಂಕ ಗಳಿಸುವ ತಲಾ ಇಬ್ಬರು ಅಂತಿಮ ಸುತ್ತಿಗೆ ಆಯ್ಕೆಯಾಗುತ್ತಾರೆ.

ಸರಿಯುತ್ತರಕ್ಕೆ ಕನ್ನಡ ಪುಸ್ತಕ ಬಹುಮಾನ

ಒಟ್ಟು ನಾಲ್ವರು ಸ್ಪರ್ಧಿಗಳ ಅಂತಿಮ ಸುತ್ತನ್ನು ಸಮ್ಮೇಳನ ಸಭಾಂಗಣದ ಭವ್ಯ ವೇದಿಕೆಯಲ್ಲೇ ನಡೆಸುವ ಯೋಜನೆಯಿದೆ. ಥಟ್ ಅಂತ ಹೇಳಿ ಕಾರ್ಯಕ್ರಮದ ಅನನ್ಯ ಶೈಲಿಯಂತೆ ಇಲ್ಲಿಯೂ ಪ್ರತಿಯೊಂದು ಸರಿಯುತ್ತರಕ್ಕೆ ಒಂದು ಉತ್ತಮ ಕನ್ನಡ ಪುಸ್ತಕ ಬಹುಮಾನ ಇರುತ್ತದೆ. ಇದಕ್ಕಾಗಿ ಸಾಧ್ಯವಾದಷ್ಟು ಮಟ್ಟಿಗೆ ಅಮೆರಿಕ ಕನ್ನಡಿಗ ಲೇಖಕ-ಲೇಖಕಿಯರ ಪ್ರಕಟಿತ ಪುಸ್ತಕಗಳನ್ನೂ ಆಯ್ದುಕೊಳ್ಳಲಾಗಿದೆ. ಅಂತೆಯೇ ಒಬ್ಬೊಬ್ಬರೇ ಪ್ರತ್ಯೇಕವಾಗಿ ಸ್ಪರ್ಧಿಸುವುದಕ್ಕಿಂತ ಗಂಡ-ಹೆಂಡತಿ, ಅಕ್ಕ-ತಂಗಿ, ತಾಯಿ-ಮಗಳು ರೀತಿಯಲ್ಲಿ ಕೌಟುಂಬಿಕ ಬಂಧದ ಒಂದೊಂದು ತಂಡದಂತೆ ಸ್ಪರ್ಧಿಸುವುದನ್ನು ಉತ್ತೇಜಿಸಲಾಗಿದೆ ಎಂದು ಸಮ್ಮೇಳನದ ಸಂಚಾಲಕರಾದ ಷಣ್ಮುಗಂ ವೆಂಕಟರಂಗನ್ ಮತ್ತು ಹರಿದಾಸ್ ಲಹರಿ ತಿಳಿಸಿದ್ದಾರೆ.

ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಸಂಚು

ಮಂಡ್ಯ: ಬಾಂಗ್ಲಾದೇಶದಂತೆ ಭಾರತದಲ್ಲೂ ಕ್ಷೋಭೆ, ಸಂಘರ್ಷ ಉಂಟಾಗಬಹುದು ಮತ್ತು

ಬಾಂಗ್ಲಾದಂತೆ ಪ್ರಧಾನಿ ಮೋದಿ ಅವರ ಮನೆಗೂ ಜನ ನುಗ್ಗುತ್ತಾರೆ ಎಂದು ಕಾಂಗ್ರೆಸ್ ನಾಯಕರಾದ ಸಲ್ಮಾನ್ ಖುರ್ಷಿದ್ ಮತ್ತು ಸಜ್ಜನ್ ಸಿಂಗ್ ಅವರು ನೀಡಿರುವ ಹೇಳಿಕೆಗಳನ್ನು ಗಂಭೀರವಾಗಿ ಪರಿಗಣಿಸಿ, ಇವರಿಬ್ಬರ ವಿರುದ್ಧ ಮೊಕದ್ದಮೆ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಸಚಿವ ಸಿ.ಟಿ. ರವಿ ಒತ್ತಾಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಇವರಿಬ್ಬರ ಹೇಳಿಕೆಗಳನ್ನು ಗಮನಿಸಿದರೆ, ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಸಂಚು ನಡೆದಿದೆ ಮತ್ತು ಜನರಿಂದ ಆಯ್ಕೆಯಾದ ಎನ್‌ಡಿಎ ಸರಕಾರವನ್ನು ಬೀಳಿಸಲು ತಂತ್ರ ಹೂಡಿದ್ದಾರೆ ಅನಿಸುತ್ತದೆ ಎಂದು ಮಾಜಿ ಸಚಿವ ಸಿ.ಟಿ. ರವಿ ಕಿಡಿ ಕಾರಿದರು.

ಮೀನುಗಾರರ ಬೋಟ್‌ನಲ್ಲಿ ಸ್ಥಳಕ್ಕೆ ತೆರಳಿದ ತಂಡ

ಕಾಳಿನದಿ ಸೇತುವೆ ಕುಸಿತ ಅಧಿಕಾರಿಗಳಿಂದ ಪರಿಶೀಲನೆ

ದೆಹಲಿಯಿಂದ ಆಗಮಿಸಿದ ಎನ್‌ಎಚ್‌ಎಐನ ಅಧಿಕಾರಿಗಳು ಕಾರವಾರದ ಕಾಳಿ ನದಿ ಸೇತುವೆ ಕುಸಿದ ಸ್ಥಳಕ್ಕೆ ಜಿಲ್ಲಾಧಿಕಾರಿಯೊಂದಿಗೆ ತೆರಳಿ ಪರಿಶೀಲನೆ ನಡೆಸಿದರು.

ಕಾರವಾರ: ಕಾಳಿನದಿ ಸೇತುವೆ ಕುಸಿದ ಪ್ರದೇಶಕ್ಕೆ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಅವರೊಂದಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಹಾಗೂ ಐಆರ್‌ಬಿ ಅಧಿಕಾರಿಗಳು ತೆರಳಿ ಪರಿಶೀಲನೆ ನಡೆಸಿದರು.

ಹೊಸ ಸೇತುವೆ ಮೇಲೆ ದ್ವಿಪಥ ಓಡಾಟಕ್ಕೆ ಅವಕಾಶ ನೀಡಲು ಸೇತುವೆಯ ದೃಢತೆ ಕುರಿತು ಪ್ರಮಾಣಪತ್ರ ನೀಡುವಂತೆ ಜಿಲ್ಲಾಧಿಕಾರಿ ಎನ್‌ಎಚ್‌ಎಐ ಅಧಿಕಾರಿಗಳಿಗೆ ಮನವಿ ಮಾಡಿದರು.

ಸದ್ಯ ಸೇತುವೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಹೊರತುಪಡಿಸಿ ಎಲ್ಲ ವಾಹನಗಳ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಸರಕು ಸಾಗಣೆ ವಾಹನಗಳ ಓಡಾಟಕ್ಕೂ ಅವಕಾಶ ನೀಡಿದ ಪೊಲೀಸರು ಎರಡೂ ಬದಿ ಬ್ಯಾರಿಕೇಡ್ ಅಳವಡಿಸಿ ನಿಯಂತ್ರಿತವಾಗಿ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

ಲಿಖಿತ ಸುರಕ್ಷತಾ ಪತ್ರಕ್ಕೆ ಸೂಚನೆ

ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಮಾತನಾಡಿ,ಎನ್‌ಎಚ್‌ಎಐ ತಜ್ಞರ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಾವು ಹೊಸ ಸೇತುವೆ ಮೇಲೆ ಎರಡು ಬದಿಯಿಂದ ಭಾರಿ ವಾಹನಗಳ ಓಡಾಟದ ಬಗ್ಗೆ ಫಿಟ್ನೆಸ್ ಪ್ರಮಾಣಪತ್ರ ಕೇಳಿದ್ದೆವು. ಅವರು ಮೌಖಿಕವಾಗಿ ಹೊಸ ಸೇತುವೆ ಸುರಕ್ಷತೆ ಬಗ್ಗೆ ತಿಳಿಸಿದ್ದಾರೆ. ನಾವು ಲಿಖಿತವಾಗಿ ಕೊಡುವಂತೆ ಸೂಚನೆ ನೀಡಿದ್ದು, ಅವರು ಕೊಟ್ಟ ಬಳಿಕ ಎಲ್ಲ ವಾಹನಗಳ ಓಡಾಟಕ್ಕೆ ಎರಡು ಬದಿ ಅವಕಾಶ ನೀಡಲಾಗುವುದು. ಪ್ರಾಥಮಿಕ ವರದಿಯಲ್ಲಿ ಓಡಾಡಬಹುದು ಎಂದು ತಿಳಿಸಿದ್ದರಿಂದ ಎಲ್ಲ ವಾಹನಗಳ ಸಂಚಾರಕ್ಕೆ ಅವಕಾಶ ನೀಡಲಾಗಿದೆ ಎಂದು ಹೇಳಿದರು.

ಪಾದಯಾತ್ರೆಯ ಬಗ್ಗೆ ಎಲ್ಲಿ ಸದ್ದಾಗುತ್ತಿದೆ | ಎಚ್‌ಡಿಕೆ ಆರೋಪಗಳಿಗೆ ಸಾಕ್ಷಿ ಎಲ್ಲಿ: ಡಿಕೆಶಿ ಪ್ರಶ್ನೆ

ಬಿಜೆಪಿ-ಜೆಡಿಎಸ್ ಪಾದಯಾತ್ರೆಗೆ ಜನ ಬೆಂಬಲವಿಲ್ಲ

ಬೆಂಗಳೂರು: ಜನಪರ ಉದ್ದೇಶ, ಅರ್ಥಗರ್ಭಿತ ಕಾರಣವಿಲ್ಲದ ಬಿಜೆಪಿ, ಜೆಡಿಎಸ್ ಪಾದಯಾತ್ರೆಗೆ ಜನರ ಸ್ಪಂದನೆಯಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್.ಎಂ ಕೃಷ್ಣ ಅವರು ಕಾವೇರಿ ನೀರಿಗಾಗಿ ಪಾದಯಾತ್ರೆ ಮಾಡಿದ್ದರು. ಭಾರತವನ್ನು ಒಂದುಗೂಡಿಸಲು, ಬೆಲೆ ಏರಿಕೆ, ನಿರುದ್ಯೋಗ ಖಂಡಿಸಿ, ಭ್ರಷ್ಟಾಚಾರ ವಿರುದ್ಧ ರಾಹುಲ್ ಗಾಂಧಿ ಅವರು ಭಾರತ ಜೋಡೋ ಯಾತ್ರೆ ಮಾಡಿದ್ದರು. ನಾವು ಗಣಿ ಲೂಟಿ ಖಂಡಿಸಿ ರಾಜ್ಯ ಹಾಗೂ ದೇಶದ ಸಂಪತ್ತು ರಕ್ಷಣೆಗೆ ಬಳ್ಳಾರಿ ಪಾದಯಾತ್ರೆ ಮಾಡಿದೆವು. ಕಾವೇರಿ ಜಲಾನಯನದ 10 ಜಿಲ್ಲೆಗಳಿಗೆ ನೀರು ಒದಗಿಸುವ ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ನಾವು ಪಾದಯಾತ್ರೆ ಮಾಡಿದ್ದೆವು. ಆದರೆ ಬಿಜೆಪಿಯವರು ಯಾವ ಕಾರಣಕ್ಕೆ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಬಿಜೆಪಿ, ಜೆಡಿಎಸ್ ಮಾಡುತ್ತಿರುವ ಪಾದಯಾತ್ರೆ ಸದ್ದಿದೆಯಾ? ಅವರ ಪಾದಯಾತ್ರೆಯ ವಿಚಾರವೇನು? ಹಿಂದುಳಿದ ವರ್ಗದ ನಾಯಕ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದನ್ನು ಸಹಿಸಲಾಗದೇ ಅವರು ಪಾದಯಾತ್ರೆ ಮಾಡುತ್ತಿದ್ದಾರೆ. ಅವರ ಪಾದಯಾತ್ರೆಯಲ್ಲಿ ಬೇರೆ ಏನಾದರೂ ಮಹತ್ವದ ವಿಚಾರವಿದೆಯೇ? ಅವರ ತಟ್ಟೆಯಲ್ಲೇ ಹೆಗ್ಗಣ ಬಿದ್ದಿದ್ದರೂ ಬೇರೆಯವರ ತಟ್ಟೆ ನೋಡುತ್ತಿದ್ದಾರೆ. ಅವರ ಪಾದಯಾತ್ರೆಗೆ ಜನರಿಂದ ಸ್ಪಂದನೆಯಿಲ್ಲ. ಪಾದಯಾತ್ರೆಯಲ್ಲಿ ಜನತಾದಳದ ಕಾರ್ಯಕರ್ತರೇ ಇಲ್ಲ. ಅವರು ಪಾದಯಾತ್ರೆಯಲ್ಲಿ ಹೊಡೆದಾಡಲಿ ಏನಾದರೂ ಮಾಡಿಕೊಳ್ಳಲಿ ಎಂದು ವ್ಯಂಗ್ಯವಾಡಿದರು.

ಕುಮಾರಸ್ವಾಮಿ ಆರೋಪಕ್ಕೆ ದಾಖಲೆ ಎಲ್ಲಿವೆ?

ಈಗ ಅವರ ಪಾದಯಾತ್ರೆ ವೇಳೆ ಬಿಜೆಪಿ ಕಾಲದಲ್ಲಿ ಆಗಿರುವ ಭ್ರಷ್ಟಾಚಾರದ ಆರೋಪಗಳ ಬಗ್ಗೆ ನಾವು ಕೇಳಿರುವ ಪ್ರಶ್ನೆಗಳಿಗೆ ಅವರು ಉತ್ತರಿಸಿಲ್ಲ. ಕುಮಾರಸ್ವಾಮಿ ಅವರಿಗೆ ಪ್ರತ್ಯೇಕವಾಗಿ ಒಂದಷ್ಟು ಪ್ರಶ್ನೆ ಮಾಡಿದ್ದೇವೆ. ಅವರು ನನ್ನ ಬಗ್ಗೆ ನಮ್ಮ ಕುಟುಂಬದವರ ಬಗ್ಗೆ ಏನಾದರೂ ಟೀಕೆ ಮಾಡಲಿ. ಅವರು ನನ್ನ ಯಾವುದೇ ಪ್ರಶ್ನೆಗಳಿಗೆ ಉತ್ತರ ನೀಡುತ್ತಿಲ್ಲ. ನಾನು ಅವರ ಸಹೋದರನ ಆಸ್ತಿ ಹೇಗೆ ಬಂತು, ಎಲ್ಲಿಂದ ಬಂತು ಎಂಬುದನ್ನು ಬಿಚ್ಚಿಡಬೇಕಲ್ಲವೇ? ನನ್ನ ಮೇಲೆ ಅವರು ಅನೇಕ ಆರೋಪ ಮಾಡುತ್ತಿದ್ದಾರೆ. ಆ ಆರೋಪಗಳಿಗೆ ದಾಖಲೆ ಬೇಕಲ್ಲವೇ? ಅವರ ಅಕ್ರಮಗಳ ಬಗ್ಗೆ ಮಾಧ್ಯಮಗಳೇ ವರದಿ ಮಾಡುತ್ತಿವೆಯಲ್ಲ ಎಂದು ಕಿಡಿಕಾರಿದರು.

ರಾಜ್ಯಪಾಲರ ನಡೆ ನೋಡಬೇಕು

ಕುಮಾರಸ್ವಾಮಿ ಅವರು 2007ರಲ್ಲಿ ಸಿಎಂ ಆಗಿದ್ದಾಗ ಸಂಡೂರು 550 ಎಕರೆ ಅಕ್ರಮವಾಗಿ ಗಣಿಗಾರಿಕೆಗೆ ನೀಡಿದ ಬಗ್ಗೆ ರಾಜ್ಯಪಾಲರು ವಿಚಾರಣೆಗೆ ನೀಡಲು ಹಿಂದೇಟು ನೀಡುತ್ತಿದ್ದಾರೆ ಎಂದು ಕೇಳಿದಾಗ, ಈ ವಿಚಾರವಾಗಿ ಮಾಧ್ಯಮ ವರದಿ ಬಂದಿದೆ ಎಂದು ಕೇಳಿದೆ. ನಾನು ಅದನ್ನು ನೋಡಿಲ್ಲ. ಆ ಪ್ರಕರಣದಲ್ಲಿ ಚಾರ್ಜ್‌ಶೀಟ್ ಆಗಿದೆ, ಸುಪ್ರೀಂ ಕೋರ್ಟ್‌ನಿಂದ ವಿಚಾರಣೆಗೆ ಬಂದಿದೆ. ಈ ಬಗ್ಗೆ ತನಿಖೆ ಮಾಡಲು ಹೇಳಿದ್ದರಂತೆ. ಸುಪ್ರೀಂ ಕೋರ್ಟ್ ವಿಚಾರಣೆ ನಂತರ ಲೋಕಾಯುಕ್ತ ತನಿಖೆ ಮಾಡಿ ಕುಮಾರಸ್ವಾಮಿ ಅವರ ವಿಚಾರಣೆಗೆ ರಾಜ್ಯಪಾಲರ ಅನುಮತಿ ಕೇಳಿದರಂತೆ. ರಾಜ್ಯಪಾಲರು ಆ ಕಡತವನ್ನು ತಮ್ಮಲ್ಲೇ ಇರಿಸಿಕೊಂಡಿದ್ದಾರೆ ಎಂದು ನನಗೆ ಮಾಹಿತಿ ನೀಡಿದರು. ಇದರಲ್ಲಿ ಎಷ್ಟು ಸತ್ಯಾಂಶವಿದೆ ಎಂಬುದನ್ನು ಪರಿಶೀಲಿಸಬೇಕು. ಜಂತಕಲ್ ಹಾಗೂ ಇತರೆ ಗಣಿ ವಿಚಾರವಾಗಿ ಮಧ್ಯಮ ಸ್ನೇಹಿತರೆ ನನಗೆ ಮಾಹಿತಿ ಕಳುಹಿಸಿದ್ದು, ಅದನ್ನು ಸಂಪೂರ್ಣವಾಗಿ ಪರಿಶೀಲಿಸಬೇಕಿದೆ. ಈ ವಿಚಾರವಾಗಿ ರಾಜ್ಯಪಾಲರು ಯಾವ ತೀರ್ಮಾನ ಮಾಡುತ್ತಾರೆ ಎಂದು ಕಾದುನೋಡೋಣ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಶುಭ ಗಳಿಗೆ ನೋಡಿ ದಾಖಲೆ ಬಿಡುಗಡೆ

ಕುಮಾರಸ್ವಾಮಿ ಸಹೋದರರ ಆಸ್ತಿ ದಾಖಲೆ ಬಿಡುಗಡೆ ಮಾಡುತ್ತೀರಾ ಎಂದು ಕೇಳಿದಾಗ, ಖಂಡಿತವಾಗಿಯೂ ಮಾಡಲೇಬೇಕು. ಅದಕ್ಕೆ ಶುಭದಿನ, ಶುಭ ಗಳಿಗೆ, ಶುಭ ನಕ್ಷತ್ರ ನೋಡಿ ಬಿಡುಗಡೆ ಮಾಡಬೇಕು. ಅದಕ್ಕಿಂತ ಮುಂಚೆ ನಮ್ಮ ಬಗ್ಗೆ ಮಾಡುತ್ತಿರುವ ಆರೋಪಗಳ ಬಗ್ಗೆ ದಾಖಲೆ ಬಿಚ್ಚಿ ಎಂದು ಹೇಳಿದ್ದೇನೆ ಎಂದು ತಿಳಿಸಿದರು. ಸದನದಲ್ಲಿ ಚರ್ಚೆಗೆ ಬರುವಂತೆ ಎರಡು ಬಾರಿ ಆಹ್ವಾನ ನೀಡಿದೆ. ಅವರು ಬರಲಿಲ್ಲ. ಈಗ ಅವರ ಅಣ್ಣನ ಬಳಿ ದಾಖಲೆ ಕೊಟ್ಟು ಕಳಿಸಿ ಚರ್ಚೆ ಮಾಡಲಿ. ನಾನು ಸುಮ್ಮನೆ ಮಾಧ್ಯಮಗಳ ಮುಂದೆ ಮಾತನಾಡಿದರೆ ಅದು ಒಂದೆರಡು ದಿನ ಸುದ್ದಿಯಾಗಿ ಮರೆಯಾಗುತ್ತದೆ. ಆದರೆ, ಸದನದಲ್ಲಿ ಚರ್ಚೆಯಾದರೆ ಅದು ದಾಖಲೆಯಾಗಿ ಉಳಿದು ಮುಂದಿನ ತಲೆಮಾರಿನವರು ತಿಳಿಯಬಹುದು. ನನಗೆ ಈಗ ಸಮಯವಿಲ್ಲ. ಅವರ ಎಲ್ಲಾ ದಾಖಲೆ ತೆಗೆಸುತ್ತೇನೆ ಎಂದು ತಿಳಿಸಿದರು.

ಬಿ.ವೈ.ವಿಜಯೇಂದ್ರ ಮನೆಗೆ ಮುತ್ತಿಗೆ ಯತ್ನ

ಶಿವಮೊಗ್ಗ: ಸಿಎಂ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಒತ್ತಾಯಿಸುತ್ತಿರುವ ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಶಿವಮೊಗ್ಗದ ನಂಜಪ್ಪ ಬಡಾವಣೆಯ ಮನೆಗೆ ಕರ್ನಾಟಕ ರಾಜ್ಯ ಶೋಷಿತ ವರ್ಗಗಳ ಮಹಾ ಒಕ್ಕೂಟ ಮುತ್ತಿಗೆ ಹಾಕಿ ಪ್ರತಿಭಟನೆಗೆ ಯತ್ನಿಸಿತು. ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ಎಲ್ಲ ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿ, ನಂತರ ಬಿಡುಗಡೆಗೊಳಿಸಿದ್ದಾರೆ.

ಪ್ರತಿಭಟನಕಾರರು ಸಿದ್ದರಾಮಯ್ಯ ಅವರ ಚಿತ್ರ ಹಿಡಿದು ವಿಜಯೇಂದ್ರ ಸೇರಿದಂತೆ ಬಿಜೆಪಿ- ಜೆಡಿಎಸ್ ನಾಯಕರ ವಿರುದ್ಧ ಹಾಗೂ ಸಿದ್ದರಾಮಯ್ಯ ಪರ ಘೋಷಣೆ ಕೂಗಿದರು. ವಿಜಯೇಂದ್ರ ಮನೆಗೆ ಮುತ್ತಿಗೆ ಹಾಕದಂತೆ ಪೊಲೀಸರು ಬ್ಯಾರಿಕೇಡ್ ಹಾಕಿ ತಡೆದರು. ಮೊದಲ ಬ್ಯಾರಿಕೇಡ್ ಅನ್ನು ಪ್ರತಿಭಟನಾಕಾರರು ನೂಕಿ ಮುಂದೆ ಸಾಗಿದರು. ಎರಡನೇ ಬ್ಯಾರಿಕೇಡ್‌ನಲ್ಲಿ ಪೊಲೀಸರು ಪ್ರತಿಭಟನಾಕಾರರನ್ನು ತಡೆದರೂ ಬ್ಯಾರಿಕೇಡ್ ಮೇಲೆ ಹತ್ತಿ ಒಳ ನುಗ್ಗಲು ಯತ್ನಿಸಿದರು. ಈ ವೇಳೆ ಪೊಲೀಸರು ಎಲ್ಲ ಪ್ರತಿಭಟನಗಾರರನ್ನು ಬಂಧಿಸಿ, ಕರೆದೊಯ್ದರು

ಮುಡಾದ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ವಿಜಯೇಂದ್ರ ಸುಳ್ಳು ಆರೋಪ ಮಾಡಿ, ಪಾದಯಾತ್ರೆ ನಡೆಸುತ್ತಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷರ ಮೇಲೆಯೇ ಸಾಕಷ್ಟು ಆರೋಪ ಇರುವಾಗ ಯಾವುದೇ ತಪ್ಪು ಮಾಡದ ಸಿದ್ದರಾಮಯ್ಯ ಅವರ ಮೇಲೆ ಆರೋಪ ಮಾಡುತ್ತಿರುವುದು ಖಂಡನೀಯ.
-**ಕೆ.ರಂಗನಾಥ್** ಒಕ್ಕೂಟದ ಸಂಚಾಲಕ

ಹಳಿ ದುರಸ್ತಿ ಪೂರ್ಣ ರೈಲು ಸಂಚಾರ ಆರಂಭ

ಮಂಗಳೂರು: ಭೂಕುಸಿತದಿಂದ ಹಾಳಾಗಿದ್ದ ಸಕಲೇಶಪುರ ಮತ್ತು ಸುಬ್ರಹ್ಮಣ್ಯ ರಸ್ತೆ ವಿಭಾಗದ ಕಡಗರವಳ್ಳಿ ಹಾಗೂ ಯಡಕುಮಾರಿ ನಿಲ್ದಾಣಗಳ ನಡುವಿನ ಹಳಿಗಳ ದುರಸ್ತಿ ಕಾಮಗಾರಿ ಗುರುವಾರ ಯಶಸ್ವಿಯಾಗಿ ಪೂರ್ಣಗೊಂಡಿದೆ.

ಭಾರಿ ಭೂಕುಸಿತದ ನಂತರ ಕರ್ನಾಟಕ ಕರಾವಳಿಯನ್ನು ಬೆಂಗಳೂರು ಮತ್ತು ಇತರ ಒಳನಾಡುಗಳೊಂದಿಗೆ ಸಂಪರ್ಕ ಕಲ್ಪಿಸುವ ಈ ವಿಭಾಗದಲ್ಲಿ ಜುಲೈ 27 ರಿಂದ ರೈಲುಗಳ ಕಾರ್ಯಾಚರಣೆ ಸ್ಥಗಿತಗೊಂಡಿತ್ತು. ಗುರುವಾರ ಹಳಿಗಳ ಮರುಸ್ಥಾಪನೆ ಯಶಸ್ವಿಯಾಗಿ ಪೂರ್ಣಗೊಂಡ ನಂತರ, ಮೊದಲ ಪ್ಯಾಸೆಂಜರ್ ರೈಲು ಸಂಖ್ಯೆ 16575 ಯಶವಂತಪುರ - ಮಂಗಳೂರು ರೈಲು ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಸದ್ಯಕ್ಕೆ ವೇಗದ ಮಿತಿಯನ್ನು ಗಂಟೆಗೆ 15 ಕಿ.ಮೀ ಗೆ ನಿರ್ಬಂಧ ಹೇರಲಾಗಿದೆ. ಕಳೆದ 13 ದಿನಗಳಿಂದ ಬೆಂಗಳೂರು ಸೇರಿದಂತೆ ನಾನಾ ನಗರಗಳ ಜತೆಗೆ ಕರಾವಳಿ ರೈಲುಸಂಪರ್ಕ ರದ್ದುಗೊಳಿಸಲಾಗಿತ್ತು ಆ.3 ಕ್ಕೆ ದುರಸ್ತಿ ಸಂಪೂರ್ಣವಾದ ಹಿನ್ನೆಲೆ ಭಾನುವಾರ ಹಾಗೂ ಸೋಮವಾರ ಖಾಲಿ ಗೂಡ್ಸ್ ರೈಲುಗಳ ಸಂಚಾರ ಮಾಡಲಾಗಿದ್ದು ಸಂಚಾರ ಯಶಸ್ವಿಯಾಗಿದೆ.

ಡಿವೈಎಸ್ಪಿ ಕಚೇರಿಯ ಲ್ಯಾಪ್‌ಟಾಪ್, ಪ್ರಿಂಟರ್ ಸಿಐಡಿ ವಶಕ್ಕೆ

ಪರಶುರಾಮ್ ಸಾವು ಪ್ರಕರಣ: ತನಿಖೆ ಚುರುಕು

ಯಾದಗಿರಿ: ಪಿಎಸ್‌ಐ ಪರಶುರಾಮ್ ಅನುಮಾನಾಸ್ಪದ ಸಾವಿನ ಕುರಿತು ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರು ಗುರುವಾರ ನಗರದಲ್ಲಿರುವ ಪೊಲೀಸ್ ಇಲಾಖೆಯ ವಸತಿಗೃಹಕ್ಕೆ ತೆರಳಿ ಸ್ಥಳ ಮಹಜರು ನಡೆಸಿ, ಡಿವೈಎಸ್ಪಿ ಕಚೇರಿಯಲ್ಲಿನ ಮಹತ್ವದ ದಾಖಲೆಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಪ್ರಕರಣ ಕೈಗೆತ್ತಿಕೊಂಡ ದಿನದಿಂದಲೂ ಚುರುಕಿನಿಂದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು ಮೊದಲಿಗೆ ಡಿವೈಎಸ್ಪಿ ಕಚೇರಿಗೆ ಆಗಮಿಸಿ, ಮೃತ ಪರಶುರಾಮ್ ತಂದೆ, ಸಹೋದರ ಹಾಗೂ ಮಾವ ವೆಂಕಟಸ್ವಾಮಿ ಅವರ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ಎಸ್‌ಪಿಯಿಂದ ಮಾಹಿತಿ ಸಂಗ್ರಹ

ಇದಾದ ನಂತರ ಡಿವೈಎಸ್ಪಿ ಕಚೇರಿಯಲ್ಲಿನ ಲ್ಯಾಪ್‌ಟಾಪ್, ಹ್ಯಾಂಡ್ ಕ್ಯಾಮೆರಾ, ಪ್ರಿಂಟರ್ ಸೇರಿ ಮಹತ್ವದ ದಾಖಲೆಗಳನ್ನು ಪಡೆದು ಎಸ್ಪಿ ಕಚೇರಿಗೆ ತೆರಳಿ, ಜಿಲ್ಲಾ ಪೊಲೀಸ್ ವರಿಷ್ಠೆ ಸಂಗೀತಾ ಜಿ ಅವರಿಂದ ಮಾಹಿತಿ ಪಡೆದುಕೊಂಡರು ಎನ್ನಲಾಗಿದೆ.

ಇದಕ್ಕೂ ಮೊದಲು ಪೊಲೀಸ್ ಇಲಾಖೆಯ ವಸತಿಗೃಹದಲ್ಲಿರುವ ಮೃತ ಪರಶುರಾಮ್ ಮನೆಗೆ ತೆರಳಿ ಸ್ಥಳ ಮಹಜರು ಸಹ ನಡೆಸಿದ್ದಾರೆ. ಪಿಎಸ್‌ಐ ನಿವಾಸದಲ್ಲಿ ಸಿಕ್ಕ ದಾಖಲೆಗಳನ್ನು ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿದ್ದು, ಪರಶುರಾಮ್ ಮೃತಪಟ್ಟ ಸ್ಥಳದಲ್ಲಿ ಬಿದ್ದಿರುವ ರಕ್ತ, ಬಟ್ಟೆ, ಪರಶುರಾಮ್ ಉಪಯೋಗಿಸುತ್ತಿದ್ದ ಗನ್, ಸಾವಿಗೂ ಮುನ್ನ ಅಡುಗೆ ಮಾಡಿರುವ ಅಕ್ಕಿಯ ಮಾದರಿಯನ್ನು ಎಫ್‌ಎಸ್‌ಎಲ್ ಪರೀಕ್ಷೆಗೆ ರವಾನಿಸಲಾಗಿದೆ. ಸಾವಿಗೂ ಮುನ್ನ ಪರಶುರಾಮ್, ಯಾದಗಿರಿಯ ಯಸ್ ಬ್ಯಾಂಕ್ ಶಾಖೆಯ ಎಟಿಎಂನಿಂದ 75 ಸಾವಿರ ರು. ಡ್ರಾ ಮಾಡಿದ್ದರು ಎನ್ನಲಾಗಿದೆ.

ಸಿಬಿಐಗೆ ವಹಿಸಲು ಶೋಭಾ ಕರಂದ್ಲಾಜೆ ಪತ್ರ

ಇನ್ನೂ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಖಾತೆ ಸಚಿವೆ ಶೋಭಾ ಕರಂದ್ಲಾಜೆ ಪತ್ರ ಬರೆದು ಒತ್ತಾಯಿಸಿದ್ದಾರೆ. ಕಾಂಗ್ರೆಸ್ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಹಾಗೂ ಪುತ್ರ ಸನ್ನಿಗೌಡ ಅವರು ಹಣ ನೀಡುವಂತೆ ಮಾನಸಿಕ ಕಿರುಕುಳ ನೀಡಿದ್ದರಿಂದ ಪರಶುರಾಮ ಮೃತಪಟ್ಟಿದ್ದಾರೆ ಎಂದು ಅವರ ಪತ್ನಿ ದೂರು ನೀಡಿದ್ದಾರೆ. ಹೀಗಾಗಿ, ಸಿಬಿಐ ತನಿಖೆಯಿಂದಷ್ಟೇ ಪ್ರಕರಣದ ಸತ್ಯಾಂಶ ಹೊರಬರಲು ಸಾಧ್ಯ ಎಂದಿದ್ದಾರೆ.

2, 4ನೇ ಶನಿವಾರ ಡಿಕೆ ಕನಕಪುರಕ್ಕೆ ಭೇಟಿ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇನ್ನು ಮುಂದೆ ಪ್ರತಿತಿಂಗಳ ಎರಡನೇ ಹಾಗೂ ನಾಲ್ಕನೇ ಶನಿವಾರ ಕನಕಪುರಕ್ಕೆ ಭೇಟಿ ನೀಡುವುದಾಗಿ ತಿಳಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿಯಾದ ಬಳಿಕ ಕನಕಪುರಕ್ಕೆ ಹೆಚ್ಚಾಗಿ ಭೇಟಿ ನೀಡುತ್ತಿರಲಿಲ್ಲ. ಆದರೀಗ ರಾಮನಗರವನ್ನು ಬೆಂಗಳೂರು ದಕ್ಷಿಣವೆಂದು ಮರುನಾಮಕರಣ ಮಾಡಿರು ವುದರಿಂದ, ಜಿಲ್ಲೆಯಲ್ಲಿ ಪಕ್ಷ ಸಂಘಟಿಸುವ ಉದ್ದೇಶದಿಂದ ತಿಂಗಳಲ್ಲಿ ಎರಡು ದಿನ ಅಲ್ಲಿಗೆ ಮೀಸಲಿಡಲು ತೀರ್ಮಾನಿಸಿದ್ದಾರೆ.

ಆ ದಿನಗಳಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಜನರ ಸಮಸ್ಯೆ, ಅಹವಾಲುಗಳನ್ನು ಆಲಿಸಲಿದ್ದಾರೆ.

ಎಲ್ಲಾ ವರ್ಗಗಳ ಸಾರ್ವಜನಿಕರ ಅರ್ಜಿಗ ಳನ್ನು ಡಿಸಿಎಂ ಸ್ವೀಕರಿಸಿ, ಪರಿಹಾರಕ್ಕೆ ಕ್ರಮ ಕೈಗೊಳ್ಳಲಿದ್ದಾರೆ. ಬೆಂಗಳೂರು ದಕ್ಷಿಣ ಜಿಲ್ಲೆಯ ನಾನಾ ವಿಧಾನಸಭೆ ಕ್ಷೇತ್ರಗಳ ಜನರು ತಮ್ಮನ್ನು ಭೇಟಿ ಮಾಡಲು ಬೆಂಗಳೂರಿಗೆ ಬರುವುದು ಬೇಡ. ತೊಂದರೆ ತೆಗೆದುಕೊಳ್ಳುವುದು ಬೇಡ. ನಾನೇ ಕನಕಪುರಕ್ಕೆ ಬಂದು ನಿಮ್ಮ ಕಷ್ಟ-ಸುಖ ವಿಚಾರಿಸಿ, ಅಹವಾಲು ಸ್ವೀಕರಿಸಲಿದ್ದೇನೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಸಂಪಾದಕೀಯ

ಫೋಗಟ್ ಸಾಧನೆ ದೇಶಕ್ಕೆ ಸ್ಫೂರ್ತಿ

ಪ್ಯಾರಿಸ್ ಒಲಿಂಪಿಕ್ ಕೂಟದಿಂದ ಅನರ್ಹಗೊಂಡ ಭಾರತೀಯ ಮಹಿಳಾ ಕುಸ್ತಿಪಟು ವಿನೇಶ್ ಫೋಗಟ್ ನಿವೃತ್ತಿ ಘೋಷಣೆ ಮಾಡಿದ್ದಾರೆ. 100 ಗ್ರಾಂ ಹೆಚ್ಚುವರಿ ದೇಹ ತೂಕದ ಕಾರಣಕ್ಕೆ ಚಿನ್ನ ಗೆಲ್ಲುವ ಅವಕಾಶದಿಂದ ವಂಚಿತರಾದ ಫೋಗಟ್ ನಿರ್ಧಾರದ ಹಿಂದೆ ಫೈನಲ್ ಪಂದ್ಯ ಆಡಲಾಗದ ನಿರಾಶೆ ಇದೆ. ಜತೆಗೆ ಕಳೆದ ವರ್ಷ ರಾಷ್ಟ್ರೀಯ ಕುಸ್ತಿ ಒಕ್ಕೂಟದ ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧದ ಹೋರಾಟದಲ್ಲಿ ಅನುಭವಿಸಿದ ಅವಮಾನ, ಯಾತನೆಗೆ ತಕ್ಕ ಉತ್ತರ ಕೊಡಲು ಸಾಧ್ಯವಾಗಿಲ್ಲವೆಂಬ ಹತಾಶೆಯೂ ಇದೆ. ಪ್ರೀಕ್ವಾರ್ಟರ್ ಪಂದ್ಯದಲ್ಲಿ ಆರಂಭಿಕ ಹಿನ್ನಡೆಯನ್ನು ಮೆಟ್ಟಿ ನಿಂತು ಟೋಕಿಯೋ ಒಲಿಂಪಿಕ್ಸ್ ಕೂಟದಲ್ಲಿ ಚಿನ್ನ ಗೆದ್ದಿದ್ದ ಜಪಾನಿನ ಆಟಗಾರ್ತಿಯನ್ನು ಸೋಲಿಸಿದ ರೀತಿಯೇ ಆಕೆಯ ಆಕ್ರಮಣಕಾರಿ ಆಟಕ್ಕೆ ಸಾಕ್ಷಿಯಾಗಿತ್ತು. ಕ್ವಾರ್ಟರ್ ಪಂದ್ಯ ಮತ್ತು ಸೆಮಿಫೈನಲ್ ಪಂದ್ಯದಲ್ಲಿ ಬಲಿಷ್ಠ ಎದುರಾಳಿಗಳನ್ನು ಅನಾಯಾಸವಾಗಿ ಮಣಿಸಿದ ಫೋಗಟ್ ಕೊರಳಿಗೆ ಚಿನ್ನದ ಪದಕ ಬೀಳುವುದು ಬಹುತೇಕ ಖಾತರಿಯಾಗಿತ್ತು. ಫೋಗಟ್ ಅವರನ್ನು ಅನರ್ಹಗೊಳಿಸುವ ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ನಿರ್ಧಾರ ಭಾರತದಲ್ಲಿ ಮಾತ್ರವಲ್ಲ ವಿಶ್ವ ಮಟ್ಟದಲ್ಲಿ ಸಂಚಲನ ಮೂಡಿಸಿದೆ. ಅಮೆರಿಕದ ಕುಸ್ತಿಪಟು, ಒಲಿಂಪಿಕ್ ಚಿನ್ನದ ಪದಕ ವಿಜೇತ ಜೋರ್ಡಾನ್ ಬರೋಸ್ ಕೂಡ ಫೋಗಟ್ ಅವರಿಗೆ ಬೆಳ್ಳಿ ಪದಕ ನೀಡಬೇಕು ಎಂದು ಮನವಿ ಮಾಡಿದ್ದಾರೆ. ಈ ಹೇಳಿಕೆಗೆ ಅರ್ಥವಿದೆ. ಆಕೆಯ ಅನರ್ಹತೆಯು ಫೈನಲ್ ಪಂದ್ಯ ಕ್ಕಷ್ಟೇ ಸೀಮಿತವಾಗಿರಬೇಕಿತ್ತು. ಇನ್ನು ವಿಶ್ವ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಇರುವಂತೆ ಒಲಿಂಪಿಕ್ಸ್ ಕುಸ್ತಿ ಪಂದ್ಯದಲ್ಲೂ ಒಂದರಿಂದ ಎರಡು ಕಿಲೋ ತೂಕದ ವಿನಾಯಿತಿ ಇರಬೇಕೆಂದು ಹಲವು ಕ್ರೀಡಾಪಟುಗಳು ಮನವಿ ಮಾಡಿದ್ದಾರೆ. ಈ ಮಾನದಂಡವೇ ಒಲಿಂಪಿಕ್ಸ್‌ಗೂ ಅನ್ವಯವಾಗಿದ್ದರೆ ಅನರ್ಹತೆ ಪ್ರಶ್ನೆಯೇ ಬರುತ್ತಿರಲಿಲ್ಲ. ಇನ್ನು ಅನರ್ಹತೆ ಹಿಂದೆ ಕಾಣದ ಶಕ್ತಿಗಳ ಕೈವಾಡವಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ. ನಾನಾ ರಾಷ್ಟ್ರಗಳ ಸದಸ್ಯರಿರುವ ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯಲ್ಲಿ ಇಂತಹ ಪಿತೂರಿ ನಡೆದಿದೆ ಎನ್ನುವುದನ್ನು ನಂಬಲಾಗದು. ಫೋಗಟ್ ಅವರ ಈ ಪರಿಸ್ಥಿತಿಗೆ ಮೂರನೇ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವ ಆಕೆಯ ನಿರ್ಲಕ್ಷ್ಯವನ್ನೂ ದೂರಬೇಕಾಗಿದೆ. ಆಕೆಯ ಕೋಚ್, ಆಟಗಾರರ ಆಹಾರ ಮತ್ತು ವ್ಯಾಯಾಮ ಕ್ರಮವನ್ನು ನೋಡಿಕೊಳ್ಳಲೆಂದೇ ಇರುವ ಫಿಸಿಯೋಗಳು, ಪೌಷ್ಟಿಕ ತಜ್ಞರೂ ಈ ಪ್ರಮಾದಕ್ಕೆ ಕಾರಣರಾಗಿದ್ದಾರೆ. ಇದೇನೇ ಇರಲಿ, ಫೋಗಟ್ ಪ್ರದರ್ಶಿಸಿದ ಆಟ 140 ಕೋಟಿ ದೇಶವಾಸಿಗಳ ಮನಗೆದ್ದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದಂತೆ ಫೋಗಟ್ ಭಾರತೀಯರ ಮನಗೆದ್ದಿದ್ದಾರೆ. ಮುಂದಿನ ಕ್ರೀಡಾ ಚರಿತ್ರೆಯಲ್ಲಿ ಅವರು ಸ್ಫೂರ್ತಿಯಾಗಿ ಉಳಿಯುವುದು ನಿಶ್ಚಿತ

ಸೊಂಪಾದಕೀಯ

ಮರುಕಳಿಸುವುದೇ ಇತಿಹಾಸ?

2006ರ ಡಿಸೆಂಬರ್ ಅಂತ್ಯದಲ್ಲಿ 'ಮುಂಗಾರುಮಳೆ' ಸಿನಿಮಾ ಬಿಡುಗಡೆಯಾಗಿತ್ತು ಮತ್ತು 2007ರ ಫೆಬ್ರವರಿ ಅಂತ್ಯದ ವೇಳೆಗೆ 'ದುನಿಯಾ' ಸಿನಿಮಾ ಬಿಡುಗಡೆಯಾಗಿತ್ತು. ಎರಡೂ ಸಿನಿಮಾಗಳು ಸೂಪರ್‌ಹಿಟ್ ಎನಿಸಿಕೊಂಡವು ಎಂಬುದು ಈಗಾಗಲೇ ನಿಮಗೆ ಗೊತ್ತಿರೋ ಸಂಗತಿ. ಇದರಲ್ಲೇನು ವಿಶೇಷ? ಎಂದು ನೀವು ಕೇಳಬಹುದು. ಕ್ರಮವಾಗಿ ಈ ಚಿತ್ರಗಳ ನಾಯಕರಾಗಿದ್ದ ಗಣೇಶ್ ಮತ್ತು ವಿಜಿ ಈಗ ಮತ್ತೆ ಅಂಥದೊಂದು ಸಂದರ್ಭಕ್ಕೆ ಸಾಕ್ಷಿಯಾಗುತ್ತಿದ್ದಾರೆ. 'ಗೋಲ್ಡನ್ ಸ್ಟಾರ್' ಗಣೇಶ್ ಅಭಿನಯದ 'ಕೃಷ್ಣಂ ಪ್ರಣಯ ಸಖಿ' ಮತ್ತು 'ದುನಿಯಾ' ವಿಜಿ ಅಭಿನಯದ 'ಭೀಮ' ಚಲನಚಿತ್ರಗಳು ಆಗಸ್ಟ್ 15ರಂದು ಒಟ್ಟಿಗೆ ತೆರೆ ಕಾಣುತ್ತಿವೆ. ಹೀಗಾಗಿ, ಬರೋಬ್ಬರಿ 17 ವರ್ಷಗಳ ಹಿಂದೆ ನಡೆದ ಜಾದೂ ಮತ್ತು ಇತಿಹಾಸ ಮರುಕಳಿಸುವುದೇ ಎಂಬ ಕುತೂಹಲದಲ್ಲಿದ್ದಾರೆ ಚಿತ್ರೋದ್ಯಮಿಗಳು ಹಾಗೂ ಅಭಿಮಾನಿ ದೇವರುಗಳು. ಈ ಎರಡೂ ಚಿತ್ರಗಳು ಸೂಪರ್‌ಹಿಟ್ ಆಗಬೇಕಾದ ಅನಿವಾರ್ಯತೆಯಿದೆ. ಏಕೆಂದರೆ, 'ಕನ್ನಡ ಚಿತ್ರಪ್ರೇಮಿಗಳು ಥಿಯೇಟರ್‌ಗಳ ಕಡೆಗೆ ಮುಖಮಾಡುತ್ತಿಲ್ಲ, ಹಿಂಗಾದ್ರೆ ನಾವು ಬಾಳೋದು ಹೆಂಗೆ?' ಎಂಬ ಅಳಲು ಚಿತ್ರನಿರ್ಮಾತೃಗಳಿಂದ ಬಹಳ ದಿನಗಳಿಂದ ಕೇಳಿಬರುತ್ತಿದೆ. 'ಒಳ್ಳೇ ಸಿನಿಮಾ ಕೊಡ್ರೀ, ನಾವ್ಯಾಕೆ ಬರೋಲ್ಲ ಅಂತೀವಿ' ಅಂತ ಚಿತ್ರರಸಿಕರೂ ಇದಕ್ಕೆ ಪ್ರತ್ಯುತ್ತರ ನೀಡಿದ್ದಿದೆ. ಈ ಚಿತ್ರಗಳು ಟಿವಿ ವಾಹಿನಿಯಲ್ಲೋ, ಒಟಿಟಿ ಮಾಧ್ಯಮದಲ್ಲೋ ಕೆಲ ಕಾಲದ ನಂತರ ಬಿಡುಗಡೆಯಾಗಬಹುದು; ಆದರೆ ಥಿಯೇಟರ್‌ನಲ್ಲಿನ ಆ ಕತ್ತಲೆಯ ವಾತಾವರಣದಲ್ಲಿ, ಚಿಪ್ಸ್-ಪಾಪ್‌ಕಾರ್ನ್ ಮೆಲ್ಲುತ್ತಾ, ಜನರ ಶಿಳ್ಳೆ-ಚಪ್ಪಾಳೆಗಳ ನಡುವೆ ಚಲನಚಿತ್ರವೆಂಬ ದೃಶ್ಯಕಾವ್ಯವನ್ನು ಕಣ್ತುಂಬಿಕೊಳ್ಳೋದ್ರಲ್ಲಿ ಸಿಗೋ ಮಜಾ, ಟಿವಿ/ಒಟಿಟಿ ಮಾಧ್ಯಮದಲ್ಲಿ ಸಿಗುತ್ತಾ? ಅದರಲ್ಲೂ 'ಕೃಷ್ಣಂ ಪ್ರಣಯ ಸಖಿ' ಚಿತ್ರದ 'ದ್ವಾಪರ' ಹಾಡನ್ನು ಕಣ್ಣು-ಕಿವಿಯಲ್ಲಿ ತುಂಬಿಕೊಂಡಿರುವ ಅಭಿಮಾನಿಗಳಂತೂ ವಿಶಾಲವಾದ ಬೆಳ್ಳಿತೆರೆಯ ಮೇಲೆ ಅದನ್ನು ವೀಕ್ಷಿಸಲು ಇನ್ನಿಲ್ಲದಂತೆ ತವಕಿಸುತ್ತಿರೋದು ಖರೆ! ಅಭಿಮಾನಿಗಳ ಈ ಸಂಭ್ರಮವು ಕನ್ನಡ ಚಲನಚಿತ್ರೋದ್ಯಮಿಗಳಲ್ಲಿ, ತಾಂತ್ರಿಕ ಬಳಗದವರು ಮತ್ತು ಕಲಾವಿದರಲ್ಲಿ ಮತ್ತಷ್ಟು ಹುಮ್ಮಸ್ಸು ಹಾಗೂ ಭರವಸೆಯನ್ನು ತುಂಬುವಂತಾದರೆ ಅದು ಸಂತಸದ ಸಂಗತಿಯೇ ಅಲ್ಲವೇ?

ಸಂಪಾದಕರ ಸದ್ಯಶೋಧನೆ

ರಾಜಕೀಯದಲ್ಲಿ ಹತ್ತಿರದವರೇ ವೈರಿಗಳು

ರಾಜಕಾರಣದಲ್ಲಿ ನಮ್ಮ ಹತ್ತಿರ ಇದ್ದವರೇ ಗುಂಡಿ ತೊಡುತ್ತಿರುತ್ತಾರೆ. ಹೊರಗಿನಿಂದ ಆತ್ಮೀಯರಂತೆ ನಟಿಸುತ್ತಾ, ಒಳಗಿಂದೊಳಗೆ ಬಿಲ ಕೊರೆಯುತ್ತಲೇ ಇರುತ್ತಾರೆ. ಸಂದರ್ಭ ಬಂದರೆ ಬಿಲದೊಳಗೆ ನೂಕಿ, ಮೇಲಿಂದ ಮಣ್ಣು ಹಾಕಿ ಮುಚ್ಚಿಬಿಡುತ್ತಾರೆ. ಪತ್ರಕರ್ತ ಐ.ಕೆ.ಜಹಗೀರದಾರ್ ಬರೆದ 'ಅರಸು ಆಡಳಿತ ರಂಗ' ಕೃತಿಯಲ್ಲಿ, ದೇವರಾಜು ಅರಸರ ಕಾಲದಲ್ಲಿ ನಡೆದ ಒಂದು ಸಣ್ಣ ಝಲಕ್‌ನ್ನು ನೆನಪಿಸಿಕೊಳ್ಳಬಹುದು. ಇದನ್ನು ಜಹಗೀರದಾರ್ ಸೂಕ್ಷ್ಮವಾಗಿ ಬರೆಯುತ್ತಾರೆ – ಠೀಕು-ಠಾಕಿನ ಬಟ್ಟೆ ಧರಿಸಿ ಸಂಘಟದಲ್ಲಿ 'ಪ್ಲೇಬಾಯ್' ಎಂದು ಹೆಸರಾಗಿದ್ದ ಎಸ್.ಎಂ.ಕೃಷ್ಣ ಅವರು ಮಂಡ್ಯಕ್ಕೆ ಸಂಜಯ್ ಗಾಂಧಿಯನ್ನು ಕರೆಯಿಸಿ ಎತ್ತರಕ್ಕೆ ಬೆಳೆದು ತಮ್ಮ ಪ್ರಭಾವವನ್ನು ವಿಸ್ತರಿಸಿಕೊಳ್ಳಲು ಪ್ರಯತ್ನಿಸಿದರು. ಉತ್ತರ ಪ್ರದೇಶದ ವಿಧಾನಸಭೆಗೆ ಚುನಾವಣೆಗಳು ನಡೆದಾಗ ಕೃಷ್ಣ ದೆಹಲಿಗೆ ಹೋಗಿ ನೇರವಾಗಿ ಹಣದ ಬ್ರೀಫ್ ಕೇಸನ್ನೂ ಒಪ್ಪಿಸಿ ಇಂದಿರಾ ಹೃದಯದಲ್ಲಿ ಕಾಣಿಸಿಕೊಂಡರು. ಕೃಷ್ಣ ಅವರ ಈ ನಡತೆ ಅರಸರಿಗೆ ಹಿಡಿಸಲಿಲ್ಲ. ಕೃಷ್ಣ ಅವರ ಒಲವು – ನಿಲುವು ಅರಿತ ಭಿನ್ನಮತೀಯರು 'ಮುಖ್ಯಮಂತ್ರಿ ಆಗಲು ನೀವೇ ಅರ್ಹರು' ಎಂದು ಕಿವಿ ಊದಿದಾಗ ಕೃಷ್ಣ ಬಲೂನಿನಂತೆ ಉಬ್ಬಿದರು. ಆಗ ಉಬ್ಬಿದ ಬಲೂನನ್ನು 'ಪಂಕ್ಚರ್' ಮಾಡಲು ಅರಸು ಕೈಯಲ್ಲಿ ಸೂಜಿ ಹಿಡಿದು ಸಿದ್ಧರಾದರು. ಕೃಷ್ಣ ಅವರ 'ರಾಜಕೀಯ ವೈರಿ' ಆಗಿದ್ದ ಮಂಡ್ಯ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಎಂ.ಲಿಂಗಯ್ಯನವರನ್ನು ಅರಸು ಸೂಜಿಗಲ್ಲಿನಂತೆ ಎಳೆದುಕೊಂಡರು. ಕ್ಯಾಬಿನೆಟ್ ಸಚಿವರ ಸ್ಥಾನಮಾನ ಇರುವ ಕೆ.ಎಸ್.ಆರ್.ಟಿ.ಸಿ.ಯ ಅಧ್ಯಕ್ಷರಾಗಿ ಲಿಂಗಯ್ಯ ನೇಮಕಗೊಂಡರು. 'ಸೇರಿಗೆ ಸವ್ವಾಸೇರು' ಎಂಬಂತೆ ಸಚಿವ ಕೃಷ್ಣ ಅವರು ಅರಸು ಅವರನ್ನು ಲೆಕ್ಕಿಸದೇ ಕೆ.ಎನ್.ನಾಗೇಗೌಡರನ್ನು ಮೈಸೂರು ಸಕ್ಕರೆ ಕಾರ್ಖಾನೆಗೆ ಅಧ್ಯಕ್ಷರನ್ನಾಗಿ ನೇಮಿಸಿಬಿಟ್ಟರು. ಅರಸು ಇದಕ್ಕೆ ಪ್ರತಿಯಾಗಿ, ಕಿರಿಯ ವಯಸ್ಸಿನ ವೀರಪ್ಪ ಮೊಯಿಲಿ ಅವರ ಕೊರಳಿಗೆ ಕೈಗಾರಿಕೆ ಕ್ಷೇತ್ರಕ್ಕೆ ಸೇರಿದ 19 ಸಂಸ್ಥೆಗಳ ಅಧ್ಯಕ್ಷಗಿರಿಗಳನ್ನು ಕಟ್ಟಿ, ಕೃಷ್ಣ ಅವರ ಎತ್ತರದ ಠೀವಿಯನ್ನು ಮೊಟಕುಗೊಳಿಸಿದರು! ಲಿಂಗಯ್ಯನವರ ನೇಮಕದಿಂದ ಅರಸು ಅವರು ಕೃಷ್ಣ ಜತೆ ಸಾರಿಗೆ ಸಚಿವ ಅಲಿ ಅವರನ್ನೂ ಎದುರು ಹಾಕಿಕೊಂಡರು. ಎಂ.ಲಿಂಗಯ್ಯ ಅಧ್ಯಕ್ಷರಾದ ಮೇಲೆ ಅಲಿ ಬರೀ ಹೆಸರಿಗೆ ಮಾತ್ರ ಮಂತ್ರಿ ಆಗಿ ಉಳಿದರು. ಅಲಿ ಅವರ ಸುತ್ತಮುತ್ತಲೂ ತಿರುಗಾಡುತ್ತಿದ್ದ ಸಾರಿಗೆ ಸಂಸ್ಥೆಯ ಕೆಲವು ಅಧಿಕಾರಿಗಳಿಗೆ ಲಿಂಗಯ್ಯ ಚುಚ್ಚು ಮದ್ದಿನ ಚಿಕಿತ್ಸೆ ನೀಡಿದರು. ಲಿಂಗಯ್ಯ – ಅರಸರ ಹಿಡಿತದಲ್ಲಿ ಉಳಿದ ಅಧಿಕಾರಿಗಳು ಅಲಿ ಅವರನ್ನು ಕಡೆಗಣಿಸಿದರು. ಶಾಸನ ಸಭೆಯಲ್ಲಿ ಸಾರಿಗೆ ಸಂಸ್ಥೆಯ ಬಗ್ಗೆ ಚರ್ಚೆ ನಡೆದಾಗ ಉನ್ನತ ಅಧಿಕಾರಿಗಳ್ಯಾರೂ ಬರಲೇ ಇಲ್ಲ. ಸಾರಿಗೆ ಅಧಿಕಾರಿಗಳು ಅಲಿಗೆ ತೋರಿಸಿದ ಗೌರವ ಇದು. ಅಲಿ ಮತ್ತು ಕೃಷ್ಣ ಅವರಿಗಾದ ಸ್ಥಿತಿ ತಮಗೂ ಬರಬಹುದು ಎಂದು ಅರಸು ವಿರುದ್ಧ ಸಿದ್ದವೀರಪ್ಪ ಹಾಗೂ ಎಚ್.ಎಂ.ಚನ್ನಬಸಪ್ಪ ಕತ್ತಿ ಮಸೆಯಲು ಆರಂಭಿಸಿದರು. ಎನ್.ಹುಚ್ಚಮಾಸ್ತಿಗೌಡರ ನಿವಾಸದಲ್ಲಿ ಸಭೆ ಸೇರಲು ನಿರ್ಧರಿಸಿದರು. ಎನ್. ಚಿಕ್ಕೇಗೌಡ, ಸಿ.ಎನ್.ಪಾಟೀಲ್‌ರೂ ಅಲ್ಲಿ ಸೇರಿದರು. ಅನುಕ್ರಮವಾಗಿ ಕಾನೂನು ಹಾಗೂ ಆರೋಗ್ಯ ಇಖಾಖೆ ಕೊಟ್ಟು ಸಿದ್ದವೀರಪ್ಪ ಹಾಗು ಎಚ್.ಎಂ.ಚನ್ನಬಸಪ್ಪ ಧರಿಸಿದ್ದ ಅಧಿಕಾರದ ಬಟ್ಟೆ ಕಳಚಿದರು ಅರಸು. ಕೆ.ಎಚ್.ಪಾಟೀಲ್‌ರ ಗುಂಪಿನಲ್ಲಿ ಓಡಾಡುತ್ತಿದ್ದ ವಸಂತರಾವ್ ಪಾಟೀಲ್ ರನ್ನು ಅರಸು ಸ್ವಾಗತಿಸಿದರು. ಕೆ. ಪ್ರಭಾಕರ್, ಖರ್ಗೆ, ಬಿ.ಜಿ. ಬಣಕಾರ್ ಅವರು ಸಂಪುಟ ಪ್ರವೇಶಿಸಿದರು. ಸಂಪುಟದ ಪುನಾರಚನೆ ಹೆಸರಿನಲ್ಲಿ ಭಿನ್ನಮತೀಯರಿಗೆ ಅರಸು ಚಾಟಿ ಏಟು ಹಾಕಿದರು. 'ಕ್ಯಾಬಿನೆಟ್ ಸ್ಥಾನ ಬೇಕು' ಎಂದು ಆರ್. ಗುಂಡೂರಾವ್ ರೋಪು ಹಾಕಿದರು. ಎಫ್.ಎಂ.ಖಾನ್ ಬೆಂಬಲ ನೀಡಿದರು. ಅರಸು ಒಪ್ಪಲಿಲ್ಲ. ಅರಸರಿಗೆ ರಾಜಕೀಯದಲ್ಲಿ 'ಮಕ್ಕಳಾಗಿದ್ದ ' ಗುಂಡೂರಾವ್, ಖಾನ್ ತಿರುಗಿಬಿದ್ದು ಪಾಟೀಲ್ ಬಳಗ ಸೇರಿದರು. ಅರಸು ಅವರನ್ನು ಕೆಳಗಿಳಿಸಲು ಸಂಜಯ್ ಗಾಂಧಿಯವರನ್ನು ಕರೆಯಿಸಲು ಸಿದ್ಧತೆ ನಡೆಸಿದರು. ಇದಕ್ಕೆ ಪಾಟೀಲ್‌ರ ಗುಂಪು ಒಪ್ಪಿತು. ಐದು ಅಂಶಗಳ ಕಾರ್ಯಕ್ರಮಕ್ಕಾಗಿ ಕಲಬುರ್ಗಿ, ಬೀದರಕ್ಕೆ ಸಂಜಯ್ ಬರಲು ಒಪ್ಪಿದಾಗ ಅರಸು ಎದೆಗುಂದಿದರು.

ಬಿಡದೀ ಮಾತ್ರೆಯ ಹುಚ್ಚು, ದಿನಗಳೆದಂತೆ ಇನ್ನಷ್ಟು ಹೆಚ್ಚು!

ಶಿಶಿರ ಕಾಲ

ಶಿಶಿರ್ ಹೆಗಡೆ

shishirh@gmail.com

ಅದೆಂಥಾ ಹುಚ್ಚೋ ನನಗಂತೂ ತಿಳಿಯುತ್ತಿಲ್ಲ, ನಮ್ಮಲ್ಲಿ ದಿನಗಳೆದಂತೆ ಈ ಹುಚ್ಚು ಮಾತ್ರ ಹೆಚ್ಚುತ್ತಲೇ ಇರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. ಒಂದು ಸೀನು ಬಂದರೆ ಸಾಕು ತಕ್ಷಣ ಒಂದು ಗುಳಿಗೆ ನುಂಗುತ್ತಾರೆ. ತಲೆ ಸ್ವಲ್ಪ ಭಾರವೆನಿಸಿದರೆ ಅದಕ್ಕೊಂದು ಗುಳಿಗೆ. ಸ್ವಲ್ಪ ಚಳಿ, ಮೈ ಬೆಚ್ಚಗೆನಿಸಿದರೆ ಅದಕ್ಕೊಂದು 500 ಎಂ.ಜಿ. ಮಾತ್ರೆ. ಕಾಲು ಸ್ವಲ್ಪ ನೋವೆನಿಸಿದರೆ ಮತ್ತೊಂದು ಗುಳಿಗೆ. ಕೈ ಸ್ವಲ್ಪ ತುರಿಸಿದರೆ ಮಗದೊಂದು. ತಲೆನೋವು ಬರಬೇಕೆಂದೇನಿಲ್ಲ, ಬರಬಹುದು ಎಂದೆನಿಸಿದರೂ ಸಾಕು, ಅದಕ್ಕೊಂದು ಟ್ಯಾಬ್ಲೆಟ್. ದೇಹದಲ್ಲಿ ಒಂದು ಚಿಕ್ಕ ವ್ಯತ್ಯಾಸವಾದರೆ ಸಾಕು, ತಬಲಾ ವಾದಕರು ಸುತ್ತಿಗೆಯಲ್ಲಿ ಶ್ರುತಿ ಸರಿಪಡಿಸಿಕೊಂಡಂತೆ ಒಂದೊಂದು ಗುಳಿಗೆ ನುಂಗಿದರೆ ಸರಿ. ಯಾವುದೇ ಚಿಕ್ಕ ದೈಹಿಕ ಏರುಪೇರನ್ನು ಸ್ವಲ್ಪವೇ ತಡೆದುಕೊಳ್ಳುವ ಮಾತೇ ಇಲ್ಲ. ಇನ್ನು ಕೆಲವರಿದ್ದಾರೆ– ಅದ್ಯಾವತ್ತೋ ಡಾಕ್ಟರ್ ಬರೆದುಕೊಟ್ಟ ಕೋರ್ಸ್ ಗುಳಿಗೆಯನ್ನೇ ಸೇವಿಸಿದರೆ ತಮಗೆ ಆರಾಮಾಗುತ್ತದೆ ಎಂದು ತಾವೇ ಮೆಡಿಕಲ್ ಶಾಪ್‌ಗೆ ಹೋಗಿ ಆ ಹಳೆಯ ಚೀಟಿಯನ್ನೇ ತೋರಿಸಿ ಗುಳಿಗೆ ತಂದು ನುಂಗುತ್ತಿರುತ್ತಾರೆ, ವರ್ಷಾನುಗಟ್ಟಲೆ. ಈಗ ಪ್ರತಿಯೊಬ್ಬರ ಮನೆಯಲ್ಲೂ ಚಿಕ್ಕದೊಂದು ಮೆಡಿಕಲ್ ಶಾಪ್ ಸಾಮಾನ್ಯವಾಗಿಬಿಟ್ಟಿದೆ. ಸಾಸಿವೆ ಇರದ ಮನೆಯಿರಬಹುದು, ಪ್ಯಾರಾಸಿಟಮಲ್ ಇಲ್ಲದ ಮನೆ ಇಂದು ಸಿಗಲಿಕ್ಕಿಲ್ಲ. ಎಲ್ಲರೂ 'ಅಡ್ಡ-ನಾಡಿ' ವೈದ್ಯರೇ ಆಗಿಬಿಟ್ಟಿದ್ದಾರೆ. ಕೆಲವರಿಗೆ ಗೂಗಲ್ ಡಾಕ್ಟರ್. ಇನ್ನು ಕೆಲವರಿಗೆ ಅದು ಕೂಡ ಬೇಡ. ಬಾಯ ತುದಿಯಲ್ಲಿ ಹತ್ತಿಪ್ಪತ್ತು ರೋಗಗಳಿಗೆ ಬೇಕಾಗುವ ಔಷಧಗಳ ಹೆಸರು. ನೀವು ಅವರ ಮುಂದೆ ದೇಹದ ಏನೇ ಚಿಕ್ಕ, ದೊಡ್ಡ ಸಮಸ್ಯೆಯನ್ನು ಹೇಳಿಕೊಳ್ಳುವಂತಿಲ್ಲ, ಹೇಳಿದರೆ ಅವರದ್ದೊಂದು ಪ್ರಿಸ್ಕ್ರಿಪ್ಷನ್ ಸಿದ್ಧ. ಅಂಥವರು ಆಪ್ತರಾಗಿದ್ದರೆ ಗುಳಿಗೆಯನ್ನು ಅವರೇ ಹೋಗಿ ತಂದುಕೊಡುತ್ತಾರೆ, ನುಂಗುವಲ್ಲಿಯವರೆಗೆ ಬಿಡುವುದಿಲ್ಲ. ಇನ್ನು ಕೆಲವರು ಅದೆಷ್ಟು ಜ್ಞಾನವಂತರೆಂದರೆ ಬಿಪಿ, ಶುಗರು ಇತ್ಯಾದಿಗಳಿಗೆ ಅವುಗಳ ಪ್ರಮಾಣಕ್ಕನುಗುಣವಾಗಿ ಇಂಥದ್ದೇ ಗುಳಿಗೆ ನುಂಗಬೇಕು ಎಂಬಷ್ಟು ತಿಳಿವಳಿಕೆ; 'ಆ ಡಾಕ್ಟರ್ ಸರಿಯಿಲ್ಲ, ಹೀಗಾಗಿ ಇದಕ್ಕೆ ಈ ಔಷಧ ಕೊಟ್ಟರು' ಎಂದು ಹೇಳುವಷ್ಟು ಅಪಾರ ಜ್ಞಾನ!

ಆಯುರ್ವೇದ ಹುಟ್ಟಿದ್ದು ನಮ್ಮಲ್ಲಿ, ನಾಟಿ, ಮನೆ ಮದ್ದು, ಆಯುರ್ವೇದ ಇವುಗಳಲ್ಲಿ ಅನಾರೋಗ್ಯಗಳಿಗೆ ತೀರಾ ಸಾಚಾ, ಅಡ್ಡಪರಿಣಾಮವಿಲ್ಲದ ಪರಿಹಾರಗಳಿವೆ. ಹೊಟ್ಟೆನೋವು ಇತ್ಯಾದಿ ದೈಹಿಕ ಏರುಪೇರುಗಳಿಗೆ, ಚಿಕ್ಕಪುಟ್ಟ ಬಾಧೆಗಳಿಗೆ ವೈವಿಧ್ಯದ ಕಷಾಯ, ಬೇರು, ತೊಗಟೆ ಬಳಕೆಯಿದೆ. ಇವೆಲ್ಲ ಅತ್ಯಂತ ಪರಿಣಾಮಕಾರಿ ಪರಿಹಾರಗಳೇ ಆಗಿವೆ. ಆದರೆ ನಾವು ಅದೇ ಆಯುರ್ವೇದದ ಬದಲಿಗೆ ಅಲೋಪತಿಕ್ ಗುಳಿಗೆಗಳನ್ನು ನುಂಗಲು ಆರಂಭಿಸಿದ್ದೇವೆ. ಎಲ್ಲ ಅಲೋಪತಿಕ್ ಗುಳಿಗೆಗಳೂ ತೀರಾ ಕೆಟ್ಟದ್ದೆಂದೇನಲ್ಲ, ಆದರೆ ಅಡ್ಡ ಪರಿಣಾಮವಿಲ್ಲದ ಅಲೋಪತಿಕ್ ಗುಳಿಗೆಗಳಿಲ್ಲ, ಅದರಲ್ಲಿಯೂ ಆ್ಯಂಟಿಬಯೋಟಿಕ್ ಗುಳಿಗೆಗಳು. ಇವುಗಳ ಅಡ್ಡ ಪರಿಣಾಮ ಒಂದು ಕಡೆಯಾದರೆ, ಇನ್ನೊಂದು ಕಡೆ ಹೆಚ್ಚೆಚ್ಚು ಅನವಶ್ಯವಾಗಿ ಇವನ್ನು ಸೇವಿಸಿದಂತೆ ಮುಂದೊಂದು ದಿನ, ಆ ಔಷಧ ತೀರಾ ಅವಶ್ಯವಿರುವಾಗ ನಿಷ್ಪ್ರಯೋಜಕವಾಗುವುದು.

ಆ್ಯಂಟಿಬಯೋಟಿಕ್ ಇಲ್ಲಿಯವರೆಗೆ ಅದೆಷ್ಟೋ ಕೋಟಿ ಜನರ ಜೀವ ಉಳಿಸಿದೆ ಎನ್ನುವುದು ನಿಜ. ಅದೊಂದು ಆವಿಷ್ಕಾರವಾಗಿರದಿದ್ದಲ್ಲಿ ಮನುಷ್ಯ ಜನಸಂಖ್ಯೆ ಇಂದು ಅಜಮಾಸು ಎಂಟು ಬಿಲಿಯನ್ ತಲುಪುತ್ತಲೇ ಇರಲಿಲ್ಲ ಅನ್ನುವುದು ಅತಿಶಯೋಕ್ತಿ ಅಲ್ಲ. ಪೆನ್ಸಿಲಿನ್ ಆವಿಷ್ಕರಿಸಿದ ಅಲೆಕ್ಸಾಂಡರ್ ಫ್ಲೆಮಿಂಗ್ 1945ರಲ್ಲಿ ನೊಬೆಲ್ ಪ್ರಶಸ್ತಿ ಪಡೆದು ಮಾತನಾಡುವಾಗ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದ. 'ಕಾಲ ಕಳೆದಂತೆ ಆ್ಯಂಟಿಬಯೋಟಿಕ್ ಔಷಧಗಳಿಗೆ ಬ್ಯಾಕ್ಟೀರಿಯಾಗಳು ಪ್ರತಿರೋಧ ಪಡೆದುಕೊಳ್ಳುತ್ತ ಹೋಗುತ್ತವೆ. ಆ ಕಾರಣಕ್ಕೆ ಯಾವುದೇ ಆ್ಯಂಟಿಬಯೋಟಿಕ್ ಎಂದೂ ಶಾಶ್ವತ ಪರಿಹಾರವಲ್ಲ' ಎಂದು ವಿವರಿಸಿದ್ದ. ರೋಗಿಗಳಿಗೆ ಪೆನ್ಸಿಲಿನ್ ಕೊಡುವಾಗ ಮೊದಲ ಒಂದು ವರ್ಷ ಈ ಔಷಧ ಪವಾಡವೇ ಆಗಿತ್ತು. ಕ್ರಮೇಣ ಜನರಲ್ಲಿ ಹರಿದಾಡುವ ರೋಗಕಾರಕ ಬ್ಯಾಕ್ಟೀರಿಯಾಗಳು ಪೆನ್ಸಿಲಿನ್‌ನೆಡೆಗೆ ಆತ ಹೇಳಿದಂತೆ ಪ್ರತಿರೋಧ ಪಡೆದುಕೊಂಡವು. 1950ರ ಸಮಯದಲ್ಲಿ ಬಹುತೇಕ ರೋಗಕಾರಕ ಬ್ಯಾಕ್ಟೀರಿಯಾಗಳು ಪೆನ್ಸಿಲಿನ್ ಪ್ರತಿರೋಧ ಹೊಂದಿದ್ದವು. ಈ ಕಾರಣಕ್ಕೆ ಕೆಲವೇ ವರ್ಷಗಳ ಹಿಂದೆ ಪವಾಡದಂತಿದ್ದ ಪೆನ್ಸಿಲಿನ್ ಪ್ರಯೋಜನಕ್ಕೆ ಬಾರದ ಹಂತಕ್ಕೆ ತಲುಪಿತು. ಇದು ಪೆನ್ಸಿಲಿನ್ ಒಂದರ ಕಥೆಯಲ್ಲ, ಬಹುತೇಕ ಆ್ಯಂಟಿಬಯೋಟಿಕ್ ಔಷಧಗಳ ಕಥೆಯೂ ಇದೇ.

ಆ್ಯಂಟಿಬಯೋಟಿಕ್‌ನಲ್ಲಿ ಎರಡು ರೀತಿ– Bacteriostatic ಮತ್ತು Bactericidal. ಮೊದಲನೆಯದು ಬ್ಯಾಕ್ಟೀರಿಯಾ ವಿಭಜನೆಯಾಗಿ ಸಂಖ್ಯೆ ಹೆಚ್ಚುವುದನ್ನು ತಡೆಯುವುದರ ಮೂಲಕ ಸೋಂಕಿಗೆ ಪರಿಹಾರವಾದರೆ, ಎರಡನೆಯದು ರೋಗಕಾರಕ ಬ್ಯಾಕ್ಟೀರಿಯಾವನ್ನು ಕೊಲ್ಲುವುದು. ನಾವು ಪ್ರತಿ ಬಾರಿ ಆ್ಯಂಟಿಬಯೋಟಿಕ್ ಸೇವಿಸಿದಾಗಲೂ ಈ ಬ್ಯಾಕ್ಟೀರಿಯಾ ತನ್ನಲ್ಲಿ ಮಾರ್ಪಾಡು ಮಾಡಿಕೊಂಡು ತನ್ನ ಜೀವರಕ್ಷಣೆಗೆ ಪ್ರತಿರೋಧ ಪಡೆಯುತ್ತ ಹೋಗುತ್ತದೆ. ಈ ಪ್ರತಿರೋಧವನ್ನು ಆ್ಯಂಟಿಬಯೋಟಿಕ್ ರೆಸಿಸ್ಟೆನ್ಸ್ ಅನ್ನುವುದು. ನಾವು ದೇಹದೊಳಕ್ಕೆ ಹೆಚ್ಚು ಹೆಚ್ಚು ಆ್ಯಂಟಿಬಯೋಟಿಕ್ ಬಿಟ್ಟುಕೊಂಡಂತೆ ಈ ರೋಗಕಾರಕ ಬ್ಯಾಕ್ಟೀರಿಯಾಗಳು ಅಷ್ಟೇ ವೇಗವಾಗಿ ಪ್ರತಿರೋಧವನ್ನು ಪಡೆಯುತ್ತ ಹೋಗುತ್ತವೆ. ಇದರಿಂದಾಗಿ ಆ್ಯಂಟಿಬಯೋಟಿಕ್ ಔಷಧ ಕ್ರಮೇಣ ನಿಷ್ಪ್ರಯೋಜಕವಾಗುತ್ತ ಹೋಗುತ್ತದೆ.

ಇಲ್ಲಿ ಕೇವಲ ಆ್ಯಂಟಿಬಯೋಟಿಕ್ ಸೇವಿಸಿದ ವ್ಯಕ್ತಿಯಲ್ಲಷ್ಟೇ ಈ ಬ್ಯಾಕ್ಟೀರಿಯಾ ಪ್ರತಿರೋಧ ಹೊಂದುತ್ತದೆ ಎಂದು ತಪ್ಪು ಭಾವಿಸಬೇಡಿ. ಈ ತೆರನಾಗಿ ಔಷಧಕ್ಕೆ ಪ್ರತಿರೋಧ ಪಡೆದ ಬ್ಯಾಕ್ಟೀರಿಯಾ ಇನ್ನೊಬ್ಬರ ದೇಹ ಹೊಕ್ಕಾಗ ಕೂಡ ಮಾರುಕಟ್ಟೆಯಲ್ಲಿರುವ ಔಷಧ ಕೆಲಸವೇ ಮಾಡುವುದಿಲ್ಲ. ಇದೆಲ್ಲ ಅರ್ಥವಾಗಬೇಕೆಂದರೆ ಬ್ಯಾಕ್ಟೀರಿಯಾದ ಬಗ್ಗೆ ಚಿಕ್ಕದಾಗಿ ತಿಳಿದುಕೊಳ್ಳಬೇಕಾಗುತ್ತದೆ. ಬ್ಯಾಕ್ಟೀರಿಯಾ ಭೂಮಿಯಲ್ಲಿ ಅವತರಿಸಿ ಸುಮಾರು 350 ಕೋಟಿ ವರ್ಷವಾಗಿದೆ. ಬ್ಯಾಕ್ಟೀರಿಯಾ ಇಲ್ಲದೇ ನಾವು ಬದುಕಲು ಸಾಧ್ಯವೇ ಇಲ್ಲ. ಬ್ಯಾಕ್ಟೀರಿಯಾ ಅಷ್ಟರಮಟ್ಟಿಗೆ ಅವಶ್ಯಕ ಕೂಡ ಹೌದು. ವಯಸ್ಕರ ದೇಹದಲ್ಲಿ ಹತ್ತು ಸಾವಿರ ಕೋಟಿ ಸೂಕ್ಷ್ಮಾಣುಜೀವಿಗಳಿರುತ್ತವೆ. ದೇಹವು ಕೆಲಸ ಮಾಡಬೇಕೆಂದರೆ ಇವುಗಳಲ್ಲಿ ಹೆಚ್ಚಿನವು ಬೇಕು. ಬ್ಯಾಕ್ಟೀರಿಯಾ ಎಂದರೆ ಜೀವನಾವಶ್ಯಕ ಬ್ಯಾಕ್ಟೀರಿಯಾ ಒಂದು ಕಡೆ, ರೋಗಕಾರಕ ಬ್ಯಾಕ್ಟೀರಿಯಾ ಇನ್ನೊಂದು ಕಡೆ. ಪ್ರತಿದಿನ, ಕ್ಷಣ ಈ ರೀತಿಯ ಹತ್ತಾರು ರೋಗಕಾರಕ ಬ್ಯಾಕ್ಟೀರಿಯಾ ನಮ್ಮ ದೇಹವನ್ನು ಹೊಕ್ಕುತ್ತಲೇ ಇರುತ್ತವೆ ಮತ್ತು ದೇಹದಲ್ಲಿನ ಪ್ರತಿರೋಧಕ ಶಕ್ತಿ ಅದನ್ನು ಗುರುತಿಸಿ ಕೊಲ್ಲುತ್ತಲೇ ಇರುತ್ತವೆ. ಒಂದು ಬ್ಯಾಕ್ಟೀರಿಯಾ ದೇಹಕ್ಕೆ ಹೊಕ್ಕ ನಂತರ ತಾನು ವಿಭಜನೆಗೊಳ್ಳಲು ಶುರುಮಾಡಲು ಕೇವಲ ಇಪ್ಪತ್ತು ನಿಮಿಷ ಸಾಕು. ಈ ರೀತಿ ವಿಭಜನೆಯಾಗುವಾಗ ಅವು ಮ್ಯುಟೇಷನ್‌ಗೆ ಒಳಗಾಗುತ್ತವೆ. ದೇಹದಲ್ಲಿ ಆ್ಯಂಟಿಬಯೋಟಿಕ್ ಇದ್ದಲ್ಲಿ ಅಥವಾ ಪಡೆದಲ್ಲಿ ಈ ರೀತಿ ಮ್ಯುಟೇಷನ್ ವಿಭಜನೆಯಾಗುವಾಗ ಯಾವ ಮರಿ ಬ್ಯಾಕ್ಟೀರಿಯಾ ದೇಹ ಪ್ರತಿರೋಧಕ್ಕೆ ವ್ಯತಿರಿಕ್ತತೆ ಹೊಂದಿರುತ್ತದೆಯೋ ಅದು ಬದುಕಿಕೊಳ್ಳುತ್ತದೆ ಮತ್ತು ಅದರ ವಂಶ ಮುಂದುವರಿಯುತ್ತದೆ. ಈ ರೀತಿ ಅಲ್ಲೊಂದು ಆ್ಯಂಟಿಬಯೋಟಿಕ್ ಔಷಧ ಸಂಪೂರ್ಣವಾಗಿ ನಪಾಸಾಗಲು ಶುರುವಾಗುತ್ತದೆ. ಈ ಗಟ್ಟಿಗ ಬ್ಯಾಕ್ಟೀರಿಯಾ ನಂತರದಲ್ಲಿ ಇನ್ನಿತರರಿಗೆ ಹರಡುತ್ತ ಸಾಗುತ್ತದೆ. 'ಹರ್ಡ್ ಇಮ್ಯೂನಿಟಿ' ಎನ್ನುತ್ತೇವೆಯಲ್ಲ, ಅದನ್ನೇ ಇಲ್ಲಿ ಬ್ಯಾಕ್ಟೀರಿಯ ಆ್ಯಂಟಿಬಯೋಟಿಕ್‌ನ ವಿರುದ್ಧ ಪಡೆದುಕೊಳ್ಳುತ್ತದೆ.

ಈ ರೀತಿ ಆ್ಯಂಟಿಬಯೋಟಿಕ್ ರೆಸಿಸ್ಟೆನ್ಸ್ ಸಂಖ್ಯೆ ಈಗ, ಅದರಲ್ಲೂ ಭಾರತದಲ್ಲಿ ಎಲ್ಲಿಲ್ಲದಂತೆ ಹೆಚ್ಚುತ್ತಿದೆ. ಸದ್ಯ ಪ್ರತಿವರ್ಷ ಆ್ಯಂಟಿಬಯೋಟಿಕ್ ಔಷಧಗಳೆಲ್ಲ ನಿಷ್ಪ್ರಯೋಜಕವಾಗಿ, ಸಾಯುವವರ ಸಂಖ್ಯೆ ಜಗತ್ತಿನಲ್ಲಿ ಹದಿನೈದು ಲಕ್ಷಕ್ಕಿಂತ ಜಾಸ್ತಿ. ಈ ಸಂಖ್ಯೆ ಚಿಕ್ಕದಲ್ಲ. ಆ್ಯಂಟಿಬಯೋಟಿಕ್ ರೆಸಿಸ್ಟೆನ್ಸ್‌ನಿಂದ ಸಾಯುವವರ ಸಂಖ್ಯೆಯ ಏರಿಕೆಯ ರೇಖೆಯನ್ನು ಭವಿಷ್ಯಕ್ಕೆ ಎಳೆದುನೋಡಿದರೆ 2050ರ ವೇಳೆಗೆ ಈ ಸಂಖ್ಯೆ ಪ್ರತಿವರ್ಷಕ್ಕೆ ಎರಡು ಕೋಟಿಗೆ ತಲುಪುತ್ತದೆ ಎನ್ನುವುದು ಅಮೆರಿಕಾದ ಇಈಇಯ ಲೆಕ್ಕ. ಇದು ಉತ್ಪ್ರೇಕ್ಷೆಯೆನಿಸುವುದಿಲ್ಲ, ಪೆನ್ಸಿಲಿನ್ ಕಂಡುಹಿಡಿದ ಅಲೆಕ್ಸಾಂಡರ್ ಫ್ಲೆಮಿಂಗ್ ಇದನ್ನು ಎಪ್ಪತ್ತು ವರ್ಷದ ಹಿಂದೆ ಮೊದಲ ಆ್ಯಂಟಿಬಯೋಟಿಕ್ ಕಂಡುಹಿಡಿದಾಗಲೇ ಗ್ರಹಿಸಿದ್ದ ಮತ್ತು ತನ್ನ ಜೀವನದುದ್ದಕ್ಕೂ ಅದನ್ನು ಹೇಳಿಕೊಂಡೇ ಬಂದ.

ಇದು ನಾವೆಲ್ಲಾ ಅಂದಾಜಿಸುವುದಕ್ಕಿಂತ ದೊಡ್ಡ ಸಮಸ್ಯೆ. ಈ ಸಮಸ್ಯೆ ಕಾಲ ಕಳೆದಂತೆ ಹೆಚ್ಚುತ್ತ ಸಾಗುತ್ತಿದೆ. ಅದಕ್ಕೆ ಕಾರಣಗಳು ಕೂಡ ಇದೆ. ಮೊದಲನೆಯದು ಅತಿಯಾದ, ಅನವಶ್ಯಕ ಆ್ಯಂಟಿಬಯೋಟಿಕ್ ಸೇವನೆ. ಇನ್ನೊಂದು– ಇಂದು ಆಸ್ಪತ್ರೆಗಳಲ್ಲಿ, ಅದರಲ್ಲಿಯೂ ಹೊರ ರೋಗಿಗಳ ವಿಭಾಗದಲ್ಲಿ ಮೊದಲು ಕೊಡುವ ಔಷಧ ಸಾಮಾನ್ಯವಾಗಿ ಆ್ಯಂಟಿಬಯೋಟಿಕ್. ಹೊರ ರೋಗಿಗಳ ವಿಭಾಗದಲ್ಲಿ ಬರುವ ಮೂವರಲ್ಲಿ ಒಬ್ಬರಿಗೆ ವೈರಸ್‌ನಿಂದ ರೋಗ ಬಂದಿರಬಹುದು. ಅವರಿಗೂ ಬಹುತೇಕ ಕಡೆ ವಿಚಾರ ಮಾಡದೇ ಆ್ಯಂಟಿಬಯೋಟಿಕ್ ಕೊಡಲಾಗುತ್ತದೆ. ಯಾವುದಕ್ಕೂ ಇರಲಿ ಎಂದು ಒಂದು ಆ್ಯಂಟಿಬಯೋಟಿಕ್. ಅಸಲಿಗೆ ವೈರಸ್‌ನ ಮೇಲೆ ಆ್ಯಂಟಿಬಯೋಟಿಕ್ ಯಾವುದೇ ಕೆಲಸ ಮಾಡುವುದೇ ಇಲ್ಲ. ಆ್ಯಂಟಿಬಯೋಟಿಕ್ ಇರುವುದೇ ಬ್ಯಾಕ್ಟೀರಿಯಾ ಶಮನಕ್ಕೆ. ಸಾಮಾನ್ಯವಾಗಿ ಜ್ವರ ಬಂದಲ್ಲಿ ಅಥವಾ ನೆಗಡಿಯಾದಲ್ಲಿ ನಾವೇ ಹೋಗಿ ಆ್ಯಂಟಿಬಯೋಟಿಕ್ ತಂದು ನುಂಗುತ್ತೇವೆ. ಈ ಎಲ್ಲ ರೋಗಗಳಿಗೆ ಕಾರಣ ವೈರಸ್, ಆದರೆ ನಾವು ನಮಗೆ ಕೊಟ್ಟುಕೊಳ್ಳುವ ಔಷಧ ಬ್ಯಾಕ್ಟೀರಿಯಾಕ್ಕೆ, ಹೇಗಿದೆ ನೋಡಿ! ಇದೆಲ್ಲದರಿಂದ ಬ್ಯಾಕ್ಟೀರಿಯಾಗಳಲ್ಲಿ ಈ ಆ್ಯಂಟಿಬಯೋಟಿಕ್ ರೆಸಿಸ್ಟೆನ್ಸ್ ಕೂಡ ಹೆಚ್ಚುತ್ತಲೇ ಹೋಗುತ್ತದೆ. ನಿಜವಾಗಿ ಬ್ಯಾಕ್ಟೀರಿಯಾವನ್ನು ಕೊಲ್ಲಬೇಕೆಂದು ಆ್ಯಂಟಿಬಯೋಟಿಕ್ ಬಳಸಿದಲ್ಲಿ ಅದು ಕೆಲಸ ಮಾಡುವುದಿಲ್ಲ.

ಈಗ್ಗೆ ಕೆಲವು ದಶಕಗಳಿಂದೀಚೆಗೆ ಈ ಎಲ್ಲ ಸಮಸ್ಯೆಗಳು ಇಮ್ಮಡಿಸಿದ್ದಕ್ಕೆ ಇನ್ನೊಂದು ಕಾರಣ ಫಾರ್ಮ್ ಪ್ರಾಣಿ ಸಾಕಾಣಿಕೆ. ಪ್ರಪಂಚದಲ್ಲಿ ಇಂದು ತಯಾರಾಗುವ ಶೇ.88 ರಷ್ಟು ಆ್ಯಂಟಿಬಯೋಟಿಕ್ ಬಳಕೆಯಾಗುವುದು ಫಾರ್ಮ್‌ಗಳಲ್ಲಿ ಆಹಾರಕ್ಕೆಂದು ಬೆಳೆಸುವ ಪ್ರಾಣಿಗಳಿಗೆ. 2021ರ ಒಂದು ವರ್ಷದಲ್ಲಿ ಪ್ರಾಣಿಗಳಿಗೆ ಬಳಸಲ್ಪಟ್ಟ ಆ್ಯಂಟಿಬಯೋಟಿಕ್ ಬರೋಬ್ಬರಿ 2,70,000 ಟನ್. ಮಾಂಸಕ್ಕಾಗಿ ಸಾಕುವ ಪ್ರಾಣಿಗಳ ಬೆಳವಣಿಗೆಯ ವೇಗ ಹೆಚ್ಚಿಸಲು ಮತ್ತು ಸಾಮಾನ್ಯ ಬ್ಯಾಕ್ಟೀರಿಯಾಗಳಿಂದ ಹರಡುವ ರೋಗಗಳನ್ನು ತಡೆಗಟ್ಟಲು ಫಾರ್ಮ್‌ಗಳಲ್ಲಿ ಬೇಕರಲಿ, ಬೇಡವಾಗಿರಲಿ ಆಹಾರದ ಜತೆ ಯಥೇಚ್ಛವಾಗಿ ಆ್ಯಂಟಿಬಯೋಟಿಕ್ ನೀಡಲಾಗುತ್ತದೆ. ಅದಿಲ್ಲದಿದ್ದರೆ ಅಷ್ಟು ಸಾಂದ್ರತೆಯಲ್ಲಿ ಬದುಕುವ ಪ್ರಾಣಿಗಳಲ್ಲಿ ಸಾಂಕ್ರಾಮಿಕ ರೋಗ ಥಟ್ಟನೆ ಹುಟ್ಟಿ ಹರಡಿಬಿಡುತ್ತದೆ. ಹೀಗಾದಲ್ಲಿ ಇಡೀ ಫಾರ್ಮ್ ನಾಶವಾಗಿಬಿಡಬಹುದು. ಅಲ್ಲೆಲ್ಲ ಈ ಆ್ಯಂಟಿಬಯೋಟಿಕ್ ರೆಸಿಸ್ಟೆನ್ಸ್ ಹೆಚ್ಚಾಗುವುದಲ್ಲದೆ ಅಲ್ಲಿ ಈ ತೆರನಾಗಿ ಆ್ಯಂಟಿಬಯೋಟಿಕ್‌ಗೆ ಪ್ರತಿರೋಧವನ್ನು ಹೊಂದಿದ ಬ್ಯಾಕ್ಟೀರಿಯಾಗಳು ಕ್ರಮೇಣ ಆಹಾರವಾಗಿ, ನೀರು, ಗಾಳಿ, ಮಣ್ಣಿಗೆ ಸೇರಿ ನಂತರ ಮನುಷ್ಯ ದೇಹವನ್ನು ಸೇರಿಕೊಳ್ಳುತ್ತವೆ. ಈ ರೀತಿ ಆ್ಯಂಟಿಬಯೋಟಿಕ್ ಪ್ರತಿರೋಧ ಹೊಂದಿದ ಮ್ಯುಟೇಟೆಡ್ ಬ್ಯಾಕ್ಟೀರಿಯಾವನ್ನು 'ಸೂಪರ್ ಬಗ್' ಎನ್ನಲಾಗುತ್ತದೆ. ಈ ಸೂಪರ್ ಬಗ್ ದೇಹಕ್ಕೆ ಹೊಕ್ಕಿದಾಗ ಅವಕ್ಕೆ ಆದಾಗಲೇ ಎಲ್ಲ ಆ್ಯಂಟಿಬಯೋಟಿಕ್ ಔಷಧವನ್ನು ಮೀರಿ ಬದುಕುವ ತಾಕತ್ತು ಬೆಳೆದಾಗಿರುತ್ತದೆ. ಮುಂದುವರಿದ ದೇಶಗಳಲ್ಲಿ ಇಂದು ಪ್ರಾಣಿಗಳಿಗೆ ಆ್ಯಂಟಿಬಯೋಟಿಕ್ ಬಳಕೆ ತಕ್ಕಮಟ್ಟಿಗಿನ ನಿಯಂತ್ರಣದಲ್ಲಿದೆ. ಬೇಕೆಂದಲ್ಲಿ ಆ್ಯಂಟಿಬಯೋಟಿಕ್ ಹಾಕದೆ ಬೆಳೆಸಿದ ಪ್ರಮಾಣೀಕರಿಸಿದ ಮಾಂಸ ಕೂಡ ಹೆಚ್ಚಿನ ಬೆಲೆಗೆ ಲಭ್ಯ. ಆದರೆ ಜಗತ್ತಿನ ಬಹುತೇಕ ದೇಶಗಳಲ್ಲಿ ಇದೆಲ್ಲದಕ್ಕೆ ಲಂಗು ಲಗಾಮೇ ಇಲ್ಲ.

ಚಿಕ್ಕಪುಟ್ಟ ಆಪರೇಷನ್‌ನಿಂದ ಹಿಡಿದು ಎಲ್ಲ ಬಗೆಯ ದೊಡ್ಡ ಶಸ್ತ್ರಚಿಕಿತ್ಸೆಗೂ ಆ್ಯಂಟಿಬಯೋಟಿಕ್ ಬೇಕೇ ಬೇಕು. ಅದಿಲ್ಲದೇ ಹೋದಲ್ಲಿ ಅಲ್ಲಿ ಸೋಂಕು ತಾಗಿ ರೋಗಿ 'ಶಿವಾ' ಎನ್ನುವುದು ಖಂಡಿತ. ಆದರೆ ನಾವು, ನಮ್ಮ ವಿಜ್ಞಾನ ಬೆಳೆದಂತೆ ಮತ್ತು ಆ್ಯಂಟಿಬಯೋಟಿಕ್ ಅನ್ನು ಎಗ್ಗಿಲ್ಲದೆ ಬಳಸುವುದರಿಂದ ಎಲ್ಲಿಲ್ಲದ ಪ್ರಮಾಣ ಮತ್ತು ವೇಗದಲ್ಲಿ ಈ ಬ್ಯಾಕ್ಟೀರಿಯಾಗಳು ಕೂಡ ಈ ಪ್ರತಿರೋಧವನ್ನು ಹೊಂದುತ್ತಿವೆ. ನಾವು ಒಂದು ಕೈ ಮೇಲಾದರೆ ಅವು ಸ್ವಲ್ಪ ಸಮಯದಲ್ಲೇ ಎರಡು ಕೈ ಮೇಲಾಗುತ್ತವೆ.

ಇದು ತೀರಾ ಸಮಸ್ಯೆಯೆನಿಸುವುದು ICU ಮತ್ತು ಆಸ್ಪತ್ರೆಗಳಲ್ಲಿ, ಆಸ್ಪತ್ರೆಯೆಂದರೆ ಅಲ್ಲಿ ನಾನಾ ರೋಗದವರು ಶುಶ್ರೂಷೆ ಪಡೆಯುತ್ತಿರುತ್ತಾರೆ. ಐಸಿಯುನಲ್ಲಿ ಸಾಮಾನ್ಯವಾಗಿ ಈ ರೀತಿಯ ಆ್ಯಂಟಿಬಯೋಟಿಕ್ಸ್‌ಗೆ ಪ್ರತಿರೋಧ ಪಡೆದ ಬ್ಯಾಕ್ಟೀರಿಯಾ ಸೇರಿಕೊಂಡಿತೆಂದರೆ ಅದು ಅಲ್ಲಿಯೇ ಒಬ್ಬರಿಂದೊಬ್ಬರಿಗೆ ದಾಟುತ್ತ, ಅಲ್ಲಿ ಬಳಸುವ ಆ್ಯಂಟಿಬಯೋಟಿಕ್ಸ್‌ಗೆ ಕ್ಯಾರೇ ಅನ್ನದೆ ನಿರಂತರವಾಗಿ ಹರಡುತ್ತಲೇ ಇರುತ್ತದೆ. ಇಂದು ಬಹುತೇಕ ಎಲ್ಲ ಐಸಿಯುನಲ್ಲಿ ಆ್ಯಂಟಿಬಯೋಟಿಕ್ ರೆಸಿಸ್ಟೆನ್ಸ್ ತೀರಾ ಸಾಮಾನ್ಯ ಸಮಸ್ಯೆ. ಇಂಥ ಬ್ಯಾಕ್ಟೀರಿಯಾಗಳನ್ನು ಅಲ್ಟ್ರಾವಯೋಲೆಟ್ ಬೆಳಕು ಹರಿಸಿ ಸಾಯಿಸಬಹುದೇನೋ ನಿಜ; ಆದರೆ ಅದಕ್ಕೆ ಮೊದಲು ICU ಖಾಲಿ ಮಾಡಿ ಆ ಕೆಲಸ ಮಾಡಬೇಕು. ಐಸಿಯು ಸಾಮಾನ್ಯವಾಗಿ ಖಾಲಿಯಾಗುವ ಪ್ರಮೇಯವೇ ಹೆಚ್ಚಿನ ಆಸ್ಪತ್ರೆಯಲ್ಲಿ ಇರುವುದಿಲ್ಲ. ಆ ಕಾರಣಕ್ಕೆ ಈ ಬ್ಯಾಕ್ಟೀರಿಯಾಗಳು ಅಲ್ಲಿ ನೆಲೆಯೂರಿ ಬಂದವರಿಗೆಲ್ಲ ಹರಡುತ್ತ ಹೋಗುತ್ತವೆ. ಹಾಗೆ ಪ್ರತಿರೋಧ ಪಡೆದ ಬ್ಯಾಕ್ಟೀರಿಯಾದೆದುರು ಆ್ಯಂಟಿಬಯೋಟಿಕ್ ಔಷಧಗಳು ಕೈಚೆಲ್ಲಿ ನಿಲ್ಲುತ್ತವೆ.

ಬೇಕಾಬಿಟ್ಟಿ ಆ್ಯಂಟಿಬಯೋಟಿಕ್ ಸೇವಿಸದಿರುವುದು, ಡಾಕ್ಟರುಗಳು ತೀರಾ ಅವಶ್ಯಕವೆನಿಸಿದಾಗಲಷ್ಟೇ ಬರೆದುಕೊಡುವುದು, ಆ್ಯಂಟಿಬಯೋಟಿಕ್ ಬಳಸಿ ಬೆಳೆಸಿದ ಮಾಂಸವನ್ನು ಸೇವಿಸದೇ ಇರುವುದು, ಈ ಮಟ್ಟಿಗೆ ವೈದ್ಯರಲ್ಲಿ ಮತ್ತು ಜನಸಾಮಾನ್ಯರಲ್ಲಿ ಜಾಗೃತೆ ಮೂಡಿಸುವುದು ಇದೆಲ್ಲದರಿಂದ ಈ ರೋಗಕಾರಕ ಬ್ಯಾಕ್ಟೀರಿಯಾವನ್ನು ತಕ್ಕ ಮಟ್ಟಿಗೆ ಹದ್ದುಬಸ್ತಿನಲ್ಲಿಡಬಹುದು. ಅದಿಲ್ಲದಿದ್ದರೆ ಕ್ರಮೇಣ ಎಲ್ಲ ಆ್ಯಂಟಿಬಯೋಟಿಕ್ ಔಷಧಗಳನ್ನೂ ಮೀರಿ ಈ ಎಲ್ಲ ರೋಗಕಾರಕ ಬ್ಯಾಕ್ಟೀರಿಯಾಗಳು ಬೆಳೆದು ಹರಡಿ ಇನ್ಯಾವುದೋ ಒಂದು ಹೊಸ ರೋಗ, ಸಮಸ್ಯೆ, ಸಾಂಕ್ರಾಮಿಕಕ್ಕೆ ಕಾರಣವಾಗಬಹುದು ಎನ್ನುವುದು ಇಂದಿನ WHO ಆತಂಕ.

ಒಂದು ಹೊಸ ಆ್ಯಂಟಿಬಯೋಟಿಕ್ ಅನ್ನು ಕಂಡುಹಿಡಿದು ಅದನ್ನು ತಯಾರಿಸಿ ಮಾರುಕಟ್ಟೆಗೆ ತರಲು ಸಾವಿರಾರು ಕೋಟಿ ರುಪಾಯಿ ವ್ಯಯಿಸಬೇಕಾಗುತ್ತದೆ ಮತ್ತು ಅದಕ್ಕೆ ದಶಕದಷ್ಟು ಸಮಯ ಕೂಡ ಬೇಕು. ಆ ಕಾರಣಕ್ಕೆ ಇಂದು ಹೆಚ್ಚಿನ ಕಂಪನಿಗಳು ಹೊಸ ತಳಿಯ ಆ್ಯಂಟಿಬಯೋಟಿಕ್‌ಗಳನ್ನು ಆವಿಷ್ಕರಿಸಲು ಮುಂದಾಗುವುದಿಲ್ಲ, ಇದಕ್ಕೆಲ್ಲ ಫಾರ್ಮಾ ಕಂಪನಿಗಳನ್ನು ಅಥವಾ ಡಾಕ್ಟರುಗಳನ್ನು ಕಟಕಟೆಯಲ್ಲಿ ನಿಲ್ಲಿಸುವುದು ಸರಿಯಲ್ಲ, ಇದೆಲ್ಲದಕ್ಕೆ ನಾವೆಲ್ಲ ಆ್ಯಂಟಿಬಯೋಟಿಕ್ ಬಳಸಿದ ರೀತಿಯೇ ಕಾರಣ. ಪ್ರತಿ ಬಾರಿ ಎಲ್ಲಿಯೇ ಆ್ಯಂಟಿಬಯೋಟಿಕ್ ಬಳಸಿದಾಗಲೂ ಅಲ್ಲಿ ನಿಧಾನಕ್ಕೆ ಆ್ಯಂಟಿಬಯೋಟಿಕ್ ಪ್ರತಿರೋಧವನ್ನು ಕೂಡ ಬೆಳೆಸಿದಂತಾಗುತ್ತದೆ. ಈ ಪ್ರತಿರೋಧ ಹೊಂದಿದ ಬ್ಯಾಕ್ಟೀರಿಯಾಗಳು ಬಾಳಿ ಹೆಚ್ಚಿದಂತೆಲ್ಲ ನಮ್ಮಲ್ಲಿರುವ ಆ್ಯಂಟಿಬಯೋಟಿಕ್ ಔಷಧ ವಿಫಲವಾಗುತ್ತ ಹೋಗುತ್ತದೆ. ಇದು ನಿಧಾನವಾಗಿ ಆಗುತ್ತಿದೆ ಎಂದು ಎಲ್ಲ ಹೇಳಿದರೂ ಇದರ ವೇಗ ದಿನಗಳೆದಂತೆ ಹೆಚ್ಚುತ್ತಿದೆ. ಇದೇ ಕಾರಣಕ್ಕೆ ಇಂದು ಟಿಬಿ ಉಂಟುಮಾಡುವ ಬ್ಯಾಕ್ಟೀರಿಯಾಗಳು ಮೂರ್ನಾಲ್ಕು ದೇಶಗಳಲ್ಲಿ ಇಂದು ಲಭ್ಯವಿರುವ ಎಲ್ಲ ಆ್ಯಂಟಿಬಯೋಟಿಕ್ ಔಷಧಗಳೆಡೆಗೆ ಈಗಾಗಲೇ ಪ್ರತಿರೋಧ ಹೊಂದಿಬಿಟ್ಟಿವೆ. ಇವು ಮುಂದಿನ ದಿನಗಳಲ್ಲಿ ಇನ್ನಷ್ಟು ದೇಶಕ್ಕೆ ಹರಡುವ ಭೀತಿ ದಿನಗಳೆದಂತೆ ಹೆಚ್ಚುತ್ತಿದೆ. ಈ ರೀತಿ ಎಲ್ಲ ಆ್ಯಂಟಿಬಯೋಟಿಕ್‌ಗಳು ಕೈಚೆಲ್ಲಿದಾಗ ಬ್ಯಾಕ್ಟೀರಿಯಾವನ್ನು ತಿನ್ನಲು ವಿಶೇಷ ವೈರಸ್ ಅನ್ನು ದೇಹದೊಳಕ್ಕೆ ಬಿಡುವ ಹೊಸತೊಂದಿಷ್ಟು ಶುಶ್ರೂಷಾ ಪದ್ಧತಿ ಈಗೀಗ ಮುನ್ನೆಲೆಗೆ ಬರುತ್ತಿದೆ. ಆದರೆ ಈ ರೀತಿಯ ವೈರಸ್‌ಗಳಿಂದಾಗುವ ಅಡ್ಡ ಪರಿಣಾಮ ನಮಗಿನ್ನೂ ತಿಳಿಯಲು ಇನ್ನೊಂದೈವತ್ತು ವರ್ಷವೇ ಬೇಕು.

ಒಟ್ಟಾರೆ ಈ ಎಲ್ಲ ಕಾರಣಗಳಿಂದಾಗಿ ಅವಶ್ಯಕತೆಯಿರುವಾಗ ಲಷ್ಟೇ ಆ್ಯಂಟಿಬಯೋಟಿಕ್ ಬಳಸುವುದು ಮುಖ್ಯವಾಗುತ್ತದೆ. ಈಗೀಗ ವೈದ್ಯಲೋಕದಲ್ಲಿ ಈ ಜಾಗ್ರತೆಯನ್ನು ಮೂಡಿಸುವ ಕೆಲಸ ವ್ಯಾಪಕವಾಗಿ ನಡೆಯುತ್ತಿದೆ. ಆದರೆ ಇದು ಕೇವಲ ವೈದ್ಯರ ಕೆಲಸವಷ್ಟೇ ಅಲ್ಲ, ಇದರ ಜವಾಬ್ದಾರಿ ವೈದ್ಯರಲ್ಲದವರ ಮೇಲೆ ಕೂಡ ಇದೆ. ಬೇಕಾಬಿಟ್ಟಿ ಆ್ಯಂಟಿಬಯೋಟಿಕ್ ನುಂಗುವ ಹೊಸ ಖಯಾಲಿಯನ್ನು ತಕ್ಷಣಕ್ಕೆ ನಿಲ್ಲಿಸಬೇಕು. ಸಣ್ಣಪುಟ್ಟ ರೋಗಕ್ಕೆಲ್ಲ ವೈದ್ಯರಲ್ಲಿ ಓಡುವ ಅವಶ್ಯಕತೆಯಿರುವುದಿಲ್ಲ, ವಿವೇಚಿಸಿ ವ್ಯವಹರಿಸಬೇಕು. 'ಡಾಕ್ಟ್ರೇ ನನಗೆ ಆ್ಯಂಟಿಬಯೋಟಿಕ್ ಕೊಟ್ಟುಬಿಡಿ' ಎಂದು ಅಧಿಕಪ್ರಸಂಗ ಮಾಡಿ ಒತ್ತಾಯಿಸಬಾರದು. ಆ್ಯಂಟಿಬಯೋಟಿಕ್ ಕೊಡದ ವೈದ್ಯರು ಸರಿಯಿಲ್ಲ ಎಂಬಂತಾಗಬಾರದು. ಡಾಕ್ಟರ್ 'ಆರಾಮಾಗುತ್ತೆ, ಔಷಧ ಬೇಡ' ಎಂದರೆ ಅರ್ಥಮಾಡಿಕೊಳ್ಳಬೇಕು. ರೋಗವೆಂದರೆ ಔಷಧವೇ ಪರಿಹಾರ ಎನ್ನುವ ಮೂಢನಂಬಿಕೆ ನಿಲ್ಲಬೇಕು. ಸುಮ್ಮನೆ ಪಂಚಕಜ್ಜಾಯದಂತೆ ಗುಳಿಗೆ ನುಂಗುವ ನಾನ್ಸೆನ್ಸ್‌ನಂತೂ ಮಾಡಲೇ ಬಾರದು. ಸಮಸ್ಯೆ ಕೈಮೀರುವ ಮೊದಲು ಜಾಗೃತರಾಗಬೇಕು, ಇತರರಲ್ಲಿ ಜಾಗೃತಿ ಮೂಡಿಸಬೇಕು.

ಅಂದು ಅರಸು, ಇಂದು ಸಿದ್ದರಾಮಯ್ಯ

ಒಡಲಾಳ

ಬಿ.ಎಸ್.ಶಿವಣ್ಣ

vveditoped@gmail.com

ಅಂದು ಹೀಗೆಯೇ ನಡೆದಿತ್ತು! ಶೋಷಿತ ವರ್ಗದ ಗಟ್ಟಿ ಧ್ವನಿಯಾಗಿ, ರಾಜಕೀಯ ಹಕ್ಕುಗಳಿಂದ ವಂಚಿತರಾಗಿದ್ದ ಹಿಂದುಳಿದ, ದಲಿತ ಹಾಗೂ ಅಲ್ಪಸಂಖ್ಯಾತ ವರ್ಗದ ಆಶಾಕಿರಣವಾಗಿ ಬೆಳಗಿದ ದಿ.ದೇವರಾಜ ಅರಸು ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸುವುದಕ್ಕೆ ಇದೇ ಬಗೆಯ ಷಡ್ಯಂತ್ರ ನಡೆಸಲಾಗಿತ್ತು. ರಾಜ್ಯ ರಾಜಕಾರಣದಲ್ಲಿ ತಾವು ನಡೆಸಿದ ಸೋಷಿಯಲ್ ಎಂಜಿನಿಯರಿಂಗ್ ಫಲವಾಗಿ ಸತತ ಎರಡನೇ ಬಾರಿಗೆ ಅರಸು ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಇತಿಹಾಸ ನಿರ್ಮಿಸಿದ್ದರು. ಆದರೆ ಒಬ್ಬ ಹಿಂದುಳಿದ ವರ್ಗದ ನಾಯಕ ಮತ್ತೆ ಮತ್ತೆ ಅಧಿಕಾರದಲ್ಲಿ ಪ್ರತಿಷ್ಠಾಪನೆಗೊಳ್ಳುವುದನ್ನು ಸ್ಥಾಪಿತ ಹಾಗೂ ಪಟ್ಟಭದ್ರ ಹಿತಾಸಕ್ತಿಗಳು ಸಹಿಸಿಕೊಳ್ಳಲಿಲ್ಲ. ಅದರ ಜತೆಗೆ ಸಮಯಸಾಧಕರ ಗುಂಪು ಈ ಕೂಟವನ್ನು ಸೇರಿಕೊಂಡು ಅರಸು ಅವರನ್ನು ಹಣಿಯುವುದಕ್ಕೆ ಪಿತೂರಿ ನಡೆಸಿತು.

ಅದೇ ಬಗೆಯ ಸಂಚು ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ನಡೆಯುತ್ತಿದೆ. ಅರಸು ಅವರಂತೆ ಸಿದ್ದರಾಮಯ್ಯ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೇ ಒಂದು ಸಂಕ್ರಮಣ ಕಾಲದಲ್ಲಿ. ಅರಸು ನಂತರದ ಸುದೀರ್ಘ ಅವಧಿಯಲ್ಲಿ ಕರ್ನಾಟಕದಲ್ಲಿ ಹಿಂದುಳಿದ ಹಾಗೂ ಶೋಷಿತ ವರ್ಗಕ್ಕೆ ಸೂಕ್ತ ರಾಜಕೀಯ ಪ್ರಾತಿನಿಧ್ಯವೇ ಸಿಕ್ಕಿರಲಿಲ್ಲ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕುಟುಂಬ ವರ್ಗದ ದ್ವೇಷ ಹಾಗೂ ಸೇಡಿನ ರಾಜಕಾರಣದ ನಡುವೆಯೂ ತಮ್ಮ ಅರ್ಹತೆ ಮತ್ತು ಜನಪ್ರಿಯ ನಾಯಕತ್ವದ ಮೂಲಕ ಅಹಿಂದ ವರ್ಗವನ್ನು ಸಂಘಟಿಸಿ ಅವರು ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದರು. ಸಿದ್ದರಾಮಯ್ಯ ಅವರಿಗೆ ಸಿಕ್ಕ ಈ ಅಧಿಕಾರ ಸಮಸ್ತ ಅಹಿಂದ ವರ್ಗಕ್ಕೆ ದೊರೆತ ಅಧಿಕಾರವಾಗಿತ್ತು. ಹೀಗಾಗಿ ತಮ್ಮ ಮೊದಲ ಅವಧಿಯಲ್ಲಿ ಎಸ್‌ಸಿಎಸ್‌ಪಿ, ಟಿಎಸ್‌ಪಿಯಂಥ ಕ್ರಾಂತಿಕಾರಿ ಕಾಯಿದೆಗಳನ್ನು ಜಾರಿಗೆ ತಂದರು. ಎಲ್ಲದಕ್ಕಿಂತ ಮುಖ್ಯವಾಗಿ ರಾಜ್ಯದ ಎಲ್ಲ ಸಮುದಾಯಗಳ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳನ್ನು ಅರಿಯುವುದಕ್ಕಾಗಿ 150 ಕೋಟಿ ರು. ವೆಚ್ಚದಲ್ಲಿ ಗಣತಿ ಕಾರ್ಯ ನಡೆಸಿದರು. ಕಾಂಗ್ರೆಸ್ ಪ್ರಣಾಳಿಕೆಯಲ್ಲಿನ 150ಕ್ಕೂ ಹೆಚ್ಚು ಭರವಸೆಗಳು ಯಶಸ್ವಿಯಾಗಿ ಜಾರಿಗೊಂಡವು. ಸತತ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗುವ ಅವಕಾಶದಿಂದ ವಂಚಿತರಾಗುವುದಕ್ಕೂ ಷಡ್ಯಂತ್ರವೇ ಕಾರಣವಾಗಿತ್ತು. ಆದರೆ ಈಗ ಮತ್ತೆ ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ನಂತರ ಅದೇ ರಾಜಕೀಯ ಕೂಟ ಸಂಚು ರೂಪಿಸಿದೆ. ದೇವರಾಜ ಅರಸು ಅವರನ್ನು ಅಧಿಕಾರದಿಂದ ಕೆಳಗೆ ಇಳಿಸುವುದಕ್ಕೆ ಯಾರು ಕಾರಣರಾಗಿದ್ದರೋ ಅವರೇ ಈಗ ಸಿದ್ದರಾಮಯ್ಯ ವಿರುದ್ಧ ಭೂ ಅಕ್ರಮದ ಸುಳ್ಳು ಆರೋಪ ಮಾಡುತ್ತಿದ್ದಾರೆ. ಅಧಿಕಾರ ಹಾಗೂ ಕ್ಷಣಿಕ ಆಸೆಗಳಿಗಾಗಿ ಕಾಂಗ್ರೆಸ್ ತೊರೆದು, ಜೆಡಿಎಸ್, ಬಿಜೆಪಿ ಸುತ್ತಿದ ಗೋಸುಂಬೆ ರಾಜಕಾರಣಿ ಎಚ್.ವಿಶ್ವನಾಥ 'ಮುಡಾ' ವಿಚಾರದಲ್ಲಿ ಮಾತನಾಡುವ ಯಾವ ನೈತಿಕತೆ ಉಳಿಸಿಕೊಂಡಿದ್ದಾರೆ? ಅರಸು ಪದಚ್ಯುತಿ ಸಂದರ್ಭದಲ್ಲಿ ದೇವರಾಜ ಅರಸು ಅವರ ಬೆನ್ನಿಗೆ ಚೂರಿಹಾಕಿದ ವಿಶ್ವನಾಥ್ ಯಾವ ರೀತಿ ವರ್ತಿಸಿದ್ದರು ಎಂಬುದನ್ನು ಈಗ ಬಿಡಿಸಿ ಹೇಳಬೇಕಾಗಿಲ್ಲ. ಅರಸು ವಿರುದ್ಧ ಗ್ರೋವರ್ ಆಯೋಗ ರಚನೆಯಾಗುವುದಕ್ಕೆ ತೆರೆಮರೆಯಲ್ಲಿ ಯತ್ನಿಸಿದ್ದ ಎಚ್.ಡಿ.ದೇವೇಗೌಡರು ಈಗ ಸಿದ್ದರಾಮಯ್ಯ ವಿರುದ್ಧ ದಿಲ್ಲಿಯಲ್ಲಿ ಕಾರ್ಯತಂತ್ರ ನಡೆಸುತ್ತಿರುವುದು ಸುಳ್ಳಾ? ವೀಲ್ ಚೇರ್‌ನಲ್ಲಿ ಹಗಲಿರುಳೆನ್ನದೇ ಅವರು ದಿಲ್ಲಿ ಸುತ್ತುತ್ತಿರುವುದು ರಾಜ್ಯದ ಅಭ್ಯುದಯಕ್ಕಂತೂ ಖಂಡಿತ ಅಲ್ಲ. ಅದರ ಹಿಂದಿರುವುದು ಸಿದ್ದರಾಮಯ್ಯ ವಿರುದ್ಧ ಕತ್ತಿ ಮಸೆಯುವ ಒಂದು ಅಂಶದ ಅಜೆಂಡಾ ಮಾತ್ರ!

ಇನ್ನು ಬಿಜೆಪಿ ನಡೆಸುತ್ತಿರುವ ಪಾದಯಾತ್ರೆಯ ವಿಚಾರಕ್ಕೆ ಬರೋಣ. ಈ ಪಾದಯಾತ್ರೆಯ ಮುಂಚೂಣಿಯಲ್ಲಿ ಇರುವವರು ಯಾರು? ತಂದೆ ಅಧಿಕಾರದಲ್ಲಿದ್ದಾಗ ಅಕ್ರಮ ಡಿನೋಟಿಫಿಕೇಷನ್ ಪ್ರಕರಣದಲ್ಲಿ ನಕಲಿ ಸಹಿ ಮಾಡಿ, ಚೆಕ್‌ನಲ್ಲಿ ಲಂಚ ಪಡೆದುಕೊಂಡು ಅಪ್ಪನನ್ನೇ ಜೈಲಿಗೆ ಕಳುಹಿಸಿದ ಬಿ.ವೈ.ವಿಜಯೇಂದ್ರ. ಯಡಿಯೂರಪ್ಪ ಎರಡನೇ ಬಾರಿಗೆ ಅಧಿಕಾರದಿಂದ ಕೆಳಗೆ ಇಳಿಯುವುದಕ್ಕೆ ಕಾರಣವಾಗಿದ್ದು ಕೂಡಾ ಇದೇ ವಿಜಯೇಂದ್ರ. ಭ್ರಷ್ಟಾಚಾರವೇ ಮೈವೆತ್ತಿ ನಿಂತಂತಿರುವ ಈ ವ್ಯಕ್ತಿ ಸಿದ್ದರಾಮಯ್ಯ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುವುದು ಹಾಸ್ಯಾಸ್ಪದವಾಗಿದೆ. ಇನ್ನು 82ನೇ ವಯಸ್ಸಿನಲ್ಲಿ ತಮ್ಮ ಮೇಲೆ ಪೋಕ್ಸೋ ಪ್ರಕರಣ ದಾಖಲಾಗುವುದಕ್ಕೆ ಕಾರಣರಾಗಿ ಬೇಲ್‌ನಲ್ಲಿ ಓಡಾಡುತ್ತಿರುವ ಯಡಿಯೂರಪ್ಪ ಅವರು, ಪಾದಯಾತ್ರೆ ಮೈಸೂರು ತಲುಪುವುದರೊಳಗೆ ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕೆಂದು ಆಗ್ರಹಿಸುವುದರಲ್ಲಿ ಯಾವ ನೈತಿಕತೆ ಇದೆ? ವಾಸ್ತವದಲ್ಲಿ ಬಿಜೆಪಿ-ಜೆಡಿಎಸ್ ನಾಯಕರು ಜಂಟಿ ಪಾದಯಾತ್ರೆಯನ್ನು ಮಾಡಬೇಕಿರುವುದು ಬೆಂಗಳೂರಿನಿಂದ ಮೈಸೂರಿಗೆ ಅಲ್ಲ, ಬೆಂಗಳೂರಿನಿಂದ ದಿಲ್ಲಿಗೆ. ಕನ್ನಡಿಗರಿಗೆ ಕೇಂದ್ರ ಸರಕಾರ ನಿರಂತರವಾಗಿ ಮಾಡುತ್ತಿರುವ ಅನ್ಯಾಯವನ್ನು ಪ್ರಶ್ನಿಸಿ ಅವರು ಹೋರಾಟವನ್ನು ಮಾಡಬೇಕಿದೆ. ಅದು ಅವರ ನಿಜವಾದ ಕರ್ತವ್ಯ. ಆದರೆ ಅದನ್ನು ಬಿಟ್ಟು ರಿಯಲ್ ಎಸ್ಟೇಟ್ ಏಜೆಂಟ್‌ಗಳ ರೀತಿಯಲ್ಲಿ ದಿನಕ್ಕೊಂದು ಕತೆ ಹೇಳುತ್ತಾ ಪಾದಯಾತ್ರೆ ನಡೆಸುತ್ತಿದ್ದಾರೆ. ಅಷ್ಟಕ್ಕೂ ಈ ಪಾದಯಾತ್ರೆಯಲ್ಲಿ ಆ ಎರಡು ಪಕ್ಷಗಳ ಒಳಜಗಳ ಬಹಿರಂಗವಾಗುತ್ತಿದೆಯೇ ವಿನಾ ಬೇರೇನೂ ಇಲ್ಲ. ಇವರು ಕೇಳುತ್ತಾರೆಂಬ ಕಾರಣಕ್ಕೆ ರಾಜೀನಾಮೆ ನೀಡುವುದಕ್ಕೆ ಮುಖ್ಯಮಂತ್ರಿ ಸ್ಥಾನ ಆಟಿಕೆಯ ವಸ್ತುವಲ್ಲ, ಅದು 40 ವರ್ಷಗಳ ಪರಿಶುದ್ಧ ಮತ್ತು ಪ್ರಾಮಾಣಿಕ ರಾಜಕೀಯ ಜೀವನಕ್ಕಾಗಿ ಸಿದ್ದರಾಮಯ್ಯನವರಿಗೆ ಜನ ನೀಡಿದ ಆಶೀರ್ವಾದ. ಇದನ್ನು ಕಸಿಯಲು ಹೊರಟಿರುವ ಊಳಿಗಮಾನ್ಯ ಮನಸ್ಥಿತಿಯ ವಿರುದ್ಧವೇ ಇಂದು ಮೈಸೂರಿನಲ್ಲಿ ನಡೆಯುತ್ತಿದೆ ಜನಾಂದೋಲನ ಸಭೆ. ಈ ಹಿಂದೆ ನಡೆದ ಸಿದ್ದರಾಮೋತ್ಸವ ಕಾರ್ಯಕ್ರಮಕ್ಕೆ ಸಿಕ್ಕ ಮಾನ್ಯತೆ ಈಗಲೂ ಲಭಿಸುತ್ತಿರುವುದು ಸಿದ್ದರಾಮಯ್ಯನವರ ಜನಪ್ರಿಯ ನಾಯಕತ್ವಕ್ಕೆ ಸಾಕ್ಷಿ.

ಸಿದ್ದರಾಮಯ್ಯ ವಿರುದ್ಧ ಇಂಥದೊಂದು ಷಡ್ಯಂತ್ರವನ್ನು ಬೆಳಗಾವಿ ಅಧಿವೇಶನದ ಸಂದರ್ಭದಲ್ಲೇ ನಡೆಸಲಾಗಿತ್ತೆಂಬ ಬಗ್ಗೆ ಈಗ ಮಾಹಿತಿಗಳು ಬರುತ್ತಿವೆ. ಇದಾದ ಬಳಿಕ ಸದನದ ಒಳಗೆ ಹಾಗೂ ಹೊರಗೆ ಇಂಥದೊಂದು ಅನುಮಾನವನ್ನು ಬಿತ್ತುವುದಕ್ಕೆ ಬಿಜೆಪಿ ಹಾಗೂ ಜೆಡಿಎಸ್ ನಿರಂತರ ಪ್ರಯತ್ನ ನಡೆಸಿವೆ. ಕೇಂದ್ರ ಸಚಿವ ಎಚ್.ಡಿ.ಕುಮಾರ ಸ್ವಾಮಿಯವರಂತೂ ಮೈಸೂರಿಗೆ ಬಂದು ಸಿದ್ದರಾಮಯ್ಯ ವಿರುದ್ಧ ಪತ್ರಿಕಾಗೋಷ್ಠಿ ನಡೆಸಿ ಆರೋಪ ಮಾಡಿದ್ದರು. ಇಲ್ಲವಾದರೆ ಖುದ್ದು ಮುಡಾದಲ್ಲಿ ಪರ್ಯಾಯ ನಿವೇಶನ ಬೇಡಿದವರು ಇಂಥದೊಂದು ಆರೋಪ ಮಾಡುವುದಕ್ಕೆ ಸಾಧ್ಯವಿತ್ತೇ?

ಮೈತ್ರಿ ಪಕ್ಷಗಳ ಈ ಒಳಸಂಚಿನ ಬಗ್ಗೆ ಸಿದ್ದರಾಮಯ್ಯನವರು ಈಗಾಗಲೇ ಪತ್ರಿಕಾಗೋಷ್ಠಿ ನಡೆಸಿ ಸಾಕಷ್ಟು ವಿಚಾರಗಳ ಬಗ್ಗೆ ಬೆಳಕು ಚೆಲಿದ್ದಾರೆ. ಸೈದ್ಧಾಂತಿಕವಾಗಿ ಅವರ ಜತೆಗೆ ಸುದೀರ್ಘ ವರ್ಷಗಳಿಂದ ನಿಂತಿರುವ ನಮಗೆಲ್ಲ ಅವರ ವ್ಯಕ್ತಿತ್ವ ಎಂಥದೆಂದು ಸ್ಪಷ್ಟವಾಗಿ ಗೊತ್ತು.

ಆದಾಗ್ಯೂ ರಾಜಭವನವನ್ನು ದುರ್ಬಳಕೆ ಮಾಡಿಕೊಂಡು ಸಿದ್ದರಾಮಯ್ಯ ಅವರನ್ನು ಕಾನೂನು ಕುಣಿಕೆಯೊಳಗೆ ಸಿಲುಕಿಸುವ ಹತಾಶ ಪ್ರಯತ್ನ ನಡೆಯುತ್ತಿದೆ. ಅರಸು ಅವರ ರೀತಿ ಹಿಂದುಳಿದ ವರ್ಗದ ನಾಯಕನ ಮೇಲೆ ವ್ಯವಸ್ಥಿತ ಸಂಚನ್ನು ರೂಪಿಸಲಾಗುತ್ತಿದ್ದು ದಿಲ್ಲಿ ನಾಯಕತ್ವ ಇದರ ಹಿಂದೆ ಇದೆ. ಹೀಗಾಗಿ ಸಿದ್ದರಾಮಯ್ಯ ಅವರ ಪರವಾಗಿ ಸಮಸ್ತ ಶೋಷಿತ ವರ್ಗ ಒಟ್ಟಿಗೆ ನಿಲ್ಲಬೇಕಿದೆ. ಈ ಸಮಾವೇಶ ಯಾವುದೇ ಜಾತಿ, ವರ್ಗದ ವಿರುದ್ಧವಲ್ಲ, ಆದರೆ ಧ್ವನಿಯಿಲ್ಲದವರ ಧ್ವನಿಯಾಗಿರುವ ಸಿದ್ದರಾಮಯ್ಯ ಅವರನ್ನು ರಕ್ಷಿಸಿಕೊಳ್ಳುವುದು ನಮ್ಮ ಈ ಕ್ಷಣದ ಅನಿವಾರ್ಯತೆ ಹಾಗೂ ಕರ್ತವ್ಯ. ಇದನ್ನು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಬೆಂಬಲಿಸೋಣ ಬನ್ನಿ.

ಬುದ್ಧ, ಬಸವಣ್ಣ, ಅಂಬೇಡ್ಕರ್‌ರವರ ಸಿದ್ಧಾಂತಗಳ ಅಪ್ಪಟ ಅನುಯಾಯಿಯಾಗಿರುವ, ಸಾಮಾಜಿಕ ನ್ಯಾಯದ ಹರಿಕಾರರಾಗಿರುವ ಸಿದ್ದರಾಮಯ್ಯನವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಜಾರಿಗೆ ತಂದಿರುವ ಜನಪರ ಪಂಚ ಗ್ಯಾರಂಟಿಗಳ ಜನಪ್ರಿಯತೆಯನ್ನು ಸಹಿಸಲಾರದೆ ಬಿಜೆಪಿ ಮತ್ತು ಜೆಡಿಎಸ್ ಕುತಂತ್ರ ರಾಜಕಾರಣದಲ್ಲಿ ತೊಡಗಿ ಸಿದ್ದರಾಮಯ್ಯನವರ ವಿರುದ್ಧ ವ್ಯವಸ್ಥಿತ ಅಪಪ್ರಚಾರ ಮಾಡುತ್ತಿರುವುದನ್ನು ಈ ನಾಡಿನ ಪ್ರಜ್ಞಾವಂತ ನಾಗರಿಕರು, ಪ್ರಗತಿಪರ ಚಿಂತಕರು, ರೈತಪರ ಹೋರಾಟಗಾರರು, ಶೋಷಿತ ಸಮುದಾಯಗಳು ಒಗ್ಗಟ್ಟಿನಿಂದ ಖಂಡಿಸಬೇಕಾಗಿದೆ.

(ಲೇಖಕರು ರಾಮಮನೋಹರ್ ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನಾವೂ ಎಚ್ಚೆತ್ತುಕೊಳ್ಳಬೇಕಿದೆ

ಹೊಸ ದಾಪುಗಾಲಿಟ್ಟು ಮುನ್ನಡೆಯುತ್ತಿದ್ದ ಬಾಂಗ್ಲಾದೇಶ ಪ್ರಸ್ತುತ ಹಿಂಸಾಚಾರದ ಬೆಂಕಿಯಲ್ಲಿ ಬೇಯುತ್ತಿದೆ, ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಇದಕ್ಕೆ ಕಾರಣವಾಗಿರುವುದು ಮೀಸಲಾತಿಯ ಚರ್ಚಾವಿಷಯ. ಅಧಿಕಾರದಲ್ಲಿ ಉಳಿಯುವ ಗೀಳು ಕೆಲವೊಮ್ಮೆ ವ್ಯಕ್ತಿಯನ್ನು ಎತ್ತರದಿಂದ ಪಾತಾಳಕ್ಕೆ ತರಬಹುದು ಎಂಬುದಕ್ಕೆ ಬಾಂಗ್ಲಾದೇಶದ ಘಟನೆ ಉದಾಹರಣೆಯಾಗಿದೆ. ಇದು ನಮ್ಮ ನೆರೆದೇಶವಾಗಿರುವುದರಿಂದ ಈ ಬೆಳವಣಿಗೆಯ ಬಗ್ಗೆ ನಾವೂ ಯೋಚಿಸಬೇಕಾಗಿದೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸರ್ವಾಧಿಕಾರಿಗಳಿಗೆ ಜನ ಯಾವಾಗಲೂ ತಕ್ಕ ಪಾಠ ಕಲಿಸಿಯೇ ತೀರುತ್ತಾರೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿಮಾಡುವ ಮತ್ತು ಅಭಿಪ್ರಾಯಭೇದಗಳನ್ನು ದಮನಿಸುವ ಚಾಳಿ ಅತಿರೇಕವಾದಾಗ, ಈ ರೀತಿಯ ಸಾರ್ವಜನಿಕ ಆಕ್ರೋಶಗಳು ಘಟಿಸುತ್ತವೆ. ಯಾವುದೇ ಅಧಿಕಾರ ಶಾಶ್ವತವಲ್ಲ; ಹೀಗಾಗಿ ಉನ್ನತಾಧಿಕಾರದಲ್ಲಿರುವ ವ್ಯಕ್ತಿ ತನ್ನ ಅಧಿಕಾರಾವಧಿಯಲ್ಲಿ ಪ್ರಜಾಪ್ರಭುತ್ವದ ಪ್ರಕ್ರಿಯೆಗಳನ್ನು ಮತ್ತು ಸಂಸ್ಥೆಗಳನ್ನು ದುರ್ಬಲಗೊಳಿಸುವ ದುಸ್ಸಾಹಸಕ್ಕೆ ಕೈಹಾಕಬಾರದು. ಒಂದೊಮ್ಮೆ ಕೈಹಾಕಿದರೆ ಅದರ ಪರಿಣಾಮ ಗಂಭೀರವಾಗಿಯೇ ಇರುತ್ತದೆ. ಜನರ ಸಂಕಷ್ಟಗಳನ್ನು ನಿವಾರಿಸುವ ಗೋಜಿಗೆ ಹೋಗದೆ ತಮ್ಮ ಕುರ್ಚಿಯನ್ನು ಭದ್ರಪಡಿಸಿಕೊಳ್ಳಲು ಮಾತ್ರವೇ ಯತ್ನಿಸಿದರೆ ಒದಗುವ ಫಲಿತಾಂಶವೇನು ಎಂಬುದೀಗ ಸ್ಪಷ್ಟವಾಗಿದೆ. ಬಾಂಗ್ಲಾದೇಶದ ಈ ಘಟನೆ ನಮಗೆ ಎಚ್ಚರಿಕೆಯ ಗಂಟೆಯೂ ಹೌದು, ಮಹತ್ವದ ಪಾಠವೂ ಹೌದು. ಕಾರಣವೇನೇ ಇರಲಿ, ಬಾಂಗ್ಲಾದೇಶದಲ್ಲಿ ಆದಷ್ಟು ಬೇಗ ಶಾಂತಿ ನೆಲೆಸಲಿ.

– ಹರಳಹಳ್ಳಿ ಪುಟ್ಟರಾಜು ಪಾಂಡವಪುರ

ಹಿಂಪಡೆಯುವುದು ಸೂಕ್ತ

ಇತ್ತೀಚೆಗೆ ರಸ್ತೆಬದಿಯ ಗಾಡಿಯಲ್ಲಿ ಕಬ್ಬಿನಹಾಲು ಕುಡಿದು, ಜೇಬಿನಲ್ಲಿದ್ದ ಐನೂರರ ನೋಟು ಕೊಟ್ಟಾಗ, ಅಂಗಡಿಯಾತ ಚಿಲ್ಲರೆ ಇಲ್ಲ ಎಂದು ಹೇಳಿದ. ನಾನು ಜೇಬು ತಡಕಾಡಿ ಚಿಲ್ಲರೆ ಹುಡುಕಿ ಅವನಿಗೆ ಕೊಟ್ಟಾಗ, ಅದರಲ್ಲಿದ್ದ 10 ರು. ನಾಣ್ಯವನ್ನು ಮರಳಿಸಿ, 'ಸರ್, ಇದು ಹೋಗಲ್ಲ, ಬೇರೆಯದು ಕೊಡಿ' ಎಂದ. ನನ್ನ ಬಳಿ ಬೇರೆ ಚಿಲ್ಲರೆ ಇರದ ಕಾರಣ ಪೆಚ್ಚಾಗಿ ನಿಂತಿದ್ದಕ್ಕೆ ಆತ, 'ಸರ್ ಪರವಾಗಿಲ್ಲ, ಮತ್ತೊಮ್ಮೆ ಬಂದಾಗ ಕೊಡಿ' ಎಂದ.

10 ರು. ನಾಣ್ಯ ಹೀಗೆ ತಿರಸ್ಕರಿಸಲ್ಪಟ್ಟ ಅನುಭವ ಅನೇಕರಿಗೆ ಆಗಿರಬಹುದು. ಈ ನಾಣ್ಯ ಚಲಾವಣೆಯಲ್ಲಿದೆ ಎಂದು ಆರ್‌ಬಿಐ ಅನೇಕ ಬಾರಿ ಹೇಳಿದ್ದರೂ, ಕೆಲ ಜನರು/ಅಂಗಡಿಯವರು ಒಪ್ಪುತ್ತಿಲ್ಲ. ಭಿಕ್ಷುಕರೂ ಈ ನಾಣ್ಯವನ್ನು ತೆಗೆದುಕೊಳ್ಳುವುದಿಲ್ಲ, ಹೀಗಾಗಿ ಅನೇಕರು ಮುಜುಗರಕ್ಕೆ ಒಳಗಾಗುತ್ತಿದ್ದಾರೆ ಮತ್ತು ಬೇರೆ ದಾರಿಯಿಲ್ಲದೆ ದೇವರ ಹುಂಡಿಗೆ ಹಾಕಿ ಸುಮ್ಮನಾಗುತ್ತಿದ್ದಾರೆ. ಆದ್ದರಿಂದ ಆರ್‌ಬಿಐ ಈ ನಾಣ್ಯವನ್ನು ಹಿಂಪಡೆದು ಜನರಿಗೆ ಅನುಕೂಲ ಮಾಡಿಕೊಡಲಿ.

– ಪತ್ತಂಗಿ ಎಸ್.ಮುರಳಿ ಬೆಂಗಳೂರು

ಭಟ್ಟರ್ ಸ್ಕಾಚ್

● **ರಂಗರಾಮಾನುಜ, ಮೇಲುಕೋಟೆ**
ಭಟ್ರೇ, ಜಮೀರನ ಹೇಳಿಕೆ ಕುಮಾರಣ್ಣನ ಚಡ್ಡಿ ಲೆವೆಲ್ ತನಕ ಬಂದಿರೋದು ಪ್ರತಿಪಕ್ಷದಲ್ಲಿ ಯಾವ ರೀತಿ ಸಂಚಲನ ಸೃಷ್ಟಿಸಿದೆ?
- ಕೆಲನಾಯಕರು ಇನ್ನು ಮುಂದೆ ಒಳಚಡ್ಡಿ ಹಾಕಬೇಕೋ, ಬೇಡವೋ ಎಂಬ ಗಂಭೀರ ಚಿಂತನೆಯಲ್ಲಿ ತೊಡಗಿದ್ದಾರಂತೆ!

● **ಎಂ.ಕೆ.ರಮೇಶ, ಮೈಸೂರು**
ಭಟ್ರೇ, ಬಿಜೆಪಿ -ಜೆಡಿಎಸ್ ನಾಯಕರು ಯಾತ್ರೆ ಹೊರಟಿರುವುದನ್ನು ನೋಡಿದರೆ ಏನನಿಸುತ್ತದೆ?
- ತೀರ್ಥಯಾತ್ರೆಗೆ ಹೊರಟವರಂತೆ ಕಾಣುತ್ತದೆ!

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ನಾಳಿನ ಕೆಲಸ ಇಂದೇ ಮಾಡು ಅಂತಾರಲ್ಲ?
- ಹೂಂ.. ಆದರೆ ಇದು ಊಟ ಮಾಡುವುದಕ್ಕೆ ಅನ್ವಯಿಸುವುದಿಲ್ಲ!

● **ವೆಂಕಣ್ಣಚಾರ್ ಹಿತ್ತಲಮನಿ, (ಇಮೇಲ್ ಮೂಲಕ)**
'ತುತ್ತು ತೂಕ ಕೆಡಸಿತು' ಗಾದೆ ಮಾತಿಗೆ ಸೇರ್ಪಡೆಯಾದ ಮುಂದಿನ ಭಾಗ ಏನು, ಭಟ್ರೇ?
- 'ತೂಕ ಚಿನ್ನ ಕಬಳಿಸಿತು'!

● **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಪ್ರಕಾಶ ರೈ ನಿರ್ಗತಿಕ ಬಾಳು ಹೇಗೆ ಸಾಗಿದೆಯಂತೆ?
- ಆತ ಜಸ್ಟ್ ಆಸ್ಕಿಂಗ್ ಅಂತ ಶುರುವಿಟ್ಟುಕೊಂಡರೆ ಬದುಕು ಬರಗೆಟ್ಟಿದೆ ಅಂತ ಅರ್ಥ!

● **ಶಿವರಾಜ, ಇಳಕಲ್**
ವಿನೇಶ್ ಫೋಗಟ್ ಅನರ್ಹತೆಗೆ ಮೋದಿ ಕಾರಣ ಎನ್ನುವ ಬುದ್ಧಿಜೀವಿ ಪತ್ರಕರ್ತರಿಗೆ ನೀವೇನ್ ಹೇಳ್ತೀರಾ?
- ಅವರಿಗೆ ಏನೇ ಹೇಳಿದರೂ ಪ್ರಯೋಜನ ಇಲ್ಲ!

● **ರಾಘವೇಂದರ್ ಪಿ., ಕಡೂರು**
ಭಟ್ರೇ, ಗಂಡ-ಹೆಂಡತಿ ಒಟ್ಟಿಗೆ ನೆಮ್ಮದಿಯಿಂದ ಮಲಗಿದರೆ ಏನರ್ಥ?
- ಪರಸ್ಪರರ ಗೊರಕೆ ಇನ್ನೊಬ್ಬರಿಗೆ ಕೇಳಿಸುವುದಿಲ್ಲ ಎಂದರ್ಥ!

● **ಗುರುರಾಜ, ಶಿವಮೊಗ್ಗ**
ಭಟ್ರೇ, ನನ್ನ ಸಾಧನೆಯನ್ನು ನನ್ನ ತಲೆಗೂದಲೇ ಹೇಳಲಿ ಎಂದು ಭಾವಿಸಿದರೆ ?
- ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಮೌನವನ್ನು ಅರ್ಥೈಸಿಕೊಳ್ಳಬಹುದು!

ಆ ಪುಟ್ಟಜೀವಿಯ ಮೈಮೇಲೆ ಬೆಳಕಿನ ಬಾಸುಂಡೆ!

ಸರಸ್ವತಿ ಚೇಳಿನ ನಾಜೂಕಾದ ಪುಟಾಣಿ ಗಾತ್ರವಂತೂ ವಿಸ್ಮಯ ಹುಟ್ಟಿಸುವಂಥದ್ದು. ಬೇರೆ ಬೇರೆ ಸಂದರ್ಭಗಳಲ್ಲಿ ಆಗಾಗ ಮನೆಯೊಳಗೆ ಬರುವ ಅವು, ಅಂದಾಜು ಒಂದು ಇಂಚಿನಿಂದ ಎರಡು-ಎರಡೂವರೆ ಇಂಚು ಉದ್ದವಿದ್ದುದನ್ನು ಕಂಡಿದ್ದೆ. ಅದಕ್ಕೂ ಉದ್ದನೆಯ ಸರಸ್ವತಿ ಚೇಳನ್ನು ನಾನು ಕಂಡಿಲ್ಲ. ಇದಕ್ಕಿಂತ ವಿಭಿನ್ನ ಪ್ರಭೇದದ, ಮೈಮೇಲೆ ಪಟ್ಟೆ ಪಟ್ಟೆ ಬಣ್ಣ ಇರುವ ಲಕ್ಷ್ಮಿ ಚೇಳುಗಳು ಇನ್ನೂ ಉದ್ದ, ದಪ್ಪ ಇರುತ್ತವೆ.

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ವಿದ್ಯುತ್ ದೀಪದ ವ್ಯವಸ್ಥೆ ಇಲ್ಲದ ಮನೆಯಲ್ಲಿ ವರ್ಷಗಟ್ಟಲೆ ವಾಸಿಸಿದವರಿಗೆ ಮಾತ್ರ ಪರಿಚಯವಿರಬಹುದಾದ ಒಂದು ಪುಟ್ಟಜೀವಿ ಇದೆ. ಅದುವೇ ಸರಸ್ವತಿ ಚೇಳು! ವಿದ್ಯುತ್ ಬೆಳಕಿಗೂ, ಈ ಜೀವಿಯು ಗೋಚರವಾಗುವುದಕ್ಕೂ ಅದೇಕೆ ವಿರುದ್ಧ ಸಂಬಂಧವೆಂದು ನಿಮಗೆ ಕುತೂಹಲವೆ? ಹಾಗಿದ್ದರೆ, 1970ರ ದಶಕದಿಂದ ನನ್ನ ಕಥನ ಆರಂಭಿಸುವೆ.

ನಸುಗತ್ತಲಿನ ಹೊತ್ತು. ಶಾಲೆಯಿಂದ ವಾಪಸಾದ ನಾವು ಮಕ್ಕಳು, ಪುಸ್ತಕಗಳನ್ನು ನೆಲದ ಮೇಲೆ ಹಾಸಿದ ಚಾಪೆಯ ಮೇಲೆ ಹರಡಿಕೊಂಡು, ಚೂರು ಪಾರು ಬರೆಯುವುದೋ, ಓದುವುದೋ ಮಾಡುತ್ತಾ ಕುಳಿತಿದ್ದೆವು. ನಮ್ಮ ಓದಿಗೆ ಬೆಳಕು ನೀಡುತ್ತಿದ್ದುದು ಒಂದು ಚಿಮಿಣಿ ಎಣ್ಣೆಯ ಬುಡ್ಡಿ ದೀಪ. ಸಾಕಷ್ಟು ದುರ್ಲಭವೆಂದೇ ಪರಿಗಣಿಸಲ್ಪಟ್ಟ, ನ್ಯಾಯಬೆಲೆ ಅಂಗಡಿಗಳಲ್ಲಿ ಮಾತ್ರ ಲಭ್ಯವಾಗಿದ್ದ, ಪಡಿತರ ಚೀಟಿಯಲ್ಲಿ ನಮೂದಾಗಿ, ತಿಂಗಳಿಗೆ ಒಂದೋ ಎರಡೋ ಬಾಟಲಿ (ಬಿಯರ್ ಬಾಟಲಿ ಗಾತ್ರ!) ದೊರಕುತ್ತಿದ್ದ ಚಿಮಿಣಿ ಎಣ್ಣೆಯನ್ನು ಜತನದಿಂದ ಉಪಯೋಗಿಸುವಂತೆ, ಹಿರಿಯರು ತಾಕೀತು ಮಾಡುತ್ತಿದ್ದರು. 'ನಾವೆಲ್ಲಾ ಮಕ್ಕಳಾಗಿದ್ದಾಗ, ರಾತ್ರಿ ಏಳು ಗಂಟೆಗೇ ಊಟ ಮುಗಿಸಿ, ಎಲ್ಲರೂ ಮಲಗಬೇಕಿತ್ತು, ಗೊತ್ತಿತ್ತಾ? ಜಾಸ್ತಿ ದೀಪ ಉರಿಸಿದರೆ, ಎಣ್ಣೆ ಖಾಲಿ ಮಾಡಿದರೆ ದೊಡ್ಡವರು ಸಮಾ ಬೈಯುತ್ತಿದ್ದರು' ಎಂದು ಆಗಾಗ ಎಚ್ಚರಿಸುತ್ತಿದ್ದ ನಮ್ಮ ಅಮ್ಮಮ್ಮ, ನಾವು ಬೇಗಬೇಗನೆ ಪಾಠ ಓದುವ ಕೆಲಸ ಮುಗಿಸುತ್ತಿದ್ದೇವೋ, ಇಲ್ಲವೋ ಎಂಬುದನ್ನ ಪರಿಶೀಲಿಸಲು, ತಮ್ಮ ಕೆಲಸಗಳ ನಡುವೆಯೇ, ನಮ್ಮ ಸುತ್ತಮುತ್ತ ಆಗಾಗ ಠಳಾಯಿಸುತ್ತಿದ್ದರು.

'ನೀವು, ಒಂದೇ ವರ್ಷ ಶಾಲೆಗೆ ಹೋಗಿದ್ದು, ಅಲ್ದಾ? ಆಗ ನಿಮಗೂ ಹೋಂ ವರ್ಕ್ ಕೊಟ್ಟಿದ್ದಾರಾ, ರಾತ್ರಿ ಕೂತ್ಕೊಂಡು ಬರೆಯೋಕೆ?' ಎಂದು ನಾವು ಕಿಚಾಯಿಸುತ್ತಿದ್ದೆವು. ಅವರು ಕೆಲವು ತಿಂಗಳುಗಳ ಕಾಲ ಮಾತ್ರ ಐಗಳ ಮಠಕ್ಕೆ ಹೋಗಿ, 'ರುಜು ಹಾಕಲು' ಮತ್ತು 'ಕನ್ನಡ ಅಕ್ಷರ ಓದಲು' ಕಲಿತದ್ದು ಎಂದು ಅದೆಷ್ಟೋ ಬಾರಿ ಹೇಳಿಕೊಳ್ಳುತ್ತಿದ್ದರಲ್ಲ!

'ಅದೆಲ್ಲಾ ನಿಮಗೆಂತಕೆ? ನಾನು ಐಗಳ ಮಠಕ್ಕೆ ಒಂದು ವರ್ಷ ಹೋಗಿದ್ದೆನೋ, ಎರಡು ವರ್ಷ ಹೋಗಿದ್ದೆನೋ, ನಿಮಗ್ಯಾಕೆ? ಆ ಐಗಳು ಬೆತ್ತ ತಕೊಂಡು ಬಾರಿಸ್ತಿದ್ದರು ಗೊತ್ತಿತ್ತಾ? ನೀವೀಗ ಬೇಗ ಬರಿಯೋದು ಮುಗಿಸಿ, ಮನೇಲಿ ಸೀಮೆಎಣ್ಣೆ ಅರ್ಧ ಬಾಟಲಿ ಮಾತ್ರ ಉಳಿದಿದೆ' ಎಂದು ಗದರುತ್ತಿದ್ದರು.

'ಆಗ ನಿಮಗೆ ಚಿಮಿಣಿ ಬುಡ್ಡಿ ದೀಪವೇಯಾ?' ಎಂದು ಮತ್ತೊಂದು ಪ್ರಶ್ನೆ ಕೇಳಿದಾಗ, 'ಚಿಮಿಣಿ ಎಣ್ಣೆ ಆಗ ಇನ್ನೂ ಬರಲಿಲ್ಲ, ಆಗೆಲ್ಲಾ ಹೊನ್ನೆಣ್ಣೆ ದೀಪ. ಸೊಡರಿನಲ್ಲಿ ಬತ್ತಿ ಹಾಕಿ, ಹೊನ್ನೆಣ್ಣೆ ಹಾಕಿ ದೀಪ ಹಚ್ಚುವುದು; ಎಣ್ಣೆ ಖಾಲಿ ಆಗುವ ಮುಂಚೆ ಎಲ್ಲಾ ಊಟ ಮಾಡಿ ಮಲಗಬೇಕಿತ್ತು' ಎಂದುತ್ತರಿಸಿ, ತಮ್ಮ ಕೆಲಸ ಮಾಡಲು ಹೋಗುತ್ತಿದ್ದರು. ನಮ್ಮ ಹಳ್ಳಿಯಲ್ಲಿ ಬಹು ಹಿಂದೆ, ಹೊನ್ನೆಕಾಯಿಗಳನ್ನು ಒಣಗಿಸಿ, ಜಜ್ಜಿ, ಕುದಿಸಿ ಎಣ್ಣೆ ಮಾಡಿ, ದೀಪ ಉರಿಸಲು ಬಳಸುತ್ತಿದ್ದರಂತೆ. ದುಂಡನೆಯ ಹೊನ್ನೆಕಾಯಿಯಿಂದ ಎಣ್ಣೆ ತಯಾರಿಸುವ ಪದ್ಧತಿ ನಮ್ಮ ಬಾಲ್ಯಕಾಲದಲ್ಲಾಗಲೇ ಕಣ್ಮರೆಯಾಗಿದ್ದೂ, ಹಳೆಯ ಕೆಲವು ಹೊನ್ನೆ ಮರಗಳು ಗದ್ದೆಯ ಅಂಚಿನಲ್ಲಿ, ತೋಡಿನ ಬದಿಯಲ್ಲಿ ಅಲ್ಲಲ್ಲಿ ಬೆಳೆದುಕೊಂಡಿದ್ದವು. ಆಗಿನ ಜನರು, ಎಣ್ಣೆ ನೀಡುವ ಆ ಮರಗಳನ್ನು ಹಾಗೆ ಬೆಳೆಯಗೊಟ್ಟಿದ್ದರು ಎಂಬುದು ಸ್ಪಷ್ಟ.

ಪುಸು ಪುಸು ಹೊಗೆಬಿಡುತ್ತಿದ್ದ ಬುಡ್ಡಿ ದೀಪದ ಪಕ್ಕದಲ್ಲೇ ಕುಳಿತು, ಆ ಹೊಗೆಯು ನಮ್ಮ ಮುಖದತ್ತ ತೇಲಿ ಬರುತ್ತಿದ್ದರೂ, ತುಸು ಅತ್ತಿತ್ತ ಜರುಗಿ ಕುಳಿತು, ನಾನು ಮತ್ತು ನನ್ನ ತಂಗಿಯರು ಆ ರಾತ್ರಿಯ 'ಅಧ್ಯಯನ'ದಲ್ಲಿ ಮಗ್ನರಾಗುವುದು ದಿನನಿತ್ಯದ ಪದ್ಧತಿ. ಇಲ್ಲವಾದರೆ, ಅಮ್ಮಮ್ಮ ಬಿಡುತ್ತಿರಲಿಲ್ಲವಲ್ಲ! ಅಬ್ಬಬ್ಬಾ ಅಂದರೆ, ಅರ್ಧ ಗಂಟೆಯಿಂದ ಒಂದು ಗಂಟೆಯೊಳಗೆ ನಮ್ಮ ಓದು ಮುಗಿಯುತ್ತಿತ್ತು ಅನ್ನಿ.

'ಮಕ್ಕಳೆ, ಎದ್ದು ಈಚೆಗೆ ಬನ್ನಿ, ಈ ಬದಿಗೆ...' ಎನ್ನುತ್ತಾ ತುಸು ಗಾಬರಿಯಿಂದ, ಒಂದು ತೆಂಗಿನ ಕಡ್ಡಿ ಪೊರಕೆ ಹಿಡಿದು ಅಮ್ಮಮ್ಮ ಗಡಿಯಿಡಿಯಿಂದ ನಮ್ಮತ್ತ ಬಂದರು ಅಂದರೆ, ಆ ಕಗ್ಗತ್ತಲ ರಾತ್ರಿಯಲ್ಲಿ ಯಾವುದೋ ಮರಕಪ್ಪೆಯೋ, ಅಪರಿಚಿತ ಸಂದಿಪದಿಯೋ ಮನೆಯೊಳಗೆ ಬಂದಿದೆ ಎಂದರ್ಥ. ಓದುತ್ತಿದ್ದ ನಮಗೆ ಅದು ಒಂದು ಒಳ್ಳೆಯ ನೆಪ! ಓದು ತಪ್ಪಿಸಿಕೊಳ್ಳುವ ನೆಪ! ಪುಸ್ತಕಗಳನ್ನು ನೆಲದ ಮೇಲೆ ಹಾಗೆಯೇ ಬಿಟ್ಟು ನಾವು ಎದ್ದು ಓಡುವಷ್ಟರಲ್ಲಿ, ಅಮ್ಮಮ್ಮ ತನ್ನ ಕೈಲಿದ್ದ ಕಡ್ಡಿ ಪರಕೆಯನ್ನು ಮೆಲ್ಲಗೆ, ಸದ್ದಾಗುವಂತೆ ಗೋಡೆಯ ಬುಡಕ್ಕೆ ಬಡಿದೇ ಬಿಡುತ್ತಿದ್ದರು. ನಮಗೆಲ್ಲಾ ಕುತೂಹಲ! ರಾತ್ರಿ ಹೊತ್ತು ಮನೆಯೊಳಗೆ ಬಂದ ಅತಿಥಿ ಯಾರು?

'ಕಾಣಿ ಮಕ್ಕಳೇ, ಹೇಗೆ ಇದರ ಮೈಮೇಲೆಲ್ಲಾ ಬೆಳಕಿನ ಬರೆಗಳು! ಕಾಣಿ' ಎಂದು ಕಡ್ಡಿ ಪರಕೆಯನ್ನು ತುಸು ಈಚೆ ಸರಿಸಿದರು. ಆ ಪುಟ್ಟ ಜೀವಿಯನ್ನು ಅವರು ಕೊಲ್ಲಲಿಲ್ಲ, ಬದಲಿಗೆ, ಪರಕೆಯ ಮೂಲಕ ಹಿಡಿಯಲು ಪ್ರಯತ್ನಿಸಿದ್ದರು.

ಅವರು ಪೊರಕೆ ಎತ್ತಿದ್ದ ಜಾಗದಲ್ಲಿ, ಒಂದು ಪುಟ್ಟಜೀವಿ ಅತ್ತಿತ್ತ ನುಲಿಯುತ್ತಾ, ನಿಧಾನವಾಗಿ ತೆವಳಲು ಪ್ರಯತ್ನಿಸುತ್ತಿತ್ತು. ಸುಮಾರು ಎರಡು ಇಂಚು ಉದ್ದ, ದಪ್ಪನೆಯ ದಾರದಷ್ಟು ದಪ್ಪ; ನಿಧಾನವಾಗಿ ತೆವಳುತ್ತಾ ಚಲಿಸುವ ಆ ಜೀವಿ ಸಂದಿಪದಿಯನ್ನು ಹೋಲುತ್ತಿದ್ದರೂ, ತುಸು ಭಿನ್ನವಾಗಿ ಕಾಣಿಸುತ್ತಿತ್ತು.

ಅಚ್ಚರಿಯ ವಿಚಾರವೆಂದರೆ, ಅದರ ಹಸುರು ಮೈಮೇಲೆ, ಅಲ್ಲಲ್ಲಿ ಬೆಂಕಿಯಂಥ ಪುಟ್ಟ ಪುಟ್ಟ ಗೆರೆಗಳು! ಅಮ್ಮಮ್ಮ ಹೇಳಿದಂತೆ 'ಬರೆ'ಗಳು! ಅದು ಅತ್ತಿತ್ತ ನುಲಿಯುತ್ತಿದ್ದಂತೆ, ಆ ಬೆಂಕಿಯ ಗೆರೆಗಳು ಹೆಚ್ಚು ಹೆಚ್ಚು ಹೊಳೆದು ಕಾಣುತ್ತಿದ್ದವು.

'ಇದೇ ಕಾಣಿ ಸರಸ್ವತಿ ಚೇಳು! ಹಿಡಿಸೂಡಿಯ ಕಡ್ಡಿಗಳು ತಾಗಿದ ಜಾಗದಲ್ಲಿ ಹೊಳೆಯುತ್ತಾ ಉಂಟು' ಎಂದು ಅಮ್ಮಮ್ಮ ನಮಗೆ ಪರಿಸರದ ಪಾಠ ಹೇಳಿದರು! ನಿಧಾನವಾಗಿ ಪೊರಕೆಯ ಒಂದೆರಡು ಕಡ್ಡಿಗಳನ್ನು ಆ ಸರಸ್ವತಿ ಚೇಳಿಗೆ ತಾಗಿಸಿದರು- ಆ ಜಾಗದಲ್ಲಿ ಇನ್ನೂ ಒಂದೆರಡು ಬೆಳಕಿನ ಪಟ್ಟಿಗಳು ಅದರ ಮೈಮೇಲೆ ಕಾಣಿಸಿಕೊಂಡವು. ಪೊರಕೆಯ ಕಡ್ಡಿ ತಾಗಿದ ಜಾಗದಲ್ಲೆಲ್ಲಾ ಮಿನುಗುವ ಗೆರೆಗಳು ಉತ್ಪತ್ತಿಯಾಗುವ ಆ ಕ್ರಿಯೆಯು, ಅದರ ದೇಹದ ಮೇಲೆಲ್ಲಾ ಬೆಳಕಿನ ಬಾಸುಂಡೆಗಳನ್ನೇ ಸೃಷ್ಟಿಸಿದ್ದವು.

'ಸರಸ್ವತಿ ಚೇಳು ಮನೆಯೊಳಗೆ ಬಂದರೆ ಒಳ್ಳೆಯದು ಅಂತಾರೆ. ಅದನ್ನು ಸಾಯಿಸುವಂತಿಲ್ಲ. ಲಕ್ಷ್ಮಿ ಚೇಳು ಬಂದರೂ ಅಷ್ಟೆ, ಮನೆಗೆ ಒಳ್ಳೆಯದು. ಇವನ್ನು ನಿಧಾನವಾಗಿ ಹೊರಗೆ ಬಿಡಬೇಕು. ಸರಸ್ವತಿ ಚೇಳು ತನ್ನ ಮೈಮೇಲೆ ಬೆಳಕಿನ ಬರೆಗಳನ್ನು ಮೂಡಿಸುವುದನ್ನು ತೋರಿಸುವುದಕ್ಕೋಸ್ಕರ, ಮೆಲ್ಲಗೆ ಒಂದು ಪೆಟ್ಟು ಹಾಕಿದೆ ಅಷ್ಟೆ. ಅದರ ಮೈ ಮಿಣಕು ಮಿಣಕು ಅಂಬುದನ್ನು ಕಂಡ್ರ್ಯಾ? ಇನ್ನು ಹೊರಗೆ ಬಿಡುವ' ಎನ್ನುತ್ತಾ, ಕಡ್ಡಿ ಪೊರಕೆಯನ್ನು ನಿಧಾನವಾಗಿ ಸರಸ್ವತಿ ಚೇಳಿನ ಮೇಲಿಟ್ಟು, ಕಡ್ಡಿಗಳ ಸಂದಿಯಲ್ಲಿ ಅದನ್ನು ಹಿಡಿದು, ಅಂಗಳದಾಚೆಯ ತೆಂಗಿನ ಕಟ್ಟೆಯಲ್ಲಿ ಬಿಟ್ಟು ಬಂದರು. ಆವತ್ತಿನ ನಮ್ಮ ಪಠ್ಯ ಅಧ್ಯಯನಕ್ಕೆ ವಿರಾಮ ಬಿತ್ತು; ಚಿಮಿಣಿ ಬುಡ್ಡಿ ದೀಪ ಹಿಡಿದು, ಊಟ ಮಾಡಲು ಒಳಗೆ ನಡೆದೆವು.

ಸರಸ್ವತಿ ಚೇಳಿನ ನಾಜೂಕಾದ ಪುಟಾಣಿ ಗಾತ್ರವಂತೂ ವಿಸ್ಮಯ ಹುಟ್ಟಿಸುವಂಥದ್ದು. ಬೇರೆ ಬೇರೆ ಸಂದರ್ಭಗಳಲ್ಲಿ ಆಗಾಗ ಮನೆಯೊಳಗೆ ಬರುವ ಅವು, ಅಂದಾಜು ಒಂದು ಇಂಚಿನಿಂದ ಎರಡು-ಎರಡೂವರೆ ಇಂಚು ಉದ್ದವಿದ್ದುದನ್ನು ಕಂಡಿದ್ದೆ. ಅದಕ್ಕೂ ಉದ್ದನೆಯ ಸರಸ್ವತಿ ಚೇಳನ್ನು ನಾನು ಕಂಡಿಲ್ಲ. ಇದಕ್ಕಿಂತ ವಿಭಿನ್ನ ಪ್ರಭೇದದ, ಮೈಮೇಲೆ ಪಟ್ಟೆ ಪಟ್ಟೆ ಬಣ್ಣ ಇರುವ ಲಕ್ಷ್ಮಿ ಚೇಳುಗಳು ಇನ್ನೂ ಉದ್ದ, ದಪ್ಪ ಇರುತ್ತವೆ. ಸಣ್ಣ ಕಡ್ಡಿಯನ್ನು ಸರಸ್ವತಿ ಚೇಳಿನ ನುಣುಪು ಮೈಗೆ ತಾಗಿಸಿದ ತಕ್ಷಣ, ಆ ಜಾಗ ಮಾತ್ರ ಬಾಸುಂಡೆ ಬಂದಂತೆ ಮಿನುಗುವುದು ಈ ಪ್ರಕೃತಿಯ ಒಂದು ವಿಸ್ಮಯವೇ ಸರಿ. ಅದೇನು ರಕ್ಷಣಾ ತಂತ್ರವೋ? ಬೇರೆ ಜೀವಿಗಳು ತಾಗಿದರೆ ಅಥವಾ ಅಪಾಯ ಸನಿಹವಾದಾಗ, ಮೈತುಂಬಾ ಮಿನುಗುವ ಬೆಳಕನ್ನು ಉತ್ಪಾದಿಸಿ, ವೈರಿಯನ್ನು ಬೆದರಿಸುವ ತಂತ್ರವೋ? ಬಹಳ ಸೂಕ್ಷ್ಮ ದೇಹದ, ನಿಧಾನವಾಗಿ ನೆಲದ ಮೇಲೆ ತೆವಳುವ ಸರಸ್ವತಿ ಚೇಳಿನ ಮೈಮೇಲಿನ ಬೆಳಕಿನ ಬಾಸುಂಡೆಯನ್ನು, ವಿಕಾಸವಾದದ ಹಿನ್ನೆಲೆಯಲ್ಲಿ ಯಾವ ರೀತಿ ಅರ್ಥೈಸುವುದೋ ನನಗೆ ಸ್ಪಷ್ಟವಿಲ್ಲ. ಇದಕ್ಕೆ ವೈಜ್ಞಾನಿಕ ಉತ್ತರವಿದ್ದೇ ಇರುತ್ತದೆ, ವಿಷಯ ತಜ್ಞರು ಈ ಕುರಿತು ವಿವರಣೆ ನೀಡಬಲ್ಲರು.

ಇತ್ತ ಮನೆಯೊಳಗೆ ಸರಸ್ವತಿ ಚೇಳು ಮಿನುಗುತ್ತಿದ್ದರೆ, ಅತ್ತ ಮನೆಯ ಹೊರಭಾಗದಲ್ಲಿ (ಒಮ್ಮೊಮ್ಮೆ ಒಳಗೂ) ಹಾರಾಡುವ ಮಿಣುಕುಹುಳಗಳ ಬೆಳಕು ಇದಕ್ಕಿಂತ ವಿಭಿನ್ನ. ಅವು ತಮ್ಮ ಬಾಲದ ತುದಿಯಲ್ಲಿ 'ಮಿಣುಕು ಮಿಣುಕು' ಎಂದು ಬೆಳಕು ಮಾಡುತ್ತಾ, ರಾತ್ರಿಯಾಗಸದಲ್ಲಿ ಹಾರಾಡುತ್ತಿರುತ್ತವೆ. ಆದರೆ, ಸರಸ್ವತಿ ಚೇಳಿನ ದೇಹದ ಮೇಲ್ಭಾಗದಲ್ಲಿ, ಸಣ್ಣದಾಗಿ ಏಟಾದಾಗ ಒಡಮೂಡುವ 'ಬೆಳಕಿನ ಬಾಸುಂಡೆ' ಮಿಣುಕು ಹುಳಗಳ ಬೆಳಕಿಗಿಂತ ಭಿನ್ನ. ಸರಸ್ವತಿ ಚೇಳಿನ ದೇಹದ ಮೇಲೆ ಏನಾದರೂ ಸಣ್ಣ ಏಟು ಅಕಸ್ಮಾತ್ ಬೀಳದೇ ಇದ್ದರೆ, ಅದು ಬೆಳಗುವುದೇ ಇಲ್ಲ! ಬಳುಕುವ ಹಸಿರು ದೇಹವನ್ನು ಹೊತ್ತು ತನ್ನ ಪಾಡಿಗೆ ತಾನು ತೆವಳುತ್ತಾ ಸಾಗುತ್ತದೆ, ಅಷ್ಟೆ.

ನಮ್ಮ ಹಳ್ಳಿ ಮನೆಯ ಸುತ್ತಮುತ್ತ ವಿದ್ಯುತ್ ಸಂಪರ್ಕ ದೊರೆತದ್ದು, ತೀರಾ ತಡವಾಗಿ. ಹಾಲಾಡಿ ಪೇಟೆಯಲ್ಲಿ 1960-70ರ ದಶಕದಲ್ಲೇ ವಿದ್ಯುದ್ದೀಪಗಳು ಬೆಳಗಿದ್ದವು. ಆದರೆ, ಪೇಟೆಯ ರಸ್ತೆಯಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿದ್ದ ನಮ್ಮ ಹಳ್ಳಿಮನೆಯ ಸರಹದ್ದಿಗೆ ವಿದ್ಯುತ್ ಸಂಪರ್ಕ ತರಲು ನಾನಾ ವಿಘ್ನಗಳು. ಕಂಬದ ಬೆಲೆ ಇಂತಿಷ್ಟು ಎಂದು ಲೆಕ್ಕಹಾಕಿ, ಎಷ್ಟು ಕಂಬ ಬೇಕೊ ಅಷ್ಟು ದುಡ್ಡು ಕೊಟ್ಟರೆ ವಿದ್ಯುತ್ ಕೊಡ್ತಾರಂತೆ, ಪಂಪ್ ಸೆಟ್ ಹಾಕಿಸಿಕೊಂಡರೆ ಬೇಗನೆ ವಿದ್ಯುತ್ ಸಂಪರ್ಕ ಕೊಡ್ತಾರಂತೆ- ಈ ರೀತಿಯ ಮಾತುಗಳು ನಮ್ಮ ಹಳ್ಳಿಯಲ್ಲಿ ಅದೆಷ್ಟು ಬಾರಿ ಚರ್ಚೆಗೆ ಒಳಗಾದವೋ ಲೆಕ್ಕವಿಲ್ಲ. ಈ ನಡುವೆ, ಯಾರೋ ಒಬ್ಬ ಭೂಪ ಬಂದು, ಜನರ ಆಸೆಗಳೊಂದಿಗೆ ಆಟವಾಡಿದ: 'ಬೇಗ ಕರೆಂಟು ತರಿಸ್ತೇನೆ, ನೀವೆಲ್ಲಾ ಒಟ್ಟಿಗೆ ಸೈನ್ ಮಾಡಿ ಅರ್ಜಿ ಕೊಡಿ, ನಾನು ಮಾಡಿಸ್ತೇನೆ' ಎಂದು ಮನವಿ ಪತ್ರಕ್ಕೆ ಸಹಿ ಹಾಕಿಸಿಕೊಂಡು, ಹತ್ತಾರು ಮನೆಗಳಿಂದ ತಲಾ 500 ಅಥವಾ 1000 ರುಪಾಯಿ ಪಡೆದು (ಕೊಡುವವರ ಶಕ್ತಿಯ ಮೇಲೆ ಈ ಮೊತ್ತದ ನಿಗದಿ!), ಅಂತರ್ಧಾನನಾದ ಘಟನೆಯೂ ನಡೆಯಿತು! ಪಾಪ, ಅವನು ಕರೆಂಟು ತರಿಸಿಕೊಡುತ್ತಾನೆ ಎಂದು ಎಲ್ಲರೂ ನಿಜವಾಗಿಯೂ ನಂಬಿದ್ದರು. ನಮ್ಮ ಹಳ್ಳಿಯ ಜನರು ಅದೆಷ್ಟು ಮುಗ್ಧರು ಮತ್ತು ಒಳ್ಳೆಯವರು ಎಂದರೆ, ಆ ಭೂಪ ಎಲ್ಲರಲ್ಲೂ ಆಸೆ ಹುಟ್ಟಿಸಿ, ಹಣವನ್ನು ಮೋಸ ಮಾಡಿದ ಘಟನೆಯನ್ನು ಹಾಸ್ಯದ ವಸ್ತುವನ್ನಾಗಿ ಸ್ವೀಕರಿಸಿ, ಹೇಳಿಕೊಂಡು ನಕ್ಕರೇ ಶಿವಾಯ್, ಅವನನ್ನು ಶಿಕ್ಷಿಸಲು ಅವನ ಬೆನ್ನು ಹತ್ತಿ ಹೋಗಲಿಲ್ಲ. ಕೊನೆಗೂ 1990ರ ದಶಕದಲ್ಲಿ ನಮ್ಮ ಹಳ್ಳಿಮನೆಗೆ ವಿದ್ಯುತ್ ಸಂಪರ್ಕ ದೊರಕಿತು; ಅದಕ್ಕಾಗಿ ನಮ್ಮಪ್ಪ ಸಾಕಷ್ಟು ಓಡಾಡಿ, ಚಪ್ಪಲಿ ಸವೆಸಿದರು.

ವಿದ್ಯುತ್ ದೀಪ ಬಂದ ನಂತರ, ಸರಸ್ವತಿ ಚೇಳಿನ ಮೈಮೇಲಿನ ಬೆಳಕನ್ನು ನಾವು ಕಾಣಲು ಸಾಧ್ಯವಾಗಲಿಲ್ಲ! ಏಕೆಂದರೆ, ಅದರ ಮೈ ಮೇಲೆ ಮೂಡುವ ಬೆಳಕಿನ ಬಾಸುಂಡೆಗಳು ತುಂಬಾ ಸೂಕ್ಷ್ಮ; ಕಗ್ಗತ್ತಲಿನ ಪ್ರದೇಶವಿದ್ದರೆ, ಬುಡ್ಡಿ ದೀಪದ ಮಂಕು ಬೆಳಕಿದ್ದರೆ ಮಾತ್ರ ಕಾಣಿಸುವಷ್ಟು ತೆಳುವಾದ ಬೆಳಕು ಅದು. ವಿದ್ಯುತ್ ದೀಪದ ಪ್ರಖರತೆಯಲ್ಲಿ, ಬರಿಗಣ್ಣಿಗೆ ಗೋಚರವಾಗದಷ್ಟು ಸಣ್ಣ ಪ್ರಮಾಣದ ಬೆಳಕು. ಅದನ್ನು ಪೊರಕೆಯಲ್ಲಿ ಜೋಪಾನವಾಗಿ ಹಿಡಿದು, ಮನೆಯಿಂದ ತುಸು ದೂರ, ವಿದ್ಯುತ್ ದೀಪದ ಪ್ರಖರತೆಯ ವಲಯದಿಂದಾಚೆ ತೆಗೆದುಕೊಂಡು ಹೋಗಿ, ಐದು ನಿಮಿಷ ಅಲ್ಲೇ ಕತ್ತಲಲ್ಲಿ ನಿಂತು, ರಾತ್ರಿಯ ಕಗ್ಗತ್ತಲಿಗೆ ಕಣ್ಣುಗಳು ಹೊಂದಿಕೊಂಡ ನಂತರ, ಸರಸ್ವತಿ ಚೇಳಿನ ಮೈಮೇಲಿನ ಬೆಳಕಿನ ಬಾಸುಂಡೆಗಳನ್ನು ನೋಡುವ ಪ್ರಯತ್ನ ಮಾಡಿದ್ದುಂಟು. ಆದರೆ ವಿದ್ಯುತ್ ಸಂಪರ್ಕ, ಟಿವಿ, ಮಣಭಾರದಷ್ಟು ಹೋಂವರ್ಕ್, ನಂತರ ಮೊಬೈಲ್ ಮೊದಲಾದವುಗಳು ನಮ್ಮ ಹಳ್ಳಿಯ ದಿನಚರಿಯಲ್ಲಿ ಪ್ರವೇಶಿಸಿದ ನಂತರ, ಮೇಲ್ನೋಟಕ್ಕೆ ಕ್ಷುಲ್ಲಕವಾಗಿ ಕಾಣುವ, ಸಣ್ಣ ಗಾತ್ರದ ಸರಸ್ವತಿ ಚೇಳಿನ 'ಬೆಳಕಿನ ಬಾಸುಂಡೆ'ಯಂಥ ವಿಸ್ಮಯಗಳು, ಜನರ ಅರಿವಿನ ಪರಿಧಿಯಿಂದ ದೂರ ಹೊರಟುಹೋಗಿವೆ.

(ಸಾಂದರ್ಭಿಕ ಚಿತ್ರ)

ನಾಗರ ಪಂಚಮಿ ನಾಡಿಗೆ ದೊಡ್ಡದು

ದೇವಮೂಲೆ
ರವೀ ಸಜಂಗದ್ದೆ
vveditoped@gmail.com

ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿಯಂದು ಭಯ, ಭಕ್ತಿ, ಶ್ರದ್ಧೆಯಿಂದ ಆಚರಿಸಲ್ಪಡುವ ಹಬ್ಬ ನಾಗರ ಪಂಚಮಿ. ಯುಗಾದಿಯಂದು ಹೊಸ ವರ್ಷ ಶುರುವಾದ ನಂತರದ ಪ್ರತಿ ಋತುವಿನಲ್ಲಿ ಬರುವ ಮೊದಲ ಹಿಂದೂ ಹಬ್ಬವಿದು.

ಜನಮೇಜಯ ಹೆಸರಿನ ರಾಜ ತನ್ನ ತಂದೆಯ ಸಾವಿಗೆ ಸರ್ಪವೊಂದು ಕಾರಣ ಎಂದು ತಿಳಿದು ಭೂಲೋಕದ ಸರ್ಪ ಸಂಕುಲವನ್ನು ನಿರ್ನಾಮಗೊಳಿಸಲು ಸರ್ಪಯಜ್ಞ ಆರಂಭಿಸುತ್ತಾನೆ. ಆ ಸಂದರ್ಭದಲ್ಲಿ ಸರ್ಪಗಳ ದೂರದ ಸಂಬಂಧಿ ಆಸ್ತಿಕ ಋಷಿ ಸರ್ಪಯಜ್ಞ ಮಾಡುತ್ತಿರುವ ಜನಮೇಜಯನನ್ನು ಪ್ರಸನ್ನಗೊಳಿಸುತ್ತಾನೆ. ರಾಜನು ನಿನಗೆ ಬೇಕಾದ ವರ ಕೇಳು ಎಂದಾಗ, 'ಪ್ರಾಣಿಹಿಂಸೆ ಮಹಾಪಾಪ, ನಿನ್ನ ಸರ್ಪಯಜ್ಞ ಸರ್ಪಗಳ ನಾಶಕ್ಕೆ ಕಾರಣವಾಗುತ್ತದೆ. ಈ ಪ್ರಯತ್ನ ಬಿಟ್ಟುಬಿಡು' ಎನ್ನುವ ವರ ಕೇಳುತ್ತಾನೆ. ಜನಮೇಜಯ ರಾಜ ಆಸ್ತಿಕ ಋಷಿಯ ಮಾತಿಗೆ ಬೆಲೆ ಕೊಟ್ಟು ಸರ್ಪಯಜ್ಞ ನಿಲ್ಲಿಸಿದ ದಿನ ಇದೇ ಪಂಚಮಿ, ನಾಗರ ಪಂಚಮಿ.

ಪುರಾಣದ ಇನ್ನೊಂದು ಕತೆಯ ಪ್ರಕಾರ, ಹಾವು ಕಚ್ಚಿ ಮಡಿದ ಸಹೋದರನನ್ನು ಸಹೋದರಿಯೊಬ್ಬಳು ಅದೇ ಹಾವನ್ನು ಭಕ್ತಿಭಾವದಿಂದ ಪೂಜಿಸಿ, ಪ್ರಾರ್ಥಿಸಿ ಬದುಕಿಸಿಕೊಂಡ ದಿನವು ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿಯಾಗಿತ್ತು. ನಾಗರ ಪಂಚಮಿ ಜತೆಗೆ ಈ ದಿನವನ್ನು ಭ್ರಾತೃತ್ವದ ಸಂಕೇತವಾಗಿಯೂ ಹಲವೆಡೆ ಆಚರಿಸಲಾಗುತ್ತದೆ. ಅದಲ್ಲದೆ ಸತ್ಯೇಶ್ವರಿ ಹೆಸರಿನ ದೇವತೆಯೊಬ್ಬಳು ನಾಗರ ಪಂಚಮಿಯ ಹಿಂದಿನ ದಿನ ಮೃತನಾದ ತನ್ನ ಸಹೋದರನನ್ನು ನೆನೆದು ನಾಗರ ಪಂಚಮಿ ದಿನ ಅನ್ನ-ನೀರು ತ್ಯಜಿಸಿ ಉಪವಾಸ ಮಾಡುತ್ತಾಳೆ. ಇಂದಿಗೂ ಈ ಹಬ್ಬದ ದಿನದಂದು ಸಹೋದರನ ಒಳಿತಿಗಾಗಿ ಸಹೋದರಿಯರು ಉಪವಾಸ ಮಾಡುವ ಪರಿಪಾಠವಿದೆ.

ಜನರು ತಮ್ಮ ತಮ್ಮ ಪರಿಸರದ ನಾಗನಕಟ್ಟೆ, ನಾಗಬನ, ಸುಬ್ರಹ್ಮಣ್ಯ, ಶಾಸ್ತಾರ ದೇವಸ್ಥಾನಗಳಿಗೆ ತೆರಳಿ ನಾಗದೇವತೆಗೆ ಶ್ರದ್ಧಾಭಕ್ತಿಯಿಂದ ತನಿ ಎರೆದು, ಹಾಲು-ಸೀಯಾಳ, ಹಿಂಗಾರ-ಕೇದಗೆ ಹೂವು ಸಮರ್ಪಿಸಿ, ಪಂಚಾಮೃತ ಅಭಿಷೇಕ ನೆರವೇರಿಸಿ, ನೈವೇದ್ಯ ಅರ್ಪಿಸಿ ಪೂಜೆ ಸಲ್ಲಿಸುತ್ತಾರೆ. ದಕ್ಷಿಣ ಕನ್ನಡ, ಕಾಸರಗೋಡು ಭಾಗಗಳಲ್ಲಿ ಕುಟುಂಬ/ಭೌಗೋಳಿಕ ಪ್ರದೇಶಕ್ಕೆ ಒಂದರಂತೆ ನಾಗನ ಕಟ್ಟೆ ಅಥವಾ ನಾಗಬನ ಇದೆ. ಆ ಪರಿಸರದ ರಕ್ಷಣೆ ಮತ್ತು ಜನರ ಯೋಗಕ್ಷೇಮವನ್ನು ನಾಗರಾಜ ನೋಡಿಕೊಳ್ಳುತ್ತಾನೆ, ಎಲ್ಲ ದುಷ್ಟಶಕ್ತಿಗಳಿಂದ ಸರ್ಪವಂದ್ಯ ನಾಗರಾಜ ರಕ್ಷಿಸಿ ಸಲಹುತ್ತಾನೆ ಎನ್ನುವ ನಂಬಿಕೆಗೆ ತಲೆತಲಾಂತರದ ಭವ್ಯ ಇತಿಹಾಸವಿದೆ. ಅಂದು ನಾಗನನ್ನು ಪೂಜಿಸುವುದರಿಂದ ಜೀವನದಲ್ಲಿನ ಎಲ್ಲ ಸಂಕಷ್ಟಗಳು ದೂರವಾಗಿ ಕುಟುಂಬದಲ್ಲಿ ಸುಖ, ಶಾಂತಿ, ಸಂತೋಷ, ಸಮೃದ್ಧಿ ನೆಲೆಸಿ ಅಪೇಕ್ಷಿತ ಫಲ ಸಿಗುತ್ತದೆ ಎನ್ನುವುದು ನಂಬಿಕೆ.

ಸಮೃದ್ಧ ಮಳೆಗಾಲದ ಸಮಯದಲ್ಲೇ ನಾಗರ ಪಂಚಮಿ ಹಬ್ಬ ಬರುತ್ತದೆ. ಇದರ ಹಿಂದಿನ ಕಾರಣ ಹುಡುಕುತ್ತಾ ಹೋದರೆ, ಮಳೆಗಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಹಾವುಗಳಿಂದ ರಕ್ಷಣೆ ಪಡೆಯುವ ಉದ್ದೇಶ ಎದ್ದು ಕಾಣುತ್ತದೆ. ಹಾವಿಗೆ ಹಾಲೆರೆದು ಪೂಜಿಸುವ ಮೂಲಕ 'ಯಾವುದೇ ರೀತಿಯಲ್ಲಿ ಮನುಕುಲ ಮತ್ತು ಸಾಕುಪ್ರಾಣಿಗಳಿಗೆ ಅಪಾಯ ಮಾಡದಿರು/ತಾರದಿರು ನಾಗಣ್ಣಾ' ಎಂದು ಬೇಡಿಕೊಳ್ಳುವ ಸಾಧ್ಯತೆ ಇರುವುದು ದಿಟ.

ದೈವಿಶಕ್ತಿ, ಧಾರ್ಮಿಕ ಆಚರಣೆಯ ತಳಹದಿಯ ಮೇಲೆ ನಿಂತಿರುವ ತುಳುನಾಡಿನಲ್ಲಿ ನಾಗಾರಾಧನೆ ಹೆಚ್ಚು ವಿಶೇಷ. ನಾಗದೇವರು ಕರಾವಳಿಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದು, ಶ್ರೀಕೃಷ್ಣ ಈ ದಿನ ಕಾಳಿಂಗ ಸರ್ಪವನ್ನು ಕೊಂದ ಕಾರಣಕ್ಕಾಗಿ ನಾಗಾರಾಧನೆಯನ್ನು ಮಾಡಲಾಗುತ್ತದೆ. ಉತ್ತರ ಕರ್ನಾಟಕದಲ್ಲಿ ನಾಗರ ಪಂಚಮಿ ಹಬ್ಬವು 'ರೊಟ್ಟಿ ಪಂಚಮಿ' ಹೆಸರಿನ ಬಹುದೊಡ್ಡ ಹಬ್ಬ. ಮದುವೆಯಾಗಿ ಗಂಡನ ಮನೆಯಲ್ಲಿ ಇರುವ ಹೆಣ್ಣು ಮಗಳನ್ನು ನಾಗರ ಪಂಚಮಿ ಹಬ್ಬಕ್ಕೆ ತವರಿಗೆ ಕರೆದುಕೊಂಡು ಬರುವ ಪದ್ಧತಿ ಉತ್ತರ ಕರ್ನಾಟಕದಲ್ಲಿ ಇಂದಿಗೂ ಪ್ರಚಲಿತದಲ್ಲಿದೆ.

ಮುಂಗಾರು ಬೆಳೆ ಬೆಳೆಯುವ ಸಂದರ್ಭದಲ್ಲಿ ಈ ಹಬ್ಬ ಬರುವುದರಿಂದ ರೈತರೂ ಸಂಭ್ರಮದಿಂದ ಹುತ್ತಕ್ಕೆ ಹಾಲೆರೆಯುವ ಮೂಲಕ ಈ ಹಬ್ಬವನ್ನು ಆಚರಿಸುತ್ತಾರೆ. ಹಾವುಗಳು ಕೃಷಿ ಸ್ನೇಹಿಗಳು. ಭೂಮಿಯ ಮೇಲಿರುವ ಹಲವಾರು ಕ್ರಿಮಿಕೀಟಗಳನ್ನು ಆಹಾರವಾಗಿ ತಿಂದು ಹಾವುಗಳು ರೈತನ ಬೆಳೆಗಳಿಗೆ ಪೂರಕವಾಗಿ ಸಹಕರಿಸುತ್ತವೆ. ಇದಕ್ಕೆ thanks giving ಎನ್ನುವಂತೆ ರೈತರು ನಾಗರ ಪಂಚಮಿಯ ದಿನ ಹಾವುಗಳಿಗೆ ಹಾಲೆರೆದು ಪೂಜಿಸುತ್ತಾರೆ. ಪಡೆದ ಉಪಕಾರಕ್ಕೆ ಕೃತಜ್ಞತೆ ಸಲ್ಲಿಸುವ ದ್ಯೋತಕ ಹೊಂದಿರುವ ವಿಶಿಷ್ಟ ಹಬ್ಬವಿದು.

ನಾಗರಹಾವು ನಿಜವಾದ ನಾಗನಾದರೆ, ನಾಗನ ಕಲ್ಲು ನಿಜನಾಗನ ಸಂಕೇತ ಎನ್ನಲಡ್ಡಿಯಿಲ್ಲವೇನೋ? 'ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ...' ಎನ್ನುವ ಬಸವಣ್ಣನವರ ವಚನ ಮಾನವನ ನಿಜಬಣ್ಣವನ್ನು ಸ್ಪಷ್ಟವಾಗಿ ಹೇಳಿದೆ. ಗುಣಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬದಲಿಸುವ ಮನುಷ್ಯನ ಆತ್ಮವಂಚನೆಯ ವರ್ತನೆಗೆ ಕನ್ನಡಿ ಹಿಡಿದಂತಿದೆ ಈ ವಚನ.

ಪ್ರಕೃತಿಯು ಸಮೃದ್ಧ ಫಲ-ಫಸಲನ್ನು ಕೊಡಲು ಮೊದಲ್ಗೊಂಡು, ಗರ್ಭಾಂಕುರವಾಗುವ ಕಾಲಮಾನ ಶ್ರಾವಣದ ತಿಂಗಳು. ಉತ್ತಮ ಮಳೆಯಾಗಿ, ಸಸ್ಯ ಶ್ಯಾಮಲೆ ಪ್ರಕೃತಿಮಾತೆ ಹಸಿರಿನಿಂದ ಮೈದುಂಬಿಕೊಂಡು ಕಂಗೊಳಿಸುವ ಕಾಲವಿದು. ಶ್ರಾವಣ ಮಾಸದ ಶುಕ್ಲಪಕ್ಷದ ನಾಗರ ಪಂಚಮಿಯಿಂದ ತೊಡಗಿ ಮುಂದೆ ಹಬ್ಬ ಹರಿದಿನಗಳು ಸಾಲುಗಟ್ಟಿ ಬರುತ್ತವೆ. ಇಂದು ನಾಗರ ಪಂಚಮಿ. ನಂತರ ವರಮಹಾಲಕ್ಷ್ಮಿ ಹಬ್ಬ. ಮತ್ತೆ ಕೃಷ್ಣ ಜನ್ಮಾಷ್ಟಮಿ. ತದನಂತರ ಗಣೇಶ ಚತುರ್ಥಿ. ಹಾಗೇ ಮುಂದುವರಿದು ನವರಾತ್ರಿ, ದಸರಾ, ದೀಪಾವಳಿ. ಮುಂದಿನ ಮೂರು ತಿಂಗಳು ಸಾಲು ಸಾಲು ಹಬ್ಬಗಳ ಹಬ್ಬ!

ಕಣ್ಣುಗಳ ಮೂಲಕವೇ ಕಿವಿಯ ಕೆಲಸವನ್ನೂ ಮಾಡುವುದು ಸರ್ಪಗಳ ಜಾಣ್ಮೆ. ಅದರಂತೆ ಚಕ್ಷು ಮತ್ತು ಶ್ರವಣ ಹೀಗೆ ಎರಡೂ ಇಂದ್ರಿಯಗಳನ್ನು ಸರಿಯಾಗಿ ಮತ್ತು ಸಮರ್ಥವಾಗಿ ನಿರ್ವಹಿಸಿ ವಿನಿಯೋಗಿಸುವ ಜಾಡು ಮತ್ತು ಜಾಣ್ಮೆ ನಮ್ಮದಾಗಬೇಕಿದೆ. ಒಂದೆಡೆಯಿಂದ ಇನ್ನೊಂದೆಡೆಗೆ ರಭಸದಿಂದ ಹರಿಯುವ ಹಾವಿನ ಸ್ವಭಾವ ಶೀಘ್ರವಾಗಿ ಕಾರ್ಯಪ್ರವೃತ್ತರಾಗಿ ಕ್ರಿಯಾಶೀಲರಾಗಲು ಪ್ರೇರಕವಾಗಿದೆ. ಒಂದೇ ಹುತ್ತದಲ್ಲಿ ಹಲವು ಸರ್ಪಗಳು ನೆಲೆಸಿ ಸಾರುವ ಅನ್ಯೋನ್ಯತೆ, ಒಗ್ಗಟ್ಟು, ಸಹೋದರ ಭಾವ ಮಾನವ ಬದುಕಿಗೆ ಆದರ್ಶ. ಮೂಳೆಗಳಿಲ್ಲದಿದ್ದರೂ ನರಗಳ ಸಹಾಯದಿಂದ ಎಲ್ಲೆಡೆ ಹರಿದಾಡುವ ಉರಗಗಳು ನಮ್ಮೆಲ್ಲರ ನರನಾಡಿಗಳನ್ನು ಚೆನ್ನಾಗಿಡಲಿ.

'ಸಹಸ್ರಶೀರ್ಷಂ ಜಗದೇಕ ಕುಂಡಲಿ ಪೀತಾಂಬರಂ ಧೂಮ್ರಸಹಸ್ರಲೋಚನಂ। ಉದಾರವೀರ್ಯಂ ವಿಷದಂಷ್ಟ್ರಕಾನನಂ ನಮಾಮ್ಯನಂತಂ ಜಗದೇಕನಾಥಂ॥'- ಸಾವಿರ ಹೆಡೆಗಳುಳ್ಳ ಜಗದೇಕ ಕುಂಡಲನಾಗಿರುವ, ಪೀತಾಂಬರಧಾರಿಯಾಗಿರುವ ಹೊಗೆ ಕಾರುವ ಕಣ್ಣುಗಳಿರುವ, ಅಪರಿಮಿತ ಪರಾಕ್ರಮಿಯಾದ, ವಿಷಪೂರಿತ ಕೋರೆ ಹಲ್ಲುಗಳಿರುವ, ಜಗದೊಡೆಯ ಅನಂತ ಮೂರ್ತರೂಪನಿಗೆ ಪ್ರಣಾಮಗಳು. ನಾಗರ ಪಂಚಮಿ ಸರ್ವರಿಗೂ ಶುಭ ತರಲಿ. ಮಳೆ-ಬೆಳೆ ಸಾಕಷ್ಟು ಆಗಿ ಜಗಕೆ ಸಮೃದ್ಧಿ ಉಂಟಾಗಲಿ. ನಾಗರಾಜ ನಾಡಿನೆಲ್ಲೆಡೆ ಒಳಿತು ಮಾಡಲಿ. ಆತನ ಶ್ರೀರಕ್ಷೆ ಮನುಕುಲ ಮತ್ತು ಜಗತ್ತಿನೆಲ್ಲೆಡೆ ಸದಾ ಇರಲಿ. ಓಂ ಸರ್ಪರಾಜಾಯ ತೇ ನಮಃ.

(ಲೇಖಕರು ಸಾಫ್ಟ್‌ವೇರ್ ಉದ್ಯೋಗಿ)

ನನ್ನದೂ ಅಂಬೇಡ್ಕರರ ಜಾತಿ...

ಪ್ರತಿಧ್ವನಿ
ಡಾ.ಸುಧಾಕರ ಹೊಸಳ್ಳಿ
vveditoped@gmail.com

ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿಯವರು ಈಚೆಗೆ ಸದನದಲ್ಲಿ ರಾಷ್ಟ್ರದಲ್ಲಿ ಜಾತಿಗಣತಿ ಅಗತ್ಯವೆಂದು ಆಗ್ರಹ ಮಾಡಿದ ಸಂದರ್ಭದಲ್ಲಿ, ಸಂಸತ್ ಸದಸ್ಯ ಅನುರಾಗ್ ಠಾಕೂರ್ ಅವರು, 'ನಿಮ್ಮ ಜಾತಿ ಯಾವುದು?' ಎಂದು ಮರುಪ್ರಶ್ನೆ ಹಾಕಿದರು. ಈ ನಡಾವಳಿಯಿಂದ ಇಡೀ ಸದನ ರಣಾಂಗಣವಾಗಿ ಮಾರ್ಪಟ್ಟಿತ್ತು.

ಇಂಥದೊಂದು ಘಟನಾವಳಿ ಸದನದ ಒಳಗಿನ ಹೋರಾಟಕ್ಕೆ ಮಾತ್ರ ಸೀಮಿತವಾಗದೆ, ಸದನದ ಹೊರಗೂ ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿದೆ. ಭಾರತದಲ್ಲಿ ಸ್ವಾತಂತ್ರ್ಯಪೂರ್ವದಿಂದಲೂ ಜಾತಿಯ ಚರ್ಚೆ ತನ್ನದೇ ಆದ ವಿಶೇಷ ವ್ಯಾಪ್ತಿಯನ್ನು ಹೊಂದಿದೆ. ಅದರಲ್ಲೂ ಜಾತಿಪದ್ಧತಿ ಎಂಬುದು ಹಿಂದೂ ಧರ್ಮದ ಶ್ರೇಷ್ಠತೆಯ ನಡುವೆಯೂ ಒಂದು ಕಪ್ಪುಚುಕ್ಕಿಯಾಗಿ ಉಳಿದಿದೆ. ಹಲವಾರು ಮಹಾಪುರುಷರು ಈ ವಿಷಕಾರಿ ಪದ್ಧತಿಯ ರದ್ದತಿಗೆ ಹೋರಾಟ ಮಾಡುತ್ತಲೇ ಬಂದಿದ್ದಾರೆ.

ರಾಜಕೀಯದ ನೆಲೆಗಟ್ಟಿನಿಂದ ರಾಹುಲ್ ಗಾಂಧಿಯವರ ಜಾತಿಯ ಪ್ರಶ್ನೆ ಮಾಡಿದ್ದು ವಿವಾದವಾಗಿ ಮಾರ್ಪಟ್ಟಿದೆ. ಆದರೆ ಸಾಮಾಜಿಕ ನೆಲೆಗಟ್ಟಿನಿಂದ ಇದು ಭರತಭೂಮಿಗೆ ಒಂದು ಕಳಂಕ ಎಂಬುದನ್ನು ಸರ್ವರೂ ಅರಿಯಬೇಕಿದೆ. ಎಲ್ಲದಕ್ಕೂ ಜಾತಿಯನ್ನೇ ಮುಂದುಮಾಡಬೇಕಾದ, ಮುಂದುಮಾಡುತ್ತಿರುವ ದೌರ್ಭಾಗ್ಯದ ವಾರಸುದಾರರು ನಾವು. ಸೇನೆ, ಕ್ರೀಡೆಯಲ್ಲಿಯೂ ಜಾತಿ ಎಳೆದು ತರುತ್ತಿರುವ ಮನಸ್ಥಿತಿಯವರು ನಾವು. ಮೂಢನಂಬಿಕೆಗೆ ಸಂಸ್ಕೃತಿ, ಪರಂಪರೆ ಎಂಬ ಹೆಸರನ್ನು ಕೊಟ್ಟಾಕ್ಷಣ ಜಾತೀಯತೆ ಎಂಬ ವಿಷವನ್ನು ಅಮೃತ ಮಾಡಲು ಸಾಧ್ಯವಾಗುವುದಿಲ್ಲ.

ಜಾತಿಯ ಮೇಲಾಟ ಮೇಳೈಸುತ್ತಿರುವ ಕಾಲಘಟ್ಟದಲ್ಲಿ ಅದರ ನಿರ್ಮೂಲನೆಗೆ, ಅದರ ಬುಡವನ್ನೇ ಕಿತ್ತು ಬಿಸಾಡಲು ನಮಗೆ ದಾರಿದೀಪವಾಗಿ ಕಾಣುವುದು ಸಂವಿಧಾನಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್. ಪ್ರಜ್ಞಾವಂತರಾದ ನಾವೆಲ್ಲರೂ ಅಂಬೇಡ್ಕರರ ಜಾತಿಯನ್ನು ಅನುಸರಿಸಿದರೆ, ಜಾತಿ ನಿರ್ಮೂಲನೆಯ ಕಾರ್ಯ ವೇಗವನ್ನು ಪಡೆದುಕೊಳ್ಳುತ್ತದೆ. ಅದರ ನಾಶಕ್ಕೂ ಸಮಯ ಕೂಡಿಬರುತ್ತದೆ. ಜಾತೀಯತೆಯ ಕರುಳಬಳ್ಳಿಯನ್ನೇ ಶಿಥಿಲಗೊಳಿಸಬಲ್ಲ ಶಕ್ತಿ ಅಂಬೇಡ್ಕರರ ಜಾತಿಗೆ ಇದೆ. ಹಾಗಾದರೆ ಅಂಬೇಡ್ಕರ್ ಜಾತಿ ಯಾವುದು?

ಸಮಾನತೆಯ ಸ್ಥಾಪನೆ, ಸಮಸಮಾಜದ ನಿರ್ಮಾಣಕ್ಕೆ ಶಿಕ್ಷಣ ಹಾಗೂ ಸ್ವಾವಲಂಬನೆಯನ್ನು ಮೈಗೂಡಿಸಿಕೊಂಡ ದಿವ್ಯಜ್ಞಾನಿ ಅಂಬೇಡ್ಕರರು. ಅವರದ್ದು ಶಿಕ್ಷಣ ಮತ್ತು ಸ್ವಾಭಿಮಾನದ ಜಾತಿ.

ರಾಷ್ಟ್ರದ ಗಂತವ್ಯವನ್ನು (ಗುರಿಯನ್ನು) ನಿರ್ಧಾರ ಮಾಡುವಾಗ, ವ್ಯಕ್ತಿಗಳ, ಪಕ್ಷಗಳ ಗಂತವ್ಯವನ್ನು ಪರಿಗಣನೆಗೆ ತೆಗೆದುಕೊಳ್ಳಬಾರದು, ಎಲ್ಲದಕ್ಕೂ ರಾಷ್ಟ್ರವನ್ನೇ ಅಗ್ರಗಣ್ಯವಾಗಿ ತೆಗೆದುಕೊಳ್ಳಬೇಕು ಎಂದು ಅಂಬೇಡ್ಕರ್ ಅವರು 1946ರ ಡಿಸೆಂಬರ್ 17ರಂದು ತಮ್ಮ ಮೊದಲ ಸಂವಿಧಾನ ರಚನಾ ಸಭೆಯ ಭಾಷಣದಲ್ಲಿ ಪ್ರತಿಪಾದನೆ ಮಾಡಿದ್ದರು. ಅಂಬೇಡ್ಕರರದ್ದು ರಾಷ್ಟ್ರೀಯತೆಯ ಜಾತಿ.

ಅದೇ ಡಿಸೆಂಬರ್ 17ರಂದು ಅವರು ಮಾತನಾಡುತ್ತಾ, 'ಸಮಯ ಮತ್ತು ಸನ್ನಿವೇಶ ಸಹಕರಿಸಿದರೆ ಭಾರತವು ಜಾತಿ-ಮತ-ಪಂಥಗಳನ್ನು ಹೊರತು ಪಡಿಸಿ ಒಂದಾಗುವುದನ್ನು ಜಗತ್ತಿನ ಯಾವ ಶಕ್ತಿಯೂ ತಡೆಯಲಾರದು' ಎಂಬ ಆಶಾವಾದದ ಕರೆನೀಡಿದ್ದರು. ಅಂಬೇಡ್ಕರರದ್ದು ಐಕ್ಯತೆಯ ಜಾತಿ.

ಸದಸ್ಯರೊಬ್ಬರ ಪ್ರಶ್ನೆಗೆ ಅಂಬೇಡ್ಕರರು ಉತ್ತರಿಸುತ್ತಾ, 'ಈ ಸಂವಿಧಾನ ರಚನಾ ಸಭೆಯು ತನ್ನ ಕಾರ್ಯವನ್ನು ಪ್ರಾರಂಭ ಮಾಡುವ ಮೊದಲೇ ಬ್ರಿಟನ್ ಸಂಸತ್ತು ನಿರ್ದೇಶಕ ಎಲ್ಲಾ ನಿರ್ದೇಶನಗಳನ್ನು ತಿರಸ್ಕರಿಸಿಯಾಗಿದೆ. ಬ್ರಿಟನ್ ನಿರ್ದೇಶಿಸುವ ಯಾವುದೇ ಅಂಶಗಳನ್ನು ಸಂವಿಧಾನದ ಭಾಗವನ್ನಾಗಿ ಮಾಡಲು ನನ್ನನ್ನು ಸೇರಿದಂತೆ ಯಾವುದೇ ಸದಸ್ಯರು ಅವಕಾಶ ಕೊಡುವುದಿಲ್ಲ' ಎಂದು ಗುಡುಗಿದ್ದರು. ಅಂಬೇಡ್ಕರರದ್ದು ರಾಷ್ಟ್ರಪ್ರೇಮದ ಜಾತಿ.

ಅಂಬೇಡ್ಕರರು, 'ಆರ್ಯ, ಅನಾರ್ಯ ಎಂಬ ಸಿದ್ಧಾಂತವೇ ಪೊಳ್ಳು. ಅದು ಎಂದೋ ಸತುಹೋಗಬೇಕಿತ್ತು. ಇಂಥ ಒಂದು ವಾದವು ವಿದೇಶಿಯರ ತೆಳುವಾದ ಸಿದ್ಧಾಂತದ ಮೇಲೆ ನಿಂತಿದೆ. ಋಗ್ವೇದದ ಆಧಾರದ ಮೇಲೆ ಇದನ್ನು ಹೊಡೆದು ಉರುಳಿಸಬಹುದು' ಎಂದಿದ್ದರು. ಅಂಬೇಡ್ಕರರದ್ದು ನೆಲಮೂಲ ಪರಂಪರೆಯ ಜಾತಿ.

'ಏಕರೂಪ ಕಾನೂನು ಸಮಿತಿಯ ಒಳಗಡೆ ಕೆಲವು ಹಿಂದೂ ಕಾನೂನುಗಳನ್ನು ಜೋಡಿಸಿದ್ದೇನೆ, ಅವು ಹಿಂದೂ ಕಾನೂನುಗಳು ಎನ್ನುವುದಕ್ಕಿಂತ ಶ್ರೇಷ್ಠವಾದದ್ದು ಎನ್ನುವ ಕಾರಣಕ್ಕಾಗಿ ಯಾವುದೇ ಧರ್ಮದ ಹಂಗಿಲ್ಲದೆ ಜೋಡಿಸಿದ್ದೇನೆ' ಎಂದು ಅಂಬೇಡ್ಕರ್ ಝೇಂಕಾರ ಮಾಡಿದ್ದರು. ಅಂಬೇಡ್ಕರ್ ಅವರದ್ದು ಸುಧರ್ಮದ ಜಾತಿ.

ಅಂಬೇಡ್ಕರ್ ಅವರು ನಾಸಿಕ್‌ನ ಕಾಳರಾಮನ ಗುಡಿಯ ಹೋರಾಟದಲ್ಲಿ, 'ರಾಮ ನನಗೂ ಬೇಕು, ನನ್ನವರಿಗೂ ಬೇಕು' ಎಂದು ಆಗ್ರಹಿಸಿದ್ದರು. ಅಂಬೇಡ್ಕರರದ್ದು ಸಮಾನತೆಯ ಜಾತಿ.

ಅಂಬೇಡ್ಕರರು 12.5.1939ರಂದು ಪುಣೆಯಲ್ಲಿ ಆರ್‌ಎಸ್‌ಎಸ್ ಶಿಬಿರವೊಂದರಲ್ಲಿ ಪಾಲ್ಗೊಂಡು, ಅಲ್ಲಿನ ಸ್ವಯಂಸೇವಕರ ಶಿಸ್ತು ಮತ್ತು ನಡವಳಿಕೆಯನ್ನು ನೋಡಿ, 'ಆರ್‌ಎಸ್‌ಎಸ್ ಕಾರ್ಯವಿಸ್ತರಣೆಯು ರಾಷ್ಟ್ರವ್ಯಾಪಿ ಆಗಬೇಕು, ಆ ಮೂಲಕ ಭಾರತ ಬೆಳಕು ಕಾಣಬೇಕು' ಎಂಬ ಸದಭಿಪ್ರಾಯವನ್ನು ಸಾರಿದ್ದರು. ಅಂಬೇಡ್ಕರರದ್ದು ಸೇವೆಯ ಜಾತಿ.

ಘಜನಿ ಮೊಹಮ್ಮದ್, ಘೋರಿ ಮೊಹಮ್ಮದರ ಭಾರತದ ಮೇಲಿನ ದಾಳಿಯನ್ನು ಅಂಬೇಡ್ಕರರು ಉಲ್ಲೇಖ ಮಾಡಿ, ಮುಸ್ಲಿಂ ಮತಾಂಧತೆಯನ್ನು, ಕಾಫಿರ್ ಪದ್ಧತಿಯನ್ನು ತಿರಸ್ಕರಿಸಿದ್ದರು. ಅಂಬೇಡ್ಕರರದ್ದು ವಿಶ್ವಮಾನವ ಜಾತಿ.

ಭಾರತವು ಪ್ರಕೃತಿದತ್ತವಾಗಿಯೇ ಅಖಂಡವಾದದ್ದು. ಭಾರತವನ್ನು ವಿಭಜಿಸುವುದೆಂದರೆ ಭಾರತಾಂಬೆಯ ಒಂದು ಭಾಗವನ್ನು ಕತ್ತರಿಸಿಕೊಡುವುದು ಎಂದೇ ಅರ್ಥ. ಹಾಗಾಗಿ ಭಾರತವನ್ನು ತುಂಡುಮಾಡಬಾರದು ಎಂಬ ಆಶಯವನ್ನು ಅಂಬೇಡ್ಕರ್ ವ್ಯಕ್ತಪಡಿಸಿದ್ದರು. ಅಂಬೇಡ್ಕರರದ್ದು ಅಖಂಡ ಭಾರತ ಜಾತಿ.

ಅಂಬೇಡ್ಕರರು, 'ನಾನು ಧರ್ಮಾಂತರ ಮಾಡುವುದಿಲ್ಲ. ಒಂದು ವೇಳೆ ಜಾತಿ ನಿರ್ಮೂಲನೆಗಾಗಿ ಧರ್ಮಾಂತರ ಮಾಡುವುದು ಅನಿವಾರ್ಯವೇ ಆದರೆ, ಈ ನೆಲದ ಧರ್ಮವನ್ನೇ ಆಶ್ರಯಿಸುತ್ತೇನೆಯೇ ಹೊರತು ರಾಷ್ಟ್ರಾಂತರ ಮಾಡುವುದಿಲ್ಲ' ಎಂದು 1936ರಲ್ಲಿ ಘೋಷಿಸಿದ್ದರು. ಅಂಬೇಡ್ಕರರದ್ದು ಭರತಭೂಮಿಯ ಜಾತಿ.

ಅಂಬೇಡ್ಕರರು 1948ರ ನವೆಂಬರ್ 4ರಂದು, ಸಂವಿಧಾನ ರಚನಾ ಸಭೆಯಲ್ಲಿ ನಿಂತು, 'ಕಾಲಕಾಲದ ನಿರೀಕ್ಷೆಗೆ ಅನುಗುಣವಾಗಿ ಪ್ರಜೆಗಳ ಕಲ್ಯಾಣಕ್ಕೋಸ್ಕರ ಸಂವಿಧಾನದ ಮಾರ್ಪಾಟಾಗಬೇಕು, ತಿದ್ದುಪಡಿಯಾಗಬೇಕು. ಹಾಗಾಗಿ, ತಿದ್ದುಪಡಿ ಮಾಡುವ 368ನೇ ವಿಧಿಯನ್ನು ದಕ್ಷಿಣ ಆಫ್ರಿಕದಿಂದ ತಂದು ಭಾರತ ಸಂವಿಧಾನಕ್ಕೆ ಜೋಡಿಸಿದ್ದೇನೆ' ಎಂದಿದ್ದರು. ಅಂಬೇಡ್ಕರರದ್ದು ಕಲ್ಯಾಣರಾಜ್ಯದ ಜಾತಿ.

1948ರ ನವೆಂಬರ್ 15ರಂದು ಅಂಬೇಡ್ಕರರು, 'ಜಾತ್ಯತೀತತೆ ಎಂಬುದು ಪಾಶ್ಚಿಮಾತ್ಯ ಚಿಂತನೆ, ಅದು ಈ ನೆಲದ ಗುಣಕ್ಕೆ ಒಗ್ಗುವುದಿಲ್ಲ. ಆದ್ದರಿಂದ ಕೆ.ಟಿ. ಷಾ ಅವರ ಜಾತ್ಯತೀತತೆ ಸೇರ್ಪಡೆ ತಿದ್ದುಪಡಿಯನ್ನು ಒಪ್ಪಲಾರೆ' ಎಂದು ನಿರಾಕರಿಸಿದ್ದರು. ಅಂಬೇಡ್ಕರರದ್ದು ಸ್ವದೇಶಿ ಜಾತಿ.

21ನೇ ಶತಮಾನದ ಅಂತ್ಯದಲ್ಲಿದ್ದರೂ, ಜಾತಿ, ಅಸ್ಪೃಶ್ಯತೆಗಳೆಂಬ ಸಾಮಾಜಿಕ ಕೆಡುಕುಗಳನ್ನೇ ಮನಸ್ಸಿಗೆ ಇಳಿಸಿಕೊಂಡಿರುವ ನಾವುಗಳು, ಅಂಬೇಡ್ಕರರ ರಾಷ್ಟ್ರಪ್ರೇಮದ ನೆಲೆಗಟ್ಟಿನಲ್ಲಿ ನಿಂತು ಯೋಚಿಸುವುದನ್ನು, ತರ್ಕಿಸುವುದನ್ನು, ವಿವೇಚಿಸುವುದನ್ನು, ಅವಲೋಕಿಸುವುದನ್ನು ಹಾಗೂ ಸಂಶೋಧನಾ ಸತ್ಯವನ್ನು ಒಪ್ಪಿಕೊಳ್ಳುವುದನ್ನು ಮೈಗೂಡಿಸಿಕೊಳ್ಳಬೇಕಿದೆ. ದಿಟಮಾರ್ಗದಲ್ಲಿ ಜಾತಿ ನಿರ್ಮೂಲನೆಗೆ ಪ್ರಯತ್ನಿಸುವುದೆಂದರೆ ಅದು ಅಂಬೇಡ್ಕರರಂತೆ ರಾಷ್ಟ್ರಜಾತಿ ಪಥದಲ್ಲಿ ನಿಲ್ಲಬೇಕು. ಹಾಗಾಗಿ, 'ನಾನು ಅಂಬೇಡ್ಕರರಂತೆ ರಾಷ್ಟ್ರಜಾತಿಯವನು' ಎಂದು ಘೋಷಿಸಿಕೊಳ್ಳಲು ಸಜ್ಜಾಗಬೇಕು.

(ಲೇಖಕರು ಸಂವಿಧಾನತಜ್ಞರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 228

This is a public announcement for information purposes only and is not a prospectus announcement and does not constitute an invitation or offer to acquire, purchase or subscribe to securities. Not for release, publication or distribution directly or indirectly, outside India. Initial public offer of Equity Shares (as defined below) on the main board of BSE Limited ("BSE") and National Stock Exchange of India Limited ("NSE", and together with BSE, the "Stock Exchanges") in compliance with Chapter II of the Securities and Exchange Board of India (Issue of Capital and Disclosure Requirements) Regulations, 2018, as amended ("SEBI ICDR Regulations").

OLA ELECTRIC

OLA ELECTRIC MOBILITY LIMITED

(Please scan the QR code to view the Prospectus)

Our Company was incorporated as 'Ola Electric Mobility Private Limited' at Bengaluru, Karnataka as a private limited company under the Companies Act, 2013, pursuant to a certificate of incorporation dated February 3, 2017, issued by the Registrar of Companies, Central Registration Centre. Subsequently, our Company was converted to a public limited company and the name of our Company changed to 'Ola Electric Mobility Limited' pursuant to a Shareholders' resolution dated October 5, 2023 and a fresh certificate of incorporation dated November 17, 2023 was issued by the Registrar of Companies, Karnataka at Bengaluru ("**RoC**"). For further details, see *"History and Certain Corporate Matters – Brief History of our Company"* on page 227 of the prospectus dated August 6, 2024 filed with the RoC ("**Prospectus**").

Registered Office: Regent Insignia, #414, 3rd Floor, 4th Block, 17th Main, 100 Feet Road, Koramangala, Bengaluru 560 034, Karnataka, India;
Tel: +91 80 3544 0050; **Website:** www.olaelectric.com; **Contact person:** Pramendra Tomar, Company Secretary and Compliance Officer; **E-mail:** ipo@olaelectric.com; **Corporate Identity Number:** U74999KA2017PLC099619

OUR PROMOTER: BHAVISH AGGARWAL

Our Company has filed the Prospectus dated August 6, 2024 with the RoC, and the Equity Shares are proposed to be listed on National Stock Exchange of India Limited ("NSE") and BSE Limited ("BSE") and trading will commence on August 9, 2024.

BASIS OF ALLOTMENT

INITIAL PUBLIC OFFERING OF 808,699,624 EQUITY SHARES OF FACE VALUE OF ₹10 EACH OF OLA ELECTRIC MOBILITY LIMITED (OUR "COMPANY" OR THE "COMPANY") FOR CASH AT A PRICE OF ₹76 PER EQUITY SHARE (INCLUDING A PREMIUM OF ₹66 PER EQUITY SHARE) ("OFFER PRICE") AGGREGATING TO ₹61,455.59 MILLION (THE "OFFER") COMPRISING A FRESH ISSUE OF 723,757,627 EQUITY SHARES OF FACE VALUE OF ₹ 10 EACH AGGREGATING TO ₹55,000.00 MILLION (THE "FRESH ISSUE") AND AN OFFER FOR SALE OF 84,941,997 EQUITY SHARES OF FACE VALUE OF ₹ 10 EACH AGGREGATING TO ₹6,455.59 MILLION (THE "OFFER FOR SALE"), CONSISTING OF 37,915,211 EQUITY SHARES OF FACE VALUE OF ₹ 10 EACH AGGREGATING TO ₹2,881.56 MILLION BY BHAVISH AGGARWAL, 4,178,996 EQUITY SHARES OF FACE VALUE OF ₹ 10 EACH AGGREGATING TO ₹317.60 MILLION BY INDUS TRUST, 295,470 EQUITY SHARES OF FACE VALUE OF ₹ 10 EACH AGGREGATING TO ₹22.46 MILLION BY AB INITIO CAPITAL, L.P., 3,782,883 EQUITY SHARES OF FACE VALUE OF ₹ 10 EACH AGGREGATING TO ₹287.50 MILLION BY ALPHA WAVE VENTURES II, LP, 630,336 EQUITY SHARES OF FACE VALUE OF ₹ 10 EACH AGGREGATING TO ₹47.91 MILLION BY ALPINE OPPORTUNITY FUND VI, L.P., 601,828 EQUITY SHARES OF FACE VALUE OF ₹ 10 EACH AGGREGATING TO ₹45.74 MILLION BY ASHNA ADVISORS LLP, 6,360,891 EQUITY SHARES OF FACE VALUE OF ₹ 10 EACH AGGREGATING TO ₹483.43 MILLION BY INTERNET FUND III PTE LTD, 1,354,978 EQUITY SHARES OF FACE VALUE OF ₹ 10 EACH AGGREGATING TO ₹102.98 MILLION BY MACRITCHIE INVESTMENTS PTE. LTD., 89,000 EQUITY SHARES OF FACE VALUE OF ₹ 10 EACH AGGREGATING TO ₹6.76 MILLION BY MATRIX PARTNERS INDIA III AIF TRUST, 3,727,534 EQUITY SHARES OF FACE VALUE OF ₹ 10 EACH AGGREGATING TO ₹283.29 MILLION BY MATRIX PARTNERS INDIA INVESTMENTS III, LLC, 358,228 EQUITY SHARES OF FACE VALUE OF ₹ 10 EACH AGGREGATING TO ₹27.23 MILLION BY NUVAMA PRIVATE INVESTMENTS TRUST-NUVAMA CROSSOVER OPPORTUNITIES FUND – SERIES III, 278,619 EQUITY SHARES OF FACE VALUE OF ₹ 10 EACH AGGREGATING TO ₹21.18 MILLION BY NUVAMA PRIVATE INVESTMENTS TRUST-NUVAMA CROSSOVER OPPORTUNITIES FUND – SERIES III A, 278,644 EQUITY SHARES OF FACE VALUE OF ₹ 10 EACH AGGREGATING TO ₹21.18 MILLION BY NUVAMA PRIVATE INVESTMENTS TRUST-NUVAMA CROSSOVER OPPORTUNITIES FUND – SERIES III B, 256,530 EQUITY SHARES OF FACE VALUE OF ₹ 10 EACH AGGREGATING TO ₹19.50 MILLION BY SARIN FAMILY INDIA LLC, 23,857,268 EQUITY SHARES OF FACE VALUE OF ₹ 10 EACH AGGREGATING TO ₹1,813.15 MILLION BY SVF II OSTRICH (DE) LLC AND 975,581 EQUITY SHARES OF FACE VALUE OF ₹ 10 EACH AGGREGATING TO ₹74.14 MILLION BY TEKNE PRIVATE VENTURES XV, LTD. (COLLECTIVELY, THE "SELLING SHAREHOLDERS" AND SUCH EQUITY SHARES, THE "OFFERED SHARES").

THE OFFER INCLUDED A RESERVATION OF 797,101 EQUITY SHARES OF FACE VALUE OF ₹ 10 EACH, AGGREGATING TO ₹55.00 MILLION (CONSTITUTING 0.02% OF THE POST-OFFER PAID-UP EQUITY SHARE CAPITAL, FOR SUBSCRIPTION BY ELIGIBLE EMPLOYEES ("EMPLOYEE RESERVATION PORTION"). THE OFFER LESS THE EMPLOYEE RESERVATION PORTION IS HEREINAFTER REFERRED TO AS THE "NET OFFER". THE OFFER AND THE NET OFFER CONSTITUTES 18.33% AND 18.32% OF THE POST-OFFER PAID-UP EQUITY SHARE CAPITAL OF OUR COMPANY, RESPECTIVELY.

ANCHOR INVESTOR OFFER PRICE: ₹ 76 PER EQUITY SHARE OF FACE VALUE OF ₹ 10 EACH
OFFER PRICE: ₹ 76 PER EQUITY SHARE OF FACE VALUE OF ₹ 10 EACH
THE OFFER PRICE IS 7.6 TIMES OF THE FACE VALUE

RISKS TO INVESTORS

For details refer to section titled *"Risk Factors"* beginning on page 29 of the Prospectus

1. **Losses and negative cash flow from operating activities in the past:** We have incurred losses and negative cash flows from operating activities since our inception, including in Fiscals 2024, 2023 and 2022 as set forth in the following table:

Amount in ₹ million

Particulars	Fiscal 2024	Fiscal 2023	Fiscal 2022
Loss Before Tax	(15,844.00)	(14,720.79)	(7,841.50)
Net cash used in Operating Activities	(6,330.87)	(15,072.71)	(8,849.54)

Our Material Subsidiaries, OET and OCT have continuously incurred losses since its inception.

2. **Limited operating history:** Incorporated in 2017, we delivered our first electric vehicle ("EV") scooter in December 2021. As we have a limited operating history in manufacturing EVs, there is a limited historical basis on which we can make judgments regarding our ability to develop, manufacture, and deliver EVs or their components or our future results of operations, including our ability to achieve profitability in the future. If we fail to address any or all of the risks and challenges pertaining to EV industry, our business may be materially and adversely affected.
3. **Majority portion of our Objects are towards investment into research and development purposes:** We intend to utilize ₹ 16,000 million out of the Net Proceeds for investment into research and development purposes of our Company, which constitutes a significant portion of the Net Proceeds which we propose to raise pursuant to the Offer. We cannot assure you that such investment into research and development will proceed as planned and result in creation of tangible assets or achieve results as anticipated.
4. **Risk associated with investment in research and development and technology:** We have heavily invested in and plan to continue investing in R&D and technology, including developing our cell manufacturing capabilities through the BIC. There is no assurance that we will realise returns on such investments. The following table sets forth our R&D spend, which comprises intangible assets under development and research costs.

Particulars	Fiscal 2024	Fiscal 2023	Fiscal 2022
	(in ₹ *million, except as stated otherwise)*		
Additions to intangible assets under development (1) (A)	3,061.65	4,216.29	1,601.50
Additions to intangible assets under development as a % of total spend on research and product development (%) (D = A/C)	79.50%	83.05%	91.08%
Research cost (2) (B)	789.41	860.82	156.90
Research cost as a % of total spend on research and product development (%) (E = B/C)	20.50%	16.95%	8.92%
Total spend towards research and product development (C = A+B)	3,851.06	5,077.11	1,758.40
Research and product development as a % of revenue from operations (%)	7.69	19.30	47.09

Notes:
(1) Intangible assets under development are capitalised expenses in the Restated Consolidated Financial Information.
(2) Expenditure on research activities are recognised in the statement of profit and loss of the Restated Consolidated Financial Information. For further details see, "Restated Consolidated Financial Information – Notes forming part of the Restated Consolidated Financial Information – Note 29: Other Expenses" on page 308 of the RHP.

5. **Supply and Pricing risk:** While we manufacture certain EV components, others are sourced from third-party domestic and foreign suppliers. In Fiscals 2024, 2023 and 2022, imported supplies comprised 37.03%, 31.11% and 29.76% of the cost of materials consumed, while domestic supplies comprised 62.97%, 68.89% and 70.24% of the cost of materials consumed. Our Company can experience disruptions in the supply or an increase in prices of components and raw materials, which could result in an increase in the price and impact the delivery timelines.
6. **Ineligibility/ elimination of Government incentives/ subsidiaries:** We benefit from certain government incentives such as the FAME Phase II subsidies, subsidies from the government of Tamil Nadu and goods and services tax reimbursements. Any reduction or elimination of government incentives such as the Electricity Mobility Promotion Scheme, 2024, Automobile PLI Scheme, Cell PLI Scheme, subsidies from the governments, and GST reimbursement or the ineligibility of any of our electric vehicles for such subsidy would increase the retail price of our electric vehicles and could adversely affect customer demand for our electric vehicles and affect our ability to achieve profitability.
7. **Risk related to sourcing of raw materials from China:** We plan to continue to source raw materials from suppliers in China for the purpose of cell manufacturing. We may be exposed to the possibility of product supply disruption and increased costs in the event of changes in the policies, rules and regulations of the Indian or Chinese government, including as a result of any political tensions, which could result in trade tariffs, increased freight charges or prices of cathode active material and anode active material, or a complete halt on imports from China.
8. **Performance and quality related risk:** We design and develop new EV products and certain core EV components in-house, such as the motor and drivetrain, battery packs, electronics and software. We import cells from foreign cell manufacturing companies, and plastic parts, electronic child parts and metal parts from other domestic and foreign suppliers. We cannot guarantee that the components or raw materials sourced will be free from defects or quality issues.
9. **Risks associated to Ola Gigafactory:** We intend to utilize ₹ 12,276.41 million of the Net Proceeds to fund our capital expenditure requirements to expand the Ola Gigafactory's manufacturing capacity. We have also relied on the D&B Report, which provides certain risks like risks in relation to obtaining required approvals from governmental authorities in a timely manner, technological risk, time and cost overrun in relation to Phase 1(b) and Phase 2 etc. We may experience cost overruns and face significant delays in completing the remaining phases of the Ola Gigafactory.

The Ola Gigafactory will be expanded in phases as set out below:

Sl. No.	Phase	Cumulative capacity*	Expected date of completion and operationalisation*
1.	Phase 1(b)	5 GwH	February 28, 2025
2.	Phase 2	6.40 GwH	April 30, 2025
3.	Further phases	20 GwH	Quarter 2 of Calendar Year 2026

**In terms of the D&B Report*

10. **Intellectual property rights risk:** We regard our trademarks, service marks, patents, domain names, trade secrets, proprietary technologies, and similar intellectual property as critical to our success. We have 88 registered patents and 217 patent applications pending in India under the Patents Act, 1970, as of July 24, 2024. We may not be able to protect our intellectual property rights and prevent the unauthorised use of our intellectual property, which could harm our business and competitive position. Further, we do not own the trademark for our brand name 'Ola'.
11. **Product concentration risk:** We derive our revenue solely from the sale of limited electric vehicle scooter models. If our electric vehicle scooters are not well-received by the market, our business could be adversely affected. The following table provides a breakdown of the revenue contribution of each of our EV scooter models in the past three Fiscals:

	Fiscal 2024		Fiscal 2023		Fiscal 2022	
	Revenue contribution (₹ million)	Revenue contribution as a percentage of revenue from operations (%)	Revenue contribution (₹ million)	Revenue contribution as a percentage of revenue from operations (%)	Revenue contribution (₹ million)	Revenue contribution as a percentage of revenue from operations (%)
Ola S1 Pro (Gen 1)	16,869.67	33.67%	15,305.84	58.18%	3,177.29	85.09%
Ola S1 Pro (Gen 2)	13,001.22	25.95%	-	-	-	-
Ola S1	1,342.84	2.68%	7,724.05	29.36%	-	-
Ola S1 Air	9,482.67	18.93%	-	-	-	-
Ola S1 X+	5,339.42	10.66%	-	-	-	-

12. **Full warranty cycle has not been completed:** We are yet to complete a full warranty cycle in respect of our EVs. We could, in the future, become subject to warranty claims, resulting in significant expenses, which would in turn materially and adversely affect our financial condition, results of operations, and prospects. In addition, if we are able to increase our sales volumes and expand our product line, in line with our business strategy, we could experience an increase in the number of warranty claims and be required to increase our warranty provisions.
13. **Failure to achieve the Cell PLI Scheme Capacity:** Under the Cell PLI Scheme, we are required to manufacture cells as per the committed capacity specified in our bid and the Programme Agreement. Accordingly, we are required to achieve 1 GwH capacity in the first year in Fiscal 2024 which we achieved on March 22, 2024, 5 GwH capacity in the second year, 10 GwH capacity in the third year and 20 GwH capacity by the fourth year. Pursuant to the Programme Agreement, in the case where we fail to achieve the agreed upon capacity, which is assessed on a quarterly basis, the Government of India has the right to deduct twice the shortfall in the committed capacity from the total subsidy payable to us.
14. **Competition Risk:** In the competitive market in which we operate in, our competitors may be able to source raw materials at lower prices or manufacture their EVs in a more cost-efficient manner. In order to remain competitive in the market, we may be compelled to reduce the prices of our EVs. Such reduction in pricing may in turn adversely impact our ability to achieve profitability as well as our business, prospects and results of operations.
15. **Inadequate access to public charger guns:** Demand for our EVs will depend in part upon the availability of a public charging infrastructure, as EV users must rely on public charging infrastructure to charge their vehicles while travelling. Inadequate access to public charger guns could cause customers to face difficulties in recharging their EVs, particularly during long distance travels. To the extent we are unable to meet customer expectations or experience difficulties in providing our charging solutions, our reputation and business, prospects, financial condition, results of operations, and cash flows may be materially and adversely affected.
16. **Driving range on a single charge of our electric vehicles declines over time:** The driving range of our EVs on a single charge declines principally as a function of usage, time, and charging patterns. According to the Redseer Report, a single battery charge provides a range of 70-115 km on average (for lithium-ion batteries) for E2Ws. Since we only commenced delivery of our first scooter model, the Ola S1 Pro, in December 2021, we are unable to accurately assess the actual deterioration of battery life in the long term. Such battery deterioration and the related decrease in range may negatively influence potential customer decisions whether to purchase our EVs, which may harm our ability to market and sell our EVs
17. Since the Company has incurred loss in the Financial Year 2024, the basic and diluted EPS is negative and hence, the Price to Earnings ratio is not ascertainable.
18. Weighted Average Return on Net Worth for Financial Year ended 2024, 2023 and 2022 is (63.62)%
19. The average cost of acquisition per Equity Share acquired by the Promoter and Selling Shareholders, as on the date of the Prospectus is:

Name of the Promoter / Selling Shareholders	Number of Equity Shares held	Average cost of acquisition per Equity Share (in ₹)*
Promoter (also the Promoter Selling Shareholder)		
Bhavish Aggarwal	1,361,875,240	Negligible#
Promoter Group (also the Promoter Group Selling Shareholder)		
Indus Trust	141,959,272	Nil&
Investor Selling Shareholders		
Ab Initio Capital, L.P.	10,037,028	111.51
Alpha Wave Ventures II, LP	128,503,423	62.38
Alpine Opportunity Fund VI, L.P.	21,412,329	111.51
Ashna Advisors LLP	601,828	71.15
Internet Fund III Pte Ltd	222,436,381	11.70
MacRitchie Investments Pte. Ltd.	46,028,218	75.11
Matrix Partners India III AIF Trust	3,023,308	8.22
Matrix Partners India Investments III, LLC	126,623,262	8.22
Nuvama Private Investments Trust-Nuvama Crossover Opportunities Fund – Series III	12,168,907	71.15
Nuvama Private Investments Trust-Nuvama Crossover Opportunities Fund – Series III A	9,464,591	71.15
Nuvama Private Investments Trust-Nuvama Crossover Opportunities Fund – Series III B	9,465,448	74.06
Sarin Family India LLC	8,714,241	8.22
SVF II Ostrich (DE) LLC	810,424,447	51.37
Tekne Private Ventures XV, Ltd.	36,319,597	113.12

As certified by B.B. & Associates, Chartered Accountants pursuant to their certificate dated August 6, 2024.
 # The average cost of acquisition per Equity Share for Bhavish Aggarwal is below ₹0.01.
& The average cost of acquisition per Equity Share for Indus Trust is Nil since 728 equity shares of face value of ₹ 10 each were acquired by way of gift on January 18, 2019 and 141,958,544 equity shares of face value of ₹ 10 each were acquired pursuant to a bonus issue by our Company on December 23, 2021.

20. Weighted average cost of acquisition of all shares transacted in three years, eighteen months and one year immediately preceding the Prospectus is as follows:

Period	Weighted Average Cost of Acquisition (in ₹)	Cap Price is 'X' times the Weighted Average Cost of Acquisition	Range of acquisition price: Lowest Price – Highest Price (in ₹)
Last one year	47.00	1.62	Nil**-129.90
Last 18 months	47.00	1.62	Nil**-129.90
Last three years	22.42	3.39	Nil**-129.90

***Acquisition price of Equity Shares acquired pursuant to bonus, gifts and ESOPs is NIL*

21. WACA, Floor Price and Cap Price

Past Transactions	Weighted average cost of acquisition (in ₹)*	Floor Price (in times)	Cap Price (in times)
WACA of Equity Shares that were issued by the Company (primary transactions)	47.00	1.53	1.62
WACA of Equity Shares that were acquired or sold by way of secondary transactions	87.83	0.82	0.87

**As certified by B.B. & Associates, Chartered Accountants, by way of their certificate dated August 6, 2024.*

22. The 8 BRLMs associated with the issue have handled 82 public issues in the past three years out of which 22 issues closed below the issue price on listing date.

Name of the BRLMs	Total Issues	Issues closed below IPO Price on listing date
Kotak Mahindra Capital Company Limited*	5	2
Citigroup Global Markets India Private Limited*	-	-
BofA Securities India Limited*	-	-
Goldman Sachs (India) Securities Private Limited*	-	-
Axis Capital Limited*	12	3
ICICI Securities Limited*	18	4
SBI Capital Markets Limited*	5	3
BOB Capital Markets Limited*	1	1
Common Issues handled by the BRLMs	41	9
Total	82	22

**Issues handled where there were no common BRLMs*

BID/ OFFER PERIOD

ANCHOR INVESTOR BIDDING DATE OPENED AND CLOSED ON THURSDAY, AUGUST 1, 2024
BID/ OFFER OPENED ON FRIDAY, AUGUST 2, 2024 | BID/ OFFER CLOSED ON TUESDAY, AUGUST 6, 2024

Continued on next page...

...continued from previous page.

This is an Offer in terms of Rule 19(2)(b) of the SCRR read with Regulation 31 of the SEBI ICDR Regulations. This Offer was made through the Book Building Process in compliance with Regulation 6(2) of the SEBI ICDR Regulations wherein not less than 75% of the Net Offer was available for allocation on a proportionate basis to Qualified Institutional Buyers (**"QIBs"** and such portion the **"QIB Portion"**) provided that our Company in consultation with the BRLMs, allocated up to 60% of the QIB Portion to Anchor Investors on a discretionary basis in accordance with the SEBI ICDR Regulations (**"Anchor Investor Portion"**), of which one-third was reserved for domestic Mutual Funds, subject to valid Bids having been received from domestic Mutual Funds at or above the Anchor Investor Allocation Price, in accordance with the SEBI ICDR Regulations. In the event of under-subscription or non-allocation in the Anchor Investor Portion, the balance Equity Shares was added to the Net QIB Portion. Further, 5% of the Net QIB Portion was available for allocation on a proportionate basis to Mutual Funds only and the remainder of the Net QIB Portion was available for allocation on a proportionate basis to all QIBs (other than Anchor Investors) including Mutual Funds, subject to valid Bids having been received at or above the Offer Price. However, if the aggregate demand from Mutual Funds is less than 5% of the Net QIB Portion, the balance Equity Shares available for allocation in the Mutual Fund Portion could have been added to the remaining QIB Portion for proportionate allocation to QIBs. Further, not more than 15% of the Net Offer was available for allocation to NIBs of which (a) one third portion was reserved for Bidders with application size of more than ₹200,000 and up to ₹1,000,000; and (b) two-thirds of the portion was reserved for Bidders with application size of more than ₹1,000,000, provided that the unsubscribed portion in either of such sub-categories could have been allocated to Bidders in the other sub-category of NIBs in accordance with the SEBI ICDR Regulations, subject to valid Bids having been received above the Offer Price and not more than 10% of the Net Offer was available for allocation to Retail Individual Bidders (**"RIBs"**) in accordance with the SEBI ICDR Regulations, subject to valid Bids having been received from them at or above the Offer Price. Further, Equity Shares wase allocated on a proportionate basis to Eligible Employees applying under the Employee Reservation Portion, subject to valid Bids received from them at or above the Offer Price. All Bidders (except Anchor Investors) were required to mandatorily utilise the Application Supported by Blocked Amount (**"ASBA"**) process by providing details of their respective ASBA accounts and UPI ID (in case of UPI Bidders using the UPI Mechanism), in which the Bid Amount was blocked by the SCSBs or under the UPI Mechanism, as applicable to participate in the Offer. Anchor Investors were not permitted to participate in the Anchor Investor Portion of the Offer through the ASBA process. For details, see *"Offer Procedure"* beginning on page 403 of the Prospectus.

The bidding for Anchor Investor opened and closed on August 1, 2024. The Company received 84 applications from 63 Anchor Investors for 386,977,500 Equity Shares. The Anchor Investor Offer Price was finalized at ₹76 per Equity Share. A total of 363,556,135 Equity Shares were allocated under the Anchor Investor Portion aggregating to ₹27,630,266,260.

The Offer received 1,191,726 applications for 2,384,805,540 Equity Shares resulting in 2.95 times subscription as disclosed in the Prospectus. The details of the applications received in the Offer from Retail Individual Bidders, Non-Institutional Bidders, Eligible Employees, Qualified Institutional Bidders (excluding Anchor Investors) and Anchor Investors are as under (before technical rejections):

SI. NO.	CATEGORY	NO. OF APPLICATIONS APPLIED	NO. OF EQUITY SHARES	EQUITY SHARES RESERVED AS PER PROSPECTUS	NO. OF TIMES SUBSCRIBED	AMOUNT (₹)
A	Retail Individual Bidders	1,117,569	341,989,830	80,790,252	4.23	26,015,815,995.00
B	Non-Institutional Bidders – More than ₹0.20 million and upto ₹1.00 million	26,966	83,946,720	40,395,126	2.08	6,379,524,060.00
C	Non-Institutional Bidders – More than ₹1.00 million	15,796	225,008,550	80,790,252	2.79	17,100,622,500.00
D	Employee Reservation	31,235	10,101,390	797,101	12.67	696,788,625.00
E	Qualified Institutional Bidders (excluding Anchors Investors)	76	1,336,781,550	242,370,758	5.52	101,595,397,800.00
F	Anchor Investors	84	386,977,500	363,556,135	1.06	29,410,290,000.00
	Total	**1,191,726**	**2,384,805,540**	**808,699,624**	**2.95**	**181,198,438,980.00**

Final Demand

A summary of the final demand as per NSE and BSE as on the Bid/Offer Closing Date at different Bid prices is as under:

Sr. No	Bid Price (₹)	No. of Equity Shares	% to Total	Cumulative Total	Cumulative % of Total
1	72	5,234,970	0.24	5,234,970	0.24
2	73	1,480,440	0.07	6,715,410	0.31
3	74	3,302,130	0.15	10,017,540	0.46
4	75	3,120,390	0.14	13,137,930	0.60
5	76	1,730,842,035	79.57	1,743,979,965	80.18
6	9999	431,182,245	19.82	2,175,162,210	100.00
	TOTAL	**2,175,162,210**	**100.00**		

The Basis of Allotment was finalized in consultation with the Designated Stock Exchange, being NSE on August 7, 2024.

A. Allotment to Retail Individual Bidders (After Rejections) (including ASBA Applications)

The Basis of Allotment to the Retail Individual Bidders, who have bid at cut-off or at the Offer Price of ₹76 per Equity, was finalized in consultation with NSE. This category has been subscribed to the extent of 3.86 times. The total number of Equity Shares Allotted in Retail Individual Bidders category is 80,790,252 Equity Shares to 414,308 successful applicants. The category-wise details of the Basis of Allotment are as under:

Sr. No	Category	No. of Applications Received	% of Total	Total No. of Equity Shares Applied	% to Total	No. of Equity Shares Allotted per Bidder	Ratio	Total No. of Equity Shares Allotted
1	195	830,981	81.54	162,041,295	52.00	195	87:214	65,875,290
2	390	92,816	9.11	36,198,240	11.62	195	87:214	7,357,935
3	585	31,454	3.09	18,400,590	5.91	195	87:214	2,493,465
4	780	13,265	1.30	10,346,700	3.32	195	87:214	1,051,635
5	975	12,894	1.27	12,571,650	4.03	195	87:214	1,022,190
6	1170	6,227	0.61	7,285,590	2.34	195	87:214	493,545
7	1365	6,620	0.65	9,036,300	2.90	195	87:214	524,745
8	1560	2,188	0.21	3,413,280	1.10	195	87:214	173,550
9	1755	1,048	0.10	1,839,240	0.59	195	87:214	83,070
10	1950	6,681	0.66	13,027,950	4.18	195	87:214	529,620
11	2145	771	0.08	1,653,795	0.53	195	87:214	61,035
12	2340	884	0.09	2,068,560	0.66	195	87:214	70,005
13	2535	13,296	1.30	33,705,360	10.82	195	87:214	1,053,975
14	0	76486 Allottees from Serial no 2 to 13 Additional 1(one) share				1	1:398	192
	TOTAL	**1,019,125**	**100.00**	**311,588,550**	**100.00**			**80,790,252**

B. Allotment to Non-Institutional Bidders (more than ₹0.20 million and upto ₹1.00 million) (After Rejections) (including ASBA Applications)

The Basis of Allotment to the Non-Institutional Bidders (more than ₹ 0.20 million and upto ₹1 million), who have bid at the Offer Price of ₹ 76 per Equity Share or above, was finalized in consultation with NSE. This category has been subscribed to the extent of 1.96 times. The total number of Equity Shares allotted in this category is 40,395,126 Equity Shares to 14,796 successful applicants. The category-wise details of the Basis of Allotment are as under:

Sr. No	Category	No. of Applications Received	% of Total	Total No. of Equity Shares Applied	% to Total	No. of Equity Shares Allotted per Bidder	Ratio	Total No. of Equity Shares Allotted
1	2,730	21657	85.15	59,123,610	74.70	2,730	32:55	34,395,270
2	2,925	741	2.91	2,167,425	2.74	2,730	25:43	1,176,630
3	3,120	207	0.81	645,840	0.82	2,730	25:43	327,600
4	3,315	160	0.63	530,400	0.67	2,730	25:43	253,890
5	3,510	100	0.39	351,000	0.44	2,730	58:100	158,340
6	3,705	39	0.15	144,495	0.18	2,730	23:39	62,790
7	3,900	460	1.81	1,794,000	2.27	2,730	25:43	731,640
8	4,095	141	0.55	577,395	0.73	2,730	25:43	223,860
9	4,290	35	0.14	150,150	0.19	2,730	20:35	54,600
10	4,485	44	0.17	197,340	0.25	2,730	26:44	70,980
11	4,680	31	0.12	145,080	0.18	2,730	18:31	49,140
12	4,875	88	0.35	429,000	0.54	2,730	51:88	139,230
13	5,070	79	0.31	400,530	0.51	2,730	46:79	125,580
14	5,265	105	0.41	552,825	0.70	2,730	61:105	166,530
15	5,460	103	0.40	562,380	0.71	2,730	60:103	163,800
16	5,655	13	0.05	73,515	0.09	2,730	7:13	19,110
17	5,850	135	0.53	789,750	1.00	2,730	25:43	212,940
18	6,045	30	0.12	181,350	0.23	2,730	17:30	46,410
19	6,240	24	0.09	149,760	0.19	2,730	14:24	38,220
20	6,435	593	2.33	3,815,955	4.82	2,730	25:43	941,850
21	6,630	110	0.43	729,300	0.92	2,730	64:110	174,720
22	6,825	42	0.17	286,650	0.36	2,730	24:42	65,520
23	7,020	10	0.04	70,200	0.09	2,730	6:10	16,380
24	7,215	3	0.01	21,645	0.03	2,730	2:3	5,460
25	7,410	3	0.01	22,230	0.03	2,730	2:3	5,460
26	7,605	3	0.01	22,815	0.03	2,730	2:3	5,460
27	7,800	52	0.20	405,600	0.51	2,730	30:52	81,900
28	7,995	13	0.05	103,935	0.13	2,730	7:13	19,110
29	8,190	27	0.11	221,130	0.28	2,730	16:27	43,680
30	8,385	4	0.02	33,540	0.04	2,730	2:4	5,460
31	8,580	1	0.00	8,580	0.01	2,730	1:1	2,730
32	8,775	12	0.05	105,300	0.13	2,730	7:12	19,110
33	8,970	6	0.02	53,820	0.07	2,730	3:6	8,190
34	9,165	3	0.01	27,495	0.03	2,730	2:3	5,460
35	9,360	6	0.02	56,160	0.07	2,730	3:6	8,190
36	9,555	3	0.01	28,665	0.04	2,730	2:3	5,460
37	9,750	54	0.21	526,500	0.67	2,730	31:54	84,630
38	9,945	15	0.06	149,175	0.19	2,730	9:15	24,570
39	10,140	21	0.08	212,940	0.27	2,730	12:21	32,760
40	10,335	2	0.01	20,670	0.03	2,730	1:2	2,730
41	10,530	13	0.05	136,890	0.17	2,730	8:13	21,840
42	10,725	4	0.02	42,900	0.05	2,730	2:4	5,460
43	10,920	13	0.05	141,960	0.18	2,730	8:13	21,840
44	11,115	3	0.01	33,345	0.04	2,730	2:3	5,460
45	11,310	3	0.01	33,930	0.04	2,730	2:3	5,460
46	11,505	1	0.00	11,505	0.01	2,730	1:1	2,730
47	11,700	27	0.11	315,900	0.40	2,730	16:27	43,680
48	11,895	5	0.02	59,475	0.08	2,730	3:5	8,190
49	12,090	2	0.01	24,180	0.03	2,730	1:2	2,730
50	12,480	7	0.03	87,360	0.11	2,730	4:7	10,920
51	12,675	12	0.05	152,100	0.19	2,730	7:12	19,110
52	12,870	12	0.05	154,440	0.20	2,730	7:12	19,110
53	13,065	158	0.62	2,064,270	2.61	2,730	25:43	251,160
54	0	2197 Allottees from Serial no 2 to 53 Additional 1(one) share				1	27:29	2,046
	TOTAL	**25,435**	**100**	**79,146,405**	**100**			**40,395,126**

C. Allotment to Non-Institutional Bidders (more than ₹1.00 million) (After Rejections) (including ASBA Applications)

The Basis of Allotment to the Non-Institutional Bidders (more than ₹1 million), who have bid at the Offer Price of ₹76 per Equity Share or above, was finalized in consultation with NSE. This category has been subscribed to the extent of 2.32 times. The total number of Equity Shares allotted in this category is 80,790,252 Equity Shares to 13,049 successful applicants. The category-wise details of the Basis of Allotment are as under: (Sample)

Sr. No	Category	No. of Applications Received	% of Total	Total No. of Equity Shares Applied	% to Total	No. of Equity Shares Allotted per Bidder	Ratio	Total No. of Equity Shares Allotted
1	13,260	12416	95.15	164,636,160	87.70	5,857	1:1	72,720,512
	1 ADDITIONAL SHARE FOR CATEGORY 13260					1	2:49	506
2	13,455	59	0.45	793,845	0.42	5,915	1:1	348,985
3	13,650	114	0.87	1,556,100	0.83	5,973	1:1	680,922
4	13,845	9	0.07	124,605	0.07	6,031	1:1	54,279
5	14,040	16	0.12	224,640	0.12	6,089	1:1	97,424
6	14,235	2	0.02	28,470	0.02	6,147	1:1	12,294
7	14,430	10	0.08	144,300	0.08	6,205	1:1	62,050
8	14,625	12	0.09	175,500	0.09	6,262	1:1	75,144
9	14,820	6	0.05	88,920	0.05	6,320	1:1	37,920
10	15,015	12	0.09	180,180	0.10	6,378	1:1	76,536
11	15,210	3	0.02	45,630	0.02	6,436	1:1	19,308
12	15,600	20	0.15	312,000	0.17	6,552	1:1	131,040
13	15,795	8	0.06	126,360	0.07	6,610	1:1	52,880
14	15,990	1	0.01	15,990	0.01	6,668	1:1	6,668
15	16,185	1	0.01	16,185	0.01	6,726	1:1	6,726
16	16,380	1	0.01	16,380	0.01	6,784	1:1	6,784
17	16,575	5	0.04	82,875	0.04	6,841	1:1	34,205
18	16,770	1	0.01	16,770	0.01	6,899	1:1	6,899
19	17,160	2	0.02	34,320	0.02	7,015	1:1	14,030
20	17,550	4	0.03	70,200	0.04	7,131	1:1	28,524
21	17,745	2	0.02	35,490	0.02	7,189	1:1	14,378
22	17,940	1	0.01	17,940	0.01	7,247	1:1	7,247
23	18,135	2	0.02	36,270	0.02	7,305	1:1	14,610
24	18,330	3	0.02	54,990	0.03	7,363	1:1	22,089
25	18,525	3	0.02	55,575	0.03	7,421	1:1	22,263
26	18,915	2	0.02	37,830	0.02	7,537	1:1	15,074
27	19,110	3	0.02	57,330	0.03	7,594	1:1	22,782
28	19,305	4	0.03	77,220	0.04	7,652	1:1	30,608
29	19,500	75	0.57	1,462,500	0.78	7,710	1:1	578,250
30	19,695	11	0.08	216,645	0.12	7,768	1:1	85,448
31	19,890	5	0.04	99,450	0.05	7,826	1:1	39,130
32	20,085	3	0.02	60,255	0.03	7,884	1:1	23,652
34	20,670	2	0.02	41,340	0.02	8,058	1:1	16,116
35	20,865	2	0.02	41,730	0.02	8,116	1:1	16,232
36	21,060	2	0.02	42,120	0.02	8,174	1:1	16,348
38	21,450	3	0.02	64,350	0.03	8,289	1:1	24,867
43	22,620	2	0.02	45,240	0.02	8,637	1:1	17,274
46	23,400	3	0.02	70,200	0.04	8,868	1:1	26,604
54	25,740	2	0.02	51,480	0.03	9,563	1:1	19,126
55	26,130	3	0.02	78,390	0.04	9,679	1:1	29,037
56	26,325	8	0.06	210,600	0.11	9,737	1:1	77,896
59	27,300	16	0.12	436,800	0.23	10,026	1:1	160,416
60	27,495	4	0.03	109,980	0.06	10,084	1:1	40,336
61	27,690	2	0.02	55,380	0.03	10,142	1:1	20,284
63	29,250	6	0.05	175,500	0.09	10,606	1:1	63,636
69	31,200	3	0.02	93,600	0.05	11,185	1:1	33,555
72	32,760	14	0.11	458,640	0.24	11,648	1:1	163,072
73	32,955	4	0.03	131,820	0.07	11,706	1:1	46,824
74	33,150	7	0.05	232,050	0.12	11,764	1:1	82,348
81	37,050	2	0.02	74,100	0.04	12,922	1:1	25,844
84	39,000	13	0.10	507,000	0.27	13,501	1:1	175,513
86	39,390	2	0.02	78,780	0.04	13,617	1:1	27,234
87	39,585	3	0.02	118,755	0.06	13,675	1:1	41,025
102	49,920	4	0.03	199,680	0.11	16,744	1:1	66,976
103	50,115	2	0.02	100,230	0.05	16,802	1:1	33,604
107	58,500	4	0.03	234,000	0.12	19,292	1:1	77,168
112	65,715	7	0.05	460,005	0.25	21,434	1:1	150,038
113	65,910	4	0.03	263,640	0.14	21,492	1:1	85,968
114	66,300	3	0.02	198,900	0.11	21,608	1:1	64,824
121	78,000	2	0.02	156,000	0.08	25,083	1:1	50,166
126	99,840	2	0.02	199,680	0.11	31,569	1:1	63,138
135	131,430	3	0.02	394,290	0.21	40,949	1:1	122,847
136	131,625	4	0.03	526,500	0.28	41,007	1:1	164,028
140	195,000	3	0.02	585,000	0.31	59,827	1:1	179,481
151	1,667,640	1	0.01	1,667,640	0.89	497,150	1:1	497,150
	TOTAL	**13,049**	**100**	**187,717,335**	**100**			**80,790,252**

D. (I) Allotment to Eligible Employees (upto ₹ 200,000) (After Rejections) (including ASBA Applications)

The Basis of Allotment to the Eligible Employees, who have bid at the cut-off or at the Offer Price of ₹76 per Equity (a discount of ₹7 per Equity Share was offered to Eligible Employees bidding in the Employee Reservation Portion), was finalized in consultation with NSE. Overall Employee category has been subscribed to the extent of 1.23 times. The total number of Equity Shares allotted in this category is 797,101 Equity Shares to 853 successful applicants. The category-wise details of the Basis of Allotment are as under: (Sample)

Sr. No	Category	No. of Applications Received	% of Total	Total No. of Equity Shares Applied	% to Total	No. of Equity Shares Allotted per Bidder	Ratio	Total No. of Equity Shares Allotted
1	195	259	29.77	50,505	5.91	195	242:259	47,190
2	390	153	17.59	59,670	6.99	364	1:1	55,692
3	585	82	9.43	47,970	5.62	546	1:1	44,772
4	780	67	7.70	52,260	6.12	728	1:1	48,776
5	975	37	4.25	36,075	4.22	910	1:1	33,670
6	1170	18	2.07	21,060	2.47	1092	1:1	19,656
7	1365	25	2.87	34,125	4.00	1274	1:1	31,850
8	1560	23	2.64	35,880	4.20	1456	1:1	33,488
9	1755	10	1.15	17,550	2.06	1638	1:1	16,380
10	1950	22	2.53	42,900	5.02	1820	1:1	40,040
11	2145	13	1.49	27,885	3.27	2002	1:1	26,026
12	2340	4	0.46	9,360	1.10	2184	1:1	8,736
13	2535	51	5.86	129,285	15.14	2366	1:1	120,666
101	2730	35	4.02	95,550	11.19	2548	1:1	89,180
102	2925	31	3.56	84,630	9.91	2548	1:1	78,988
103	3120	2	0.23	5,460	0.64	2548	1:1	5,096
104	3705	2	0.23	5,460	0.64	2548	1:1	5,096
105	4290	5	0.57	13,650	1.60	2548	1:1	12,740
106	4485	3	0.34	8,190	0.96	2548	1:1	7,644
107	4680	2	0.23	5,460	0.64	2548	1:1	5,096
108	5070	3	0.34	8,190	0.96	2548	1:1	7,644
109	5460	1	0.11	2,730	0.32	2548	1:1	2,548
110	5850	2	0.23	5,460	0.64	2548	1:1	5,096
111	6045	1	0.11	2,730	0.32	2548	1:1	2,548
112	6240	1	0.11	2,730	0.32	2548	1:1	2,548
113	6435	4	0.46	10,920	1.28	2548	1:1	10,192
114	6825	2	0.23	5,460	0.64	2548	1:1	5,096
115	7020	2	0.23	5,460	0.64	2548	1:1	5,096
116	7215	10	1.15	27,300	3.20	2548	1:1	25,480
117	0	106 Allottees from Serial no 101 to 116 Additional 1(one) share				1	71:106	71
	TOTAL	**870**	**100.00**	**853,905**	**100.00**			**797,101**

D. (II) Allotment to Eligible Employees (₹ 200,000 - ₹ 500,000) (After Rejections) (including ASBA Applications)

The Basis of Allotment to the Eligible Employees, who have bid at the cut-off or at the Offer Price of ₹76 per Equity (a discount of ₹7 per Equity Share was offered to Eligible Employees bidding in the Employee Reservation Portion), was finalized in consultation with NSE. Overall Employee category has been subscribed to the extent of 1.23 times. The total number of Equity Shares allotted in this category is 0 Equity Shares to 0 successful applicants. The category-wise details of the Basis of Allotment are as under: (Sample)

Sr. No	Category	No. of Applications Received	% of Total	Total No. of Equity Shares Applied	% to Total	No. of Equity Shares Allotted per Bidder	Ratio	Total No. of Equity Shares Allotted
1	2925	31	43.66	6,045	4.84	1	0:0	0
2	3120	2	2.82	780	0.62	1	0:0	0
3	3705	2	2.82	1,950	1.56	1	0:0	0
4	4290	5	7.04	7,800	6.24	1	0:0	0
5	4485	3	4.23	5,265	4.21	1	0:0	0
6	4680	2	2.82	3,900	3.12	1	0:0	0
7	5070	3	4.23	7,020	5.62	1	0:0	0
8	5460	1	1.41	2,730	2.18	1	0:0	0
9	5850	2	2.82	6,240	4.99	1	0:0	0
10	6045	1	1.41	3,315	2.65	1	0:0	0
11	6240	1	1.41	3,510	2.81	1	0:0	0
12	6435	4	5.63	14,820	11.86	1	0:0	0
13	6825	2	2.82	8,190	6.55	1	0:0	0
14	7020	2	2.82	8,580	6.86	1	0:0	0
15	7215	10	14.08	44,850	35.88	1	0:0	0
	TOTAL	**71**	**100.00**	**124,995**	**100.00**			**0**

E. Allotment to QIBs (After Rejections)

Allotment to QIBs, who have bid at the Offer Price of ₹76 per Equity Share or above, has been done on a proportionate basis in consultation with NSE. This category has been subscribed to the extent of 5.52 times of Net QIB portion. As per the SEBI Regulations, Mutual Funds were allotted 5% of the Equity Shares of Net QIB portion available i.e. 12,118,538 Equity Shares and other QIBs and unsatisfied demand of Mutual Funds were allotted the remaining available Equity Shares i.e. 230,252,220 Equity Shares on a proportionate basis. The total number of Equity Shares allotted in the QIB category is 242,370,758 Equity Shares, which were allotted to 76 successful Applicants.

CATEGORY	FIS/BANKS	MF'S	IC'S	NBFC'S	AIF	FPC	VC'S	TOTAL
ALLOTMENT	5,374,663	82,042,610	3,430,628	3,430,594	4,150,622	143,255,543	686,098	**242,370,758**

F. Allotment to Anchor Investors (After Rejections)

The Company, in consultation with the BRLMs, have allocated 363,556,135 Equity Shares to 63 Anchor Investors (through 84 Anchor Investor Application Forms) (including 10 domestic Mutual Funds through 31 schemes) at an Anchor Offer Price at ₹76 per Equity Share in accordance with SEBI ICDR Regulations. This represents 60% of the QIB portion.

CATEGORY	FIS/BANKS	MF'S	IC'S	NBFC'S	AIF	FPC	OTHERS	TOTAL
ALLOTMENT	-	147,010,695	21,024,705	1,315,870	657,930	193,546,935	-	**363,556,135**

The Board of Directors of our Company at its meeting held on August 7, 2024 has taken on record the basis of allotment of Equity Shares approved by the Designated Stock Exchange, being NSE and has allotted the Equity Shares to various successful applicants. The Allotment Advice Cum Refund Intimation and/or notices have been dispatched to the address of the investors as registered with the depositories. Further, instructions to the SCSBs have been issued for unblocking of funds and transfer to the Public Offer Account on August 7, 2024 and the payments to non-syndicate brokers have been issued on August 8, 2024. In case the same is not received within ten days, investors may contact the Registrar to the Offer at the address given below. The Equity Shares allotted to the successful allottees have been uploaded on August 8, 2024 for credit into the respective beneficiary accounts subject to validation of the account details with the depositories concerned. The Company has filed the Listing application with BSE and NSE on August 8, 2024. The Company has received the listing and trading approval from BSE & NSE, and trading will commence on August 9, 2024.

Note: All capitalized terms used and not defined herein shall have the respective meanings assigned to them in the Prospectus.

INVESTORS PLEASE NOTE

These details of the Allotment made was hosted on the website of Registrar to the Offer, Link Intime India Private Limited at www.linkintime.co.in.

All future correspondence in this regard may kindly be addressed to the Registrar to the Offer quoting full name of the First/ Sole applicant, Serial number of the Bid cum Application form number, Bidders DP ID, Client ID, PAN, date of submission of Bid cum Application Form, address of the Bidder, number of Equity Shares bid for, name of the Member of the Syndicate, place where the bid was submitted and payment details at the address given below:

LINK Intime

Link Intime India Private Limited
C-101, 1st Floor, 247 Park, L.B.S. Marg, Vikhroli West, Mumbai 400 083 Maharashtra, India
Tel: +91 810 811 4949; **E-mail:** olaelectric.ipo@linkintime.co.in; **Website:** www.linkintime.co.in; **Investor Grievance ID:** olaelectric.ipo@linkintime.co.in
Contact Person: Shanti Gopalkrishnan; **SEBI Registration Number:** INR000004058

For **OLA ELECTRIC MOBILITY LIMITED**
On behalf of the Board of Directors
Sd/-
Pramendra Tomar
Company Secretary & Compliance Officer

Place : Bengaluru, Karnataka
Date : August 8, 2024

THE LEVEL OF SUBSCRIPTION SHOULD NOT BE TAKEN TO BE INDICATIVE OF EITHER THE MARKET PRICE OF THE EQUITY SHARES ON LISTING OR THE BUSINESS PROSPECTS OF OLA ELECTRIC MOBILITY LIMITED.

OLA ELECTRIC MOBILITY LIMITED has filed the Prospectus with the RoC. The Prospectus is available on the website of the SEBI at www.sebi.gov.in as well as on the websites of the Stock Exchanges i.e. BSE and NSE at www.bseindia.com and www.nseindia.com, respectively, on the website of the Company at www.olaelectric.com and the BRLMs i.e., Kotak Mahindra Capital Company Limited at https://investmentbank.kotak.com, Citigroup Global Markets India Private Limited at www.online.citibank.co.in/rhtm/citigroupglobalscreen1.htm, BofA Securities India Limited at https://business.bofa.com/bofas-india, Goldman Sachs (India) Securities Private Limited at www.goldmansachs.com, Axis Capital Limited at www.axiscapital.co.in, ICICI Securities Limited at www.icicisecurities.com, SBI Capital Markets Limited at wwww.sbicaps.com and BOB Capital Markets Limited at www.bobcaps.in. Any potential investor should note that investment in equity shares involves a high degree of risk and for details relating to such risks, please see the section titled *"Risk Factors"* beginning on page 29 of the Prospectus. Potential investors should not rely on the DRHP filed with SEBI for making any investment decision but can only rely on the information included in the RHP.

The Equity Shares have not been and will not be registered under the United States Securities Act of 1933, as amended (**"U.S. Securities Act"**) or any state securities laws in the United States, and unless so registered, may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable U.S. state securities laws. Accordingly, the Equity Shares are being offered and sold (a) in the United States solely to "qualified institutional buyers" (as defined in Rule 144A under the U.S. Securities Act) in transactions exempt from the registration requirements of the U.S. Securities Act and (b) outside the United States in "offshore transactions", as defined in, and in reliance on Regulation S of the U.S. Securities Act and the applicable laws of each jurisdiction where such offers and sales are made.

CONCEPT

ಬಾಂಗ್ಲಾದೇಶಕ್ಕೆ ಇದು ಎರಡನೇ ಸ್ವಾತಂತ್ರ್ಯ -ಯೂನುಸ್

ಮಧ್ಯಂತರ ಸರಕಾರದ ಮುಖ್ಯಸ್ಥರಾಗಿ ಅಧಿಕಾರ ಸ್ವೀಕಾರ | ವಿದ್ಯಾರ್ಥಿಗಳ ಹೋರಾಟಕ್ಕೆ ಶ್ಲಾಘನೆ | ಗಲಭೆಗೆ ಐಎಸ್ಐ ಪ್ರಚೋದನೆ- ಹಸೀನಾ ಪುತ್ರ ಆರೋಪ

ಢಾಕಾ: ಮಾಜಿ ಪ್ರಧಾನಿ ಶೇಖ್ ಹಸೀನಾ ರಾಜೀನಾಮೆ ಬಳಿಕ ನೋಬಲ್ ಪುರಸ್ಕೃತ ಮುಹಮ್ಮದ್ ಯೂನುಸ್ (84)ನೇತೃತ್ವದಲ್ಲಿ ಸೇನೆ ಮಧ್ಯಂತರ ಸರಕಾರ ರಚಿಸುವಲ್ಲಿ ಯಶಸ್ವಿಯಾಗಿದೆ. ಮುಹಮ್ಮದ್ ಯೂನುಸ್ ಮಧ್ಯಂತರ ಸರಕಾರದ ಮುಖ್ಯಸ್ಥರಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಸದ್ಯ ಬಾಂಗ್ಲಾದೇಶದ ಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದ್ದು ದೇಶದಲ್ಲಿ ಶಾಂತಿ ಸ್ಥಾಪನೆಯ ಪ್ರತಿಜ್ಞೆ ಮಾಡಿದ್ದಾರೆ.

ಒಲಿಂಪಿಕ್ಸ್ ಹಿನ್ನೆಲೆ ಪ್ಯಾರಿಸ್‌ಗೆ ತೆರಳಿದ್ದ ಮುಹಮ್ಮದ್ ಯೂನುಸ್ ಗುರುವಾರ ಢಾಕಾದ ಹಜ್ರತ್ ಶಹಜಲಾಲ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಿದ್ದು, ಅಧ್ಯಕ್ಷ ಮೊಹಮ್ಮದ್ ಶಹಾಬುದ್ದಿನ್ ಹಾಗೂ ಸೇನಾ ಮುಖ್ಯಸ್ಥ ವಾಕರ್-ಉಜ್-ಜಮಾನ್ ಅವರನ್ನು ಭೇಟಿಯಾಗಿ ಚರ್ಚಿಸಿದ್ದಾರೆ. ನೂತನ ಮಧ್ಯಂತರ ಸರಕಾರ 15 ಸದಸ್ಯರನ್ನು ಹೊಂದಿರಲಿದೆ ಎಂದು ವರದಿಯಾಗಿದೆ. ಈ ಆಡಳಿತವನ್ನು ತಾರತಮ್ಯ ವಿರೋಧಿ ವಿದ್ಯಾರ್ಥಿ ಸಂಘಟನೆ ಸ್ವಾಗತಿಸಿದೆ.

ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಅವರು ' ಇದು ಬಾಂಗ್ಲಾದೇಶಕ್ಕೆ ಸಿಕ್ಕ ಎರಡನೇ ಸ್ವಾತಂತ್ರ್ಯ. ಹೊಸ ಗೆಲುವನ್ನು ಸಂಭ್ರಮಿಸಲಾಗುತ್ತಿದೆ , ದೇಶ ಈಗ ನಿಮ್ಮ ಕೈಯ್ಯಲ್ಲಿದೆ, ನಿಮ್ಮ ಆಶಯದಂತೆ ದೇಶವನ್ನು ರಚಿಸಿ ಎಂದು ಯುವಜನತೆಗೆ'ಸಂದೇಶ ನೀಡಿದರು. ವಿದ್ಯಾರ್ಥಿಗಳ ಹೋರಾಟವನ್ನು ಶ್ಲಾಘಿಸಿದ ಅವರು ಯಾವುದೇ ಹಿಂಸಾಚಾರಕ್ಕೆ ಇನ್ನು ಅವಕಾಶವಿಲ್ಲ ಎಂದು ಹೇಳಿದ್ದಾರೆ. ಮಂಗಳವಾರ ಸಂಸತ್ ವಿಸರ್ಜನೆ ಮಾಡಲಾಗಿದ್ದು ಶೀಘ್ರವೇ ಚುನಾವಣೆ ನಡೆಸುವ ಭರವಸೆಯನ್ನು ಮುಹಮ್ಮದ್ ಯೂನುಸ್ ನೀಡಿದ್ದಾರೆ. ಗುರುವಾರ ಬಾಂಗ್ಲಾದೇಶ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದಿನ್ ,ಮುಹಮ್ಮದ್ ಯೂನುಸ್‌ಗೆ ಪ್ರಮಾಣ ವಚನ ಬೋಧಿಸಿದ್ದಾರೆ. ಸುಮಾರು 400ಕ್ಕೂ ಅಧಿಕ ಜನ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು ಎಂದು ವರದಿಯಾಗಿದೆ.

ಗಲಭೆಗೆ ಐಎಸ್ಐ ಪ್ರಚೋದನೆ - ಹಸೀನಾ ಪುತ್ರ

ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಗಲಭೆಯಲ್ಲಿ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್ಐ ಕೈವಾಡವಿದೆ ಎಂದು ಕಿಡಿಕಾರಿದ್ದಾರೆ. ರಾಷ್ಟ್ರದಲ್ಲಿ ನಡೆದ ಹಿಂಸಾಚಾರಕ್ಕೆ ಐಎಸ್ಐ ಪ್ರಚೋದನೆಯೇ ಕಾರಣ ಎಂದು ಶೇಖ್ ಹಸೀನಾ ಪುತ್ರ ಆರೋಪಿಸಿದ್ದಾರೆ.

ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ ಸಾಜೀಬ್ ವಾಜಿಸ್ ಜಾಯ್ ಹಸೀನಾ ಅವರು ಬ್ರಿಟನ್ ಹಾಗೂ ಅಮೆರಿಕಾದಲ್ಲಿ ಆಶ್ರಯ ಕೋರಿದ್ದಾರೆ ಎಂಬ ಮಾತನ್ನು ತಳ್ಳಿಹಾಕಿದ್ದಾರೆ. ಹಸೀನಾ ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ, ಕೆಲ ಕಾಲ ದೆಹಲಿಯಲ್ಲೇ ಉಳಿಯಲಿದ್ದಾರೆ. ಅಲ್ಲಿ ಅವರು ಸುರಕ್ಷಿತ. ಭಾರತದಿಂದ ಹೊರ ಹೋಗುವ ಯಾವುದೇ ನಿರ್ಧಾರವಾಗಿಲ್ಲ ಎಂದರು. ಸದ್ಯ ಅವರಿಗೆ ಭಾರತ ಸುರಕ್ಷಿತವಾಗಿದೆ. ಬಾಂಗ್ಲಾದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಮರು ಸ್ಥಾಪನೆಯಾದ ಬಳಿಕ ದೇಶಕ್ಕೆ ವಾಪಸ್ಸು ತೆರಳಲಿದ್ದಾರೆ ಆದರೆ ಅವರು ರಾಜಕೀಯವಾಗಿ ಸಕ್ರೀಯರಾಗಿರುತ್ತಾರೋ ಇಲ್ಲವೋ ಎಂಬುದು ಇನ್ನೂ ನಿರ್ಧಾರವಾಗಿಲ್ಲ. ದೇಶ ಬಿಡುವ ನಿರ್ಧಾರ ಕುಟುಂಬ ಒತ್ತಡದಿಂದ ತೆಗೆದುಕೊಂಡಿದ್ದು. ಹಸೀನ ದೇಶ ಬಿಡಲು ಸಿದ್ಧರಿರಲಿಲ್ಲ ಆದರೆ ಉದ್ರಿಕ್ತರು ಅವರ ಜೀವಕ್ಕೆ ಹಾನಿ ಮಾಡುವ ಎಲ್ಲಾ ಸಾಧ್ಯತೆಗಳಿದ್ದವು ಎಂದು ಸಾಜೀಬ್ ವಾಜಿದ್ ಜಾಯ್ ಮಾಹಿತಿ ನೀಡಿದ್ದಾರೆ.

ಭಾರತಕ್ಕೆ ಧನ್ಯವಾದ

ಶೇಖ್ ಮುಜಿಬುರ್ ಕುಟುಂಬ ಎಂದಿಗೂ ಬಾಂಗ್ಲಾದೇಶದ ಜನತೆಯನ್ನು , ಅವಾಮಿ ಲೀಗ್ ಕಾರ್ಯಕರ್ತರನ್ನು ಬಿಟ್ಟುಕೊಡಲು ಸಿದ್ಧವಿಲ್ಲ . ಆದರೆ ಸದ್ಯದ ಸ್ಥಿತಿ ಅಪಾಯಕಾರಿಯಾಗಿದೆ ಎಂದ ಸಾಜೀಬ್ ವಾಜಿದ್ ಜಾಯ್ ಹಸೀನಾ ಅವರನ್ನು ರಕ್ಷಿಸಿದ್ದಕ್ಕೆ ಪ್ರಧಾನಿ ಮೋದಿ ಹಾಗೂ ಕೇಂದ್ರ ಸರಕಾರಕ್ಕೆ ಧನ್ಯವಾದ ತಿಳಿಸಿದ್ದಾರೆ. ಹಾಗೇ ಅಂತರಾಷ್ಟ್ರೀಯ ಮಟ್ಟದಲ್ಲಿ ಒತ್ತಡ ಹೇರುವ ಮೂಲಕ ಬಾಂಗ್ಲಾದೇಶದಲ್ಲಿ ಪ್ರಜಾಪ್ರಭುತ್ವ ಪುನರ್ ಸ್ಥಾಪನೆಗೆ ನೆರವು ನೀಡುವಂತೆ ಭಾರತಕ್ಕೆ ಮನವಿ ಮಾಡಿದ್ದಾರೆ.

ಬಾಂಗ್ಲಾದೇಶದ ಭಾರತದ ವೀಸಾ ಕಚೇರಿ ಅನಿರ್ದಿಷ್ಟಾವಧಿಗೆ ಬಂದ್

ಪ್ರಕ್ಷುಬ್ಧವಾಗಿರುವ ಬಾಂಗ್ಲಾದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವೀಸಾ ಕಚೇರಿಗಳನ್ನು ಭಾರತ ಅನಿರ್ದಿಷ್ಟಾವಧಿಗೆ ಬಂದ್ ಮಾಡಿದೆ. ಆದರೆ ರಾಜತಾಂತ್ರಿಕ ಅಧಿಕಾರಿಗಳು, ರಾಯಭಾರಿ ಕಚೇರಿ ಕಾರ್ಯ ಮುಂದುವರೆಸಲಿದೆ ಎಂದು ತಿಳಿಸಿದೆ. ಕಾರ್ಯಾಚರಣೆಗೆ ಅಗತ್ಯವಲ್ಲದ ಸಿಬ್ಬಂದಿಗಳು ಹಾಗೂ ರಾಜತಾಂತ್ರಿಕ ಅಧಿಕಾರಿಗಳ ಕುಟುಂಬಸ್ಥರು ಸೇರಿ ಸುಮಾರು 400 ಭಾರತೀಯರನ್ನು ವಿಶೇಷ ವಿಮಾನದಲ್ಲಿ ಈಗಾಗಲೇ ದೇಶಕ್ಕೆ ವಾಪಸ್ಸು ಕರೆತರಲಾಗಿದೆ. ವೀಸಾ ಸಂಬಂಧಿತ ವೆಬ್‌ಸೈಟ್‌ನಲ್ಲಿ ಸೂಚನೆ ನೀಡಿರುವ ಭಾರತ' ಅಸ್ಥಿರ ಪರಿಸ್ಥಿತಿ ಹಿನ್ನೆಲೆ ಭಾರತದ ಎಲ್ಲಾ ವೀಸಾ ಕಚೇರಿಗಳು ಬಂದ್ ಮಾಡಲಾಗಿದ್ದು ಅರ್ಜಿದಾರರಿಗೆ ಮುಂದಿನ ದಿನಾಂಕವನ್ನು ಮೆಸೆಜ್ ಮೂಲಕ ಮಾಹಿತಿ ನೀಡಲಾಗುವುದು. ಬಳಿಕ ಕಚೇರಿ ದಿನಗಳಲ್ಲಿ ತಮ್ಮ ಪಾಸ್‌ಪೋರ್ಟ್ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಲಾಗಿದೆ. ಬಾಂಗ್ಲಾದೇಶ ರಾಜಧಾನಿ ಢಾಕಾದಲ್ಲಿ ರಾಯಭಾರಿ ಕಚೇರಿ ಇದ್ದರೂ ಚಿತ್ತಗೊಂಗ್, ರಾಜ್ ಶಾಹಿ, ಖುಲ್ನಾ, ಸೈಲ್ಹೆಟ್ ನಲ್ಲಿ ಭಾರತ ಸಹಾಯಕ ಉನ್ನತ ಅಧಿಕಾರಿಗಳನ್ನು ಹೊಂದಿದೆ. ಗಲಭೆ ಪೀಡಿತ ಪ್ರದೇಶದಲ್ಲಿ ಭಾರತೀಯ ಹಾಗೂ ಅಲ್ಪಸಂಖ್ಯಾತರ ರಕ್ಷಣೆಗೆ ಭಾರತದ ಅಧಿಕಾರಿಗಳು ಬಾಂಗ್ಲಾದೇಶದ ಸೇನಾ ಅಧಿಕಾರಿಗಳ ಜತೆ ನಿರಂತರ ಸಂಪರ್ಕದಲ್ಲಿದೆ. ಇಂಡೋ-ಬಾಂಗ್ಲಾ ಗಡಿಯುದ್ದಕ್ಕೂ ಬಿಎಸ್‌ಎಫ್ ಬಿಗಿ ಭದ್ರತೆ ಕೈಗೊಂಡಿದೆ.

200 ಕೈದಿಗಳು ಪರಾರಿ

ಕಳೆದ ಒಂದು ತಿಂಗಳಿನಿಂದ ನಡೆಯುತ್ತಿರುವ ಹಿಂಸಾಚಾರದ ಮಧ್ಯೆ ಸುಮಾರು 200 ಕೈದಿಗಳು ಬಾಂಗ್ಲಾದೇಶದ ಕೇಂದ್ರ ಜೈಲಿನಿಂದ ಪರಾರಿಯಾಗಿದ್ದಾರೆ. ಪ್ರತಿಭಟನೆ ವೇಳೆ ಕಾಶಿಂಪುರ ಹೈ ಸೆಕ್ಯೂರಿಟಿ ಜೈಲಿನ ಮೇಲೆ ಪ್ರತಿಭಟನಾಕಾರರು ದಾಳಿ ನಡೆಸಿದ್ದು ಈ ವೇಳೆ 200ಕ್ಕೂ ಅಧಿಕ ಕೈದಿಗಳು ಪರಾರಿಯಾಗಿದ್ದಾರೆ. 6 ಕೈದಿಗಳು ಪೊಲೀಸ್ ಗುಂಡೇಟಿಗೆ ಬಲಿಯಾಗಿದ್ದಾರೆ ಎಂದು ತಿಳಿದು ಬಂದಿದೆ. ಹೀಗಾಗಿ ಬಾಂಗ್ಲಾದೇಶದಾದ್ಯಂತ ಸುರಕ್ಷತೆ ವಿಚಾರದಲ್ಲಿ ದೊಡ್ಡ ಪ್ರಶ್ನೆ ಎದ್ದಿದೆ.

ಇಂಡೋ-ಬಾಂಗ್ಲಾ ಗಡಿಯಲ್ಲಿ ಒಳನುಸುಳುವಿಕೆ ಯತ್ನ

ಬಾಂಗ್ಲಾದೇಶದಲ್ಲಿ ಅರಾಜಕತೆ, ಹಿಂಸಾಚಾರ ಹಿನ್ನೆಲೆ ಸುಮಾರು 100-120 ಜನರ ಗುಂಪು ಪಶ್ಚಿಮ ಬಂಗಾಳದ ಇಂಡೋ-ಬಾಂಗ್ಲಾ ಗಡಿ ಬಳಿ ಜಮಾವಣೆಗೊಂಡಿದ್ದು ಒಳನುಸುಳಲು ಯತ್ನಿಸಿದ್ದಾರೆ. ಈ ಪ್ರಯತ್ನವನ್ನು ಬಿಎಸ್ ಎಫ್ ಅಧಿಕಾರಿಗಳು ಯಶಸ್ವಿಯಾಗಿ ತಡೆದಿದ್ದಾರೆ. ಸುಮಾರು 35 ಜನರನ್ನು ಬಿಎಸ್‌ಎಫ್ ಹಾಗೂ ಬಾಂಗ್ಲಾದೇಶದ ಬಾರ್ಡರ್ ಗಾರ್ಡ್ ಸಿಬ್ಬಂದಿಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ವಾಪಸ್ ಬಾಂಗ್ಲಾದೇಶಕ್ಕೆ ಕಳುಹಿಸಿದ್ದಾರೆ ಎಂದು ಬಿಎಸ್‌ಎಫ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಜಮ್ಮು ಮತ್ತು ಕಾಶ್ಮೀರಕ್ಕೆ ಚುನಾವಣಾ ಆಯೋಗ

ಶ್ರೀನಗರ : ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆ ನಡೆಸುವ ಕುರಿತು ಸಲಹೆ ಹಾಗೂ ಅಭಿಪ್ರಾಯಗಳನ್ನು ಸಂಗ್ರಹಿಸಲು ಚುನಾವಣಾ ಆಯೋಗ ಗುರುವಾರ ಕೇಂದ್ರಾಡಳಿತ ಪ್ರದೇಶಕ್ಕೆ ಭೇಟಿ ನೀಡಿದೆ. ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ನೇತೃತ್ವದಲ್ಲಿ ಚುನಾವಣಾ ಆಯೋಗ ಗುರುವಾರ ಶ್ರೀನಗರಕ್ಕೆ ಭೇಟಿ ನೀಡಿದೆ. ಈ ವೇಳೆ ಅನೇಕ ರಾಜಕೀಯ ಪಕ್ಷಗಳ ಮುಖಂಡರ ಜತೆ ಸಭೆ ನಡೆಸಿ ಮಾಹಿತಿ ಸಂಗ್ರಹಿಸಿದೆ. ನ್ಯಾಷನಲ್ ಕಾನ್ಫರೆನ್ಸ್, ಪೀಪಲ್ಸ್ ಡೆಮಾಕ್ರೆಟಿಕ್ ಪಾರ್ಟಿ, ಕಾಂಗ್ರೆಸ್, ಭಾರತೀಯ ಜನತಾ ಪಾರ್ಟಿ, ಹಾಗೂ ಸಿಪಿಎಂ ಪಕ್ಷಗಳು ತಮ್ಮ ಪ್ರತಿನಿಧಿಗಳನ್ನು ಚುನಾವಣಾ ಆಯೋಗದ ಸಭೆಗೆ ಕಳುಹಿಸಿತ್ತು. ನಾಯಕರು ಚುನಾವಣೆಯನ್ನು ಶೀಘ್ರದಲ್ಲಿ ನಡೆಸುವ ಅಗತ್ಯತೆಯನ್ನು ಆಯೋಗದ ಮುಂದೆ ವ್ಯಕ್ತಪಡಿಸಿದ್ದು ಚುನಾವಣೆ ಕುರಿತು ತಮ್ಮ ಬೇಡಿಕೆ ಹಾಗೂ ವಿಚಾರಗಳನ್ನು ಆಯೋಗದ ಎದುರು ಚರ್ಚಿಸಿದ್ದಾರೆ. ಹಾಗೇ ಆಯೋಗ ಡೆಪ್ಯೂಟಿ ಕಮಿಷನ್ ಮತ್ತು ಎಸ್ ಎಸ್‌ಪಿ ಜತೆಗೆ ಸಭೆ ನಡೆಸಿದ್ದು, ಶುಕ್ರವಾರ ಜಮ್ಮು ಮತ್ತು ಕಾಶ್ಮೀರ ಮುಖ್ಯ ಕಾರ್ಯದರ್ಶಿ ಅಟಲ್ ಡುಲ್ಲೋ ಮತ್ತು ಶ್ರೀನಗರದಲ್ಲಿ ಪೊಲೀಸ್ ಮಹಾನಿರ್ದೇಶಕರು ,ಭದ್ರತಾ ಏಜೆನ್ಸಿಗಳೊಂದಿಗೆ ಕೂಡ ಆಯೋಗ ಚರ್ಚೆ ನಡೆಸಲಿದೆ.

ಗುಜರಾತ್: ಶೇ.40 ಮಕ್ಕಳಲ್ಲಿ ಅಪೌಷ್ಟಿಕತೆ

ಅಹಮದಾಬಾದ್: ಗುಜರಾತ್ ರಾಜ್ಯ ಆರ್ಥಿಕವಾಗಿ ಪ್ರಗತಿಪಥದಲ್ಲಿದ್ದರೂ ಹಸಿವಿನ ವಿರುದ್ಧ ಹೋರಾಡುವುದರಲ್ಲಿ ಮತ್ತು ಚಿಕ್ಕ ಮಕ್ಕಳಲ್ಲಿ ಪೌಷ್ಟಿಕಾಂಶ ಕಾಯ್ದುಕೊಳ್ಳುವಲ್ಲಿ ವಿಫಲವಾಗಿದೆ. 5 ವರ್ಷದೊಳಗಿನ ಶೇ.40ರಷ್ಟು ಮಕ್ಕಳಲ್ಲಿ ಅಪೌಷ್ಟಿಕತೆ ಮತ್ತು ಕಡಿಮೆ ತೂಕ ಸಮಸ್ಯೆ ಇದೆ. ಭಾರತದ ರಾಜ್ಯಗಳಲ್ಲಿ ಹಸಿವಿನ ಸೂಚ್ಯಂಕದಲ್ಲಿ ಗುಜರಾತ್ 25ನೇ ಸ್ಥಾನದಲ್ಲಿದೆ ಎಂದು ನೀತಿ ಆಯೋಗ ಅಂಕಿ ಅಂಶ ಪ್ರಕಟಿಸಿದೆ. 15ರಿಂದ 49 ವರ್ಷದವರೆಗಿನ ಗರ್ಭಿಣಿಯರಲ್ಲಿ ಶೇ.62.5ರಷ್ಟು ಮಂದಿಯಲ್ಲಿ ರಕ್ತಹೀನತೆಯಿದೆ. ಶೇ.25.2ರಷ್ಟು ಮಹಿಳೆಯರು ಶೇ.18.5ಕ್ಕಿಂತ ಕಡಿಮೆ ಬಾಡಿ ಮಾಸ್ ಇಂಡೆಕ್ಸ್(ಬಿಎಂಐ) ಹೊಂದಿದ್ದಾರೆ ಎಂದು ಆಯೋಗದ ತಿಳಿಸಿದೆ. 2023ರ ಎಂಪಿಐ ವರದಿ ಗ್ರಾಮೀಣ ಗುಜರಾತ್‌ನ ಜನಸಂಖ್ಯೆಯ ಶೇ.44.45ರಷ್ಟು ಮಂದಿ ಪೌಷ್ಟಿಕಾಂಶ ವಂಚಿತರು. ನಗರ ಪ್ರದೇಶಗಳಲ್ಲಿ ಇದು ಶೇ.28.97ರಷ್ಟಿದೆ ಎಂದು ದತ್ತಾಂಶ ಪ್ರಕಟಿಸಿದೆ.

20 ಲಕ್ಷ ಲಂಚ: ಇಡಿ ಅಧಿಕಾರಿ ಸಿಬಿಐ ಬಲೆಗೆ

ದೆಹಲಿ: ಜಾರಿ ನಿರ್ದೇಶನಾಲಯದ ಅಧಿಕಾರಿಯೊಬ್ಬರು ಲಂಚ ಪಡೆಯುವಾಗ ರೆಡ್ ಹ್ಯಾಂಡ್ ಆಗಿ ಸಿಬಿಐ ಬಲೆಗೆ ಬಿದ್ದಿದ್ದಾರೆ. 20 ಲಕ್ಷ ರು ಲಂಚ ಪಡೆಯುವಾಗ ಸಂದೀಪ್ ಯಾದವ್ ಎಂಬ ಅಧಿಕಾರಿಯನ್ನು ದೆಹಲಿಯಲ್ಲಿ ಕೇಂದ್ರಿಯ ತನಿಖಾ ದಳ ಬಂಧಿಸಿದೆ. ಇಡಿ ಸಹಾಯಕ ನಿರ್ದೇಶಕರಾಗಿರುವ ಆರೋಪಿ ಸಂದೀಪ್ ಯಾದವ್ ಪ್ರಕರಣವೊಂದರಲ್ಲಿ ಜ್ಯೂವೆಲ್ಲರಿ ಶಾಪ್ ಮಾಲೀಕನ ಮಗನಿಗೆ ಬಿಡುಗಡೆ ನೀಡಲು 20 ಲಕ್ಷ ರು ಲಂಚದ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಈ ಸಂಬಂಧ ದೂರಿನ ಅನ್ವಯ ಕಾರ್ಯಾಚರಣೆ ನಡೆಸಿದ ಸಿಬಿಐ ಅಧಿಕಾರಿಗಳು ಲಂಚ ಸ್ವೀಕರಿಸುವಾಗಲೇ ಅಧಿಕಾರಿಯನ್ನು ಬಂಧಿಸಿದ್ದಾರೆ. ಈ ಮೊದಲು ದೆಹಲಿ ಅಬಕಾರಿ ನೀತಿ ಹಗರಣದ ಪ್ರಕರಣದಲ್ಲಿ 5 ಕೋಟಿ ರು ಲಂಚ ಪಡೆದಿದ್ದ ಆರೋಪದ ಮೇಲೆ ಜಾರಿ ನಿರ್ದೇಶನಾಲಯದ 6 ಅಧಿಕಾರಿಗಳನ್ನು ಸಿಬಿಐ ಬಂಧಿಸಿತ್ತು.

ಜಪಾನ್‌ನಲ್ಲಿ 7.1 ತೀವ್ರತೆ ಭೂಕಂಪ

ಟೋಕಿಯೊ: ದಕ್ಷಿಣ ಜಪಾನ್‌ಲ್ಲಿ ಎರಡು ಪ್ರಬಲ ಭೂಕಂಪ ಸಂಭವಿಸಿದ್ದು ಸುನಾಮಿ ಏಳುವ ಎಚ್ಚರಿಕೆ ನೀಡಲಾಗಿದೆ. ಗುರುವಾರ 7.1 ಹಾಗೂ 6.9 ತೀವ್ರತೆಯ ಭೂ ಕಂಪನ ದಾಖಲಾಗಿದೆ. ಸದ್ಯ ಯಾವುದೇ ಜೀವಹಾನಿ ವರದಿಯಾಗಿಲ್ಲ. ಯುನೈಟೆಡ್ ಸ್ಟೇಟ್ಸ್ ಜಿಯಾಲಾಜಿಕಲ್ ಸರ್ವೇ ನೀಡಿದ ಮಾಹಿತಿ ಪ್ರಕಾರ ಸುಮಾರು ಒಂದು ಮೀಟರ್ ಎತ್ತರದ ಸುನಾಮಿ ಏಳುವ ಸಾಧ್ಯತೆ ಇದೆ ಅಥವಾ ಈಗಾಗಲೇ ಕ್ಯುಶು, ಶಿಕೋಕು ದ್ವೀಪದಲ್ಲಿ ಸುನಾಮಿ ಎದ್ದಿದೆ ಎಂದು ಹೇಳಲಾಗಿದೆ. ಮೊದಲ ಭೂಕಂಪನ ಗುರುವಾರ ಸಂಜೆ 4.42ರ ಸುಮಾರಿಗೆ ಸಂಭವಿಸಿದ್ದು ಕ್ಯುಶು ದ್ವೀಪದ ಪೂರ್ವ ಕರಾವಳಿಯಲ್ಲಿ 33 ಕಿ.ಮೀಟರ್ ಆಳದಲ್ಲಿ ಭೂಕಂಪನದ ಕೇಂದ್ರ ಬಿಂದುವನ್ನು ಗುರುತಿಸಲಾಗಿದೆ. ಹಾಗೇ ಒಂದೇ ನಿಮಿಷದ ಅಂತರದಲ್ಲಿ ಮತ್ತೊಂದು ಭೂಕಂಪನ ಸಂಭವಿಸಿದೆ. ಜಪಾನ್‌ನ ದಕ್ಷಿಣ ದ್ವೀಪಗಳ ಮೇಲೆ ಹೆಚ್ಚು ಪರಿಣಾಮ ಬೀರಿದೆ ಎಂದು ಹೇಳಲಾಗಿದೆ. ಘಟನೆಯಿಂದ ಕೆಲ ಮನೆಗಳಿಗೆ ಹಾನಿಯಾಗಿದ್ದು , ರಸ್ತೆಗಳಲ್ಲಿ ಬಿರುಕು ಮೂಡಿದೆ. ಸುನಾಮಿ ಎಚ್ಚರಿಕೆ ಹಿನ್ನೆಲೆ ಜಪಾನ್ ಸರಕಾರ ತೀವ್ರ ಕಟ್ಟೆಚ್ಚರ ವಹಿಸಿದೆ.



{ರಾಜೀವ್ ರಂಜನ್ ಸಿಂಗ್} ಕೇಂದ್ರ ಸಚಿವ

ವಕ್ಫ್ ಮಂಡಳಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ಖಚಿತಪಡಿಸುವ ನಿಟ್ಟಿನಲ್ಲಿ ಈ ತಿದ್ದುಪಡಿ ಮಸೂದೆ ತರಲಾಗಿದೆಯೇ ಹೊರತು ಧಾರ್ಮಿಕ ಚಟುವಟಿಕೆಯನ್ನು ಮೂಗು ತೂರಿಸುವ ಉದ್ದೇಶದಿಂದಲ್ಲ. ಇಲ್ಲಿ ಕೋಮು ವಿಭಜನೆಯ ಪ್ರಶ್ನೆಯೇ ಇಲ್ಲ. ವಿಪಕ್ಷಗಳು ವದಂತಿ ಹಬ್ಬಿಸುತ್ತಿದೆ.ವಕ್ಫ್ ಮಂಡಳಿ ಕಾನೂನು ಮೂಲಕ ರಚನೆಯಾಗಿದೆ. ಹೀಗಿರುವಾಗ ಸರ್ವಾಧಿಕಾರ ಹೊಂದಲು ಹೇಗೆ ಸಾಧ್ಯ?

ಯುಕೆ ವಿದೇಶಾಂಗ ಕಾರ್ಯದರ್ಶಿ ಜತೆ ಜೈ ಶಂಕರ್ ಮಾತುಕತೆ

ದೆಹಲಿ: ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಲಂಡನ್ ಸರಕಾರದ ಬಳಿ ರಾಜಕೀಯ ಆಶ್ರಯ ಕೋರಿದ್ದಾರೆ ಎಂಬ ಸುದ್ದಿ ಮಧ್ಯೆಯೇ ಮಹತ್ವದ ಬೆಳವಣಿಗೆ ನಡೆದಿದೆ. ವಿದೇಶಾಂಗ ಸಚಿವ ಎಸ್ ಜೈಶಂಕರ್ ಯುಕೆ ವಿದೇಶಾಂಗ ಕಾರ್ಯದರ್ಶಿ ಜತೆ ಗುರುವಾರ ಮಾತುಕತೆ ನಡೆಸಿದ್ದಾರೆ.

ಈ ಬಗ್ಗೆ ವಿದೇಶಾಂಗ ಇಲಾಖೆಯ ವಕ್ತಾರ ರಂಧೀರ್ ಜೈಸ್ವಾಲ್ ಮಾಹಿತಿ ನೀಡಿದ್ದಾರೆ. ಸಚಿವ ಜೈಶಂಕರ್ ಹಾಗೂ ಡೇವಿಡ್ ಲಾಮಿ ಬಾಂಗ್ಲಾದೇಶದ ರಾಜಕೀಯ ಹಾಗೂ ಪಶ್ಚಿಮ ಏಷ್ಯಾದಲ್ಲಿನ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸಿದ್ದಾರೆ ಎಂದು ಅವರು ತಿಳಿಸಿದರು. ಇಲ್ಲಿಯವರೆಗೆ ಶೇಖ್ ಹಸೀನಾ ಅವರ ಮುಂದಿನ ಯೋಜನೆಗಳ ಬಗ್ಗೆ ಯುಕೆ ಆಗಲಿ ಅಥವಾ ಭಾರತವಾಗಲಿ ಯಾವುದೇ ಹೇಳಿಕೆ ನೀಡಿಲ್ಲ, ಸಂಸತ್‌ನಲ್ಲಿ ಜೈ ಶಂಕರ್ ,ಶೇಖ್ ಹಸೀನಾ ಕೆಲ ಕಾಲದ ಮಟ್ಟಿಗೆ ಮಾತ್ರ ಭಾರತದಲ್ಲಿ ಇರಲು ಅನುಮತಿ ಕೇಳಿದ್ದರು ಎಂದು ಮಾಹಿತಿ ನೀಡಿದ್ದರು.

ಇನ್ನು ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಾಳಿ ಬಗ್ಗೆ ಮಾತನಾಡಿದ ಜೈಸ್ವಾಲ್ ಕಾನೂನು ಮತ್ತು ಸುವ್ಯವಸ್ಥೆ ಸರಿಯಾಗುವವರೆಗೆ ಈ ಬಗ್ಗೆ ಆತಂಕವಿದೆ. ಆದರೆ ಸಾಕಷ್ಟು ಸಂಘಟನೆಗಳು ಅಲ್ಪಸಂಖ್ಯಾತರ ಸುರಕ್ಷತೆಗೆ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ವಿದೇಶಾಂಗ ಇಲಾಖೆ ನಿರಂತರ ಮಾಹಿತಿ ಸಂಗ್ರಹಿಸುತ್ತಿದೆ. ತಮ್ಮ ದೇಶದ ನಾಗರಿಕರ ಸುರಕ್ಷತೆ ಕಾಯ್ದುಕೊಳ್ಳುವುದು ಎಲ್ಲಾ ಸರಕಾರಗಳ ಕರ್ತವ್ಯ . ಬಾಂಗ್ಲಾದೇಶದಲ್ಲಿ ಶೀಘ್ರದಲ್ಲಿ ಎಲ್ಲವೂ ಸಹಜ ಸ್ಥಿತಿಗೆ ಬರಲಿ ಎಂದರು. ಹಾಗೇ ಕೆಲ ಭಾರತೀಯರು ದೇಶಕ್ಕೆ ವಾಪಸ್ಸು ಬರುವುದಾಗಿ ತಿಳಿಸಿದ್ದಾರೆ. ಅವರಿಗೆ ರಾಯಭಾರಿ ಕಚೇರಿ ನೆರವು ನೀಡುತ್ತಿದೆ. ಈಗಾಗಲೇ ವಿಮಾನಯಾನ ಸೇವೆ ಕೂಡ ಪುನರ್ ಆರಂಭವಾಗಿದೆ ಎಂದು ರಂಧೀರ್ ಜೈಸ್ವಾಲ್ ಹೇಳಿದ್ದಾರೆ. ಬಾಂಗ್ಲಾದೇಶದಲ್ಲಿ ಸುಮಾರು 19 ಸಾವಿರ ಭಾರತೀಯರು ನೆಲೆಸಿದ್ದಾರೆ.

ಒಂದೇ ಬ್ಯಾಂಕ್ ಖಾತೆಗೆ 2 ಯುಪಿಐ ಅಕೌಂಟ್‌ಗೆ ಆರ್‌ಬಿಐ ಅವಕಾಶ

ದೆಹಲಿ: ಯುಪಿಐ ಮೂಲಕ ತೆರಿಗೆ ಪಾವತಿಸುವ ಮಿತಿಯನ್ನು ಆರ್‌ಬಿಐ 1 ಲಕ್ಷ ರು ನಿಂದ 5 ಲಕ್ಷ ರುಗೆ ಏರಿಕೆ ಮಾಡಿದೆ. ಹಾಗೇ ಸತತ ಒಂಭತ್ತನೇ ಬಾರಿಗೆ ರೆಪೋ ದರವನ್ನು ಯಥಾಸ್ಥಿತಿ ಉಳಿಸಿಕೊಂಡಿದೆ.



ಹಣಕಾಸು ನೀತಿ ಸಮಿತಿ ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿದ ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ಡಿಜಿಟಲ್ ವ್ಯವಹಾರ ಬಲಪಡಿಸುವ ಕುರಿತಾದ ಹಲವು ಕ್ರಮಗಳ ಕುರಿತು ಮಾಹಿತಿ ನೀಡಿದರು. ನಿರೀಕ್ಷೆಯಂತೆ ಆರ್‌ಬಿಐ ರೆಪೊ ದರ ಶೇ.6.50ನ್ನು ಉಳಿಸಿಕೊಂಡಿದೆ. ಜಿಡಿಪಿ ಬೆಳವಣಿಗೆ ಉತ್ತಮವಾಗಿರುವುದರಿಂದ ಹಣದುಬ್ಬರನ್ನು ತಗ್ಗಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು. ಹಾಗೇ ಎಂಎಸ್‌ಎಫ್ ಹಾಗೂ ಎಸ್‌ಡಿಎಫ್ ದರಗಳು ಕ್ರಮವಾಗಿ ಶೇ.6.75 ಮತ್ತು ಶೇ. 6.25 ರಲ್ಲಿ ಮುಂದುವರೆಯಲಿದೆ ಎಂದು ಅವರು ಹೇಳಿದರು.

ಒಂದು ಖಾತೆಗೆ ಎರಡು ಯುಪಿಐ

ಯುಪಿಐ ವಹಿವಾಟು ವ್ಯವಸ್ಥೆಯಲ್ಲಿ ಡೆಲಿಗೇಟೆಡ್ ಪೇಮೆಂಟ್ಸ್ ಸಿಸ್ಟಮ್ ಪರಿಚಯಿಸಿರುವ ಆರ್‌ಬಿಐ ಒಂದೇ ಬ್ಯಾಂಕ್ ಖಾತೆಗೆ ಎರಡು ಯುಪಿ ಖಾತೆ ತೆರಯುವ ಅವಕಾಶ ನೀಡಿದೆ. ಅಂದರೆ ಒಂದು ಬ್ಯಾಂಕ್ ಖಾತೆಯನ್ನು ಇಬ್ಬರು ಬಳಸಲು ಅವಕಾಶ ನೀಡಲಾಗಿದೆ. ಈ ಮೊದಲು ಒಂದು ಬ್ಯಾಂಕ್ ಖಾತೆಗೆ ಒಂದು ಯುಪಿಐ ಖಾತೆ ಮಾತ್ರವಿತ್ತು. ಈ ಫೀಚರ್ ಮೂಲಕ ಓರ್ವ ವ್ಯಕ್ತಿ ತನ್ನ ಬ್ಯಾಂಕ್ ಖಾತೆಯನ್ನು ಹಣದ ಮಿತಿಯೊಂದಿಗೆ ಇನ್ನೊಬ್ಬರಿಗೆ ಬಳಸಲು ನೀಡಬಹುದಾಗಿದೆ. ಇಲ್ಲಿ ವಹಿವಾಟಿಗೆ ಮಿತಿ ನಿರ್ಧರಿಸುವ ಅವಕಾಶವನ್ನೂ ನೀಡಲಾಗಿದೆ.

ಚೆಕ್ ವಿಲೇವಾರಿ ಮತ್ತಷ್ಟು ಸುಗಮ

ಹಣಕಾಸು ವಹಿವಾಟುಗಳನ್ನು ಮತ್ತಷ್ಟು ಸುಗಮ ಮತ್ತು ತ್ವರಿತಗೊಳಿಸಲು ಇನ್ನು ಮುಂದೆ ಬ್ಯಾಂಕ್ ಚೆಕ್‌ಗಳನ್ನು ಕೆಲವೇ ಗಂಟೆಗಳಲ್ಲಿ ವಿಲೇವಾರಿ ಮಾಡುವ ವ್ಯವಸ್ಥೆ ಜಾರಿಗೆ ತರುವುದಾಗಿ ಶಕ್ತಿಕಾಂತ ದಾಸ್ ಹೇಳಿದರು. ಈ ಮೊದಲು ಚೆಕ್ ವಿಲೇವಾರಿಗೆ ಎರಡು ದಿನ ಸಮಯ ತೆಗೆದುಕೊಳ್ಳುತ್ತಿತ್ತು. ಬ್ಯಾಚ್ ಪ್ರಕ್ರಿಯೆ ಬದಲು ಚೆಕ್‌ಗಳು ಬಂದಂತೆ ವಿಲೇವಾರಿ ಮಾಡುವ ಪದ್ಧತಿಯನ್ನು ಆರ್‌ಬಿಐ ಪ್ರಸ್ತಾಪಿಸಿದೆ. ಸದ್ಯ ಬ್ಯಾಂಕ್‌ಗಳು ಎರಡು ದಿನಕ್ಕೆ ಒಮ್ಮೆಯಂತೆ ಚೆಕ್‌ಗಳನ್ನು ಪ್ರಕ್ರಿಯೆಗೊಳಿಸುವ ಸಿಟಿಎಸ್ ವ್ಯವಸ್ಥೆಯನ್ನು ಹೊಂದಿವೆ.

ವಿನೇಶಾ ಅನರ್ಹತೆ: ರಾಜ್ಯಸಭೆಯಲ್ಲಿ ಗದ್ದಲ, ಪೀಠ ತೊರೆದ ಧನಕರ್

ದೆಹಲಿ: ಒಲಿಂಪಿಕ್ಸ್ ಪಂದ್ಯದಲ್ಲಿ ವಿನೇಶಾ ಫೋಗಟ್ ಅನರ್ಹ ವಿಚಾರ ರಾಜ್ಯಸಭೆಯಲ್ಲಿ ಗದ್ದಲಕ್ಕೆ ಕಾರಣವಾಗಿದೆ. ವಿಪಕ್ಷ ನಾಯಕರ ನಡವಳಿಕೆಯಿಂದ ಕೋಪಗೊಂಡ ರಾಜ್ಯಸಭಾ ಅಧ್ಯಕ್ಷ ಜಗದೀಪ್ ಧನಕರ್ ಕೆಲ ಕಾಲ ಪೀಠ ತೊರೆದ ಪ್ರಸಂಗ ನಡೆದಿದೆ.

ವಿಪಕ್ಷ ನಾಯಕರು ರಾಜ್ಯಸಭೆಯಲ್ಲಿ ವಿನೇಶಾ ಫೋಗಟ್ ಅನರ್ಹತೆ ಬಗ್ಗೆ ಚರ್ಚಿಸಲು ಅನುಮತಿ ಕೇಳಿದ್ದಾರೆ ಆದರೆ ಇದಕ್ಕೆ ಜಗದೀಪ್ ಧನಕರ್ ಅನುಮತಿ ನೀಡಿಲ್ಲ. ಪಟ್ಟು ಬಿಡದ ನಾಯಕರು ಚರ್ಚೆಗೆ ಅವಕಾಶ ನೀಡುವಂತೆ ಗದ್ದಲ ಎಬ್ಬಿಸಿದ್ದಾರೆ. ಟಿಎಂಸಿ ಸಂಸದ ಡೆರೆಕ್ ಓ ಬ್ರೇನ್ ಹಾಗೂ ಕಾಂಗ್ರೆಸ್ ಸಂಸದ ಜೈ ರಾಮ್ ರಮೇಶ್ ವಿರುದ್ಧ ಸಿಟ್ಟಾದ ಅಧ್ಯಕ್ಷರು ಪೀಠದ ವಿರುದ್ಧ ಕೂಗಾಡುವ ನಡೆ ಸರಿಯಿಲ್ಲ.ನಿಮ್ಮ ನಡವಳಿಕೆ ಅತ್ಯಂತ ಕೆಟ್ಟದಾಗಿದೆ, ಮುಂದಿನ ಬಾರಿ ಸಭೆಯಿಂದ ಹೊರಹಾಕಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾ ರ್ಜುನ ಖರ್ಗೆ ಫೋಗಟ್ ಅನರ್ಹತೆ ಹಿಂದೆ ಯಾರಿದ್ದಾರೆ ಎಂಬ ಬಗ್ಗೆ ಚರ್ಚೆಯಾಗ ಬೇಕು ಇದು ಗಂಭೀರ ವಿಚಾರ ಎಂದು ಆಗ್ರಹಿಸಿದರು. ಅನುಮತಿ ಸಿಗದ ಕಾರಣ ವಿಪಕ್ಷ ನಾಯಕರು ಪ್ರತಿಭಟಿಸಿ ಸಭಾತ್ಯಾಗ ಮಾಡಿ ಮತ್ತೆ ಕೆಲ ಸಮಯದ ಬಳಿಕ ವಾಪಸ್ಸಾದರು.

ರಾಜ್ಯಸಭೆ ಘಟನೆಯ ಬಗ್ಗೆ ಬೇಸರ ವ್ಯಕ್ತಪಡಿಸಿದ ಜಗದೀಪ್ ಧನಕರ್ ವಿಪಕ್ಷ ನಾಯಕರು ವಿನೇಶಾ ಫೋಗಟ್ ಅನರ್ಹತೆಯಿಂದ ತಮಗೊಂದೇ ನೋವಾಗಿದೆ ಎಂದು ತಿಳಿದಿದ್ದಾರೆ. ಈ ಘಟನೆಯನ್ನು ರಾಜಕೀಯಗೊಳಿಸುವುದು ವಿನೇಶಾ ಅವರಿಗೆ ಮಾಡುವ ದೊಡ್ಡ ಅನ್ಯಾಯ .ಈ ಪವಿತ್ರ ಸದನವನ್ನು ಅರಾಜಕತೆಯ ಕೇಂದ್ರವನ್ನಾಗಿ ಮಾಡುವುದು, ಭಾರತೀಯ ಪ್ರಜಾಪ್ರಭುತ್ವದ ಮೇಲೆ ದಾಳಿ ಮಾಡುವುದು, ಸ್ಪೀಕರ್ ಹುದ್ದೆಯ ಘನತೆಗೆ ಮಸಿ ಬಳಿಯುವುದು, ಇದು ಕೇವಲ ಅಸಭ್ಯ ನಡವಳಿಕೆಯಲ್ಲ, ಇದು ಎಲ್ಲಾ ಮಿತಿಗಳನ್ನು ಮೀರಿದ ನಡವಳಿಕೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಪೀಠದಲ್ಲಿ ಕೂರಲು ಮನಸಾಗುತ್ತಿಲ್ಲ. ಬಹಳ ನೋವಿನಿಂದ ಕುರ್ಚಿ ತೊರೆಯುತ್ತಿದ್ದೇನೆ ಎಂದು ಹೇಳಿ ಹೊರಟಿದ್ದಾರೆ.

ಮಹಾರಾಷ್ಟ್ರ ಚುನಾವಣೆ ಆಪ್ ಜತೆ ಉದ್ಧವ್ ಸಭೆ

ದೆಹಲಿ: ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆ ರಾಜ್ಯದಲ್ಲಿ ರಾಜಕೀಯ ಚಟುವಟಿಕೆ ಜೋರಾಗಿದೆ. ಶಿವಸೇನೆ (ಉದ್ಧವ್ ಬಣ) ನಾಯಕ ಉದ್ಧವ ಠಾಕ್ರೆ ಗುರುವಾರ ದೆಹಲಿಯಲ್ಲಿ ಸುನಿತಾ ಕೇಜ್ರಿವಾಲ್ ಸೇರಿ ಆಪ್ ನಾಯಕರನ್ನು ಭೇಟಿಯಾಗಿದ್ದಾರೆ.

ಈ ಭೇಟಿಗೂ ಒಂದು ದಿನ ಮೊದಲು ಉದ್ಧವ್ ಠಾಕ್ರೆ, ಸಂಸದ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಚುನಾವಣೆ ಸಂಬಂಧ ಮಹತ್ವದ ಚರ್ಚೆ ನಡೆಸಿದ್ದರು. ಮಹಾರಾಷ್ಟ್ರದಲ್ಲಿ ಆಮ್ ಆದ್ಮಿ ಪಕ್ಷ ಏಕಾಂಗಿಯಾಗಿ ಚುನಾವಣೆ ಎದುರಿಸುವ ಘೋಷಣೆ ಮಾಡಿತ್ತು ಆದರೆ ದೆಹಲಿಯಲ್ಲಿ ಉದ್ಧವ್ ಠಾಕ್ರೆ, ಸಿಎಂ ಕೇಜ್ರಿವಾಲ್ ಪತ್ನಿ ಭೇಟಿಯಾಗಿ ಚರ್ಚೆ ನಡೆಸಿದ್ದು ಕುತೂಹಲ ಕೆರಳಿಸಿದೆ.

ಸಭೆ ವೇಳೆ ಆಪ್ ರಾಜ್ಯಸಭಾ ಸದಸ್ಯರಾದ ಸಂಜಯ್ ಸಿಂಗ್, ಸಂಸದ ರಾಘವ್ ಚಡ್ಡಾ ಕೂಡ ಉಪಸ್ಥಿತರಿದ್ದರು. ಭೇಟಿ ವೇಳೆ ಠಾಕ್ರೆ, ಮಹಾರಾಷ್ಟ್ರದಲ್ಲಿ ಆಡಳಿತ ಪಕ್ಷದ ವಿರುದ್ಧ ರೈತರ ಹಾಗೂ ಯುವಜನರ ಅಸಮಾಧಾನದ ಬಗ್ಗೆ ಮಹಾರಾಷ್ಟ್ರದ ರಾಜಕೀಯ ಬಗ್ಗೆ ಚರ್ಚೆ ನಡೆಸಿದ್ದಾರೆ. ಆಪ್ ಇಂಡಿಯಾ ಮೈತ್ರಿಕೂಟದ ಭಾಗವಾಗಿದ್ದರೂ ಈ ಮೈತ್ರಿ ಕೇಂದ್ರ ಚುನಾವಣೆಗೆ ಮಾತ್ರ ಎಂದು ಮಹಾರಾಷ್ಟ್ರ ಆಪ್ ಇತ್ತೀಚೆಗಷ್ಟೇ ಹೇಳಿತ್ತು. ಉದ್ಧವ್ ಭೇಟಿ ಬಳಿಕ ಆಪ್ ನಿರ್ಧಾರದಲ್ಲಿ ಬದಲಾವಣೆ ಆಗಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಜೀವ ರಕ್ಷಕರಿಗೆ ಭಾವನಾತ್ಮಕ ಬೀಳ್ಕೊಡುಗೆ

ವಯನಾಡು: ಭೂಕುಸಿತ ದುರಂತದಲ್ಲಿ ನೂರಾರು ಜನರನ್ನು ಪ್ರಾಣ ಒತ್ತೆಯಿಟ್ಟು ರಕ್ಷಿಸಿದ ಭಾರತೀಯ ಸೇನೆಗೆ ಗುರುವಾರ ಹೃದಯಸ್ಪರ್ಶಿ ಬೀಳ್ಕೊಡುಗೆ ನೀಡಲಾಗಿದೆ.

10 ದಿನಗಳ ಕಾಲ ದುರಂತ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿ, ಕೆಲವೇ ಗಂಟೆಗಳಲ್ಲಿ ಸೇತುವೆ ನಿರ್ಮಿಸಿ ಸಂಪರ್ಕ ಕಲ್ಪಿಸಿದ 500 ಭಾರತೀಯ ಸೇನೆ ಯೋಧರು ವಾಪಸ್ ತೆರಳಿದ್ದಾರೆ. ತಿರುವನಂತಪುರಂ, ಕಣ್ಣೂರು, ಕೊಳಿಕ್ಕೋಡ್, ಹಾಗೂ ಬೆಂಗಳೂರಿನಿಂದ ರಕ್ಷಣಾ ಕಾರ್ಯಕ್ಕೆ ವಯನಾಡಿಗೆ ತೆರಳಿದ್ದ ಯೋಧರಿಗೆ ಜಿಲ್ಲಾಡಳಿತ, ಜನತೆ ಭಾವನಾತ್ಮಕ ವಿದಾಯ ಹೇಳಿದ್ದಾರೆ. ಸರಕಾರದ ಪರವಾಗಿ ಸಚಿವರಾದ ಎ ಕೆ ಶಶಿಧರನ್, ಮುಹಮ್ಮದ್ ರಿಯಾಸ್ ಬೀಳ್ಕೊಡುಗೆ ವೇಳೆ ಹಾಜರಿದ್ದು ಸೇನೆಗೆ ಧನ್ಯವಾದ ತಿಳಿಸಿದ್ದಾರೆ. ಈ ಬೀಳ್ಕೊಡುಗೆ ವಿಡಿಯೋವನ್ನು ಕೊಚ್ಚಿ ಡಿಫೆನ್ಸ್ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಹಂಚಿಕೊಂಡಿದೆ. ಸೇನೆಗೆ ಜನತೆ ಚಪ್ಪಾಳೆ ತಟ್ಟಿ ಸೆಲ್ಯೂಟ್ ಹೊಡೆದು ಕಳುಹಿಸಿಕೊಟ್ಟಿದೆ.

ಗುರುವಾರದಿಂದ ಎನ್‌ಡಿಆರ್‌ಎಫ್, ಎಸ್‌ಡಿಆರ್ ಎಫ್, ಅಗ್ನಿಶಾಮಕ ಸಿಬ್ಬಂದಿ, ರಾಜ್ಯ ಪೊಲೀಸ್ ಮಾತ್ರ ಕಾರ್ಯಾಚರಣೆಯಲ್ಲಿ ಭಾಗಿಯಾಗಲಿದೆ.

ಆ.10 ರಂದು ಪ್ರಧಾನಿ ವಯನಾಡು ಭೇಟಿ

ದೆಹಲಿ: ಭೀಕರ ಭೂ ಕುಸಿತಕ್ಕೆ ಒಳಗಾಗಿರುವ ವಯನಾಡಿಗೆ ಪ್ರಧಾನಿ ಮೋದಿ ಭೇಟಿ ನೀಡಲಿದ್ದಾರೆ ಎಂದು ವರದಿಯಾಗಿದೆ. ಆಗಸ್ಟ್ 10 ಶನಿವಾರದಂದು ಪ್ರಧಾನಿ ಮೋದಿ ಭೂಕುಸಿತ ಸಂಭವಿಸಿದ ಸ್ಥಳದ ವೈಮಾನಿಕ ಸಮೀಕ್ಷೆ ಕೈಗೊಳ್ಳಲಿದ್ದಾರೆ ಎಂದು ಹೇಳಲಾಗಿದೆ. ಸರಣಿ ಗುಡ್ಡ ಕುಸಿತದಿಂದ 400ಕ್ಕೂ ಅಧಿಕ ಜನರು ಸಾವನ್ನಪ್ಪಿದ್ದು ಇನ್ನೂ 100 ಕ್ಕೂ ಅಧಿಕ ಜನ ಕಣ್ಮರೆಯಾಗಿದ್ದಾರೆ. ಸತತ 9 ದಿನಗಳ ಕಾಲ ದುರಂತದಲ್ಲಿ ಸಿಲುಕಿದವರ ರಕ್ಷಣೆಗೆ 40ಕ್ಕೂ ಅಧಿಕ ರಕ್ಷಣಾ ಪಡೆಗಳು , 1 ಸಾವಿರಕ್ಕೂ ಅಧಿಕ ಸಿಬ್ಬಂದಿ ಕಾರ್ಯನಿರ್ವಹಿಸಿದ್ದು ಇನ್ನೂ ಜೀವಂತವಾಗಿರುವವರ ಸಾಧ್ಯತೆ ಇಲ್ಲ ಎಂದು ಸಿಎಂ ಪಿಣರಾಯಿ ವಿಜಯನ್ ಹೇಳಿದ್ದರು. ಭಾಗಶಃ ರಕ್ಷಣಾ ಪಡೆಗಳು ಸದ್ಯ ಕಾರ್ಯಾಚರಣೆ ನಿಲ್ಲಿಸಿ ವಯನಾಡಿನಿಂದ ಹೊರಟಿದೆ ಎಂದು ಹೇಳಲಾಗಿದೆ. ವಯನಾಡು ದುರಂತವನ್ನು 'ರಾಷ್ಟ್ರೀಯ ವಿಪತ್ತು 'ಎಂದು ಘೋಷಿಸಲು ಆಗ್ರಹ ಕೂಡ ಕೇಳಿ ಬಂದಿದೆ. ಇನ್ನೊಂದೆಡೆ ವಿಜ್ಞಾನಿಗಳು ಪರಿಸರ ಸೂಕ್ಷ್ಮ ವಲಯದಲ್ಲಿ ಅವೈಜ್ಞಾನಿಕ ಚಟುವಟಿಕೆಯೇ ದುರಂತಕ್ಕೆ ಕಾರಣ ಎಂದು ಅಭಿಪ್ರಾಯಪಟ್ಟಿದ್ದಾರೆ. ವಯನಾಡಿನ ದುರಂತ ದೇಶದ ಹಲವು ಪರಿಸರ ಸೂಕ್ಷ್ಮ ಪ್ರದೇಶಗಳಿಗೆ ಎಚ್ಚರಿಕೆಯಾಗಿದೆ.ಹೀಗಾಗಿ ಪ್ರಧಾನಿ ಮೋದಿ ಭೇಟಿ ಬಹಳ ಮಹತ್ವ ಪಡೆದುಕೊಂಡಿದೆ.

ವಕ್ಫ್ ತಿದ್ದುಪಡಿ ಮಸೂದೆ: ಧಾರ್ಮಿಕ ಸ್ವಾತಂತ್ರ್ಯ ಉಲ್ಲಂಘನೆ

ಕೇಂದ್ರ ಸರಕಾರದ ನಡೆಗೆ ವಿಪಕ್ಷ ಭಾರಿ ವಿರೋಧ | ಕರಾಳ ಶಾಸನ ಎಂದು ಖಂಡನೆ

ದೆಹಲಿ: ಲೋಕಸಭೆಯಲ್ಲಿ ಗುರುವಾರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಕ್ಫ್ ತಿದ್ದುಪಡಿ ಮಸೂದೆ ಮಂಡಿಸುತ್ತಿದ್ದಂತೆ ವಿಪಕ್ಷ ನಾಯಕರು ಭಾರಿ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಮಸೂದೆ ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿದ್ದು ಸಂವಿಧಾನದ ಮೇಲಿನ ದಾಳಿ ಎಂದು ಪ್ರತಿಭಟಸಿದ್ದಾರೆ. ಲೋಕಸಭೆಯಲ್ಲಿ ಮಸೂದೆ ಮಂಡನೆ ವಿರೋಧಿಸಿ ಕಾಂಗ್ರೆಸ್ ನೋಟೀಸ್ ನೀಡಿತ್ತು. ಸಾಕಷ್ಟು ಗದ್ದಲದ ಬಳಿಕ ಮಸೂದೆಯನ್ನು ಜಂಟಿ ಸಂಸದೀಯ ಮಂಡಳಿಗೆ ಶಿಫಾರಸ್ಸು ಮಾಡಲಾಗಿದೆ.

ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆಯನ್ನು ಡ್ರಕೋನಿಯನ್ ಕಾನೂನು, ಸಂವಿಧಾನದ ಮೇಲಿನ ಮೂಲಭೂತ ದಾಳಿ ಎಂದು ಜರಿದ ಕೆ ಸಿ ವೇಣುಗೋಪಾಲ ಈ ಮಸೂದೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಜನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಒಡೆದು ಆಳುವ ನೀತಿಗೆ ತಕ್ಕ ಉತ್ತರ ನೀಡಿದ್ದಾರೆ ಆದರೆ ಬಿಜೆಪಿ ತನ್ನ ಹಳೆ ಚಾಳಿಯನ್ನು ಮುಂದುವರೆಸಿದೆ. ಈಗ ಮುಸ್ಲಿಂ ನಂತರ ಕ್ರಿಶ್ಚಿಯನ್, ಜೈನ್ ಹೀಗೆ ಎಲ್ಲರ ಹಕ್ಕುಗಳ ಮೇಲೆ ದಾಳಿ ಆಗಲಿದೆ ಭಾರತದ ಜನ ಇಂತಹ ರಾಜಕೀಯವನ್ನು ಒಪ್ಪುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇನ್ನು ತಿದ್ದುಪಡಿ ಮಸೂದೆಯಲ್ಲಿ ವಕ್ಫ್ ಬೋರ್ಡ್‌ನಲ್ಲಿ ಮುಸ್ಲಿಮೇತರ ಸದಸ್ಯರ ಪ್ರಸ್ತಾಪ ಪ್ರಶ್ನಿಸಿದ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಇದೇ ರೀತಿ ಉಳಿದ ಧಾರ್ಮಿಕ ಮಂಡಳಿಗಳಲ್ಲಿ ಮಾಡುತ್ತೀರಾ ? ಈ ಮಸೂದೆಯನ್ನು ಬಿಜೆಪಿ ತನ್ನ ಪ್ರಬಲ ಬೆಂಬಲಿಗರ ಮನಗೆಲ್ಲಲು ರಚಿಸಿದೆ ಎಂದು ಆರೋಪಿಸಿದ್ದಾರೆ. ಈ ಬಿಲ್ ಒಂದು ನಿರ್ದಿಷ್ಟ ಧಾರ್ಮಿಕ ಸಮುದಾಯವನ್ನು ಗುರಿಯಾಗಿಸಿ ರಚಿಸಲಾಗಿದೆ. ಸಂವಿಧಾನ , ಧಾರ್ಮಿಕ ಅಲ್ಪಸಂಖ್ಯಾತರಿಗೆ ವಿರುದ್ಧವಾಗಿದೆ ಎಂದು ಡಿಎಮ್‌ಕೆ ಸಂಸದೆ ಕನ್ನಿಮೊಳಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಬಿಜೆಪಿ ಮುಸ್ಲಿಂ ವಿರೋಧಿ

ಈ ಮಸೂದೆ ಬಿಜೆಪಿ ಮುಸ್ಲಿಂ ವಿರೋಧಿಯಾಗಿದೆ ಎಂಬುದಕ್ಕೆ ಸಾಕ್ಷಿ. ಕೇಂದ್ರ ಸರಕಾರ ದೇಶವನ್ನು ಒಡೆಯುವ ಪ್ರಯತ್ನ ಮಾಡುತ್ತಿದೆ. ಈ ಮಸೂದೆ ಸಂಪೂರ್ಣ ತಾರತಮ್ಯದಿಂದ ಕೂಡಿದೆ ಎಂದು ಸಂಸದ ಅಸಾದುದ್ದಿನ್ ಒವೈಸಿ ಕಿಡಿಕಾರಿದರು. ಈ ಮಸೂದೆಯನ್ನುಜಂಟಿ ಸಂಸದೀಯ ಮಂಡಳಿಗೆ ನೀಡಬೇಕು ಎಂದು ವಿಪಕ್ಷಗಳು ಆಗ್ರಹಿಸಿದೆ.

ಧಾರ್ಮಿಕ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಇಲ್ಲ

ವಿಧೇಯಕ ಮಂಡಿಸಿ ಮಾತನಾಡಿದ ಸಚಿವ ಕಿರಣ್ ರಿಜಿಜು, ಈ ತಿದ್ದುಪಡಿ ಮಸೂದೆಯಲ್ಲಿ ಯಾವುದೇ ಧಾರ್ಮಿಕ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಇಲ್ಲ. ತಮ್ಮ ಹಕ್ಕಿನಿಂದ ವಂಚಿತರಾದವರಿಗೆ ಹಕ್ಕು ನೀಡಲು ಈ ಮಸೂದೆ ತರಲಾಗಿದೆ. ಕಾಂಗ್ರೆಸ್ ಈ ಹಿಂದೆ ಕಾಯಿದೆಗೆ ತಿದ್ದುಪಡಿ ತರಲು ಸಾಚಾರ್ ಸಮಿತಿ ರಚಿಸಿತ್ತು. ಅದೇ ಸಮಿತಿ ವರದಿ ಆಧಾರದ ಮೇಲೆ ಮಸೂದೆ ರಚಿಸಲಾಗಿದೆ. ಆದರೆ ಈಗ ರಾಜಕೀಯ ಕಾರಣಕ್ಕೆ ಕಾಂಗ್ರೆಸ್ ತಾನೇ ರಚಿಸಿದ ಸಮಿತಿ ಶಿಫಾರಸ್ಸನ್ನು ವಿರೋಧಿಸುತ್ತಿದೆ ಎಂದು ತಿದ್ದುಪಡಿ ಮಸೂದೆಯನ್ನು ಸಮರ್ಥಿಸಿಕೊಂಡರು.

ಪ್ರತ್ಯೇಕ ಸ್ಟಾರ್ಟಪ್ ಪಾರ್ಕ್ ಸ್ಥಾಪನೆ: ಎಂಬಿಪಿ

ಜಾಗತಿಕ ನವೋದ್ಯಮಗಳ ಸವಾಲಿನ ಎರಡನೇ ಆವೃತ್ತಿ ವೆಂಚುರೈಸ್ 24 ಅನಾವರಣ

ಬೆಂಗಳೂರು: ದೇಶದ ಸ್ಟಾರ್ಟಅಪ್‌ಗಳ ರಾಜಧಾನಿ ಖ್ಯಾತಿಯ ಬೆಂಗಳೂರಿನಲ್ಲಿ ಪ್ರತ್ಯೇಕ ಸ್ಟಾರ್ಟಅಪ್ ಪಾರ್ಕ್ ಸ್ಥಾಪಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಜಾಗತಿಕ ನವೋದ್ಯಮಗಳ ಸವಾಲಿನ ಎರಡನೇ ಆವೃತ್ತಿ ವೆಂಚುರೈಸ್ 24 ಅನಾವರಣಗೊಳಿಸಿ ಮಾತನಾಡಿದ ಅವರು, ಜಪಾನ್, ದಕ್ಷಿಣ ಕೊರಿಯಾ ಮಾದರಿಯಲ್ಲಿ ಸ್ಟಾರ್ಟಅಪ್ ಪಾರ್ಕ್ ಅಭಿವೃದ್ಧಿಪಡಿಸುವುದಲ್ಲದೇ, ನವೋದ್ಯಮಗಳ ಅಗತ್ಯಕ್ಕೆ ತಕ್ಕಂತೆ ನಿವೇಶನ ಒದಗಿಸಿ, ಸಕಲ ಸೌಲಭ್ಯ ಸುಸಜ್ಜಿತ, ಬಳಕೆಗೆ ಸಿದ್ಧ ಇರುವ ಕಚೇರಿ ಇಲ್ಲಿ ಇರಲಿದ್ದು, ಪ್ರತಿಭಾನ್ವಿತ ನವೋದ್ಯಮಿಗಳು ತಮ್ಮ ವಿನೂತನ ಆಲೋಚನೆ ಸುಲಲಿತವಾಗಿ ಕಾರ್ಯಗತಗೊಳಿಸಲು ಪೂರಕವಾದ ಪರಿಸರ ಕಲ್ಪಿಸಿಕೊಡಲಾಗುವುದು ಎಂದರು.

ಮೂರು ಪ್ರಮುಖ ವಲಯಗಳಾದ ಎಲೆಕ್ಟ್ರಾನಿಕ್ಸ್ ಸಿಸ್ಟಮ್ ಡಿಸೈನ್ ಮತ್ತು ಮ್ಯಾನುಫ್ಯಾಕ್ಚರಿಂಗ್ (ಇಎಸ್ಡಿಎಂ), ಶುದ್ಧ ಇಂಧನ ವಾಹನ ಸಂಚಾರ, ವೈಮಾಂತರಿಕ್ಷ ಹಾಗೂ ರಕ್ಷಣಾ ಕ್ಷೇತ್ರಗಳಿಗೆ ವೆಂಚುರೈಸ್ 24 ಗಮನ ಕೇಂದ್ರೀಕರಿಸಲಿದ್ದು, ಈ ವಲಯಗಳ ಉದ್ಯಮಿಗಳೇ ಎದುರಿಸುತ್ತಿರುವ ಸವಾಲುಗಳನ್ನು ಪ್ರಸ್ತುತಪಡಿಸಿ ನವೋದ್ಯಮಗಳ ವಾಸ್ತವ ಪ್ರಪಂಚದ ಸವಾಲು ಬಗೆಹರಿಸಲು ಇದರಿಂದ ನೆರವಾಗಲಿದೆ. ಉದ್ಯಮಗಳು ಎದುರಿಸುತ್ತಿರುವ ಸವಾಲು ಪರಿಹರಿಸಲು ಮುಂದೆ ಬರುವ ಪ್ರವರ್ಧಮಾನಕ್ಕೆ ಬರುತ್ತಿರುವ ನವೋದ್ಯಮಗಳಿಗೆ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಇದೊಂದು ಸಮರ್ಥ ವೇದಿಕೆಯಾಗಿರಲಿದೆ. ಜತೆಗೆ ಹೂಡಿಕೆದಾರರು ಮತ್ತು ಮಾರ್ಗದರ್ಶಕರ ನೆರವು ಪಡೆಯುವುದಕ್ಕೂ ಸಾಧ್ಯವಾಗಲಿದೆ ಎಂದು ತಿಳಿಸಿದ್ದಾರೆ.

ಜಾಗತಿಕ ನವೋದ್ಯಮಗಳ ಸವಾಲಿನ ಎರಡನೇ ಆವೃತ್ತಿ ವೆಂಚುರೈಸ್ 24 ಕಿರುಹೊತ್ತಿಗೆಯನ್ನು ಸಚಿವ ಎಂ.ಬಿ.ಪಾಟೀಲ್ ಅವರು ಬಿಡುಗಡೆ ಮಾಡಿದರು. ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ, ಸ್ಟಾರ್ಟಅಪ್ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ ಪ್ರಕಾಶ ಉಪಸ್ಥಿತರಿದ್ದರು.

₹2.50 ಕೋಟಿ ಬಹುಮಾನ

ನವೋದ್ಯಮ ಸವಾಲು-3 ಸುತ್ತುಗಳನ್ನು ಒಳಗೊಂಡಿರಲಿದ್ದು, ಈ ಸವಾಲು ಗೆಲ್ಲಲು ಮುಂಚೂಣಿಯಲ್ಲಿ ಇರುವ ನವೋದ್ಯಮಗಳಿಗೆ 2.50 ಕೋಟಿ ರು. ಮೊತ್ತದ ಬಹುಮಾನ ಹಂಚಲಾಗುವುದು. ಈ ಪ್ರಕ್ರಿಯೆಯು ಆನ್‌ಲೈನ್ ಅರ್ಜಿ ಸಲ್ಲಿಕೆ, ತೀರ್ಪುಗಾರರಿಗೆ ಆನ್‌ಲೈನ್‌ನಲ್ಲಿ ಮಾಹಿತಿ ನೀಡುವ ಮತ್ತು ಜಾಗತಿಕ ಹೂಡಿಕೆದಾರರ ಸಭೆಯಲ್ಲಿ ವಿವರ ಪ್ರಸ್ತುತಪಡಿಸುವುದನ್ನು ಒಳಗೊಂಡಿರಲಿದ್ದು, ಇದನ್ನು 3 ರಿಂದ 4 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು. ವೆಂಚುರೈಸ್-24 ವಿಶ್ವದಾದ್ಯಂತ 1,000 ಕ್ಕೂ ಹೆಚ್ಚು ಪ್ರವೇಶಗಳನ್ನು ಆಕರ್ಷಿಸುವ ಗುರಿ ಹೊಂದಿದ್ದು, ಉದ್ಯಮ ಯಶಸ್ಸಿನ ಹಾದಿಯಲ್ಲಿ ಮುನ್ನಡೆಸುವ ವಿವಿಧ ಹೂಡಿಕೆದಾರರ ಜತೆ ಸಂವಹನಕ್ಕೂ ಅವಕಾಶ ಒದಗಿಸಲಿದೆ ಎಂದು ಸಚಿವರು ಮಾಹಿತಿ ನೀಡಿದರು.

ಜೀವರಕ್ಷಕರ ನೇಮಕಕ್ಕೆ ಸೂಚನೆ

ಬೆಂಗಳೂರು: ಸಿಲಿಕಾನ್ ಸಿಟಿಯ ಅಪಾರ್ಟ್‌ಮೆಂಟ್‌ನಲ್ಲಿರುವ ಈಜುಕೊಳಕ್ಕೆ ಲೈಫ್ ಗಾರ್ಡ್ (ಜೀವರಕ್ಷಕ)ನ್ನು ನೇಮಕ ಮಾಡಲಿಲ್ಲವೆಂದರೆ ಆಗುವ ಅನಾಹುತಕ್ಕೆ ಅಪಾರ್ಟ್‌ಮೆಂಟ್ ಸೊಸೈಟಿಗಳ ಪದಾಧಿಕಾರಿಗಳು ಜವಾಬ್ದಾರರಾಗುತ್ತಾರೆ ಎಂದು ಹೈಕೋರ್ಟ್ ಹೇಳಿದೆ. 2023ರ ಡಿಸೆಂಬರ್ 28ರಂದು ಅಪಾರ್ಟ್‌ಮೆಂಟ್‌ನ ಈಜುಕೊಳದಲ್ಲಿ 9 ವರ್ಷದ ಬಾಲಕಿ ಬಿದ್ದು ಸಾವನ್ನಪ್ಪಿದ್ದಳು. ಈ ಸಂಬಂಧ ಅರ್ಜಿ ಸಲ್ಲಿಸಿದ್ದ ಅರ್ಜಿದಾರರು ನಗರದ ಯಾವುದೇ ಅಪಾರ್ಟ್‌ಮೆಂಟ್‌ನ ಸ್ವಿಮ್ಮಿಂಗ್‌ಪೂಲ್ ಸುತ್ತ ಯಾವುದೇ ರಕ್ಷಣೆ ಇರಲ್ಲ ಎಂದು ವಾದಿಸಿದ್ದರು. ವರ್ತೂರು ಹೋಬಳಿಯ ಗುಂಜೂರಿನ ಪ್ರೆಸ್ಟೀಜ್ ಲೇಕ್ ಸೈಡ್ ಹ್ಯಾಬಿಟೇಟ್ ಹೋಮ್ ಓನರ್ಸ್ ಅಸೋಸಿಯೇಷನ್ ಐಪಿಸಿ ಸೆಕ್ಷನ್ 304, 149ರ ಅಡಿಯಲ್ಲಿ ಸಲ್ಲಿಸಲಾದ ಚಾರ್ಜ್ ಶೀಟ್ ಪ್ರಶ್ನಿಸಿದ್ದರು. ಎರಡು ಕಡೆಯ ವಾದ ಆಲಿಸಿ, ಮಕ್ಕಳು ಈಜುಕೊಳ ಬಳಸುವಾಗ ಲೈಫ್‌ಗಾರ್ಡ್ ಇಲ್ಲ ಎಂದು ಹೇಳುವುದರಿಂದ ಅಪಾರ್ಟ್ಮೆಂಟ್ ಸೊಸೈಟಿಗಳ ಪದಾಧಿಕಾರಿಗಳು ನುಣುಚಿಕೊಂಡಂತೆ ಆಗುತ್ತದೆ. ಇಂತಹ ಘಟನೆ ನಡೆದಾಗ ಸಂಘವೂ ಜವಾಬ್ದಾರರಲ್ಲ ಎಂದು ಹೇಳಲು ಸಾಧ್ಯವಿಲ್ಲ. ಯಾವುದೇ ಅಪಾರ್ಟ್ ಮೆಂಟ್ ಸಮುಚ್ಚಯದಲ್ಲಿ ಈಜುಕೊಳ ಇದ್ದು ಅದಕ್ಕೆ ಲೈಫ್‌ಗಾರ್ಡ್ ನೇಮಿಸದೇ, ಸುರಕ್ಷತಾ ಕ್ರಮ ಕೈಗೊಳ್ಳದೆ ಹಾಗೇ ಬಿಡಬಾರದು. ಒಂದು ವೇಳೆ ಯಾವುದೇ ಸುರಕ್ಷತೆ ಕ್ರಮ ತೆಗೆದುಕೊಳ್ಳದಿದ್ದರೇ ಇದಕ್ಕೆ ಅಪಾರ್ಟ್‌ಮೆಂಟ್ ಸೊಸೈಟಿಗಳ ಪದಾಧಿಕಾರಿಗಳು ಜವಾಬ್ದಾರರಾಗುತ್ತಾರೆ ಎಂದು ನ್ಯಾ.ನಾಗಪ್ರಸನ್ನ ಅವರು ಅಭಿಪ್ರಾಯಪಟ್ಟಿದ್ದಾರೆ.

ನಮೂನೆ ಎ
ಸಾರ್ವಜನಿಕ ಪ್ರಕಟಣೆ

(ನಿಯಂತ್ರಣ 6 ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಅಡಿಯಲ್ಲಿ (ಕಾರ್ಪೊರೇಟ್ ವ್ಯಕ್ತಿಗಳಿಗೆ ದಿವಾಳಿತನ ಪರಿಹಾರ ಪ್ರಕ್ರಿಯೆ) ನಿಯಂತ್ರಣಗಳು, 2016 ರ ಅಡಿ

ಲೋಕ್ತ್ರಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ನ ಸಾಲದಾತರ ಗಮನಕ್ಕೆ

ಸೂಕ್ತ ವಿವರಗಳು

1.	ಕಾರ್ಪೊರೇಟ್ ಸಾಲಗಾರ ವ್ಯಕ್ತಿಯ ಹೆಸರು	ಲೋಕ್ತ್ರಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
2.	ಕಾರ್ಪೊರೇಟ್ ಸಾಲಗಾರ ವ್ಯಕ್ತಿ ಪ್ರಾರಂಭದ ದಿನ	17.06.2016
3.	ಯಾವ ಅಥಾರಿಟಿಯ ಕೆಳಗೆ ಕಾರ್ಪೊರೇಟ್ ಸಾಲಗಾರನು ಆರಂಭ / ನೊಂದಣಿ ಆಗಿರುವುದು	ರಿಜಿಸ್ಟ್ರಾರ್ ಆಫ್ ಕಂಪನೀಸ್, ಬೆಂಗಳೂರು
4.	ಕಾರ್ಪೊರೇಟ್ ಸಾಲಗಾರನ ಗುರುತು ಸಂಖ್ಯೆ/ ಸೀಮಿತ ಬಾಧ್ಯತಾ ಗುರುತು ಸಂಖ್ಯೆ	U74999KA2016PTC094196
5.	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಛೇರಿ ಮತ್ತು ಮುಖ್ಯ ಕಛೇರಿ (ಯಾವುದಾದರೂ ಇದ್ದಲ್ಲಿ) ವಿಳಾಸ	ನೋಂ. ಕಚೇರಿ: 2024ಎಫ್/ಎಫ್, 16ನೇ ಮುಖ್ಯ ರಸ್ತೆ, ಹೆಚ್‌ಎಎಲ್ 2ನೇ ಹಂತ, ಕೋಡಿಹಳ್ಳಿ, ಬೆಂಗಳೂರು-560008, ಕರ್ನಾಟಕ.
6.	ಕಾರ್ಪೊರೇಟ್ ಸಾಲಗಾರನ ಇನ್‌ಸಾಲ್ವೆನ್ಸಿ ಪ್ರಕ್ರಿಯೆ ಆರಂಭದ ದಿನಾಂಕ	08.08.2024
7.	ಇನ್‌ಸಾಲ್ವೆನ್ಸಿ ಪ್ರಕ್ರಿಯೆ ಮುಕ್ತಾಯಗೊಳ್ಳುವ ಅಂದಾಜು ದಿನಾಂಕ	04.02.2025 (ಇನ್‌ಸಾಲ್ವೆನ್ಸಿ ಆರಂಬವಾದ 180ನೇ ದಿನದಿಂದ ಅಂದರೆ 08.08.2024)
8.	ಮಧ್ಯಂತರ ವೃತ್ತಿಪರ ನಿರ್ಣಯದಾರರಾಗಿ ಕಾರ್ಯನಿರ್ವಹಿಸುವ ವೃತ್ತಿಪರ ನಿರ್ಣಯದಾರರ ಹೆಸರು ಮತ್ತು ನೋಂದಣಿ ಸಂ.	ಹೆಸರು: ಗರಿಮಾ ದಿಗ್ಗಿವಾಲ್ ನೋ. ಸಂ. IBBI/IPA-001/IP-P-02018/2020-2021/13158 ಎಎಫ್‌ಎ ಮಾನ್ಯತೆ: 30.06.2025
9.	ಮಂಡಳಿಯಲ್ಲಿ ನೋಂದಾಯಿವಾಗಿರುವಂತೆ ಮಧ್ಯಂತರ ವೃತ್ತಿಪರ ನಿರ್ಣಯದಾರರ ವಿಳಾಸ ಮತ್ತು ಇ-ಮೇಲ್ ಐಡಿ	91, ಮೋಜಿ ಕಾಲೊನಿ, ಮಾಲ್‌ವೀಯ ನಗರ್, ಜೈಪುರ್ ರಾಜಸ್ತಾನ್-302017. ಇ-ಮೇಲ್: garima286a@gmail.com
10.	ಸಂವಹನಕ್ಕಾಗಿ ಬಳಸಲು ಮಧ್ಯಂತರ ವೃತ್ತಿಪರ ನಿರ್ಣಯದಾರರ ವಿಳಾಸ ಮತ್ತು ಇ-ಮೇಲ್ ವಿಳಾಸ	91, ಮೋಜಿ ಕಾಲೊನಿ, ಮಾಲ್‌ವೀಯ ನಗರ್, ಜೈಪುರ್ ರಾಜಸ್ತಾನ್-302017 ಇ-ಮೇಲ್: cirp.loktra@gmail.com
11.	ಕ್ಲೈಮುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	22.08.2025 (ಐಆರ್‌ಪಿ ನೇಮಕವಾದಾಗಿನಿಂದ 14ನೇ ದಿನ ಅಂದರೆ 08.08.2024)
12.	ಸಾಲಗಾರರ ವರ್ಗಗಳು, ಯಾವುದಾದರೂ ಇದ್ದರೆ, ಸೆಕ್ಷನ್ 21 ರ ಉಪ-ವಿಭಾಗ (6ಎ) ಕಾಯಿದೆ (ಬಿ) ಅಡಿಯಲ್ಲಿ, ಮಧ್ಯಂತರ ರೆಸಲ್ಯೂಷನ್ ವೃತ್ತಿಪರರು ಖಚಿತಪಡಿಸಿರುವುದು	ಅನ್ವಯವಾಗುವುದಿಲ್ಲ
13.	ಒಂದು ವರ್ಗದಲ್ಲಿ ಸಾಲಗಾರರ ಅಧಿಕೃತ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಲು ಗುರುತಿಸಲಾದ ದಿವಾಳಿತನದ ವೃತ್ತಿಪರರ ಹೆಸರುಗಳು (ಪ್ರತೀ ವರ್ಗಕ್ಕೆ ಮೂರು ಹೆಸರುಗಳು)	ಅನ್ವಯವಾಗುವುದಿಲ್ಲ
14.	(ಎ) ಸೂಕ್ತ ದಾಖಲೆಗಳು ಮತ್ತು (ಬಿ) ಅಧಿಕೃತ ಪ್ರತಿನಿಧಿಗಳ ವಿವರಗಳು ಲಭ್ಯವಿರುವುದು:	(ಎ) ವೆಬ್‌ಲಿಂಕ್ : https://www.ibbi.gov.in/home/downloads (ಬಿ) ಅನ್ವಯವಾಗುವುದಿಲ್ಲ

ಮೆ|| ಲೋಕ್ತ್ರಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು 08ನೇ ಆಗಸ್ಟ್ 2024ರಂದು ಪ್ರಾರಂಭಿಸಲು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿ ಬೆಂಗಳೂರು ಪೀಠವು ಆದೇಶ ನೀಡಿದೆ.

ಮೆ|| ಲೋಕ್ತ್ರಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ನ ಎಲ್ಲ ಸಾಲದಾತರಿಗೆ 22/08/2024ರಂದು ಅಥವಾ ಮೊದಲು ತಮ್ಮ ಹಕ್ಕುಗಳನ್ನು ಪುರಾವೆಗಳೊಂದಿಗೆ ವಸ್ತು ಸಂಖ್ಯೆ 10ರಲ್ಲಿ ನೀಡಿರುವ ವಿಳಾಸಕ್ಕೆ ಸಲ್ಲಿಸಲು ಕರೆ ನೀಡಲಾಗಿದೆ.

ಹಣಕಾಸು ಸಾಲಗಾರರು ತಮ್ಮ ಹಕ್ಕುಗಳನ್ನು ಎಲೆಕ್ಟ್ರಾನಿಕ್ ವಿಧಾನದಿಂದ ಮಾತ್ರ ಪುರಾವೆಯೊಂದಿಗೆ ಸಲ್ಲಿಸಬೇಕು. ಉಳಿದೆಲ್ಲಾ ಸಾಲಗಾರರು ತಮ್ಮ ಕ್ಲೈಮುಗಳನ್ನು ಖುದ್ದಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ಮಾದರಿಯಲ್ಲಿ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ.

ಹಕ್ಕಿನ ಸುಳ್ಳು ಅಥವಾ ದಾರಿ ತಪ್ಪಿಸುವ ಪುರಾವೆಗಳನ್ನು ಸಲ್ಲಿಸಿದಲ್ಲಿ ದಂಡ ತೆರಬೇಕಾಗುವುದು.

ಶ್ರೀಮತಿ ಗರಿಮಾ ದಿಗ್ಗಿವಾಲ್
ಲೋಕ್ತ್ರಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಇದರ ಮಧ್ಯಂತ ವೃತ್ತಿಪರ ನಿರ್ಣಯದಾರರು
ಸ್ಥಳ: ಜೈಪುರ್ — ನೋಂ.ಸಂ. IBBI/IPA-001/IP-P-02018/2020-2021/13158
ದಿನಾಂಕ: 09.08.2024 — ಆಥರೈಸೇಶನ್ ಆಫ್ ಅಸೈನ್‌ಮೆಂಟ್ (ಎಎಫ್‌ಎ : AA1/13158/02/300625/107151

ಕಾರ್ಯಕರ್ತರ ಅಹವಾಲು ಆಲಿಸಿದ ಇಂಧನ ಸಚಿವ ಕೆ.ಜೆ.ಜಾರ್ಜ್

ಕೆಪಿಸಿಸಿ ಕಚೇರಿಯಲ್ಲಿ ನಡೆದ ಜನಸ್ಪಂದನ ಕಾರ್ಯಕ್ರಮ | ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ

ಬೆಂಗಳೂರು: ಟ್ರಾನ್ಸ್ ಫಾರ್ಮರ್ ಸಮಸ್ಯೆ, ಕುಸುಮ್ ಬಿ ಮತ್ತು ಕುಸುಮ್ ಸಿ ಅಡಿ ಅರ್ಜಿ ಸಲ್ಲಿಸುವುದು, ವಿದ್ಯುತ್ ಮಾರ್ಗಗಳ ಸ್ಥಳಾಂತರ, ಮಳೆಯಿಂದ ವಿದ್ಯುತ್ ಕಂಬ, ತಂತಿ ಮತ್ತು ಪರಿವರ್ತಕಗಳಿಗೆ ಹಾನಿಯಾಗಿ ವಿದ್ಯುತ್ ಪೂರೈಕೆಯಲ್ಲಿ ಆಗಿರುವ ವ್ಯತ್ಯಯ ಸೇರಿದಂತೆ ಹಲವು ಅಹವಾಲುಗಳನ್ನು ಇಂಧನ ಸಚಿವ ಕೆ.ಜೆ.ಜಾರ್ಜ್ ಮುಂದೆ ಕಾರ್ಯಕರ್ತರು ಮುಂದಿಟ್ಟಿರುವ ಘಟನೆ ನಡೆದಿದೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಜನಸ್ಪಂದನ ಕಾರ್ಯಕ್ರಮದ ಮೂಲಕ ಇಂಧನ ಇಲಾಖೆಗೆ ಸಂಬಂಧಿಸಿದ ಅಹವಾಲುಗಳನ್ನು ಆಲಿಸಿ, ಪರಿಹಾರ ಕ್ರಮಗಳ ಕುರಿತು ಭರವಸೆ ನೀಡಿದ ಇಂಧನ ಸಚಿವ ಕೆ.ಜೆ.ಜಾರ್ಜ್, ಕಾರ್ಯಕರ್ತರ ಅಹವಾಲಿಗೆ ತಕ್ಷಣ ಸ್ಪಂದಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಜನಸ್ಪಂದನ ಕಾರ್ಯಕ್ರಮದಲ್ಲಿ ಇಂಧನ ಇಲಾಖೆಗೆ ಸಂಬಂಧಿಸಿದ ಅಹವಾಲುಗಳನ್ನು ಸಚಿವ ಕೆ.ಜೆ. ಜಾರ್ಜ್ ಆಲಿದರು.

ಮಳೆಯಿಂದ ಹಾನಿಗೊಳಗಾಗಿರುವ ವಿದ್ಯುತ್ ಕಂಬ, ತಂತಿಗಳನ್ನು ಸರಿಪಡಿಸಿ ವಿದ್ಯುತ್ ಮರು ಸ್ಥಾಪಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ಟಿಸಿಗಳನ್ನು ತಕ್ಷಣವೇ ದುರಸ್ತಿಗೊಳಿಸಿ ವಿದ್ಯುತ್ ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಬಾರಿ ಭಾರೀ ಮಳೆಯಿಂದ ಸಮಸ್ಯೆ ಆಗಿದ್ದು, ಹೆಚ್ಚುವರಿ ಸಿಬ್ಬಂದಿ ನೇಮಿಸಿ ತಕ್ಷಣವೇ ಸರಿಪಡಿಸಲಾಗುತ್ತಿದೆ. ಇಲಾಖೆ ಸಿಬ್ಬಂದಿ ಹಗಲು- ರಾತ್ರಿ ಕೆಲಸ ಮಾಡುತ್ತಿದ್ದಾರೆ. ಇದರ ಮಧ್ಯೆಯೂ ಮಳೆ-ಗಾಳಿ ಮುಂದುವರಿದಿರುವುದರಿಂದ ಕೆಲವೆಡೆ ಇನ್ನೂ ಸಮಸ್ಯೆ ಮುಂದುವರಿದಿದೆ. ಸಮರೋಪಾದಿಯಲ್ಲಿ ಪರಿಹಾರ ಕಾರ್ಯ ಕೈಗೊಂಡು ತ್ವರಿತವಾಗಿ ದುರಸ್ತಿ ಕಾರ್ಯ ಕೈಗೊಂಡು ವಿದ್ಯುತ್ ಮರುಸ್ಥಾಪನೆ ಮಾಡಲಾಗುತ್ತಿದೆ ಎಂದು ಸಚಿವ ಕೆ.ಜೆ.ಜಾರ್ಜ್ ಹೇಳಿದರು.

> ಲೋಕಸಭಾ ಚುನಾವಣೆ ನೀತಿ ಸಂಹಿತೆ ಮುಗಿದ ಬಳಿಕ ಹಲವು ಜಿಲ್ಲೆಗಳಿಗೆ ಭೇಟಿ ನೀಡಿ, ಇಂಧನ ಇಲಾಖೆಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಸಭೆ ನಡೆಸಿದ್ದು, ಸಲಹೆ ಪಡೆದು ಕೆಲಸ ಮಾಡುವಂತೆ ನಿರ್ದೇಶನ ನೀಡಿದ್ದೇನೆ. ಅದರಂತೆ ಸಮರ್ಪಕ ವಿದ್ಯುತ್ ಪೂರೈಕೆಗೆ ರಾಜ್ಯಾದ್ಯಂತ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.
> – ಕೆ.ಜೆ.ಜಾರ್ಜ್ ಇಂಧನ ಸಚಿವ

ಫಲಾನುಭವಿಗಳಿಗೆ ಸೋಲಾರ್ ಪಂಪ್‌ಸೆಟ್

ಕುಸುಮ್ ಬಿ ಅಡಿ ಈಗಾಗಲೇ ಸ್ವೀಕರಿಸಿರುವ ಅರ್ಜಿಗಳ ಆಧಾರದ ಮೇಲೆ ಸಮೀಕ್ಷೆ ನಡೆಸಲಾಗುತ್ತಿದ್ದು, ಪ್ರಕ್ರಿಯೆ ಮುಗಿದ ಕೂಡಲೇ ಫಲಾನುಭವಿಗಳಿಗೆ ಸೋಲಾರ್ ಪಂಪ್ ಸೆಟ್ ಒದಗಿಸಲಾಗುವುದು. ಕುಸುಮ್ ಸಿ ವಿಚಾರದಲ್ಲಿ ಸೋಲಾರ್ ಪ್ಯಾನಲ್ ಅಳವಡಿಸಲು ಭೂಮಿ ಗುರುತಿಸಲಾಗುತ್ತಿದೆ. ಈ ಎರಡೂ ಯೋಜನೆಗಳ ಬಗ್ಗೆ ಸಾರ್ವಜನಿಕರಿಂದ ಇನ್ನಷ್ಟು ಸ್ಪಂದನೆ ಸಿಕ್ಕಿದರೆ ಭವಿಷ್ಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ, ಅದರಲ್ಲೂ ಮುಖ್ಯವಾಗಿ ಐಪಿ ಸೆಟ್‌ಗಳಿಗೆ ವಿದ್ಯುತ್ ಸಮಸ್ಯೆ ಎದುರಾಗುವುದಿಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ತಿಳಿಸಿದರು.

ಸಾರ್ವಜನಿಕ ಸೂಚನೆ

ಈ ಮೂಲಕ ಸೂಚನೆ ನೀಡುವುದೇನೆಂದರೆ, ಡಿಸ್ಟಿಂಕ್ಟಿವ್ ಸಂ. 12059011–12059110, 17673741–17673840 ಗೌರವ್ ಕುಮಾರ್ ಅಲಿಯಾಸ್ ಗೌರವ್ ಮಹೇಶ್ವರಿ ರವರ ಹೆಸರಿನಲ್ಲಿದ್ದು, ಮೆ|| ಟಾಟಾ ಎಲೆಕ್ಸಿ ಲಿ ನ ಬುಕ್ ನಲ್ಲಿದ್ದು, ಷೇರು ಪ್ರಮಾಣಪತ್ರ(ಗಳು) ಕಳೆದು ಹೋಗಿದ್ದು, / ತಪ್ಪಿಹೋಗಿದ್ದು/ ನಾಶವಾಗಿದ್ದು, ಸಲಹೆಗಾರರು ಕಂಪನಿಗೆ ನಕಲಿ ಷೇರು ಪ್ರಮಾಣಪತ್ರಗಳನ್ನು ನೀಡುವಂತೆ ಅರ್ಜಿ ಸಲ್ಲಿಸಿದ್ದು, ಕಂಪನಿಯು ನಕಲಿ ಪ್ರಮಾಣಪತ್ರಗಳನ್ನು ನೀಡಲು ಕ್ರಮಕೈಗೊಂಡಿದೆ. ಯಾವುದೇ ವ್ಯಕ್ತಿ ಹೇಳಲಾದ ಷೇರುಗಳ ಬಗ್ಗೆ ಕ್ಲೈಮುಗಳಿದ್ದಲ್ಲಿ, ಅಂತವರು ಕಂಪನಿಯ ರಿಜಿಸ್ಟ್ರಾರ್ಸ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ ಅಂದರೆ ಲಿಂಕ್ ಇನ್ ಟೈಮ್ ಇಂಡಿಯ ಪ್ರೈ. ಲಿ., ಸಿ 101, 247 ಪಾರ್ಕ್, ಎಲ್.ಬಿ.ಎಸ್. ಮಾರ್ಗ್, ವಿಕ್ರೋಲಿ (ಪಶ್ಚಿಮ), ಮುಂಬಯಿ, ಮಹಾರಾಷ್ಟ್ರ-400083 ಮತ್ತು ಕಂಪನಿಯ ರಿಜಿಸ್ಟರ್ಡ್ ವಿಳಾಸ ಐಟಿಪಿಬಿ ರಸ್ತೆ, ವೈಟ್‌ಫೀಲ್ಡ್, ಬೆಂಗಳೂರು, ಕರ್ನಾಟಕ-560048 ಇಲ್ಲಿಗೆ ಈ ನೋಟೀಸ್ ಪ್ರಕಟವಾದ 15 ದಿನಗಳ ಒಳಗಾಗಿ ಕಳುಹಿಸತಕ್ಕದ್ದು, ತಪ್ಪಿದಲ್ಲಿ ಕಂಪನಿಯು ಹೇಳಲಾದ ಎಲ್ಲಾ ಷೇರು ಪ್ರಮಾಣಪತ್ರ(ಗಳ)ಗಳಿಗೆ ನಕಲು ಪ್ರಮಾಣಪತ್ರಗಳನ್ನು ನೀಡಲು ಕ್ರಮಕೈಗೊಳ್ಳಲಿದೆ.

ಸ್ಥಳ: ಬೆಂಗಳೂರು — ಷೇರುದಾರರ ಹೆಸರು
ದಿನಾಂಕ: 09.08.2024 — ಗೌರವ್ ಮಹೇಶ್ವರಿ

IN THE COURT OF THE XI ADDITIONAL CITY CIVIL JUDGE, AT BENGALURU (CCH-8)
Ex. No.1332/2010 IN O.S.No.3695/2008

DECREE HOLDER : SMT. J.S. KAMALA
W/o Late M.C. Krishne Gwoda, Aged 60 years, residing at No.994, 'A' C Main Road, 3rd Stage, III Block, Basaveshwarnagar, Bengaluru-560 079

V/S

JUDGEMENT DEBTORS: SRI B.R. SRINIVAS
AND ANOTHER

NOTICE TO THE JUDGMENT DEBTORS:
1. SRI B.R. SRINIVASA, Son of Sri B.V. Ramu @ Ramaiah, Aged about 31 years,
2. SRI B.V. RAMU @ RAMAIAH, Son of Sri Venkatappa, Aged about 61 years, Both are residing at No.42, 3rd Cross, Pipeline Malleshwaram, Bengaluru-560 003.

WHEREAS, the above named Decree Holder in O.S.No.3695/2008 on the file of Additional City Civil Judge, City Civil Court [CCH-8], Bengaluru has instituted the above execution petition against the Judgment Debtors for execution of the decree passed in said suit on 08.01.2010 i.e., for execution and registration of the Sale Deed in respect of the Suit Schedule Property.

Therefore, you the Judgment Debtors are hereby warned to appear in person or through pleader duly instructed before the XI Addl. City Civil Judge, City Civil Court [CCH-8], Bengaluru **on 23.08.2024 at 11 A.M,** failing which the execution petition will be heard and determined ex-parte.

SCHEDULE

All the piece and parcel of the 50% of the share in the southern portion of the house property bearing House Property bearing No.42 [New Municipal No.199/25], situated at 3rd Cross Road, Pipeline, Malleswaram, Bengaluru-560 063, comprising a built up area of 4½ squares at the Ground, First and Second Floors, upon the site 4 of measurements East to West: 11 feet and North to South:13.6 feet, with basic amenities and bounded on:- **East by :** Common Passage, West by : Govinda Swamy's Property, **North by :** T.V. Govindappa's Property and **South by :** Road.

Given under my hand and seal and signature on this **08 day of August 2024 at Bengaluru.**

By Order of Court, Assistant Registrar
City Civil Court, Bangalore

Advocate for Decree Holder
J.S.DINESH, Advocate
No. 74, "Mathrushree" 12th E Main Road, 76th Cross, 6th Block, Rajajinagara, Bengaluru-560 010.

ಕರ್ಣಾಟಕ ಬ್ಯಾಂಕ್ ಲಿಮಿಟೆಡ್
(ನೋಂದಾಯಿತ ಹಾಗೂ ಕೇಂದ್ರ ಕಛೇರಿ: ಮಂಗಳೂರು-575002) — ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ

ಶಾಖೆ: ಇಂದಿರಾನಗರ
ನಂ. 490, ನೆಲ ಅಂತಸ್ತು
ಇಂದಿರಾನಗರ, ಸಿ.ಎಮ್.ಹೆಚ್. ರಸ್ತೆ
ಬೆಂಗಳೂರು-560038.

ದೂ: 080-22955856-857 ಮೊಬೈಲ್ ನಂ. 9449595410 / 8951970720
ಇ-ಮೇಲ್: blr.indiranagar@ktkbank.com
ವೆಬ್ ಸೈಟ್: www.karnatakabank.com
CIN: L85110KA1924PLC001128

ಲಾಕರ್ ಒಡೆದು ತೆರೆಯುವ ಸಾರ್ವಜನಿಕ ಸೂಚನೆ

ಲಾಕರ್ ಸೌಲಭ್ಯವನ್ನು ಪಡೆದಿರುವ ಈ ಕೆಳಗಿನ ವ್ಯಕ್ತಿಗಳು ನಮ್ಮ ಬೇಡಿಕೆಯ ಸೂಚನೆಯ ಹೊರತಾಗಿಯೂ 5 (ಐದು) ವರ್ಷಗಳಿಂದ ಲಾಕರ್ ಬಾಡಿಗೆಯನ್ನು ಬ್ಯಾಂಕಿಗೆ ಪಾವತಿಸಿಲ್ಲ. ಆದ್ದರಿಂದ ಲಾಕರ್ ಬಾಡಿಗೆಯನ್ನು **ದಿನಾಂಕ 17.08.2024 ರಂದು ಮಧ್ಯಾಹ್ನ 3.00 ಗಂಟೆಗೆ** ಅಥವಾ ಅದಕ್ಕೂ ಮೊದಲು ಪಾವತಿಸದಿದ್ದರೆ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕೆಳಗೆ ನಮೂದಿಸಿರುವ ಶಾಖೆಯ ಆವರಣದಲ್ಲಿ ಸೂಚಿಸಲಾದ ದಿನಾಂಕದಂದು **ಮಧ್ಯಾಹ್ನ 3.00 ಗಂಟೆಗೆ** ಲಾಕರ್ ಅನ್ನು ಒಡೆದು ತೆರೆಯಲು ಬ್ಯಾಂಕ್ ನಿರ್ಧರಿಸಿರುತ್ತದೆ ಎಂಬುದನ್ನು ಗಮನಿಸಿ.
ಬ್ಯಾಂಕ್ ಯಾವುದೇ ಸೂಚನೆಯಿಲ್ಲದೆ ಮತ್ತು ಅದಕ್ಕೆ ಯಾವುದೇ ಕಾರಣಗಳನ್ನು ನೀಡದೆಯೇ ಯಾವುದೇ ಅನುಕೂಲಕರ ದಿನಾಂಕಕ್ಕೆ ಮುಂದೂಡುವ / ರದ್ದುಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಕ್ರಮ ಸಂಖ್ಯೆ	ಲಾಕರ್ ಸಂಖ್ಯೆ	ಲಾಕರ್ ಪಡೆದ ದಿನಾಂಕ	ಲಾಕರ್ ಪಡೆದವರ ಹೆಸರು	ಲಾಕರ್ ಬಾಡಿಗೆಯ ಬಾಕಿ + ಜಿ.ಎಸ್.ಟಿ. ಮೊತ್ತವು ಸೇರಿ (ರೂ.ಗಳಲ್ಲಿ)	ಸ್ಥಳ ಮತ್ತು ಲಾಕರ್ ಒಡೆಯುವ ದಿನಾಂಕ ಮತ್ತು ಸಮಯ ಹಾಗೂ ಸಂಪರ್ಕಿಸಬೇಕಾದ ಸಂಖ್ಯೆ
01.	311	20.05.2008	ಶ್ರೀಮತಿ ಎನ್. ಕಾಮಾಕ್ಷಿ / ಶ್ರೀ ಕೃಷ್ಣಕಾಂತ್ ಟಿ.ಕೆ. ನಂ. 232, ಮೋಟಪ್ಪನ ಪಾಳ್ಯ, 10ನೇ ಮುಖ್ಯರಸ್ತೆ, ಹೆಚ್‌ಎಎಲ್ 2ನೇ ಸ್ಟೇಜ್, ಬೆಂಗಳೂರು-560038	ರೂ.31,176/-	ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ಶಾಖೆ: ಇಂದಿರಾನಗರ ನಂ. 490, ನೆಲ ಅಂತಸ್ತು ಇಂದಿರಾನಗರ, ಸಿ.ಎಮ್.ಹೆಚ್. ರಸ್ತೆ ಬೆಂಗಳೂರು-560038. ಲಾಕರ್ ಒಡೆಯುವ ದಿನಾಂಕ: 17.08.2024 ಮಧ್ಯಾಹ್ನ 3.00 ಗಂಟೆಗೆ ದೂ: 080-22955856-857 ಮೊಬೈಲ್ ನಂ. 9449595410 / 8951970720
02.	555	29.07.2011	ಶ್ರೀ ಸೆಲ್ಲೈನ್ ಜೋಸೆಫ್ / ಶ್ರೀ ಎಸ್. ಜೋಸೆಫ್ ನಂ. 61, ಮುನಿತಾಯಪ್ಪ ಲೇಔಟ್, ಡಾನ್ ಬಾಸ್ಕೊ ಚರ್ಚ್ ಹತ್ತಿರ, ಲಿಂಗರಾಜಪುರಂ, ಬೆಂಗಳೂರು-560084.	ರೂ.12,980/-	
03.	118	19.02.2009	ಶ್ರೀ ಸೈಯದ್ ಜ್ಞಾಹಿದ್ ಅಲಿ / ಶ್ರೀ ಇಮ್ರಾನ್ ಖಾನ್ ನಂ. 28/1, ರಾಬರ್ಟ್‌ಸನ್ ರಸ್ತೆ, ಫ್ರೇಜರ್ ಟೌನ್ ಬೆಂಗಳೂರು-560005.	ರೂ.16,780/-	
04.	469	11.05.2012	ಶ್ರೀಮತಿ ಎನ್. ಕಾಮಾಕ್ಷಿ ನಂ. 232, ಮೋಟಪ್ಪನಪಾಳ್ಯ, 10ನೇ ಮುಖ್ಯರಸ್ತೆ, ಹೆಚ್‌ಎಎಲ್ 2ನೇ ಸ್ಟೇಜ್, ಬೆಂಗಳೂರು-560038.	ರೂ.25,980/-	
05.	220	20.01.2005	ಶ್ರೀ ಕಾರ್ತಿಕೇಯನ್ ಸಿ.ಕೆ. / ವನಿತ ಕೆ. ನಂ. 2322, 1ನೇ ಅಡ್ಡರಸ್ತೆ, ಬಿಡಿಎ ಲೇಔಟ್, ಹೆಚ್‌ಎಎಲ್ 3ನೇ ಸ್ಟೇಜ್, ಬೆಂಗಳೂರು-560017.	ರೂ.10,368/-	
06.	438	20.04.2008	ಶ್ರೀ ಶ್ರೀಧರ್ ಬಿ ರುದ್ರಪ್ಪ ನಂ. 244, 6ನೇ ಅಡ್ಡರಸ್ತೆ, ಇಂದಿರಾನಗರ 1ನೇ ಸ್ಟೇಜ್, ಬೆಂಗಳೂರು-560038.	ರೂ.6,480/-	
07.	142	02.05.1999	ಶ್ರೀ ಸಿ. ರವಿಚಂದ್ರನ್ / ವನಿತ ಕುಟಿನ್ಹ ನಂ. 639/1, 5ನೇ ಮುಖ್ಯರಸ್ತೆ, 2ನೇ ಸ್ಟೇಜ್, ಬೆಂಗಳೂರು-560038.	ರೂ.25,960/-	
08.	543	05.05.2017	ಶ್ರೀ ಚಾರ್ಲೆಟ್ಟೆ ಜಯ ಎಸ್. ಮತ್ತು ಗೇಬ್ರಿಯಲ್ ಎಸ್. ನಂ. 14, ಹೆಚ್‌ಐಎಸ್ ಗ್ರೇಸ್, ಬ್ಯಾಂಕ್ ಅವೆನ್ಯೂ, ಬಾಬುಸಾಪಾಳ್ಯ, ಕಲ್ಯಾಣನಗರ, ಬೆಂಗಳೂರು-560038.	ರೂ.15,576/-	
09.	18	18.12.1998	ಶ್ರೀ ವಾಸುದೇವ ರೆಡ್ಡಿ ಸಿ.ಹೆಚ್. / ಶ್ರೀಮತಿ ಮಹಾತಿ ಸಿ.ಹೆಚ್. ನಂ. 19, ಮೇಲಿನ ಮಹಡಿ, ಭುವನೇಶ್ವರಿನಗರ, ಸಿವಿಆರ್ ನಗರ, ಬೆಂಗಳೂರು-560093.	ರೂ.12,980/-	
10.	92	09.12.1997	ಶ್ರೀಮತಿ ಹೇಮಲತ ನಂ. 228, 1ನೇ 'ಸಿ' ಅಡ್ಡರಸ್ತೆ, 18ನೇ ಮುಖ್ಯರಸ್ತೆ, ಹೆಚ್‌ಎಎಲ್ 2ನೇ ಸ್ಟೇಜ್, ಬೆಂಗಳೂರು-560093.	ರೂ.12,980/-	
11.	355	16.08.2005	ಶ್ರೀ ಕೆ. ಸುಂದರಂ, ಪದ್ಮ ಸುಂದರಂ ಮತ್ತು ಪ್ರೇಮ್ ಸುಂದರಮ್, 7 ಲ್ಯಾಬ್ ನಂ. 102, ಕ್ಯಾಲಿಬರ್ ರೆಸಿಡೆನ್ಸಿ, 2ನೇ ಅಡ್ಡರಸ್ತೆ, ಹೊಸ ತಿಪ್ಪಸಂದ್ರ ಬೆಂಗಳೂರು-560075.	ರೂ.20,768/-	
12.	505	01.07.2011	ಶ್ರೀ ಸುಬ್ರಮಣಿ ಕೆ.ಎನ್. ನಂ. 401, ಕ್ಯಾಲಸನಹಳ್ಳಿ ಕೊತನಮ್ ಪೋಸ್ಟ್ ಬೆಂಗಳೂರು-560077.	ರೂ.12,980/-	
13.	618	01.07.2011	ಶ್ರೀಮತಿ ಹೇಮ ರೆಡ್ಡಿ ಇಂದಿರಾನಗರ 2ನೇ ಸ್ಟೇಜ್ ಬೆಂಗಳೂರು-560038.	ರೂ.12,980/-	
14.	328	01.07.2017	ಶ್ರೀಮತಿ ಕಲಾವತಿ ಇಂದಿರಾನಗರ 3ನೇ ಸ್ಟೇಜ್ ಬೆಂಗಳೂರು-560038.	ರೂ.12,980/-	
15.	679	01.07.2018	ಶ್ರೀ ಲಿಂಗಾರೆಡ್ಡಿ ಮನೆ ನಂ. 305, ಇಂದಿರಾನಗರ 3ನೇ ಸ್ಟೇಜ್ ಬೆಂಗಳೂರು-560038.	ರೂ.12,980/-	

ದಿನಾಂಕ: 09.08.2024
ಸ್ಥಳ: ಬೆಂಗಳೂರು
ಸಹಿ/- ಹಿರಿಯ ಶಾಖಾ ವ್ಯವಸ್ಥಾಪಕರು, ಕರ್ಣಾಟಕ ಬ್ಯಾಂಕ್ ಲಿಮಿಟೆಡ್
ಇಂದಿರಾನಗರ ಶಾಖೆ, ಬೆಂಗಳೂರು

A Strong Foundation lays the road for a Brighter Future

Aadhar Housing Finance Ltd
GHAR BANEGA, TOH DESH BANEGA.

- AUM - ₹ 21,726 Cr.
- NET PROFIT AFTER TAX (Q1 FY 25) - ₹ 200 Cr.
- LIVE ACCOUNTS - 274,000+
- PRESENCE ACROSS - 547 Branches & Offices 21 States & UTs

Toll Free - 1800 3004 2020 | www.aadharhousing.com

CONSOLIDATED STATEMENT OF FINANCIAL RESULTS FOR THE QUARTER ENDED JUNE 30, 2024

(Rs. in Lakh)

Sr. No.	PARTICULARS	For the quarter ended June 30, 2024	For the quarter ended June 30, 2023	For the year ended March 31, 2024
		Unaudited	Unaudited	Audited
1	Total Revenue from Operations	71,314	59,342	2,58,681
2	Net Profit / (Loss) for the period (before Tax, Exceptional and/or Extraordinary items)	25,724	18,740	95,959
3	Net Profit / (Loss) for the period before tax (after Exceptional and/or Extraordinary items)	25,724	18,740	95,959
4	Net Profit / (Loss) for the period after tax (after Exceptional and/or Extraordinary items)	20,014	14,631	74,964
5	Total Comprehensive Income for the period [Comprising Profit/ (Loss) for the period (after tax) and Other Comprehensive Income (after tax)]	20,014	14,517	75,006
6	Paid up Equity Share Capital	42,652	39,476	39,476
7	Reserves (excluding Revaluation Reserve)	5,20,656	3,44,905	4,05,499
8	Securities Premium Account	2,28,551	1,33,700	1,33,700
9	Net worth	5,63,302	3,84,375	4,44,969
10	Paid up Debt Capital/ Outstanding Debt	14,01,907	12,27,208	13,95,962
11	Outstanding Redeemable Preference Shares	NA	NA	NA
12	Debt Equity Ratio	2.49	3.19	3.14
13	Earnings Per Share (not annualised for three months ended periods)			
	1. Basic:	4.86	3.71	18.99
	2. Diluted:	4.66	3.60	18.35
14	Capital Redemption Reserve	NA	NA	NA
15	Debenture Redemption Reserve	16,910	16,910	16,910
16	Debt Service Coverage Ratio	1.24	0.75	0.89
17	Interest Service Coverage Ratio	1.93	1.80	1.97
18	Total Debts to Total Assets (%)	70.18%	74.64%	73.64%
19	Net profit Margin (%)	28.06%	24.66%	28.98%
20	GNPA (%)	1.36%	1.49%	1.10%
21	NNPA (%)	0.87%	1.00%	0.65%
22	Provision Coverage Ratio (%)	36.13%	33.26%	41.27%
23	Capital Adequacy Ratio (CRAR) (%)	48.89%	42.26%	38.46%

Notes:

a) The above is an extract of the detailed format of quarterly results filed with the Stock Exchanges under Regulation 33 and 52 of the Listing Regulations. The full format of the quarterly financial results are available on the websites of the Stock Exchanges www.bseindia.com and www.nseindia.com and the Aadhar Housing Finance Limited www.aadharhousing.com

b) For the other line items referred in regulation 52 (4) of the Listing Regulations, pertinent disclosures have been made to the Stock Exchange BSE Limited and can be accessed on www.bseindia.com

c) Current ratio, Long term debt to working capital ratio, Bad debts to account receivable ratio, Current liability ratio, Debtors turnover, Inventory turnover and Operating margin (%) are not applicable.

d) Key standalone financial information :

Sr. No.	PARTICULARS	For the quarter ended June 30, 2024	For the quarter ended June 30, 2023	For the year ended March 31, 2024
1	Total Revenue from Operations	69,678	57,801	2,52,353
2	Profit before tax & exceptional items	25,722	18,736	95,923
3	Profit before tax	25,722	18,736	95,923
4	Profit after tax	20,008	14,628	74,851

e) Previous period / year figures have been regrouped / re-classified wherever necessary in line with the financial results for the quarter ended June 30, 2024.

For and on behalf of the Board of Directors of
Aadhar Housing Finance Limited

Sd/-
Rishi Anand
Managing Director & CEO
DIN 02303503

Place : Mumbai
Date : August 07, 2024

Aadhar Housing Finance Ltd., CIN: L66010KA1990PLC011409, **Registered Office:** No. 3, JVT Towers, 8th 'A' Main Road, Sampangiramanagar, Near Hudson Circle, Bengaluru- 560 027 | **Corporate Office:** Unit No. 802, Natraj Rustomjee, Western Express Highway and M.V.Road, Andheri (East), Mumbai – 400069 | Tel. No.: 022 4168 9900 | Fax: 022 4168 9934 | **Customer Care Toll Free:** 1800 3004 2020 | **E-mail:** customercare@aadharhousing.com | **Website:** www.aadharhousing.com

ದಿನ ದರ್ಶಿಕೆ

1946 ಕ್ರೋಧಿನಾಮ ಸಂವತ್ಸರ, ಶ್ರಾವಣ ಮಾಸ, ಶುಕ್ರವಾರ, ಶುಕ್ಲ ಪಕ್ಷ, ಪಂಚಮಿ ತಿಥಿ, ಹಸ್ತಾ ನಕ್ಷತ್ರ, ಸಿದ್ಧ ಯೋಗ, ಭವ ಕರಣ, ಸೂರ್ಯ ರಾಶಿ ಕರ್ಕ, ಚಂದ್ರ ರಾಶಿ ಕನ್ಯಾ

ಮನೆಮದ್ದು

ಕೊತ್ತಂಬರಿ ಬೀಜ ಥೈರಾಯ್ಡ್ ಸಮಸ್ಯೆಗೆ ಪರಿಣಾಮಕಾರಿ. ಒಂದು ಲೋಟ ನೀರಿಗೆ, 1 ಚಮಚ ಕೊತ್ತಂಬರಿ ಬೀಜ ಹಾಕಿ ರಾತ್ರಿಯಿಡೀ ನೆನೆಸಿಡಿ. ಬೆಳಿಗ್ಗೆ ಅದನ್ನು ಚೆನ್ನಾಗಿ ಕುದಿಸಿ. ಅರ್ಧ ಲೋಟಕ್ಕೆ ಇಳಿದ ಮೇಲೆ ಸೋಸಿ ಕುಡಿಯಿರಿ. ಇದರಿಂದ ಜೀರ್ಣಶಕ್ತಿ ಸಹ ವೃದ್ಧಿಸುತ್ತದೆ.



ಸೌಂದರ್ಯ ಸೂತ್ರ

ಬಿಸಿಲಿನಲ್ಲಿ ಓಡಾಡಿ ಮುಖದಲ್ಲಿ ಬೆವರು, ದೂಳು ಅಂಟಿಕೊಂಡಿದ್ದರೆ ಜೇನನ್ನು ಬಳಸಿ ಮುಖ ತೊಳೆಯಿರಿ. ಇದರಿಂದ ಚರ್ಮದ ಸೂಕ್ಷ್ಮ ರಂಧ್ರಗಳ ಒಳಗೆ ಹಿಡಿದಿಟ್ಟುಕೊಂಡಿರುವ ಕೊಳೆ ಹೊರಟು ಹೋಗುತ್ತದೆ. ಹಾಗೆಯೇ ತ್ವಚೆಯನ್ನು ಮೃದುವಾಗಿಸುತ್ತದೆ

ದಿನ ಭವಿಷ್ಯ

ಮೇಷ ಇಂದಿನದು ಲಾಭಕರ ದಿನ ಮತ್ತು ನೀವು ದೀರ್ಘ ಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು.

ವೃಷಭ ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ. ಸಂಗಾತಿಯನ್ನು ಸಂತೈಸಲು ಪ್ರಯತ್ನ ಪಡಿ. ಅದು ನಿಮ್ಮದಿನವನ್ನು ಉಲ್ಲಸಿತವಾಗಿರಿಸುತ್ತೆ.

ಮಿಥುನ ಇಂದಿನ ದಿನ ಶಕ್ತಿಯುಕ್ತರಾಗಿರುತ್ತೀರಿ. ಅದನ್ನು ಬಾಕಿಯಿರುವ ಕೆಲಸಗಳನ್ನು ಪೂರ್ಣಗೊಳಿಸಲು ಬಳಸಿರಿ. ಮನೆಯಲ್ಲಿ ಖುಷಿಯ ವಾತಾವರಣ ಇರುತ್ತದೆ.

ಕಟಕ ಯಾವುದೇ ಔಷಧ ತೆಗೆದುಕೊಳ್ಳುವ ಮೊದಲು ವೈದ್ಯರ ಸಲಹೆ ಪಡೆಯಿರಿ. ಇಲ್ಲದಿದ್ದಲ್ಲಿ ಔಷಧ ಅವಲಂಬನೆಯ ಸಾಧ್ಯತೆ ಅಧಿಕವಾಗಿದೆ.

ಸಿಂಹ ನಿಮ್ಮ ದೊಡ್ಡ ಆಸ್ತಿಯೆಂದರೆ ನಿಮ್ಮ ಹಾಸ್ಯ ಪ್ರಜ್ಞೆಯಾಗಿದೆ ಇದನ್ನು ನಿಮ್ಮ ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ.

ಕನ್ಯಾ ನಿಮ್ಮ ದಯಾಳು ಪ್ರಕೃತಿ ಇಂದು ಅನೇಕ ಸಂತೋಷದ ಕ್ಷಣಗಳನ್ನು ತರುತ್ತದೆ. ಆಸ್ತಿ ವ್ಯವಹಾರಗಳು ಅಸಾಧಾರಣ ಲಾಭ ತರುತ್ತವೆ.

ತುಲಾ ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಹೆಚ್ಚುವರಿ ಹಣ ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಿ.

ವೃಶ್ಚಿಕ ನಿಮ್ಮ ಶಕ್ತಿಯನ್ನು ಮರಳಿ ಪಡೆಯಲು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಿ. ಇದು ಇಚ್ಛಾಶಕ್ತಿಯ ಕೊರತೆಯಿದೆಯೆಂದು ಅರ್ಥಮಾಡಿಸುತ್ತೆ.

ಧನು ನಿಮ್ಮ ನಗು ಖಿನ್ನತೆಯ ವಿರುದ್ಧ ಕೆಲಸ ಮಾಡುತ್ತದೆ. ಸಾಲವನ್ನು ಪಡೆವ ಸ್ನೇಹಿತರ ಕೈಗೆ ಸಿಗದಿರಿ, ಅಥವಾ ಸಾಲವನ್ನು ಕೊಡದಿರಿ.

ಮಕರ ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ.

ಕುಂಭ ಒಬ್ಬ ಸ್ನೇಹಿತ ನಿಮ್ಮ ಮುಕ್ತ ಮನಸ್ಸು ಮತ್ತು ಸಹಿಷ್ಣುತೆಯ ಪರಮಾವಧಿಯನ್ನು ಪರೀಕ್ಷಿಸಬಹುದು. ನೀವು ನಿಮ್ಮ ಮೌಲ್ಯಗಳೊಂದಿಗೆ ರಾಜಿಯಾಗದಿರಿ.

ಮೀನ ಇಂದು ನೀವು ಹಲವಾರು ಒತ್ತಡಗಳು ಮತ್ತು ಭಿನ್ನಾಭಿಪ್ರಾಯಗಳನ್ನು ಎದುರಿಸಬೇಕಾಗಬಹುದು. ಕಿರಿಕಿರಿ ಕೂಡಾ ಉಂಟು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ಜ್ಞಾನಪೀಠ ಪುರಸ್ಕೃತ ವಿನಾಯಕ ಕೃಷ್ಣ ಗೋಕಾಕ ಅವರ ಜನ್ಮದಿನ
- 1942: ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದಕ್ಕೆ ಮಹಾತ್ಮ ಗಾಂಧಿ ಮತ್ತು ಹಲವಾರು ಸ್ವಾತಂತ್ರ್ಯ ಹೋರಾಟಗಾರರು ಬಂಧನಕ್ಕೊಳಗಾದರು.
- ಖ್ಯಾತ ತೆಲುಗು ಚಿತ್ರನಟ ಮಹೇಶ್ ಬಾಬು ಜನ್ಮದಿನ

ಚಿತ್ರಸ್ಫೂರ್ತಿ

ಇದು ಚಿಲಿಯಲ್ಲಿ ಅಕ್ರಮ ವಲಸೆಯ ವಿರುದ್ಧ ನಡೆದ ಹೋರಾಟದಲ್ಲಿ ರೋಡನ್ನು ಅಡ್ಡಗಟ್ಟಿ ಕುಳಿತಿರುವ ಹೋರಾಟಗಾರ !

ಚಿತ್ರ ಕೃಪೆ: ಡೀಗೋ ರಿಯೀಸ್

ಭಾರತದ ಆಧ್ಯಾತ್ಮಿಕ ಶಕ್ತಿ

ಇಡೀ ಪ್ರಪಂಚವನ್ನೇ ಗೆಲ್ಲಬೇಕೆಂಬ ಉದ್ದೇಶದಿಂದ, ಅಲೆಕ್ಸಾಂಡರ್ ತನ್ನ ಅಪಾರವಾದ ಸೈನ್ಯದೊಂದಿಗೆ ಹೊರಟ. ಎಷ್ಟೋ ದೇಶಗಳು ಇವನಿಗೆ ಶರಣಾದವು, ಇದರಿಂದ ಬರುಬರುತ್ತಾ ಇವನಿಗೆ ಅಹಂಕಾರ ಹೆಚ್ಚಾಗುತ್ತಾ ಹೋಯಿತು.

ಈ ಬಾರಿ ಭಾರತದ ಮೇಲೆ ದಾಳಿ ಮಾಡಬೇಕೆಂದುಕೊಂಡು ಹೊರಟ. ಹೊರಡುವಾಗ ಒಮ್ಮೆ ತನ್ನ ಗುರು ಅರಿಸ್ಟಾಟಲ್‌ನನ್ನು ಭೇಟಿಯಾಗಲು ಬಂದ. ಅರಿಸ್ಟಾಟಲ್ ಮಹಾಜ್ಞಾನಿ, ಅವನಿಗೆ ಭಾರತದ ಆಧ್ಯಾತ್ಮಿಕ ಶಕ್ತಿಯ ಪರಿಚಯವಿತ್ತು. ಅಲೆಕ್ಸಾಂಡರ್, ಅರಿಸ್ಟಾಟಲ್‌ಗೆ ನಾನು ಭಾರತದ ಮೇಲೆ ದಾಳಿ ಮಾಡಲು ಹೋಗುತ್ತಿದ್ದೇನೆ, ಬರುವಾಗ ನಿಮಗೆ ಅಲ್ಲಿಂದ ಏನನ್ನು ತರಲಿ? ಎಂದು ಕೇಳಿದ.

ಆಗ ಅರಿಸ್ಟಾಟಲ್ ನಗುತ್ತಾ, ಭಾರತವನ್ನು ಗೆಲ್ಲಬೇಕೆಂಬ ಆಸೆ ನಿನಗೇಕೆ? ಆ ದೇಶವನ್ನು ಗೆಲ್ಲುವುದು ಅಷ್ಟು ಸುಲಭವಲ್ಲ. ನೀನು ಕೆಲವು ರಾಜರುಗಳನ್ನು ಗೆಲ್ಲಬಹುದು, ಒಂದಿಷ್ಟು ಸಂಪತ್ತನ್ನೂ ಪಡೆಯಬಹುದು. ಆದರೆ ಅದ್ಯಾವುದೂ ಭಾರತವಲ್ಲ. ಭಾರತದ ನಿಜವಾದ ಶಕ್ತಿ ಇರುವುದು ಆಧ್ಯಾತ್ಮದಲ್ಲಿ, ನಿನಗೆ ಸಾಧ್ಯವಾದರೆ ಭಾರತದಿಂದ ಒಬ್ಬ ಋಷಿಯನ್ನೋ ಅಥವಾ ಒಬ್ಬ ಸಾಧಕರನ್ನೋ ಕರೆದು ತಾ ಅದರಿಂದ ಎಲ್ಲರಿಗೂ ಪ್ರಯೋಜನವಿದೆ ಎಂದು ಹೇಳಿದ.

ಅಲೆಕ್ಸಾಂಡರ್ ಅವನಿಂದ ಬೀಳ್ಕೊಟ್ಟು ಅಲ್ಲಿಂದ ಹೊರಟು, ತನ್ನ ಯುದ್ಧ ಯಾತ್ರೆಯನ್ನು ಆರಂಭಿಸಿದ. ತನ್ನ ಕಡೆಯವರಿಗೆ ತನ್ನ ಗುರು ಹೇಳಿದ ದಾರ್ಶನಿಕರನ್ನು ಹುಡುಕಲು ಹೇಳಿದ. ಒಂದು ದಿನ ಅವನ ಕಡೆಯವರು ಬಂದು, ಊರ ಹೊರಗಿನ ಆಶ್ರಮದಲ್ಲಿ, ನಿಮ್ಮ ಗುರುಗಳು ಹೇಳಿದಂತ ವ್ಯಕ್ತಿಯೊಬ್ಬರು ಇರುವುದಾಗಿ ಹೇಳಿದರು. ಆಗ ಅಲೆಕ್ಸಾಂಡರ್, ಆ ವ್ಯಕ್ತಿಗೆ ಏನು ಬೇಕೋ ಅದೆಲ್ಲವನ್ನು ಕೊಟ್ಟುಬಿಡಿ, ನನ್ನ ಅಪ್ಪಣೆಯ ಅವಶ್ಯಕತೆ ಇಲ್ಲ, ಎಷ್ಟೇ ಸಂಪತ್ತು ಖರ್ಚಾದರೂ ಚಿಂತೆ ಇಲ್ಲ ಅವರನ್ನು ಇಲ್ಲಿಂದ ನಮ್ಮಲ್ಲಿಗೆ ಕರೆದುಕೊಂಡು ಹೋಗೋಣ ಎಂದು ಹೇಳಿದ.

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಒಂದು ವಾರದ ನಂತರ, ಅಲೆಕ್ಸಾಂಡರ್‌ನ ಮಂತ್ರಿ ಬಂದು, ನಾವು ಎಷ್ಟೇ ಪ್ರಯತ್ನಿಸಿದರೂ, ಆ ಸನ್ಯಾಸಿ ನಮ್ಮ ಯಾವ ಮಾತಿಗೂ ಒಪ್ಪುತ್ತಿಲ್ಲವೆಂದು ತಿಳಿಸಿದ . ಅಲೆಕ್ಸಾಂಡರ್‌ನಿಗೆ ಈಗ ಕೋಪ ಬಂತು ತಾನೇ ಅವರಿದ್ದ ಆಶ್ರಮದ ಕಡೆಗೆ ಬಂದ.

ಒಂದು ಮರದ ಬುಡದಲ್ಲಿ ಆ ಸನ್ಯಾಸಿ, ಧ್ಯಾನಕ್ಕೆ ಕುಳಿತಿದ್ದರು. ಆಗಷ್ಟೇ ಸೂರ್ಯೋದಯವಾಗುತ್ತಿತ್ತು. ಸನ್ಯಾಸಿ ಸೂರ್ಯನಿಗೆ ಮುಖ ಮಾಡಿ ಕುಳಿತಿದ್ದರು. ಅವರ ಮುಖದ ಅಪೂರ್ವವಾದ ಕಾಂತಿ, ತೇಜಸ್ಸು, ಅಲೆಕ್ಸಾಂಡರ್‌ನನ್ನು ತಲೆತಗ್ಗಿಸುವಂತೆ ಮಾಡಿತು. ಆತ ನಿಧಾನವಾಗಿ ಮಹಾತ್ಮರೆ ತಾವು ದಯಮಾಡಿ ನನ್ನೊಡನೆ ನನ್ನ ದೇಶಕ್ಕೆ ಬರಬೇಕು. ತಮ್ಮ ದಿವ್ಯ ಚಿಂತನೆಯ ಬೆಳಕನ್ನು ನಮ್ಮ ಜನರಿಗೂ ನೀಡಬೇಕು ಎಂದು ದೈನ್ಯದಿಂದ ಕೇಳಿಕೊಂಡ.

ನಿಮ್ಮ ಆಮಂತ್ರಣಕ್ಕೆ ಧನ್ಯವಾದಗಳು, ಆದರೆ ನಾನು ಈ ಪುಣ್ಯಭೂಮಿಯನ್ನು ಬಿಟ್ಟು ಎಲ್ಲಿಗೂ ಬರಲಾರೆ ಎಂದರು ಸನ್ಯಾಸಿ. ಈಗ ಚಕ್ರವರ್ತಿಗೂ ಕೋಪ ಉಕ್ಕಿ ಬಂದಿತು, ನೀವು ಯಾರೊಂದಿಗೆ ಮಾತನಾಡುತ್ತಿದ್ದೀರಿ ಎಂಬ ಎಚ್ಚರ ನಿಮಗಿದೆಯೇ? ನಾನು ಸಾಮ್ರಾಟ್ ಅಲೆಕ್ಸಾಂಡರ್ ಎಂದ.

ಆಗ ಸನ್ಯಾಸಿ ಅಯ್ಯೋ ಮಗೂ ನನ್ನನ್ಯಾಕೆ ಹೆದರಿಸಲು ನೋಡುತ್ತೀಯಾ? ನೀನು ಹೆಚ್ಚೆಂದರೆ ಏನು ತಾನೆ ಮಾಡಬಹುದು? ಈ ದೇಹವನ್ನು ನಾಶ ಮಾಡಬಹುದು! ಅದು ಬಂದಿರುವುದೇ ನಾಶವಾಗಲು. ಆದರೆ ಒಳಗಿನ ಆತ್ಮವನ್ನು ನಿನ್ನಿಂದ ಮುಟ್ಟಲೂ ಸಾಧ್ಯವಿಲ್ಲ, ನಿನ್ನ ಕೆಲಸ ನೋಡಿಕೊಂಡು ಮೊದಲು ಇಲ್ಲಿಂದ ಹೊರಡು, ಆಶ್ರಮದ ಶಾಂತಿಗೆ ಭಂಗ ತರ ಬೇಡ ಎಂದರು .

ಅಲೆಕ್ಸಾಂಡರ್ ಸಪ್ಪಗಾದ ತಾನು ಐಹಿಕ ಭೋಗದ ವಸ್ತುಗಳನ್ನು ಗೆಲ್ಲಬಹುದು, ಆದರೆ ಆಧ್ಯಾತ್ಮಿಕ ಸತ್ಯವನ್ನು ಅರಿಯುವುದು ಸಾಧ್ಯವಿಲ್ಲವೆಂದು ಅವನಿಗೆ ಅರ್ಥವಾಯಿತು.

ಭಾರತೀಯರಾಗಿ ನಮ್ಮ ಸನಾತನ ಧರ್ಮ, ಆಧ್ಯಾತ್ಮಿಕ ಹಿನ್ನೆಲೆಯ ಬಗ್ಗೆ ನಾವು ಹೆಮ್ಮೆ ಪಡಬೇಕು. ಸಾವಿರಾರು ವರ್ಷಗಳ ನಮ್ಮ ಇತಿಹಾಸ, ಸಂಸ್ಕೃತಿ ನಮ್ಮೊಳಗೆ ಗಟ್ಟಿಯಾಗಿ ಬೇರೂರಿದಷ್ಟೂ ನಾವು ವಿಶ್ವದ ಯಾವುದೇ ಮೂಲೆಯಲ್ಲಿದ್ದರೂ ನಮ್ಮ ಅಸ್ತಿತ್ವವನ್ನು ಕಂಡುಕೊಳ್ಳಬಹುದು.

ಪ ದ ಬಂ ಧ



ಎಡದಿಂದಬಲಕ್ಕೆ

1. ಪಂಡಿತನಲ್ಲ, ತಿಳಿವಳಿಕೆ ಇಲ್ಲದವನು (3)
3. ಯಮನಿಗೆ ಮತ್ತೊಂದು ಹೆಸರು (3)
6. ನಿಯಮ ಅಥವಾ ರೀತಿ (3)
7. ಕುದುರೆಗೆ ಪರ್ಯಾಯ ಪದ (3)
9. ಮಂತ್ರಿಯ ಪದವಿಗೆ ಹೀಗೆನ್ನಬಹುದು (5)
12. ಸುತ್ತುವುದು ಎಂದರ್ಥ (5)
15. ಹಳೆಯ ಕಾಲದ ಸಿಡುಬುರೋಗ (3)
16. ಮನೆಯ ಮೇಲಿನ ಮಹಡಿ (3)
17. ಹರಿತವಾದ ಅಥವಾ ತೀಕ್ಷ್ಣವಾದ ಎಂದರ್ಥ (3)
18. ಸಂಪಿಗೆ ಹೂವು (3)

ಮೇಲಿನಿಂದಕೆಳಕ್ಕೆ

2. ದೊಡ್ಡದಾದ ಹೊಳೆ (4)
4. ಅವಸರಕ್ಕೆ ಮತ್ತೊಂದು ಹೆಸರು (4)
5. ಒಳ್ಳೆಯ ಮನೆತನದ (3)
6. ಅಸಂಬದ್ಧವಾದ ಚರ್ಚೆಗೆ ಹೀಗೆನ್ನಬಹುದು (5)
8. ಬೀಸಣಿಗೆಯಲ್ಲ, ಮುಸುಕು (5)
10. ಅಸ್ತವ್ಯಸ್ತವಾಗಿ ಬಂದಿರುವ ಸಮುದ್ರ (3)
11. ಆರಂಭದಲ್ಲಿ ಹ್ರಸ್ವವಾದ ಬೇಡಿತಿ ಇಲ್ಲಿ ತಲೆಕೆಳಗಾಗಿದ್ದಾಳೆ (3)
12. ದಿಕ್ಕಿಲ್ಲದವನು ಅಥವಾ ಹೊರದೇಶದವನು (4)
13. ಹೆಣ್ಣು ತುಂಬಿಗೆ ಹೀಗೆನ್ನುವರು (3)
14. ಪ್ರಮಾಣ ಅಥವಾ ಅಳತೆ ತಲೆಕೆಳಗಾಗಿದೆ (4)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ

1. ವಕಾಲತ್ತು 3. ಬಹುಮಾನ 5. ಹಣವಂತ 7. ಖಾನಾವಳಿ 8. ಮಧುರ 11. ಆಣತಿ 13. ತಿರುಗಣೆ 15. ಲಟಾಪಟಿ 17. ದನಗಾಹಿ 18. ಪಾರಂಗತ

ಮೇಲಿನಿಂದ ಕೆಳಕ್ಕೆ

2. ಕಾರಣ 4. ಮಾನವ 5. ಹಗೇವು 6 ತಮ 7. ಖಾರ 9. ಧುರೀಣ 10. ಗೋರಂಟಿ 11. ಆಣೆ 12. ತಿಲ 14. ರುಜಿನ 16. ಪನ್ನಗ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಅತಿದೊಡ್ಡ ಗೋಡಂಬಿ ಮರ

ಮೇಜರ್ ಕಜ್ಯುರೊ ಡು ಮುಂಡೊ ಅಂದರೆ ವಿಶ್ವದ ಅತಿ ದೊಡ್ಡ ಗೋಡಂಬಿ ಮರ, ಇದನ್ನು ಕಜ್ಯುರೊ ಡೆ ಪಿರಂಗಿ ಅಂದರೆ ಪಿರಂಗಿಯ ಗೋಡಂಬಿ ಮರ ಎಂತಲೂ ಕರೆಯು.ತ್ತಾರೆ. ಬ್ರೆಜಿಲ್ ದೇಶದ ರಿಯೋ ಗ್ರಾಂಡೆ ಡು ನಾರ್ಟೆ ರಾಜ್ಯದ ಪಿರಂಗಿ ಡು ನಾರ್ಟೆ ಜಿಲ್ಲೆಯ ಪರ್ನಾಮಿರಿನ್ ಸಿಟಿಯಲ್ಲಿ ಈ ಮರವನ್ನು ಕಾಣ ಬಹುದು. ಇದು ಅಂದಾಜು 8000 ಚದರ ಮೀಟರ್‌ಗಳಷ್ಟು ವಿಸ್ತಾರ ವಾಗಿದ್ದು, 500 ಮೀಟರ್‌ಗಳಷ್ಟು ಸುತ್ತಳತೆಯನ್ನು ಹೊಂದಿದೆ. 1994ನೇ ಇಸವಿಯಲ್ಲಿ ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ರವರು ಈ ಗೋಡಂಬಿ ಮರಕ್ಕಾಗಿಯೇ ವಿಶೇಷ ವಿಭಾಗವನ್ನು ತೆರೆದು ಅದರಲ್ಲಿ ದಾಖಲಿಸಿದ್ದಾರೆ.

ಪುಸ್ತಕ ಲೋಕ



ಕರ್ಮ

ಶರಣಂ ಪವನ್ ಪ್ರಸಾದ್ ಅವರ ಕರ್ಮ ಕಾದಂಬರಿಯಲ್ಲಿ ಭಾರತೀಯರು ಅದರಲ್ಲೂ ಹಿಂದೂ ಸಂಪ್ರದಾಯದಲ್ಲಿ ಆಚರಣೆ ಪದ್ಧತಿಗಳು ಹೆಚ್ಚು, ಅಪರ ಕರ್ಮಗಳನ್ನು ಮಾಡು ವಾಗಲೂ ಅದು ಅನ್ವಯವಾಗುತ್ತದೆ. ಯಾವುದೇ ವ್ಯಕ್ತಿ ಸತ್ತ ನಂತರದ ಕ್ರಿಯೆ ಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಾರೆ. ಸತ್ತ ನಂತರದ ಮುಂದಿನ ಹಾದಿಯು ಯಾವ ರೀತಿ ಭವ ಬಂಧನವನ್ನು ಕಳಚಿ ಇಹ ಲೋಕ ತ್ಯಜಿಸಿ ಪರ ಲೋಕ ಪಡೆಯಲಿ ಎಂಬ ಮಹತ್ವದ ಉದ್ದೇಶದಿಂದ ಬ್ರಾಹ್ಮಣ ಸಮಾಜದಲ್ಲಿ ಸತ್ತ ನಂತರ ಜನರಿಗೆ ಹಲವಾರು ಕಾರ್ಯಗಳನ್ನು ಮಾಡುವ ಪದ್ಧತಿ ಇದೆ. ಗರುಡ ಪುರಾಣಗಳಲ್ಲಿನ ವರ್ಣನೆಯ ಅನುಸಾರ ಅವರುಗಳ ಮುಕ್ತಿ ಮಾರ್ಗ ದೊರೆಯು ತ್ತದೆ ಎಂಬ ನಂಬಿಕೆ. ಸತ್ತ ನಂತರದ 12 ದಿನಗಳಲ್ಲಿ ನಡೆಯುವ ಕಾರ್ಯವನ್ನು ವಿಷಯ ವಸ್ತುವನ್ನಾಗಿ ಇಟ್ಟುಕೊಂಡು ಬರೆದಂತಹ ಕಾದಂಬರಿಯೇ ಕರ್ಮ.

ಟ್ವೀಟ್‌ಮೆಂಟ್

ಕನಿಕಾ ಶೇರಾನ್: ವಿದ್ಯಾವಂತರ ನಡುವೆಯಾದ ಮದುವೆಗಿಂತ, ಅವಿದ್ಯಾವಂತರ ನಡುವೆಯಾದ ಮದುವೆ ಏಕೆ ಸರಾಗವಾಗಿರುತ್ತದೆ?

ಅಂತೋಣಿ: ಏಕೆಂದರೆ, ಕಡಿಮೆ ಕಲಿತವರು ಅಥವಾ ಅವಿದ್ಯಾವಂತರು ಸಮಯ ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡು ನಡೆಯುತ್ತಾರೆ. ಆದರೆ, ಅದು ವಿದ್ಯಾವಂತರ ಕೈಯಲ್ಲಿ ಆಗಲ್ಲ!

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಕೆಳಗಿನವುಗಳಲ್ಲಿ ಯಾವುದು ಚೀನಾದಲ್ಲಿ ಮೊದಲ ರಾಜವಂಶವಾಗಿದೆ?

- ಎ. ಹಾನ್.
- ಬಿ. ಟ್ಯಾಂಗ್.
- ಸಿ. ಸಮುರಾಯ್.
- ಡಿ. ಕ್ಸಿಯಾ.

ಉತ್ತರ: ಡಿ. ಕ್ಸಿಯಾ.

ಮಾಹಿತಿ

ಕ್ಸಿಯಾ ರಾಜವಂಶವು ಸಾಂಪ್ರದಾಯಿಕ ಚೀನೀ ಇತಿಹಾಸಶಾಸ್ತ್ರದಲ್ಲಿ ಮೊದಲ ರಾಜವಂಶವಾಗಿದೆ. ಇದು ಪ್ರಾಚೀನ ಚೀನಾದಲ್ಲಿ ಹೊರಹೊಮ್ಮಿದ ಮೊದಲ ಸರಕಾರವಾಗಿದೆ ಮತ್ತು ರಾಜವಂಶದ ಉತ್ತರಾಧಿಕಾರದ ನೀತಿಯನ್ನು ಅನುಸರಿಸಲು ಮೊದಲ ಸರಕಾರವಾಗಿತ್ತು.

ಹಿರಿಯರ ಬದುಕಿನ ಮುಸ್ಸಂಜೆ ಆನಂದವಾಗಿರಲಿ

ಪ್ರಕಾಶ ತದಡಿಕರ

ಮಾನವನ ಬದುಕಿನಲ್ಲಿ ಶೈಶವಾವಸ್ಥೆ, ಬಾಲ್ಯಾವಸ್ಥೆ, ಕಿಶೋರಾವಸ್ಥೆ, ಪ್ರೌಢಾವಸ್ಥೆ ಹಾಗೂ ವೃದ್ಧಾವಸ್ಥೆ ಎಂದು ಐದು ಹಂತಗಳನ್ನು ಗುರುತಿಸಲಾಗಿದೆ. ಜೀವಿಯ ದೇಹವು ಬೆಳವಣಿಗೆಯ ಕೊನೆಯ ಹಂತದಲ್ಲಿರುವಾಗ ಬರುವ ವೃದ್ಧಾಪ್ಯ ಎಂಬುದು ಸ್ವಾಭಾವಿಕವಾದರೂ ಬಹಳ ದುರ್ಬಲ ಅವಸ್ಥೆ. ದೇಹ ನಶಿಸುವ ಮುನ್ನ ನುಸುಳುವ ಮುಪ್ಪು ಎಲ್ಲರಿಗೂ ಕಟ್ಟಿಟ್ಟ ಬುತ್ತಿ. ಭೂಮಿಯ ಮೇಲೆ ಬದುಕುವ ಎಲ್ಲ ಜೀವಿಗಳಿಗೂ ಮುಪ್ಪು ಬರುತ್ತದೆ. ಮುಪ್ಪು ಎನ್ನುವುದು ಸಾವಿಗೆ ಸಾಮೀಪ್ಯದ ಘಟ್ಟ. ಇದನ್ನು ತಡೆಯುವ ಸಾಧ್ಯತೆ ಇಲ್ಲ. ಮುಪ್ಪು ಅವಲಂಬನೆಯ ಬದುಕು. ಜೀವನದ ಕೊನೆ ದಿನದಲ್ಲಿ ಕುಟುಂಬದವರ, ಮಕ್ಕಳ ಆಸರೆ ಇಲ್ಲದೇ ಹೋದರೆ ಮುಪ್ಪು ಸಹಿಸಲಾರದ ಯಾತನೆಯನ್ನು ನೀಡುತ್ತದೆ.

ವಿಶ್ವಾದ್ಯಂತ 60 ವರ್ಷ ಅಥವಾ ಅದರ ಮೇಲ್ಪಟ್ಟ ಜನಸಂಖ್ಯೆ ವೇಗವಾಗಿ ವೃದ್ಧಿಯಲ್ಲಿದೆ. 2019 ರಲ್ಲಿ, ವಿಶ್ವದ 60 ವರ್ಷ ಮೇಲ್ಪಟ್ಟ ಜನಸಂಖ್ಯೆ 1 ಬಿಲಿಯನ್ ತಲುಪಿದ್ದು, 2050 ರಲ್ಲಿ ಇದು 2 ಬಿಲಿಯನ್ ತಲುಪುವ ನಿರೀಕ್ಷೆಯಿದೆ. ಆಧುನಿಕ ಚಿಕಿತ್ಸಾ ಕ್ರಮಗಳು, ಉತ್ತಮ ಆರೋಗ್ಯ ವ್ಯವಸ್ಥೆ ಮತ್ತು ಆರೈಕೆಗಳಿಂದಾಗಿ ಜನರ ಜೀವಿತಾವಧಿ ಹೆಚ್ಚಿದ ಹಾಗೆಲ್ಲ ವೃದ್ಧರ ಪ್ರಮಾಣ ಏರಿಕೆಯಾಗುತ್ತಿದೆ. ಅಧ್ಯಯನಗಳ ಪ್ರಕಾರ ಈಗ ನಮ್ಮ ದೇಶದಲ್ಲಿ ಸುಮಾರು 9 ಕೋಟಿ ಅರವತ್ತು ವರ್ಷ ದಾಟಿದ ವೃದ್ಧರಿದ್ದಾರೆ. 2050ರ ವೇಳೆಗೆ ಭಾರತದಲ್ಲಿ 60 ವಯಸ್ಸನ್ನು ದಾಟಿದ ಜನರ ಸಂಖ್ಯೆ ಸುಮಾರು 34 ಕೋಟಿ ಇರಲಿದೆ ಎಂದು ಅಂದಾಜಿಸಲಾಗಿದೆ.

ಸರಾಸರಿ ಜೀವಿತಾವಧಿ ಹೆಚ್ಚಾದ ಪರಿಣಾಮವಾಗಿ ಜನರು ಹೆಚ್ಚು ವರ್ಷ ಬದುಕುತ್ತಿದ್ದಾರೆ. 2019 ರಲ್ಲಿ, ಜಾಗತಿಕ ಸರಾಸರಿ ಜೀವಿತಾವಧಿ ಸುಮಾರು 72.6 ವರ್ಷಗಳಾಗಿದ್ದು, 2050 ರಲ್ಲಿ ಇದು 77.1 ವರ್ಷಗಳಿಗೆ ಏರಬಹುದು. 1950–1955 ರಲ್ಲಿ, ಭಾರತದ ಸರಾಸರಿ ಜೀವಿತಾವಧಿ ಸುಮಾರು 37 ವರ್ಷಗಳಿತ್ತು. 2000–2005ರಲ್ಲಿ, ಇದು 63 ವರ್ಷಗಳಿಗೆ ಏರಿತು. 2015–2020 ರಲ್ಲಿ, ಸರಾಸರಿ ಜೀವಿತಾವಧಿ ಸುಮಾರು 69.7 ವರ್ಷಗಳಾಯಿತು. 2023 ರಲ್ಲಿ, ಭಾರತದ ಸರಾಸರಿ ಜೀವಿತಾವಧಿ ಸುಮಾರು 70.8 ವರ್ಷಗಳಾಗಿದೆ. ಭಾರತದ ಜೀವಿತಾವಧಿಯು ಕಳೆದ ಕೆಲವು ದಶಕಗಳಲ್ಲಿ ಸುಧಾರಿಸುತ್ತಿದ್ದು, ಇದು ಆರೋಗ್ಯ ಸೇವೆ, ಪೌಷ್ಟಿಕಾಹಾರ, ಮತ್ತು ಜೀವನಮಟ್ಟದಲ್ಲಿ ಸಂಭವಿಸಿದ ಸುಧಾರಣೆಯ ಪರಿಣಾಮವಾಗಿದೆ.

ಆಧುನಿಕತೆಯ ಬದುಕಿನೆಡೆಗೆ ಹೆಜ್ಜೆ ಹಾಕುತ್ತಿರುವ ನಮ್ಮ ಸಮಾಜದಲ್ಲಿ ನಾಗರೀಕರಣ ಔದ್ಯಮೀಕರಣ ಮುಂತಾದ ಆಧುನಿಕ ಪ್ರಕ್ರಿಯೆಗಳು ಕುಟುಂಬದ ಪಾರಂಪರಿಕ ಸಂಘಟನೆ ಹಾಗೂ ಸ್ಥಿರತೆಯನ್ನು ಬಹುಮಟ್ಟಿಗೆ ಅಸ್ಥಿರಗೊಳಿಸಿವೆ. ಅವಿಭಕ್ತ ಕುಟುಂಬ ವ್ಯವಸ್ಥೆಯ ಅವನತಿ ವಯೋವೃದ್ಧರ ಯೋಗಕ್ಷೇಮ, ಆರೈಕೆಗಳ ಮೇಲೆ ಗಂಭೀರವಾದ ದುಷ್ಪರಿಣಾಮ ಬೀರಿದೆ. ದುಡಿಮೆಯೇ ಜೀವನಾಧಾರವಾದ ಇಂದಿನ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ಅಧಿಕ ಸಂಖ್ಯೆಯಲ್ಲಿ ವಯೋವೃದ್ಧರು ದುರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾರೆ ಹಾಗೂ ಶೋಷಣೆ ಅನುಭವಿಸುತ್ತಿದ್ದಾರೆ ಎಂದು ಅಧ್ಯಯನ ವರದಿ ತಿಳಿಸಿದೆ. ಹೀಗಾಗಿ ನಗರ ಪ್ರದೇಶಗಳಲ್ಲಿ ಬಹುತೇಕರಿಗೆ ಮುಪ್ಪಿನ ಕಾಲ ನರಕವಾಗಿ ಪರಿಣಮಿಸ ತೊಡಗಿದೆ. ಮಕ್ಕಳನ್ನು ಹೆತ್ತು, ಹೊತ್ತು, ಸಾಕಿ ಸಲುಹಿ ಓದಿಸಿ ಜೀವನ ಸಂಧ್ಯಾ ಕಾಲದಲ್ಲಿ ತಮಗೆ ಆಸರೆಯಾಗುತ್ತಾರೆ ಎಂಬ ನಿರೀಕ್ಷೆ ಸುಳ್ಳಾಗಿ ಬಹುತೇಕ ಹಿರಿಯರು ಮಕ್ಕಳಿಂದ ದೂರವಾಗಿ ಒಂಟಿಯಾಗಿ ಇಲ್ಲವೇ ವೃದ್ಧಾಶ್ರಮದಲ್ಲಿ ಬದುಕಿನ ಕೊನೆಯ ದಿನಗಳನ್ನು ಕಳೆಯುವ ದಾರುಣ ಸ್ಥಿತಿ ಉಂಟಾಗಿದೆ.

ಪ್ರೀತಿಯಿಂದ ಎತ್ತಿ–ಮುದ್ದಾಡಿ ಸಾಕಿ ಸಲುಹಿ ಮಮತೆ ವಾತ್ಸಲ್ಯ ಧಾರೆ ಎರೆದ ಹೆತ್ತ ತಂದೆ ತಾಯಿಗಳನ್ನು ಅವರ ಜೀವನದ ಕೊನೆಯ ಯಾನದಲ್ಲಿ ಬದುಕಲು ನೆಮ್ಮದಿಯ ತಾಣದೊಂದಿಗೆ ಆರೋಗ್ಯಕರ ಸನ್ನಿವೇಶ ಒದಗಿಸುವುದು ಪ್ರತಿಯೊಬ್ಬ ಮಕ್ಕಳ ಕರ್ತವ್ಯ. ಪ್ರೀತಿ, ಆಸರೆ, ಆಶ್ರಯ, ಗೌರವಗಳು ಮುಪ್ಪಿನಲ್ಲಿರುವರಿಗೆ ಅತ್ಯಂತ ಅವಶ್ಯಕವಾದ ಬಾಳ ಇಳಿಸಂಜೆಯಲ್ಲಿಯ ಅಮೃತ ಸಂಜೀವಿನಿಗಳು. ಇದೆಲ್ಲವುದರಿಂದ ಹಿರಿಯ ನಾಗರಿಕರು ವಂಚಿತರಾದಲ್ಲಿ ಭಾವನಾತ್ಮಕ ಬೆಂಬಲವಿಲ್ಲದೆ ಹತಾಶರಾಗಿ ಮಾನಸಿಕ ಬೇಗುದಿಯಲ್ಲಿ ನೊಂದು ಕುಗ್ಗುತ್ತಾ, ಬಾಳ ಇಳಿಸಂಜೆಯಲ್ಲಿ ಕಣ್ಣೀರಿನಲ್ಲಿ ಕೈತೊಳೆಯುತ್ತಾರೆ. ಮಕ್ಕಳು ವಯಸ್ಸಾದ ತಂದೆ ತಾಯಿಯರನ್ನು ಹೊರೆಯೆಂದು ಭಾವಿಸದೆ ಪ್ರೀತಿಯಿಂದ ನೋಡಿಕೊಂಡಲ್ಲಿ ಮನೆಯಲ್ಲಿ ಪರಿಸರ ಉತ್ತಮವಾಗಿದ್ದಲ್ಲಿ ಹಿರಿಯರ ಆರೋಗ್ಯ ಸದಾ ನಳನಳಿಸುತ್ತಿರುತ್ತದೆ.

ವೃದ್ಧರೂ ಕೂಡ ಆರೋಗ್ಯಕರ ಸೂತ್ರಗಳನ್ನು ಪಾಲಿಸಿ ಮನೆ ಮಂದಿಯೊಂದಿಗೆ ಪ್ರೀತಿ, ಸ್ನೇಹದಿಂದ ನಗು ನಗುತ್ತಾ ಸಮಯವನ್ನು ಕಳೆದರೆ ನೆಮ್ಮದಿಯ ಜೀವನ ನಡೆಸಬಹುದು. ಪ್ರತಿನಿತ್ಯ ಯೋಗ, ಪ್ರಾರ್ಥನೆ, ಧ್ಯಾನದ ಮೂಲಕ ಮನಸ್ಸನ್ನು ಸೃಜನಾತ್ಮಕ ಕೆಲಸಗಳಲ್ಲಿ ಕೇಂದ್ರೀಕರಿಸಬಹುದು.ನಕಾರಾತ್ಮಕ ಭಾವನೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು.ಮುಪ್ಪು ಎಂಬುದು ಎಲ್ಲರಿಗೂ ಕಟ್ಟಿಟ್ಟ ಬುತ್ತಿಯಾಗಿದ್ದು, ಪ್ರತಿಯೊಬ್ಬರೂ ಹಿರಿಯರನ್ನು ಗೌರವಿಸುತ್ತ ಹಿರಿಯರ ಬಗ್ಗೆ ಕಾಳಜಿ ವಹಿಸುತ್ತಾ ಜವಾಬ್ದಾರಿಯುತವಾಗಿ ನೋಡಿಕೊಂಡರೆ ಬಾಂಧವ್ಯದ ಬೇರುಗಳಾದ ಹಿರಿಯರ ಬದುಕಿನ ಮುಸ್ಸಂಜೆ ಆನಂದಮಯವಾಗಿರಲು ಸಾಧ್ಯ.

ರಾಷ್ಟ್ರಧ್ವಜದ ಉಗಮದ ನೆನಪು

ಮಂಜುನಾಥ ಡಿ. ಎಸ್.

ಇಡೀ ದೇಶ ಸ್ವಾತಂತ್ರ್ಯೋತ್ಸವದ ಸಂಭ್ರಮಾಚರಣೆಗೆ ಅಣಿಯಾಗುತ್ತಿರುವ ಈ ಸುಸಂದರ್ಭದಲ್ಲಿ ರಾಷ್ಟ್ರಧ್ವಜದ ಉಗಮವನ್ನು ನೆನಪಿಸಿಕೊಳ್ಳುವುದು ಔಚಿತ್ಯಪೂರ್ಣ. ನಮ್ಮ ರಾಷ್ಟ್ರಧ್ವಜದ ಪ್ರಸ್ತುತ ಅವತರಣಿಕೆಯನ್ನು, ಭಾರತ ಸ್ವಾತಂತ್ರ್ಯ ಪಡೆಯುವ ಕೆಲವು ವಾರಗಳ ಹಿಂದೆ, 1947ರ ಜುಲೈ 22ರಂದು ಜರುಗಿದ ಕಾನ್ಸ್‌ಟಿಟ್ಯುಯೆಂಟ್ ಅಸೆಂಬ್ಲಿ ಸಭೆಯಲ್ಲಿ ಅಂಗೀಕರಿಸಲಾಯಿತು. ಇದು 1947ರ ಆಗಸ್ಟ್ 15ರಂದು ಭಾರತ ಒಕ್ಕೂಟದ ಅಧಿಕೃತ ಧ್ವಜವಾಯಿತು. ನಂತರ, 1950ರ ಜನವರಿ 26ರಿಂದ ಭಾರತ ಗಣರಾಜ್ಯದ ಬಾವುಟವಾಯಿತು.

ಈ ಬಾವುಟದ ಮೂಲ ವಿನ್ಯಾಸವನ್ನು ನೀಡಿದವರು ಸ್ವಾತಂತ್ರ್ಯ ಹೋರಾಟಗಾರ ಪಿಂಗಳಿ ವೆಂಕಯ್ಯನವರು. 1921ರ ಏಪ್ರಿಲ್ ಒಂದರಂದು, ವಿಜಯವಾಡದಲ್ಲಿ ನಡೆದ ಆಲ್ ಇಂಡಿಯ ಕಾಂಗ್ರೆಸ್ ಕಮಿಟಿಯ ಅಧಿವೇಶನದಲ್ಲಿ, ವೆಂಕಯ್ಯನವರು ಮೂಲ ವಿನ್ಯಾಸದ ಧ್ವಜವನ್ನು ಮಹಾತ್ಮ ಗಾಂಧಿಯವರಿಗೆ ಅರ್ಪಿಸಿದರು. ವಿಜಯವಾಡದ ವಿಕ್ಟೋರಿಯ ಮೆಮೊರಿಯಲ್ ಹಾಲ್‌ನಲ್ಲಿ ನಡೆದ ಎರಡು ದಿನಗಳ ಸಮಾವೇಶದಲ್ಲಿ ಹಾಜರಿದ್ದ ಮೋತಿಲಾಲ್ ನೆಹರು, ಜವಾಹರಲಾಲ್ ನೆಹರು, ವಲ್ಲಭಬಾಯಿ ಪಟೇಲ್, ಸರೋಜಿನಿ ನಾಯಿಡು, ಲಾಲಾ ಲಜಪತ್ ರಾಯ್, ಬಾಬು ರಾಜೇಂದ್ರ ಪ್ರಸಾದ್, ಚಿತ್ತರಂಜನ್ ದಾಸ್, ರಾಜಗೋಪಾಲಚಾರಿ, ಮುಂತಾದವರು ಸೇರಿದಂತೆ ಅಂದಿನ ಪ್ರಮುಖ ನಾಯಕರು ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿದ್ದರು.

ಪಿಂಗಳಿ ವೆಂಕಯ್ಯನವರು ಗಾಂಧೀಜಿಯವರಿಗೆ ಸ್ವರಾಜ್ ಧ್ವಜವನ್ನು ನೀಡುತ್ತಿರುವ ಅಮೃತಶಿಲೆಯ



ಮೂರ್ತಿಗಳು ಹಾಗು ಹಿನ್ನೆಲೆಯಲ್ಲಿ ನಿಂತು ಇದನ್ನು ವೀಕ್ಷಿಸುತ್ತಿರುವ ಗಣ್ಯ ಗಣದ ಶಿಲಾಭಿತ್ತಿಯನ್ನು ವಿಕ್ಟೋರಿಯ ಮೆಮೊರಿಯಲ್ ಹಾಲ್‌ನಲ್ಲಿ ನೋಡಬಹುದಾಗಿದೆ. ಈ ಭವನದ ಹೊರಭಾಗದಲ್ಲಿ 10 ಫೆಬ್ರವರಿ 2007ರಂದು ಮರು ಪ್ರತಿಷ್ಠಾಪನೆಗೊಂಡ ಪಿಂಗಳಿ ವೆಂಕಯ್ಯನವರ ಮೂರ್ತಿಯೂ ಇದೆ.

ವೆಂಕಯ್ಯನವರು ಮೊದಲು ವಿನ್ಯಾಸಗೊಳಿಸಿದ ಬಾವುಟದಲ್ಲಿ ಕೆಂಪು ಮತ್ತು ಹಸಿರು ಪಟ್ಟಿಗಳ ಮೇಲೆ ಚರಕದ ಚಿತ್ರವಿತ್ತು. ಗಾಂಧೀಜಿಯವರ ಸಲಹೆಯ ಮೇರೆಗೆ ನಡುವಿನಲ್ಲಿ ಬಿಳಿ ಬಣ್ಣದ ಪಟ್ಟಿಯನ್ನು ಸೇರಿಸಲಾಯಿತು. 1947ರಲ್ಲಿ ಕೇಸರಿ, ಬಿಳಿ, ಹಸಿರು ವರ್ಣಗಳ ಪಟ್ಟಿಗಳು ಮತ್ತು ಬಿಳಿ ಪಟ್ಟಿಯ ಮಧ್ಯದಲ್ಲಿ ನೀಲಿ ಬಣ್ಣದ ಅಶೋಕ (ಧರ್ಮ) ಚಕ್ರವುಳ್ಳ ರಾಷ್ಟ್ರಧ್ವಜದ ವಿನ್ಯಾಸವನ್ನು ಅಂತಿಮಗೊಳಿಸಲಾಯಿತು. ಈ ತಿರಂಗ ಭಾರತದ ಅಸ್ಮಿತೆಯಾಗಿದೆ.

ವಿನೇಶ್...ಕ್ರೀಡೆಯು ಮಾನವ ಇಚ್ಛೆಯ ಆಚರಣೆಯಾಗಿದೆ. ನನ್ನ ವೃತ್ತಿಜೀವನದಲ್ಲಿ ನಿಜವೆಂದು ತಿಳಿದಿದ್ದೇನೆ. ನೀವು ಹೋರಾಟಗಾರರಾಗಿದ್ದೀರಿ. ದೇಶದ ಪ್ರತಿ ಮಗುವೂ ನೀವು ಚಾಂಪಿಯನ್ ಎಂದು ತಿಳಿಯುತ್ತದೆ.

– ಅಭಿನವ್ ಬಿಂದ್ರಾ, ಶೂಟರ್

ಪದಕ ಪಟ್ಟಿ

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಭಾರತ	0	0	4	4
ಚೀನಾ	28	25	17	70
ಅಮೆರಿಕ	27	35	33	95
ಆಸ್ಟ್ರೇಲಿಯಾ	18	14	11	43
ಫ್ರಾನ್ಸ್	13	18	21	52
ಗ್ರೇಟ್ ಬ್ರಿಟನ್	13	17	20	50
ದಕ್ಷಿಣ ಕೊರಿಯಾ	12	8	7	27
ಜಪಾನ್	12	7	13	32
ಇಟಲಿ	10	11	9	30
ನೆದರ್ಲೆಂಡ್ಸ್	10	5	7	22

ಮೈಕ್ರೋ ಮಾಹಿತಿ

4 ನೇ ಸ್ಥಾನ ಪಡೆದ ಭಾರತೀಯರು

ಇದಕ್ಕೂ ಮೊದಲು ಸುಮಾರು 16 ಜನರಿಗೆ ನಾಲ್ಕನೇ ಸ್ಥಾನ

ಇತ್ತೀಚಿನ ಆಟಗಾರರು

ಜೋಯ್‌ದೀಪ್ ಕುಮಾರ್‌ಕರ್

2012ರ ಲಂಡನ ಒಲಿಂಪಿಕ್ಸ್‌ನಲ್ಲಿ 50 ಮೀ ರೈಫಲ್ ಪ್ರೋನ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು.

ಅಭಿನವ್ ಬಿಂದ್ರಾ

ಭಾರತಕ್ಕೆ 2008ರಲ್ಲಿ ಗೋಲ್ಡ್ ಗೆದ್ದಿದ್ದ ಬಿಂದ್ರಾ ಅವರು, 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು.

ಅರ್ಜುನ್ ಬಬುಟಾ

ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಬಬುಟಾ ಅವರು 10 ಮೀ ಏರ್ ಪಿಸ್ಟೂಲ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದಾರೆ.

ಮನು ಭಾಕರ್

ಶೂಟಿಂಗ್‌ನಲ್ಲಿ 2 ಪದಕ ಗೆದ್ದಿರುವ ಮನು ಭಾಕರ್ ಅವರು ಈ ಬಾರಿ ಮೂರನೇ ಪದಕದ ಫೈನಲ್‌ನಲ್ಲಿ ನಾಲ್ಕನೇ ಸ್ಥಾನ ಪಡೆದರು.

ಮೀರಾಬಾಯಿ ಚಾನು

ವೇಟ್‌ಲಿಫ್ಟಿಂಗ್‌ನಲ್ಲಿ ಪದಕದ ಆಸೆ ಮೂಡಿಸಿದ್ದ ಚಾನು ಅವರು ನಾಲ್ಕನೇ ಸ್ಥಾನಕ್ಕೆ ತೃಪ್ತರಾಗಿದ್ದಾರೆ.

ಧೀರಜ್, ಅಂಕಿತಾ

ಮಿಶ್ರ ಆರ್ಚರಿಯಲ್ಲಿ ಧೀರಜ್, ಅಂಕಿತಾ ಜೋಡಿ ಕಂಚು ಸುತ್ತಿನಲ್ಲಿ ಸೋಲುವ ಮೂಲಕ ನಾಲ್ಕನೇ ಸ್ಥಾನ ಪಡೆದರು.

ಉಳಿದಂತೆ ಲಕ್ಷ್ಯ ಸೇನ್, ಅನಂತ್‌ಜೀತ್, ಮಹೇಶ್ವರಿ ಜೋಡಿ ಸಹ ನಾಲ್ಕನೇ ಸ್ಥಾನ ಪಡೆದಿದ್ದಾರೆ.

ಇಂದು ಕಣದಲ್ಲಿ

- ಅಥ್ಲೆಟಿಕ್ಸ್: ಮಹಿಳೆಯರ 4400 ಮೀ ರಿಲೇ: ಮಧ್ಯಾಹ್ನ 2:10 ಪುರುಷರ 4400 ಮೀ ರಿಲೇ: 2:35
- ಗಾಲ್ಫ್: ಮಹಿಳೆಯರ ಗಾಲ್ಫ್ ಮೂರನೇ ಸುತ್ತು – ಮಧ್ಯಾಹ್ನ 12:30
- ಕುಸ್ತಿ: ಮಹಿಳೆಯರ 57 ಕೆಜಿ ರಿಪಿಚೇಜ್: ಮಧ್ಯಾಹ್ನ 2:30 ಪುರುಷರ 57 ಕೆಜಿ ರಿಪಿಚೇಜ್ – ಮಧ್ಯಾಹ್ನ 2:30, ಪುರುಷರ 57 ಕೆಜಿ ಕಂಚಿನ ಪದಕ ರಾತ್ರಿ 11:00

ಸತತ 2ನೇ ಬಾರಿಗೆ ಕಂಚು | ಸ್ಪೇನ್ ವಿರುದ್ಧ 2–1ರ ಗೆಲುವು | ಶ್ರೀಜೇಶ್‌ಗೆ ಜಯದ ವಿದಾಯ

ಚಕ್ ದೇ ಇಂಡಿಯಾ

ಪ್ಯಾರಿಸ್: ಸ್ಪೇನ್ ವಿರುದ್ಧ ಕಂಚು ಸುತ್ತಿನ ಪಂದ್ಯದಲ್ಲಿ ಗೆದ್ದ ಭಾರತ ಮೂರನೇ ಸ್ಥಾನ ಪಡದು ದೇಶಕ್ಕೆ ಮತ್ತೊಂದು ಪದಕ ತಂದು ಕೊಟ್ಟಿದೆ. ಸೆಮಿಫೈನಲ್ ಸೋಲಿನ ನಂತರ ಪುಟಿದೆದ್ದ ಹರ್ಮನ್‌ಪ್ರೀತ್ ಪಡೆ ಹಾಕಿಯಲ್ಲಿ ಕಂಚಿನ ಪದಕ ಗೆದ್ದಿದೆ.

ಪುರುಷರ ಹಾಕಿಯಲ್ಲಿ ಸ್ಪೇನ್ ತಂಡವನ್ನು ಮಣಿಸಿದ ಭಾರತ ಕಂಚಿನ ಪದಕಕ್ಕೆ ಮುತ್ತಿಟ್ಟಿದೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸತತ ನಿರಾಸೆಗಳ ನಂತರ ಭಾರತದ ಪದಕಗಳ ಪಟ್ಟಿಗೆ ಮತ್ತೊಂದು ಸೇರ್ಪಡೆಯಾಗಿದ್ದು, ಹರ್ಮನ್ ಪ್ರೀತ್ ಸಿಂಗ್ ನೇತೃತ್ವದ ಭಾರತ ಪುರುಷರ ತಂಡ ಹಾಕಿಯಲ್ಲಿ ಕಂಚಿನ ಪದಕ ಗೆದ್ದಿದೆ. ಗುರುವಾರ ನಡೆದ ಪಂದ್ಯದಲ್ಲಿ ಸ್ಪೇನ್ ವಿರುದ್ಧ 2–1 ಅಂತರದ ಗೆಲುವಿನ ಮೂಲಕ ಒಲಿಂಪಿಕ್ಸ್‌ನ ಕಂಚಿನ ಪದಕ ಉಳಿಸಿಕೊಂಡಿದೆ. ತೀವ್ರ ರೋಚಕತೆಯಿಂದ ಕೂಡಿದ್ದ ಈ ಪಂದ್ಯದಲ್ಲಿ ಟೀಂ ಇಂಡಿಯಾ ಪರ ಇಡೀ ಕ್ರೀಡಾಕೂಟದಲ್ಲಿ ಅಮೋಘ ಪ್ರದರ್ಶನ ನೀಡಿದ ನಾಯಕ ಹರ್ಮನ್‌ಪ್ರೀತ್ ಸಿಂಗ್, ಕಂಚಿನ ಪದಕದ ಪಂದ್ಯದಲ್ಲೂ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಈ ಪಂದ್ಯದಲ್ಲೂ ನಾಯಕ ಹರ್ಮನ್‌ಪ್ರೀತ್ ಸಿಂಗ್ ಎರಡೂ ಗೋಲುಗಳನ್ನು ಬಾರಿಸಿ ತಂಡವನ್ನು ಕಂಚಿನ ಪದಕ ಗೆಲ್ಲುವಂತೆ ಮಾಡಿದರು.

ಮೊದಲಿಗೆ ಹಿನ್ನಡೆ: ಕಂಚು ಸುತ್ತಿನ ಹಣಾಹಣಿಯ ಪಂದ್ಯದ ಮೊದಲ ಕ್ವಾರ್ಟರ್‌ನಲ್ಲಿ ಎರಡೂ ತಂಡಗಳು ಗೋಲುರಹಿತ ಆಟವನ್ನು ಆಡಿತು. ಆದರೆ, 2ನೇ ಕ್ವಾರ್ಟರ್‌ನಲ್ಲಿ ಸ್ಪೇನ್ ತಂಡದ ನಾಯಕ ಮಾರ್ಕ್ ಮಿರಾಲೆಸ್ 11ನೇ ನಿಮಿಷದಲ್ಲಿ ಗೋಲು ಬಾರಿಸಿದರು. ಇದರೊಂದಿಗೆ ಸ್ಪೇನ್ ಮುನ್ನಡೆಯನ್ನು ಪಡೆದುಕೊಂಡಿತು. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಗೋಲು ಬಾರಿಸುವ ಮೂಲಕ ಸಮಬಲಗೊಳ್ಳುವಂತೆ ಮಾಡಿದರು. ಮೂರನೇ ಕ್ವಾರ್ಟರ್‌ನಲ್ಲಿ ಮತ್ತೊಂದು ಗೋಲ್ ಬಾರಿಸಿ ಅವರು ಮುನ್ನಡೆ ತಂದುಕೊಟ್ಟರು. ಅದೇ ಮುನ್ನಡೆಯನ್ನು ಕೊನೇ ತನಕ ಉಳಿಸಿಕೊಂಡು ತಂಡ ಗೆಲುವು ಸಾಧಿಸಿತು.

ಹಾಕಿ ಸಾಧನೆ

ಆಮ್‌ಸ್ಟರ್‌ಡ್ಯಾಮ್	1928	ಚಿನ್ನ
ಲಾಸ್ ಏಂಜಲೀಸ್	1932	ಚಿನ್ನ
ಬರ್ಲಿನ್	1936	ಚಿನ್ನ
ಲಂಡನ್	1948	ಚಿನ್ನ
ಹೆಲ್ಸಿಂಕಿ	1952	ಚಿನ್ನ
ಮೆಲ್ಬೋರ್ನ್	1956	ಚಿನ್ನ
ರೋಮ್	1960	ಬೆಳ್ಳಿ
ಟೋಕಿಯೋ	1964	ಚಿನ್ನ
ಮೆಕ್ಸಿಕೋ ಸಿಟಿ	1968	ಕಂಚು
ಮ್ಯೂನಿಚ್	1972	ಕಂಚು
ಮಾಸ್ಕೋ	1980	ಚಿನ್ನ
ಟೋಕಿಯೋ	2020	ಕಂಚು
ಪ್ಯಾರಿಸ್	2024	ಕಂಚು

ಭಾರತಕ್ಕೆ 12ನೇ ಪದಕ: ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಭಾರತ 41 ವರ್ಷಗಳ ಬಳಿಕ ಅಮೋಘ ಸಾಧನೆ ಮಾಡಿತ್ತು. ಅದೇ ಸಾಧನೆ ಯನ್ನು ಪ್ಯಾರಿಸ್‌ನಲ್ಲಿ ಪುನರಾವರ್ತನೆ ಮಾಡಿದೆ. ಒಲಿಂಪಿಕ್ ಹಾಕಿ ಇತಿಹಾಸದಲ್ಲಿ ಎಂಟು ಚಿನ್ನ ಸೇರಿದಂತೆ 12 ಪದಕಗಳನ್ನು ಗೆದ್ದಿದೆ. ಕೊನೆಯ ಚಿನ್ನದ ಪದಕ 1980ರಲ್ಲಿ ಬಂದಿತ್ತು. ನಂತರ ತಂಡವು 41 ವರ್ಷಗಳ ಪದಕಗಳ ಬರ ಎದುರಿಸಿತ್ತು. 2020 ರಲ್ಲಿ ಕಂಚಿನ ಪದಕ ಗೆದ್ದುಕೊಂಡಿತ್ತು. ಇದೀಗ ಭಾರತ ಮತ್ತೊಮ್ಮೆ ಕಂಚು ಗೆದ್ದಿದೆ.

ದಿ ವಾಲ್ ಶ್ರೀಜೇಶ್‌ಗೆ ಗೆಲುವಿನ ವಿದಾಯ: ಕ್ರೀಡಾಕೂಟದುದ್ದಕ್ಕೂ ಭಾರತಕ್ಕೆ ಗೆಲುವಿನಲ್ಲಿ ನೆರವಾಗಿದ್ದು ಗೋಲ್ ಕೀಪರ್ ಶ್ರೀಜೇಶ್. ಹೀಗಾಗಿ ಈ ಪದಕದೊಂದಿಗೆ ಅವರಿಗೆ ಉತ್ತಮ ವಿದಾಯ ದೊರಕಿದೆ. ಒಲಿಂಪಿಕ್ ಆರಂಭಕ್ಕೆ ಮುನ್ನವೇ ಅವರು ಇದು ನನಗೆ ಕೊನೇ ಅಂತಾರಾಷ್ಟ್ರೀಯ ಟೂರ್ನಿ ಎಂದು ಹೇಳಿದ್ದರು. ಹೀಗಾಗಿ ಅವರು ಇಲ್ಲಿಗೆ ತಮ್ಮ ವೃತ್ತಿ ಕ್ರೀಡೆಯನ್ನು ಮುಗಿಸಿದ್ದಾರೆ. ಹೀಗಾಗಿ ತಂಡದ ಆಟಗಾರರು ಉತ್ತಮ ವಿದದಾಯ ಎಂದು ಹೇಳಲಾಗಿದೆ. ಈ ಪ್ರದರ್ಶನದಲ್ಲಿ ಇವರ ಪಾತ್ರ ಪ್ರಮುಖವಾಗಿತ್ತು. ಅದರಲ್ಲಿ ಒಬ್ಬರು ಕೊನೆಯ ಬಾರಿಗೆ ಭಾರತದ ಪರ ಆಡುತ್ತಿರುವ ಅನುಭವಿ ಗೋಲ್‌ಕೀಪರ್ ಪಿಆರ್ ಶ್ರೀಜೇಶ್. ಪಂದ್ಯಾವಳಿ ಯುದ್ದಕ್ಕೂ ಶ್ರೀಜೇಶ್, ಗೋಡೆಯಂತೆ ನಿಂತು ಎದುರಾಳಿಗಳ ಹೊಡೆತಗಳನ್ನು ತಡೆದು ತಂಡವನ್ನು ಸೋಲಿನಿಂದ ಪಾರು ಮಾಡಿದರು.

ನಾನು ಕೊನೆಯ ಬಾರಿಗೆ ಗೋಲ್ ಪೋಸ್ಟ್‌ಗಳ ನಡುವೆ ನಿಂತಾಗ, ನನ್ನ ಹೃದಯ ಕೃತಜ್ಞತೆ ಮತ್ತು ಹೆಮ್ಮೆಯಿಂದ ತುಂಬಿತ್ತು. ಕನಸು ಹೊತ್ತ ಚಿಕ್ಕ ಹುಡುಗನಿಂದ ಹಿಡಿದು ಭಾರತದ ಗೌರವವನ್ನು ಕಾಪಾಡುವ ವ್ಯಕ್ತಿಯವರೆಗಿನ ಈ ಪ್ರಯಾಣವು ಸಾರ್ಥಕಭರಿತವಾಗಿತ್ತು. ಭಾರತಕ್ಕಾಗಿ ನನ್ನ ಕೊನೆಯ ಪಂದ್ಯವನ್ನು ಆಡಿದ್ದೇನೆ. ಪ್ರತಿ ಸೇವ್, ಪ್ರತಿ ಡೈವ್, ಟೀಮ್‌ನ ಪ್ರತಿ ಘರ್ಜನೆ ನನ್ನ ಆತ್ಮದಲ್ಲಿ ಶಾಶ್ವತವಾಗಿ ಪ್ರತಿಧ್ವನಿಸುತ್ತದೆ. ಗೆಲುವಿನ ವಿದಾಯಕ್ಕೆ ಧನ್ಯನಾಗಿದ್ದೇನೆ.

–ಪಿ.ಆರ್.ಶ್ರೀಜೇಶ್, ಗೋಲ್‌ಕೀಪರ್

ಈ ಸಾಧನೆಯನ್ನ ಮುಂದಿನ ತಲೆಮಾರುಗಳು ನೆನಪಿನಲ್ಲಿಟ್ಟುಕೊಳ್ಳುತ್ತವೆ. ಒಲಿಂಪಿಕ್ಸ್‌ನಲ್ಲಿ ಮಿಂಚಿದ ಭಾರತೀಯ ಹಾಕಿ ತಂಡ ಕಂಚಿನ ಪದಕವನ್ನು ಮನೆಗೆ ತಂದಿದೆ. ಹಾಕಿ ತಂಡ ಸತತ ಎರಡನೇ ಪದಕ ಗೆದ್ದಿದ್ದು, ಇನ್ನೂ ವಿಶೇಷವಾಗಿದೆ. ತಂಡದ ಯಶಸ್ಸು ಕೌಶಲ್ಯ, ಪರಿಶ್ರಮ ಮತ್ತು ತಂಡದ ಮನೋಭಾವದ ವಿಜಯವಾಗಿದೆ. ಪ್ರತಿಯೊಬ್ಬ ಆಟಗಾರರೂ ಅಪಾರ ಧೈರ್ಯ ತೋರಿಸಿದ್ದಾರೆ. ಗೆದ್ದ ಆಟಗಾರರಿಗೆ ಅಭಿನಂದನೆಗಳು.

–ನರೇಂದ್ರ ಮೋದಿ, ಪ್ರಧಾನಿ

ಕುಸ್ತಿ: ಅಮನ್‌ಗೆ ಆಘಾತ

ಪ್ಯಾರಿಸ್: 57 ಕೆ.ಜಿ ಕುಸ್ತಿ ವಿಭಾಗದಲ್ಲಿ ಕ್ವಾ.ಫೈನಲ್ ಭರ್ಜರಿ ಗೆಲುವು ಸಾಧಿಸಿದ್ದ ಅಮನ್ ಸೆಹ್ರಾವತ್ ಅವರು ಸೆಮಿಸ್‌ನಲ್ಲಿ ಜಪಾನ್‌ನ ಹಿಗುಜಿ ಅವರ ವಿರುದ್ಧ ಸೋಲನುಭವಿಸಿದ್ದಾರೆ. ಈ ಹಿಂದೆ ನಡೆದಿದ್ದ ಕ್ವಾ.ಫೈನಲ್‌ನಲ್ಲಿ ಭರ್ಜರಿ ಗೆಲುವು ಸಾಧಿಸುವ ಮೂಲಕ ಪದಕದ ಆಸೆ ಮೂಡಿಸಿದ್ದ ಅವರು, ಗುರುವಾರ ನಡೆದ ಸೆಮಿಸ್‌ನಲ್ಲಿ ಅವರು ಹಿಗುಜಿ ವಿರುದ್ಧ 10–0 ರಿಂದ ಸೋಲನುಭವಿಸಿದ್ದಾರೆ. ವಿನೇಶ್ ಅವರು ಅನರ್ಹಗೊಂಡು ಪದಕವೊಂದನ್ನು ಕಳೆದುಕೊಂಡ ಆಘಾತದಲ್ಲಿರುವಾಗಲೇ ಭಾರತಕ್ಕೆ ಕುಸ್ತಿಯಲ್ಲಿ ಪದಕವೊಂದು ದೊರೆಯುವ ಮತ್ತೊಂದು ಆಸೆ ಮೂಡಿತ್ತು. ಪುರುಷರ ಕುಸ್ತಿ ಸ್ಪರ್ಧೆಯ 57 ಕೆ.ಜಿ ಫ್ರೀಸ್ಟೈಲ್ ವಿಭಾಗದಲ್ಲಿ 21 ವರ್ಷದ ಭಾರತದ ಅಮನ್ ಸೆಹ್ರಾವತ್ ಕ್ವಾರ್ಟರ್‌ಫೈನಲ್‌ನಲ್ಲಿ ಎದುರಾಳಿಗೆ ಒಂದೇ ಒಂದು ಅಂಕ ಬಿಟ್ಟು ಕೊಡದೆ ಸೆಮಿಫೈನಲ್ ಪ್ರವೇಶಿಸಿದ್ದರು.

ಅವಿನಾಶ್ ಸಾಬ್ಲೆಗೆ ನಿರಾಸೆ

ಪ್ಯಾರಿಸ್: ಅವಿನಾಶ್ ಸಾಬ್ಲೆ ಅವರು ಪ್ಯಾರಿಸ್ ಒಲಿಂಪಿಕ್ ಪುರುಷರ 3,000 ಮೀ. ಸ್ಟೀಪಲ್ ಚೇಸ್ ಫೈನಲ್ ರೇಸ್‌ನಲ್ಲಿ 11ನೇ ಸ್ಥಾನ ಪಡೆದರು. ಆರಂಭದಲ್ಲಿ ಕೊಂಚ ಮುನ್ನಡೆಯಲ್ಲಿದ್ದ ಅವರು, 8 ನಿಮಿಷ 14.18 ಸೆ.ಗಳಲ್ಲಿ ಗುರಿ ತಲುಪಿದರು. ಡೈಮಂಡ್ ಲೀಗ್‌ನಲ್ಲಿ 8 ನಿಮಿಷ 09.91 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಸಾಬ್ಲೆ ಉತ್ತಮಪಡಿಸಿಕೊಂಡಿದ್ದರು. ಟೋಕಿಯೊದಲ್ಲಿ ಕೂಟದಲ್ಲಿ ಚಿನ್ನ ಗೆದ್ದಿದ್ದ ಮೊರಾಕ್ಕೊದ ಸೊಫಿಯಾನ್ ಅಲ್ ಬಕಾಲಿ ಅವರು ಪ್ರಶಸ್ತಿಯನ್ನು ಉಳಿಸಿಕೊಂಡರು. ಈ ಋತುವಿನಲ್ಲಿ ಶ್ರೇಷ್ಠ 8 ನಿಮಿಷ 06.05 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಅಮೆರಿಕದ ಕೆನ್ನೆತ್ ರೂಕ್ಸ್ (8 ನಿ 06.41 ಸೆ) ಮತ್ತು ಕೆನ್ಯಾದ ಅಬ್ರಹಾಮ್ ಕಿಬಿವೊಟ್ (8 ನಿ 06.47 ಸೆ) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಜ್ಯೋತಿ ಯರ್ರಾಜಿ ಆಘಾತ

ಪ್ಯಾರಿಸ್: ಜ್ಯೋತಿ ಯರ್ರಾಜಿ ಅವರು ಒಲಿಂಪಿಕ್ಸ್ ಮಹಿಳೆಯರ 100 ಮೀ. ಹರ್ಡಲ್ಸ್ ಸೆಮಿಫೈನಲ್ ತಲುಪಲು ವಿಫಲರಾದರು. ಗುರುವಾರ ನಡೆದ ತಮ್ಮ ರೆಪೆಷಾಜ್ ಹೀಟ್‌ನಲ್ಲಿ ಅವರು ನಾಲ್ಕನೇ ಸ್ಥಾನ ಪಡೆದರು. ಒಲಿಂಪಿಕ್ಸ್‌ನ 100 ಮೀ. ಹರ್ಡಲ್ಸ್ ಸ್ಪರ್ಧೆಯಲ್ಲಿ ಭಾಗವಹಿಸಿದ ಮೊದಲ ಅಥ್ಲೀಟ್ ಎನಿಸಿದ ಜ್ಯೋತಿ, ರೆಪೆಷಾಜ್ ಹೀಟ್‌ನಲ್ಲಿ 13.17 ಸೆ.ಗಳಲ್ಲಿ ಗುರಿತಲುಪಿದರು. ಒಟ್ಟು 40 ಓಟಗಾರ್ತಿಯಲ್ಲಿ 16ನೇ ಸ್ಥಾನ ಪಡೆದರು. ಪ್ರತಿ ರೆಪೆಷಾಜ್‌ನಲ್ಲಿ ಮೊದಲ ಎರಡು ಸ್ಥಾನ ಪಡೆದವರು ಸೆಮಿಫೈನಲ್ ತಲುಪುತ್ತಾರೆ. ದಕ್ಷಿಣ ಆಫ್ರಿಕಾದ ಮರಿಯೋನ್ ಫೌರಿ (12.79 ಸೆ.) ಮತ್ತು ಡಚ್ ಅಥ್ಲೀಟ್ ಮಾಯ್ಕೆ ಟಿನ್–ಎ–ಲಿಮ್ ಅವರು ರೆಪೆಷಾಜ್ ಹೀಟ್ 1ರಿಂದ ಸೆಮಿಫೈನಲ್‌ಗೆ ಮುನ್ನಡೆದರು.

ಅಂತಾರಾಷ್ಟ್ರೀಯ ಕುಸ್ತಿಗೆ ಫೊಗಾಟ್ ವಿದಾಯ | ಭಾವನಾತ್ಮಕ ಪೋಸ್ಟ್ | ಇನ್ನೂ ಇದೆ ಪದಕ ನಿರೀಕ್ಷೆ

ಕುಸ್ತಿ ಗೆದ್ದಿದೆ, ನಾನು ಸೋತಿದ್ದೇನೆ

ಪ್ಯಾರಿಸ್: 50 ಕೆ.ಜಿ ಕುಸ್ತಿ ವಿಭಾಗದ ಸೆಮಿಸ್‌ನಲ್ಲಿ ಭರ್ಜರಿ ಗೆಲುವು ಸಾಧಿಸಿ ಫೈನಲ್‌ಗೇರುವ ಮೂಲಕ ಚಿನ್ನ ಅಥವಾ ಬೆಳ್ಳಿಯ ಪದಕದ ನಿರೀಕ್ಷೆಯಲ್ಲಿದ್ದಾಗಲೇ ಅನರ್ಹಗೊಂಡಿರುವ ಕುಸ್ತಿಪಟು ವಿನೇಶ್ ಫೊಗಾಟ್ ಬೇಸರದಿಂದಲೇ ಕುಸ್ತಿಗೆ ವಿದಾಯ ಹೇಳಿದ್ದಾರೆ. ಭಾರತ ಈ ಬಾರಿ ಚಿನ್ನ, ಬೆಳ್ಳಿ ಹತ್ತಿರ ಹೋಗಿ ಸೋಲನುಭವಿಸುತ್ತಿದೆ. ಈ ಹಿಂದೆ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಅವರು ಗೆಲುವಿನ ಸನಿಹಕ್ಕೆ ಹೋಗಿದ್ದರು. ಆದರೆ ಕೊನೆಯಲ್ಲಿ ಸೋಲನುಭವಿಸಿದ್ದರು.

ಅವರಲ್ಲದೆ, ಅನೇಕ ಆಟಗಾರರು ಈ ಬಾರಿ ಸೆಮಿಸ್ ಹತ್ತಿರ ಹೋಗಿ ಸೋಲನುಭವಿಸಿದ್ದಾರೆ. ಈ ಮಧ್ಯೆ ಸೆಮಿಸ್‌ನಲ್ಲೂ ಭರ್ಜರಿ ಗೆಲುವು ಸಾಧಿಸುವ ಮೂಲಕ ಫೈನಲ್ ಪ್ರವೇಶಿಸಿ ಪದಕ ಖಚಿತ ಪಡಿಸಿಕೊಂಡಿದ್ದ ವಿನೇಶ್ ಫೊಗಾಟ್ ಅವರು ಅನರ್ಹರಾಗಿ ನಿರಾಸೆ ಅನುಭವಿಸಿದ್ದರು. ಈ ಬೆನ್ನಲ್ಲೇ ಕುಸ್ತಿಗೆ ಅವರು ನಿವೃತ್ತಿ ಘೋಷಿಸಿದ್ದಾರೆ. ಈ ಬಗ್ಗೆ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಭಾವುಕ ಸಂದೇಶ ಪ್ರಕಟಿಸಿರುವ ಅವರು, ಅಮ್ಮಾ, ನನ್ನ ವಿರುದ್ಧ ಕುಸ್ತಿ ಗೆದ್ದಿದೆ, ನಾನು ಸೋಲನುಭವಿಸಿದ್ದೇನೆ' ಎಂದಿದ್ದಾರೆ.

ನಿರಾಶಾದಾಯಕ ನಿವೃತ್ತಿ: ಒಲಿಂಪಿಕ್ಸ್‌ನಲ್ಲಿ ಇದೇ ಮೊದಲ ಬಾರಿಗೆ ಭಾರತದ ಮಹಿಳಾ ಕುಸ್ತಿಪಟು ರೋಚಕವಾಗಿ ಫೈನಲ್‌ಗೆ ಪ್ರವೇಶಿಸಿದ್ದರು. ವಿನೇಶ್ ಫೊಗಾಟ್ ಖಚಿತವಾಗಿ ಬಂಗಾರ ಗೆಲ್ಲುವ ನಿರೀಕ್ಷೆಯಲ್ಲಿದ್ದರು. ಆದರೆ, ಪದಕ ಸುತ್ತಿನ ಪಂದ್ಯಕ್ಕೂ ಮುನ್ನ ದೇಹದ ತೂಕದಲ್ಲಿ ಕೇವಲ 100 ಗ್ರಾಂ ಅಧಿಕವಿದ್ದ ಕಾರಣದಿಂದ, ಅವರನ್ನು ಫೈನಲ್‌ನಿಂದ ಅನರ್ಹಗೊಳಿಸಲಾಯಿತು. ಇದಾದ ಒಂದು ದಿನದಲ್ಲೇ ಅವರು ನಿವೃತ್ತಿ ಘೋಷಣೆ ಮಾಡಿದ್ದಾರೆ.

ವಿನೇಶ್ ಫೊಗಾಟ್ ಸಂದೇಶ: ಅಮ್ಮಾ, ನನ್ನ ವಿರುದ್ಧ ಕುಸ್ತಿ ಗೆದ್ದಿದೆ, ನಾನು ಸೋತೆ, ಕ್ಷಮಿಸಿ. ನಿನ್ನ ಕನಸು, ನನ್ನ ಧೈರ್ಯ ಎಲ್ಲ ಭಗ್ನವಾಯಿತು. ನನ್ನ ಧೈರ್ಯ ಸಂಪೂರ್ಣ ಛಿದ್ರವಾಗಿದೆ, ಈಗ ಹೆಚ್ಚಿನ ಶಕ್ತಿ ಉಳಿದಿಲ್ಲ' ಎಂದು ವಿನೇಶ್ ಫೊಗಾಟ್ ಬರೆದುಕೊಂಡಿದ್ದಾರೆ. ಕುಸ್ತಿಗೆ ವಿದಾಯ. ನಿಮ್ಮೆಲ್ಲರಿಗೂ ನಾನು ಸದಾ ಋಣಿಯಾಗಿರುತ್ತೇನೆ, ಕ್ಷಮಿಸಿ ಎಂದು ವಿನೇಶ್ ಫೊಗಾಟ್ ಎಕ್ಸ್ ಸಂದೇಶದಲ್ಲಿ ಉಲ್ಲೇಖಿಸಿದ್ದಾರೆ.

5 ಚಿನ್ನ: ಫೊಗಾಟ್ ಅವರು ಕಾಮನ್ ವೆಲ್ತ್ ಗೇಮ್ಸ್‌ನಲ್ಲಿ ಮೂರು ಬಾರಿ ಏಷ್ಯನ್ ಗೇಮ್ಸ್‌ನಲ್ಲಿ ಒಂದು ಬಾರಿ ಹಾಗೂ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಒಂದು ಬಾರಿ ಚಿನ್ನದ ಪದಕವನ್ನು ಗೆದ್ದಿದ್ದಾರೆ. ಅಲ್ಲದೆ, ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಅವರು 3 ಬೆಳ್ಳಿ ಪದಕ ಗೆದ್ದಿದ್ದಾರೆ.ಉಳಿದಂತೆ ಮೂರು ವಿಭಾಗದಲ್ಲಿ ಸೇರಿಸಿ ಒಟ್ಟು 7 ಕಂಚಿನ ಪದಕ ಗೆದ್ದಿದ್ದಾರೆ.

ಫೊಗಾಟ್‌ಗೆ 4 ಕೋಟಿ ಬಹುಮಾನ: ಫೈನಲ್‌ಗೇರಿ ಅನರ್ಹರಾದ ವಿನೇಶ್ ಫೊಗಾಟ್ ಅವರಿಗೆ ಹರಿಯಾಣ ಸರಕಾರ 4ಕೋಟಿ ಬಹುಮನ ಘೋಷಿಸಿದೆ. ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರು ವಿನೀಶ್ ಫೊಗಾಟ್ ಫೈನಲ್‌ನಲ್ಲಿ ಅನರ್ಹ ನಂತರ ಭಾರೀ ದುಃಖ ವ್ಯಕ್ತಪಡಿಸಿದ್ದಾರೆ. ಇದೀಗ ವಿನೀಶ್ ಫೋಗಟ್ ಅವರಿಗೆ ಎಲ್ಲ ರೀತಿಯ ಗೌರವಗಳು ಸಿಗಬೇಕು. ಅದಕ್ಕೆ ನಮ್ಮ ಸರಕಾರ ಬದ್ಧವಾಗಿದೆ ಎಂದು ಹೇಳಿದ್ದಾರೆ. ಹರಿಯಾಣದಲ್ಲಿ ಸರಕಾರ ಒಲಿಂಪಿಕ್‌ನಲ್ಲಿ ಕಂಚು, ಬೆಳ್ಳಿ, ಚಿನ್ನ ಗೆದ್ದವರಿಗೆ ವಿಶೇಷ ಗೌರವ ನೀಡಲಾಗುತ್ತದೆ. ಇದೀಗ ಈ ಗೌರವ ವಿನೀಶ್ ಫೋಗಟ್ ಅವರಿಗೂ ನೀಡಲು ಸರಕಾರ ಮುಂದಾಗಿದೆ. ಕ್ರೀಡಾ ನೀತಿಯ ಪ್ರಕಾರ, ಹರಿಯಾಣ ಸರಕಾರವು ಚಿನ್ನ ವಿಜೇತರಿಗೆ 6 ಕೋಟಿ, ಬೆಳ್ಳಿ ವಿಜೇತರಿಗೆ 4 ಕೋಟಿ ಮತ್ತು ಕಂಚು ವಿಜೇತರಿಗೆ 2.5 ಕೋಟಿ ರು. ನೀಡುತ್ತದೆ.

ಇನ್ನೂ ರಜತ ನಿರೀಕ್ಷೆ: ಒಲಿಂಪಿಕ್ಸ್ ಸ್ಪರ್ಧೆಯಿಂದ ಅನರ್ಹಗೊಂಡ ಬಳಿಕ ವಿನೇಶ್ ಫೊಗಟ್ ಅವರು ತನಗೆ ಕನಿಷ್ಠ ಬೆಳ್ಳಿ ಪದಕವನ್ನಾದರೂ ನೀಡಬೇಕು ಎಂದು ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಇದೀಗ ಸಿಎಎಸ್ ವಿನೇಶ್ ಅವರ ಮನವಿಯನ್ನು ಸ್ವೀಕರಿಸಿದ್ದು ವಿಚಾರಣೆ ನಡೆಸಲು ಮುಂದಾಗಿದೆ. ಈ ಪ್ರಕರಣದ ಕುರಿತು ಅಂತಿಮ ನಿರ್ಧಾರ ಇನ್ನಷ್ಟೇ ಬರಬೇಕಿದೆ. ಸಿಎಎಸ್ ವಿಚಾರಣೆಯಲ್ಲಿ ವಿನೇಶ್ ಪರ ಜೊಯೆಲ್ ಮೊನ್ಲೂಯಿಸ್, ಎಸ್ಟೆಲ್ಲೆ ಇವನೊವಾ, ಹಬ್ಬೈನ್ ಎಸ್ಟೆಲ್ಲೆ ಕಿಮ್ ಮತ್ತು ಚಾರ್ಲ್ಸ್ ಆಮ್ಸನ್ ವಾದ ಮಂಡಿಸಲಿದ್ದಾರೆ.

ಪಂಘಲ್ ಗಡಿಪಾರು

ಪ್ಯಾರಿಸ್: ವಿನೇಶ್ ಫೊಗಾಟ್ ಅವರ ನಿವೃತ್ತಿ ಬೆನ್ನಲ್ಲೇ ಭಾರತಕ್ಕೆ ಮತ್ತೊಂದು ಹಿನ್ನಡೆಯಾಗಿದೆ. ಭಾರತದ ಮತ್ತೊಬ್ಬ ಪ್ರಮುಖ ಕುಸ್ತಿಪಟು ಅಂತಿಮ್ ಪಂಘಲ್ ಅವರನ್ನು ಅಶಿಸ್ತಿನ ಕಾರಣದಿಂದಾಗಿ ಪ್ಯಾರಿಸ್‌ನಿಂದ ಗಡೀಪಾರು ಮಾಡಲು ನಿರ್ಧರಿಸಲಾಗಿದೆ. ಈ ಮಧ್ಯೆ ಬುಧವಾರ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಅಂತಿಮ್ ಟರ್ಕಿಯ ಯೆಟ್ಗಿಲ್ ಝೆನೆಪ್ ವಿರುದ್ಧ 0–10 ಅಂತರದಲ್ಲಿ ಸೋತಿದ್ದಾರೆ.

ಒಲಿಂಪಿಕ್ ಗೇಮ್ಸ್ ವಿಲೇಜ್‌ಗೆ ಪ್ರವೇಶಿಸಲು ಅಂತಿಮ್ ಪಂಘಲ್ ಅವರ ಅಧಿಕೃತ ಕಾರ್ಡ್ ಅನ್ನು ಸಹೋದರಿ ನಿಶಾ ಬಳಸಿ ಸಿಕ್ಕಿಬಿದ್ದಿದ್ದಾರೆ. ಒಲಿಂಪಿಕ್ ಗೇಮ್ಸ್ ವಿಲೇಜ್‌ಗೆ ಆಟಗಾರರಲ್ಲದವರು ಪ್ರವೇಶಿಸುವಂತಿಲ್ಲ. ಹೀಗಾಗಿ ಅಂತಿಮ್ ಪಂಘಲ್ ಅವರ ಕುಟುಂಬವನ್ನು ಗಡೀಪಾರು ಮಾಡಲಾಗುವುದು ಎಂದು ಒಲಿಂಪಿಕ್ ಸಮಿತಿ ಅಧಿಕಾರಿಗಳು ತಿಳಿಸಿದ್ದಾರೆ. ಪ್ರಿಕ್ವಾಟರ್ ಫೈನಲ್‌ನಲ್ಲಿ ಸೋತ ನಂತರ ಅಂತಿಮ್ ಪಂಘಲ್ ಗೇಮ್ಸ್ ವಿಲೇಜ್ ತೊರೆದು ತನ್ನ ತರಬೇತುದಾರ ಮತ್ತು ಸಹೋದರಿ ತಂಗಿದ್ದ ಹೋಟೆಲ್‌ಗೆ ತೆರಳಿದ್ದರು. ಈ ವೇಳೆ ಅವರು ತನ್ನ ಅಧಿಕೃತ ಐಡಿ ಕಾರ್ಡ್ ಅನ್ನು ಸಹೋದರಿ ನಿಶಾ ಅವರಿಗೆ ನೀಡಿ ಗೇಮ್ಸ್ ವಿಲೇಜ್‌ಗೆ ತೆರಳಿ ಬ್ಯಾಗ್ ತರುವಂತೆ ಸೂಚಿಸಿದ್ದರು. ಅದರಂತೆ ಗೇಮ್ಸ್ ವಿಲೇಜ್‌ನಿಂದ ಹೊರ ಬರುತ್ತಿದ್ದಾಗ ನಿಶಾ ಭದ್ರತಾ ಸಿಬ್ಬಂದಿ ಕೈಗೆ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದರು.

ವಿಚಾರಣೆ ಬಳಿಕ ಅವರನ್ನು ಬಿಡುಗಡೆ ಮಾಡಲಾಯಿತು. ಜತೆಗೆ ಶಿಸ್ತು ಉಲ್ಲಂಘಿಸಿದ ಕಾರಣಕ್ಕೆ ಅಂತಿಮ್ ಪಂಘಲ್ ಅವರ ಇಡೀ ಪರಿವಾರವನ್ನೇ ಗಡೀಪಾರು ಮಾಡಲು ಅಧಿಕಾರಿಗಳು ನಿರ್ಧರಿಸಿದ್ದಾರೆ.

ಸಹಾಯ ಸಿಬ್ಬಂದಿ ವಿರುದ್ಧವೂ ಆರೋಪ

ಇದಲ್ಲದೆ ಅಂತಿಮ್ ಅವರ ಸಹಾಯಕ ಸಿಬ್ಬಂದಿ ವಿಕಾಸ್ ಮತ್ತು ಭಗತ್ ಕುಡಿದು ಕ್ಯಾಬ್‌ನಲ್ಲಿ ಪ್ರಯಾಣಿಸಿದ್ದಾರೆ ಮತ್ತು ಬಾಡಿಗೆ ಹಣ ಕೊಡಲು ನಿರಾಕರಿದ್ದಾರೆ ಎಂದು ಚಾಲಕ ಪೊಲೀಸರಿಗೆ ಕರೆ ಮಾಡಿ ದೂರು ನೀಡಿದ್ದಾನೆ. ಈ ಎಲ್ಲ ಹಿನ್ನಲೆಯಲ್ಲಿ 19 ವರ್ಷದ ಅಂಡರ್ 20 ವಿಶ್ವ ಚಾಂಪಿಯನ್ ಅಂತಿಮ್ ಅವರನ್ನೂ ಪೊಲೀಸರು ಕರೆಸಿಕೊಂಡು ಹೇಳಿಕೆ ದಾಖಲಿಸಿದ್ದಾರೆ. ಆದರೆ ಅಂತಿಮ್ ಮತ್ತು ಅವರ ಸಿಬ್ಬಂದಿ ಈ ಎಲ್ಲ ಆರೋಪಗಳನ್ನು ನಿರಾಕರಿಸಿದ್ದಾರೆ.

ವೇಟ್ ಲಿಫ್ಟಿಂಗ್‌ನಲ್ಲಿ ನಿರಾಸೆ | ಮತ್ತೆ ಕಂಚು ಕಳೆದುಕೊಂಡ ಭಾರತ

ನಾಲ್ಕನೇ ಸ್ಥಾನಕ್ಕೆ ಮೀರಾಬಾಯಿ ಚಾನು

ಪದಕ ಗೆಲ್ಲಲು ಇದು ನನ್ನ ಅತ್ಯುತ್ತಮ ಪ್ರಯತ್ನವಾಗಿತ್ತು. ಆದರೆ ಸೋಲು–ಗೆಲುವು ಅದೃಷ್ಟದ ಭಾಗ. ಮುಂದಿನ ಬಾರಿ ದೇಶಕ್ಕಾಗಿ ಪದಕ ಗೆಲ್ಲಲು ಶಕ್ತಿಮೀರಿ ಪ್ರಯತ್ನಿಸುತ್ತೇನೆ. ಈ ಬಾರಿ ಪದಕ ನೀಡಲು ಸಾಧ್ಯವಾಗಲಿಲ್ಲ ಹಾಗಾಗಿ ಕ್ಷಮೆ ಯಾಚಿಸುತ್ತೇನೆ. ನಾನು ಇನ್ನೂ ಹೆಚ್ಚು ಪ್ರಯತ್ನಿಸುತ್ತೇನೆ ಮತ್ತು ಮುಂಬರುವ ಎಲ್ಲಾ ಸ್ಪರ್ಧೆಗಳಲ್ಲಿ ನನ್ನ ಅತ್ಯುತ್ತಮ ಪ್ರದರ್ಶನವನ್ನು ನೀಡುತ್ತೇನೆ.

ಮೀರಾಬಾಯಿ ಚಾನು, ವೇಟ್‌ಲಿಫ್ಟರ್



ಪ್ಯಾರಿಸ್: 49 ಕೆಜಿ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಮೀರಾಬಾಯಿ ಚಾನು ನಾಲ್ಕನೇ ಸ್ಥಾನ ಪಡೆದು ಪದಕದ ಸ್ಪರ್ಧೆಯಿಂದ ಹೊರಬಿದ್ದಿದ್ದು ನಿರಾಸೆ ಮೂಡಿಸಿದ್ದಾರೆ. ಈ ಹಿಂದೆ ಭಾರತೀಯ ಆಟಗಾರರು ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ನಾಲಕು ಆಟಗಾರರು ಪದಕದ ಸನಿಹಕ್ಕೆ ಹೋಗಿ ನಿರಾಸೆ ಅನುಭವಿಸಿದ್ದಾರೆ. ಅರ್ಜುನ್ ಬಬುಟಾ, ಮನು, ಸೇನ್ ಅವರ ನಂತರ ಮೀರಾಬಾಯಿ ಚಾನು ಅವರೂ ಸಹ ನಾಲ್ಕನೇ ಸ್ಥಾನದಲ್ಲಿ ಆಟ ನಿಲ್ಲಿಸಿದ್ದಾರೆ. ಇದಕ್ಕಿಂದ ದೊಡ್ಡ ನಿರಾಶೆಯೆಂದರೆ ಮೀರಾ ಬಾಯಿ ಚಾನು ಕೇವಲ ಒಂದು ಕೆ.ಜಿ ಅಂತರದಲ್ಲಿ 3ನೇ ಸ್ಥಾನವನ್ನು ಕಳೆದುಕೊಂಡರು.

ಬುಧವಾರ ರಾತ್ರಿ ನಡೆದ 49 ಕೆಜಿ ಸ್ಪರ್ಧೆಯಲ್ಲಿ ಮೀರಾಬಾಯಿ ಚಾನು ಒಟ್ಟು 199 ಕೆಜಿ ಭಾರ ಎತ್ತುವ ಮೂಲಕ ನಾಲ್ಕನೇ ಸ್ಥಾನ ಪಡೆದು ಪದಕದ ಸ್ಪರ್ಧೆಯಿಂದ ಹೊರಬಿದ್ದಿದ್ದಾರೆ. ಮೂರನೇ ಸ್ಥಾನ ಪಡೆದ ಥಾಯ್ಲೆಂಡ್‌ನ ಲಿಫ್ಟರ್ ಒಟ್ಟು 200 ಕೆಜಿ ತೂಕವನ್ನು ಎತ್ತಿದರೆ, ಚೀನಾದ ಜಿಹುಯಿ ಹೌ 206 ಕೆಜಿ ತೂಕ ಎತ್ತಿ ಮತ್ತೊಮ್ಮೆ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು. ಉಳಿದಂತೆ ರೊಮೇನಿಯಾದ ಮಿಹೇಲಾ ವೆಲೆಂಟಿನಾ 205 ಕೆಜಿ ತೂಕ ಎತ್ತಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು.

ಗಾಯಕ್ಕೆ ತುತ್ತು: ಪದಕದ ರೇಸ್‌ನಿಂದ ಹೊರಬಿದ್ದ ಬಳಿಕ ಮಾತನಾಡಿರುವ ಮೀರಾಬಾಯಿ ಚಾನು, ವೇಟ್ ಲಿಫ್ಟಿಂಗ್ ವೇಳೆ ಮುಟ್ಟಿನ ನೋವಿನಿಂದ ಬಳಲುತ್ತಿದ್ದೆ. ಇದು ನನ್ನ ಮೂರನೇ ದಿನವಾಗಿತ್ತು. ಹೀಗಾಗಿ ಇದು ನನ್ನ ಆಟದ ಮೇಲೆ ಪರಿಣಾಮ ಬೀರಿತು ಎಂದಿದ್ದಾರೆ. ಆಟಗಾರ್ತಿಯರಿಗೆ ಏನಾದರೊಂದು ಸಮಸ್ಯೆ ಕಾಡುತ್ತಲೇ ಇರುತ್ತದೆ. ಕೆಲವೊಮ್ಮೆ ಗಾಯಗಳಿಂದ ಸಮಸ್ಯೆ ಎದುರಾದರೆ, ಇನ್ನು ಕೆಲವೊಮ್ಮೆ ಮಹಿಳೆಯರ ವೈಯಕ್ತಿಕ ಸಮಸ್ಯೆಗಳು ಕಾರಣವಾಗುತ್ತವೆ. ನಾನು ಮೊದಲ ಬಾರಿಗೆ ರಿಯೋ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದೆ. ಅಲ್ಲೂ ಪದಕ ನನ್ನ ಕೈಯಿಂದ ಜಾರಿತ್ತು. ರಿಯೊದಲ್ಲಿ ಪದಕ ಗೆಲ್ಲುವಲ್ಲಿ ವಿಫಲಳಾಗಿದ್ದೆ. ಆ ನಂತರ ನಾನು ವಿಶ್ವ ಚಾಂಪಿಯನ್ ಆದೆ. 2020ರಲ್ಲಿ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದೆ. ಈ ಬಾರಿಯೂ ನನ್ನ ಕೈಲಾದ ಪ್ರಯತ್ನ ಮಾಡಿದ್ದೇನೆ. ನನ್ನ ಅತ್ಯುತ್ತಮ ಪ್ರದರ್ಶನ ನೀಡಿದ್ದೇನೆ. ದೇಶಕ್ಕಾಗಿ ಪದಕ ಗೆಲ್ಲಬೇಕೆಂಬ ಆಸೆಯಿತ್ತು. ಆದರೆ ಏಷ್ಯನ್ ಗೇಮ್ಸ್‌ನಲ್ಲಿಯೇ ನನಗೆ ದೊಡ್ಡ ಗಾಯವಾಗಿತ್ತು. ಚೇತರಿಸಿಕೊಳ್ಳಲು ನನಗೆ 4 ರಿಂದ 5 ತಿಂಗಳು ಬೇಕಾಯಿತು. ಹೀಗಾಗಿ ಒಲಿಂಪಿಕ್ಸ್‌ಗೆ ತಯಾರಿ ಮಾಡಿಕೊಳ್ಳಲು ನನಗೆ ಕಡಿಮೆ ಸಮಯವಿತ್ತು ಎಂದಿದ್ದಾರೆ.

ಪ್ರಣಯ ಸಖಿ ಜತೆಗೆ ಬಂದ ಗಣಿ

> ಗಣೇಶ್ ಅವರ ಸಿನಿಮಾ ಎಂದ ಮೇಲೆ ಸಹಜವಾಗಿಯೇ ನಿರೀಕ್ಷೆಯಿರುತ್ತದೆ. ಇದರಲ್ಲಿ ಒಂದಷ್ಟು ಹೊಸತನವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದೇನೆ. ಇದನ್ನು ಪ್ರೇಕ್ಷಕರು ಹೇಗೆ ಸ್ವೀಕರಿಸುತ್ತಾರೆ ಎಂಬುದನ್ನು ಕಾದು ನೋಡಬೇಕು.

ಪ್ರಶಾಂತ್.ಟಿ.ಆರ್

ಕೃಷ್ಣಂ ಪ್ರಣಯ ಸಖಿ ಶೀರ್ಷಿಕೆ ಕೇಳಿದಾಕ್ಷಣ ಇದು ಲವ್ ಸ್ಟೋರಿಯ ಸಿನಿಮಾ ಎನ್ನುವುದು ಖಚಿತವಾಗಿದೆ. ಈ ಬಾರಿ ಗಣಿ ಪ್ರಣಯ ಸಖಿಯರ ಜತೆಗೆ ಬಂದಿದ್ದು, ಹಾಡಿನಲ್ಲೇ ಮೋಡಿ ಮಾಡಿದ್ದಾರೆ. ದಂಡುಪಾಳ್ಯದಂತಹ ಕ್ರೈಂ, ಥ್ರಿಲ್ಲರ್ ಸಿನಿಮಾಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿರುವ ನಿರ್ದೇಶಕ ಶೀನಿವಾಸ ರಾಜು ಈ ಚಿತ್ರವನ್ನು ನಿರ್ದೇಶಿಸಿರುವುದು ವಿಶೇಷ. ತಮ್ಮ ಚಿತ್ರದ ಕುರಿತಂತೆ ಶ್ರೀನಿವಾಸ ರಾಜು ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್: ಚಿತ್ರದಲ್ಲಿ ಸಂಪೂರ್ಣ ಲವ್ ಸ್ಟೋರಿ ಬೆರೆತಿದಿಯೆ?

ಶ್ರೀನಿವಾಸ ರಾಜು: ಇಲ್ಲಿ ನವಿರಾದ ಪ್ರೇಮಕಥೆ ಇದೆ. ಅದರ ಜತೆಗೆ ಕೌಟುಂಬಿಕ ಕಥೆಯೂ ಬೆರೆತಿದ್ದು, ಕುಟುಂಬ ಸಮೇತ ಕುಳಿತು ನೋಡಬಹುದಾದ ಸಿನಿಮಾವಾಗಿದೆ. ಲವ್ ಸ್ಟೋರಿ ಅಂದಾಕ್ಷಣ ಇಲ್ಲಿ ಹೆಚ್ಚಾಗಿ ಎಮೋಷನ್‌ಗೆ ಒತ್ತು ನೀಡಿಲ್ಲ. ಗಣೇಶ್ ಅವರ ಈ ಹಿಂದಿನ ಸಿನಿಮಾಗಳಿಗೆ ಹೋಲಿಸಿದರೆ ಇಲ್ಲಿ ಹೊಸತನ ಕಾಣಬಹುದು.

ಡ್ರಾಮಾ ಬದಲಾಗಿ ನೈಜತೆಗೆ ಪ್ರಾಮುಖ್ಯತೆ ನೀಡಲಾಗಿದೆ. ಹಾಗಾಗಿ ನಮ್ಮ ಸಿನಿಮಾ ಎಲ್ಲರಿಗೂ ಮೆಚ್ಚುಗೆಯಾಗಲಿದೆ ಎಂಬ ನಂಬಿಕೆ ನನಗಿದೆ.

ವಿ.ಸಿ: ಚಿತ್ರದ ಟ್ರೇಲರ್ ರಿಲೀಸ್ ಆಗಿಲ್ಲವಲ್ಲ ?

ಶ್ರೀನಿವಾಸ ರಾಜು: ಕೃಷ್ಣಂ ಪ್ರಣಯ ಸಖಿ, ಮಾಸ್, ಥ್ರಿಲ್ಲರ್ ಸಿನಿಮಾವಲ್ಲ. ಇದು ಪಕ್ಕಾ ಲವ್ ಸ್ಟೋರಿಯ ಚಿತ್ರ, ಹಾಗಾಗಿ ಟ್ರೇಲರ್ ಅಗತ್ಯವಿರಲಿಲ್ಲ. ಸಿನಿಮಾದ ಕಥೆ ಬರೆಯುವಾಗಲೇ ಟ್ರೇಲರ್ ರಿಲೀಸ್ ಮಾಡದಿರಲು ನಿರ್ಧರಿಸಿದ್ದೆ. ಪ್ರೇಕ್ಷಕರಿಗೆ ಸಿನಿಮಾದ ಬಗ್ಗೆ ಕ್ಲ್ಯು ಕೊಡುವುದಕ್ಕಿಂತ ಅವರೇ ಚಿತ್ರಮಂದಿರಗಳಿಗೆ ಬಂದು ಚಿತ್ರ ನೋಡಿ ತಿಳಿದರೆ ಚೆಂದ ಅಲ್ಲವೆ. ಚಿತ್ರದ ಕಥೆಗೆ ತಕ್ಕಂತೆ ಹಾಡುಗಳು ಮಧುರವಾಗಿ ಮೂಡಿಬಂದಿವೆ. ಈಗಾಗಲೇ ಹಾಡುಗಳು ರಿಲೀಸ್ ಆಗಿದ್ದು ಸಿನಿಪ್ರಿಯರ ಮನಗೆದ್ದಿವೆ. ಹಾಡುಗಳೇ ನಮ್ಮ ಚಿತ್ರದ ಇನ್‌ವೆಟೇಷನ್.

> ಯಾವುದು ಪ್ಯಾನ್ ಇಂಡಿಯಾ ಸಿನಿಮಾವಾಗುವುದಿಲ್ಲ. ಪ್ರೇಕ್ಷಕರು ಸಿನಿಮಾ ಮೆಚ್ಚಿದರೆ ಅದೇ ಪ್ಯಾನ್ ಇಂಡಿಯಾ ಸಿನಿಮಾವಾಗುತ್ತದೆ. ನಮ್ಮ ಚಿತ್ರಕ್ಕೂ ಡಬ್ಬಿಂಗ್‌ಗೆ ಬೇಡಿಕೆ ಬಂದಿದೆ. ಮುಂದೆ ಕೃಷ್ಣಂ ಪ್ರಣಯ ಸಖಿ ಪ್ಯಾನ್ ಇಂಡಿಯಾ ಚಿತ್ರವಾಗಿ ಹೊರಹೊಮ್ಮಬಹುದು.

ವಿ.ಸಿ: ಕ್ರೈಂ, ಥ್ರಿಲ್ಲರ್ ಜಾನ್‌ನಿಂದ ಲವ್ ಸ್ಟೋರಿಯತ್ತ ಹೊರಳಿದ್ದೀರಲ್ಲಾ ?

ಶ್ರೀನಿವಾಸ ರಾಜು : ಈ ಹಿಂದೆಯೂ ನನ್ನವನು ಎಂಬ ಲವ್ ಸ್ಟೋರಿಯ ಚಿತ್ರ ನಿರ್ದೇಶಿಸಿದ್ದೆ. ಆ ಬಳಿಕ ದಂಡುಪಾಳ್ಯದಂತಹ ಕ್ರೈಂ,ಥ್ರಿಲ್ಲರ್ ಜಾನರ್ ಸಿನಿಮಾ ನಿರ್ದೇಶಿಸಿದೆ. ದಂಡುಪಾಳ್ಯ ಚಿತ್ರಕ್ಕೂ ಮೊದಲೇ ಪ್ರೇಮಕಥೆಯ ಸಿನಿಮಾ ಮಾಡಬೇಕು ಎಂದುಕೊಂಡಿದ್ದೆ. ಆದರೆ ಅದು ಸಾಧ್ಯವಾಗಿರಲಿಲ್ಲ. ಅಂತು ಬಹು ವರ್ಷಗಳ ಬಳಿಕ ಕೃಷ್ಣಂ ಪ್ರಣಯ ಸಖಿಯಂತಹ ಅಪರೂಪದ ಪ್ರೇಮಕಥೆಯನ್ನು ಪ್ರೇಕ್ಷಕರ ಮುಂದಿಡುತ್ತಿದ್ದೇನೆ.

ವಿ.ಸಿ : ಇದು ನೈಜ ಘಟನೆಯಾಧಾರಿತ ಕಥೆಯೆ?

ಶ್ರೀನಿವಾಸ ರಾಜು : ಹೌದು, ಇದು ನೈಜಘಟನೆಯಿಂದ ಸ್ಫೂರ್ತಿ ಪಡೆದು ಹೆಣೆದ ಕಥೆ. ದೂರದ ಮಿಯಾಮಿಯಲ್ಲಿ ಒಂದು ಘಟನೆ ನಡೆದಿತ್ತು. ಅದರ ಬಗ್ಗೆ ಲೇಖನ ಓದಿ ತಿಳಿದಿದ್ದೆ. ಅದನ್ನೇ ಆಧಾರವಾಗಿಟ್ಟುಕೊಂಡು ಈ ಕಥೆ ಹೆಣೆದಿದ್ದೇನೆ. ಇದೊಂದು ಬ್ಯೂಟಿಫುಲ್ ಲವ್ ಸ್ಟೋರಿಯಾಗಿದ್ದು, ಪ್ರತಿ ಪಾತ್ರಗಳು ನೈಜತೆಯಿಂದ ಮೂಡಿಬಂದಿವೆ.

ಮೀನಾಕ್ಷಿ ಕರೆತಂದ ವಿಕ್ರಮಾರ್ಕ

ಮಗಧೀರ ಸಿನಿಮಾದಲ್ಲಿ ಖಳನಾಯಕನ ಪಾತ್ರದಲ್ಲಿ ಮಿಂಚಿದ್ದ ನಟ ದೇವ್ ಗಿಲ್ ಈಗ ನಾಯಕನಾಗಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಅಹೋ ವಿಕ್ರಮಾರ್ಕ ಚಿತ್ರದಲ್ಲಿ ದೇವ್ ನಾಯಕನಟನಾಗಿ ನಟಿಸುತ್ತಿದ್ದು, ಈ ತಿಂಗಳ ಅಂತ್ಯದಲ್ಲಿ ತೆರೆಗೆ ಬರಲಿದೆ. ಅಹೋ ವಿಕ್ರಮಾರ್ಕ ಪ್ಯಾನ್ ಇಂಡಿಯಾ ಸಿನಿಮಾವಾಗಿದದು, ಕನ್ನಡದಲ್ಲಿಯೂ ರಿಲೀಸ್ ಆಗಲಿದೆ. ಊರ್ವಶಿ ಚಿತ್ರ ಮಂದಿರದಲ್ಲಿ ವಿಕ್ರಮಾರ್ಕನ, ಮೀನಾಕ್ಷಿ ಗೀತೆ ಬಿಡುಗಡೆಯಾಯಿತು. ಸಂಗೀತ ನಿರ್ದೇಶಕ ರವಿ ಬಸ್ರೂರು ಮೀನಾಕ್ಷಿ ಸಾಂಗ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ದೇವ್ ಅವರಿಗೆ ಸಿನಿಮಾ ಮೇಲೆ ಅಪಾರ ಪ್ರೀತಿ ಇದೆ, ಚಿತ್ರಮಂದಿರದಲ್ಲಿ ಅಹೋ ವಿಕ್ರಮಾರ್ಕ್ ಹೊಸ ಅನುಭವ ನೀಡಲಿದೆ ಎಂದು ರವಿ ಬಸ್ರೂರು ಹೇಳಿದರು.

ವಿಕ್ರಮಾರ್ಕ ವಿಭಿನ್ನ ಕಥೆಯನ್ನು ರೆಟ್ರೋ ಲುಕ್‌ನಲ್ಲಿ ಸಾಗಲಿದೆ, ದೇವ್ ಗಿಲ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದು, ಆ್ಯಕ್ಷನ್‌ನಲ್ಲಿ ಮಿಂಚಿದ್ದಾರೆ. ಮಗಧೀರ ಚಿತ್ರ ನೋಡಿ ಎಲ್ಲರೂ ಹರಸಿದ್ದೀರ ಅಂತೆಯೇ ಈ ಚಿತ್ರವನ್ನು ನೋಡಿ ಆಶೀರ್ವಧಿಸಿ ಎಂದು ದೇವಗಿಲ್ ಹೇಳಿದರು. ಮೀನಾಕ್ಷಿ ಹಾಡಿನಲ್ಲಿ ನಟ ದೇವಗಿಲ್ ನಾಯಕಿ ಚಿತ್ರ ಶುಕ್ಲಾ ಭರ್ಜರಿ ಸ್ಟೆಪ್ ಹಾಕಿದ್ದಾರೆ. ಕನ್ನಡ ಹಾಡಿಗೆ ವರದರಾಜು ಚಿಕ್ಕಬಳ್ಳಾಪುರ ಸಾಹಿತ್ಯ ಬರೆದಿದ್ದು, ರವಿ ಬಸ್ರೂರ್ ಸಂಗೀತ ಸಂಯೋಜಿಸಿದ್ದಾರೆ. ಮನೀಶ್ ದಿನಕರ್ ಕಂಠ ಸಿರಿಯಲ್ಲಿ ಹಾಡು ಮೂಡಿಬಂದಿದೆ. ಅಹೋ ವಿಕ್ರಮಾರ್ಕ ಸಿನಿಮಾಗೆ ನಿರ್ದೇಶಕ ತ್ರಿಕೋಟಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಪ್ರವೀಣ್ ತಾರ್ಡೆ, ತೇಜಸ್ವಿನಿ ಪಂಡಿತ್, ಪೋಸಾನಿ ಮುರಳಿ ಕೃಷ್ಣ, ಬಿಟ್ಟಿರಿ ಸತ್ತಿ, ಸಯಾಜಿ ಶಿಂಧೆ, ಕಾಲಕೇಯ ಪ್ರಭಾಕರ್, ವಿಕ್ರಮ್ ಶರ್ಮಾ ತಾರಾಬಳಗದ ಲ್ಲಿದಲ್ಲಿದ್ದಾರೆ. ಆರತಿ ದೇವಿಂದರ್ ಗಿಲ್, ಮೀಹಿರ್ ಕುಲಕರ್ಣಿ, ಅಶ್ವಿನಿ ಕುಮಾರ್ ಮಿಶ್ರಾ, ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಸ್ವಾತಂತ್ರ್ಯ ದಿನಕ್ಕೆ ತಂಗಲಾನ್

ಪ.ರಂಜಿತ್ ನಿರ್ದೇಶನದಲ್ಲಿ ಸಿದ್ಧವಾಗಿರುವ ತಂಗಲಾನ್ ಆರಂಭದಿಂದಲೂ ನಿರೀಕ್ಷೆ ಹೆಚ್ಚಿಸಿದೆ. ಇದು ಸ್ವಾತಂತ್ರ್ಯ ಪೂರ್ವ ಕಥೆಯಾಗಿದ್ದು, ಸ್ವಾತಂತ್ರ್ಯ ದಿನದಂದೇ ತೆರೆಗೆ ಬರಲಿದೆ. ಚಿಯಾನ್ ವಿಕ್ರಮ್ ನಾಯಕನಾಗಿ ನಟಿಸಿದ್ದು ವಿಭಿನ್ನ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಕೆಜಿಎಫ್‌ನಲ್ಲಿ ನಡೆದಿರಬಹುದಾದ ಒಂದು ಕಾಲ್ಪನಿಕ ಕಥೆಯನ್ನು ಆಧರಿಸಿ ಚಿತ್ರ ಸಾಗಲಿದೆ. ಮಾಳವಿಕಾ ಮೋಹನನ್, ಪಾರ್ವತಿ ಮೆನನ್, ಬ್ರಿಟಿನ್ ನಟ ಡೇನಿಯಲ್ ಮುಂತಾದವರು ನಟಿಸಿದ್ದಾರೆ.

ನಾನು ಅನ್ನಿಯನ್, ಪಿತಾಮಗನ್ ಚಿತ್ರದಲ್ಲಿ ವಿಭಿನ್ನ ಪಾತ್ರದಲ್ಲಿ ನಟಿಸಿದ್ದೆ, ತಂಗಲಾನ್ ಅದಕ್ಕೂ ಮೀರಿದ ಸಿನಿಮಾ, ಈ ಚಿತ್ರದ ಪ್ರತಿ ದೃಶ್ಯಕ್ಕೂ ನಾವು ಸಾಕಷ್ಟು ಶ್ರಮವಹಿಸಿದ್ದೇವೆ. ಚಿತ್ರೀಕರಣ ಸಮಯದಲ್ಲಿ ಸಾಕಷ್ಟು ಏಟು ಬಿದ್ದಿವೆ. ಆದರೆ ನಮ್ಮ ಪಾತ್ರ ಆ ನೋವನ್ನೆಲ್ಲ ಮರೆಸುತ್ತಿತ್ತು. ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಕೆಜಿಎಫ್‌ನಲ್ಲಿ ಏನಾಗಿದ್ದಿರಬಹುದು, ಆಗಿನ ಬುಡಕಟ್ಟು ಜನಾಂಗದವರು ಹೇಗಿದ್ದಿರಬಹುದು ಎಂದು ನಮಗೆ ಗೊತ್ತಿಲ್ಲ. ಹಾಗಾಗಿ, ಯಾವ ದೃಶ್ಯವೂ ಸುಲಭವಾಗಿರಲಿಲ್ಲ. ಇಲ್ಲಿ ನಾವು ಅವರ ತರಹ ನಟನೆ ಮಾಡಬೇಕು ಎಂಬುದಕ್ಕಿಂತ, ಅವರ ತರಹ ಇರಬೇಕಿತ್ತು.

ತಂಗಲಾನ್ ನಮ್ಮನ್ನೆಲ್ಲ ಒಂದು ಶತಮಾನದ ಹಿಂದಕ್ಕೆ ಕರೆದೊಯ್ದಿತ್ತು ಎಂದು ನಟ ಚಿಯಾನ್ ವಿಕ್ರಮ್ ಹೇಳಿದರು.

ನಾನು ಮತ್ತು ವರಲಕ್ಷ್ಮೀ ಕನ್ನಡ ಚಿತ್ರದಲ್ಲಿ ನಟಿಸಿದ್ದ ಮಾಳವಿಕಾ ಮೋಹನ್ ತಂಗಲಾನ್‌ನಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಜ್ಞಾನವೇಲು ರಾಜ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ತಂಗಲಾನ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ತಮಿಳು, ಕನ್ನಡ ಸೇರಿದಂತೆ ಪಂಚಭಾಷೆಗಳಲ್ಲಿ ತೆರೆಗೆ ಬರಲಿದೆ.

ಪೆಪೆಯಲ್ಲಿ ಕಾಡಿನ ಮಕ್ಕಳು

ದೊಡ್ಮನೆ ಮೊಮ್ಮಗ ವಿನಯ್ ರಾಜ್‌ಕುಮಾರ್ ಪೆಪೆ ಸಿನಿಮಾದಲ್ಲಿ ನಟಿಸಿದ್ದು, ಮಾಸ್ ಅವತಾರ ತಾಳಿದಿದ್ದಾರೆ. ಪೆಪೆ ಚಿತ್ರದ ಟೀಸರ್ ಈಗಾಗಲೇ ಹಿಟ್ ಆಗಿದ್ದು ನಿರೀಕ್ಷೆ ಹೆಚ್ಚಿಸಿದೆ. ಅದರ ಜತೆಗೆ ಸದ್ಯ ಬಿಡುಗಡೆಯಾಗಿರುವ ಹಾಡು ಭರ್ಜರಿ ಸದ್ದು ಮಾಡುತ್ತಿದೆ. ಪೆಪೆ ಚಿತ್ರತಂಡ ಪ್ರಿಸೆಟ್ ಎಂಬ ಟ್ಯಾಗ್ ಲೈನ್‌ನಲ್ಲಿ ಚಿತ್ರದ ಹಾಡೊಂದನ್ನು ಬಿಡುಗಡೆ ಮಾಡಿದೆ. ಜೇನು ಕುರುಬ ಬುಡಗಟ್ಟು ಜನಾಂಗದ ಆಚಾರ ವಿಚಾರ ತೆರೆದಿಡುವ ಗೀತೆ ಇದಾಗಿದ್ದು, ಗಿರಿಜನ ಸಮಗ್ರ ಅಭಿವೃದ್ಧಿ ಕಲಾ ಸಂಸ್ಥೆಯ ಜೆ.ಜಿ.ಕುಮಾರ ದನಿಯಾಗಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ಸಂಯೋಜಿಸಿದ್ದಾರೆ.

ಶ್ರೀಲೇಶ್.ಎಸ್.ನಾಯರ್ ನಿರ್ದೇಶನಲ್ಲಿ ಮೂಡಿ ಬರುತ್ತಿರುವ ಪೆಪೆ ವಿಭಿನ್ನ ಸಿನಿಮಾವಾಗಿದೆ. ಕಾಜಲ್ ಕುಂದರ್ ನಾಯಕಿಯಾಗಿ ನಟಿಸಿದ್ದು, ಮಯೂರ್ ಪಟೇಲ್, ಯಶ್ ಶೆಟ್ಟಿ, ಬಲ ರಾಜ್‌ವಾಡಿ, ಮೇದಿನಿ ಕೆಳಮನೆ, ಅರುಣಾ ಬಾಲರಾಜ್, ನವಿನ್.ಡಿ.ಪಡೀಲ್ ತಾರಾಗಣದಲ್ಲಿದ್ದಾರೆ. ಅಭಿಷೇಕ್.ಜಿ.ಕಾಸರಗೋಡು ಛಾಯಾಗ್ರಹಣ, ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಡಾ. ರವಿವರ್ಮ, ಚೇತನ್ ಡಿಸೋಜಾ, ಡಿಫ್ರೆಂಟ್ ಡ್ಯಾನಿ, ನರಸಿಂಹ ತಂಡ ಚಿತ್ರದ ಸಾಹಸ ದೃಶ್ಯಗಳನ್ನು ನಿರ್ದೇಶನ ಮಾಡಿದೆ.

ಸಲಗನಿಗೆ ಭೀಮಬಲ

ಸ್ಯಾಂಡಲ್‌ವುಡ್ ಸಲಗ ದುನಿಯಾ ವಿಜಯ್, ಭೀಮನಾಗಿ ತೆರೆಯಲ್ಲಿ ಅಬ್ಬರಿಸುತ್ತಿದ್ದಾರೆ. ಭೀಮ ಮಾಸ್ ಕ್ಲಾಸ್ ಸಿನಿಮಾವಾಗಿದ್ದು, ಸಿನಿಪ್ರಿಯರ ಮನಗೆದ್ದಿದೆ. ಸಲಗನ ಯಶಸ್ಸಿನ ಖುಷಿಯಲ್ಲಿ ವಿಜಯ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಸಲಗ ಅಂಡರ್ ವರ್ಲ್ಡ್ ಕಥೆಯನ್ನು ಒಳಗೊಂಡಿತ್ತು. ಭೀಮ, ಸಮಾಜವನ್ನು ತಿದ್ದುವ ಕಥೆಯನ್ನು ಹೊತ್ತು ಬಂದಿದ್ದಾನೆ. ಡ್ರಗ್ಸ್ ದಂಧ, ರೌಡಿಸಂ ಸುತ್ತಲು ಕಥೆ ಸಾಗುತ್ತದೆ. ಸಮಾಜಘಾತುಕರನ್ನು ಭೀಮ ಹೇಗೆ ಮಟ್ಟ ಹಾಕುತ್ತಾನೆ ಎಂಬುದು ತೆರೆಯಲ್ಲಿ ರೋಚಕವಾಗಿ ಮೂಡಿಬಂದಿದೆ. ಇಲ್ಲಿ ಆ್ಯಕ್ಷನ್ ಸೆಂಟಿಮೆಂಟ್ ಎಲ್ಲವೂ ಬೆರೆತಿದೆ. ಇದರ ಜತೆಗೆ ಲವ್ ಸ್ಟೋರಿಯೂ ಮನಸೂರೆಗೊಳ್ಳುತ್ತದೆ. ರಾ ಸ್ಟೈಲ್‌ನಲ್ಲಿಯೂ ಸಿನಿಮಾ ಮೂಡಿಬಂದಿದ್ದು ಡ್ಯಾಷಿಂಗ್ ಡೈಲಾಗ್‌ಗಳೂ ಇವೆ. ಭೀಮನ ಜತೆಗೆ ಹೊಸಬರ ದಂಡೇ ಇದೆ. ಅಶ್ವಿನಿ, ಭೀಮನ ರಾಣಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ರಂಗಾಯಣ ರಘು, ಅಚ್ಯುತಕುಮಾರ್, ಗೋಪಾಲಕೃಷ್ಣ ದೇಶಪಾಂಡೆ ಅಂತಹ ಹಿರಿಯ ನಟರೂ ತಾರಾಗಣದಲ್ಲಿದ್ದಾರೆ. ಕೃಷ್ಣ ಸಾರ್ಥಕ್ ಹಾಗೂ ಜಗದೀಶ್ ಗೌಡ ಜಂಟಿಯಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ.

ಇಷ್ಟು ದಿನ ಸ್ಟಾರ್ ನಟರ ಸಿನಿಮಾಗಳು ತೆರೆಗೆ ಬಾರದೆ ಪ್ರೇಕ್ಷಕರು ಚಿತ್ರಮಂದಿರದತ್ತ ಸುಳಿದಿರಲಿಲ್ಲ. ಈಗ ಭೀಮ ಪ್ರೇಕ್ಷಕರ ಕೊರಗನ್ನು ನೀಗಿಸಿ ಮತ್ತೆ ಚಿತ್ರಮಂದಿರದತ್ತ ಕರೆತಂದಿದ್ದಾನೆ. ಎಲ್ಲೆಡೆ ಭೀಮನಿಗೆ ಭರ್ಜರಿ ಡಿಮ್ಯಾಂಡ್ ಇದ್ದು ಮುಚ್ಚಿದ್ದ ಚಿತ್ರಮಂದಿರಗಳು ತೆರೆದಿವೆ. ಪ್ರದರ್ಶನವಿಲ್ಲದೆ ಮುಚ್ಚಿದ್ದ ಸುಮಾರು ನೂರಕ್ಕೂ ಹೆಚ್ಚು ಚಿತ್ರಮಂದಿರಗಳು ಮತ್ತೆ ಪ್ರದರ್ಶನ ಆರಂಭಿಸಿವೆ.



ತೆರೆಗೆ ಸಿದ್ಧವಾದ ಸಿ

ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸುತ್ತಿರುವ ಸಿ ಸಿನಿಮಾ ತೆರೆಗೆ ಬರಲು ಸಿದ್ಧವಾಗಿದೆ. ಸಿ ಚಿತ್ರದ ಲಿರಿಕಲ್ ವಿಡಿಯೊ ಹಾಡು ಬಿಡುಗಡೆಯಾಗಿದೆ. ಎ ಅಲ್ಲ.. ಬಿ ಅಲ್ಲ.. ಸಿ.. ಎಂಬ ಹಾಡಿನ ಲಿರಿಕಲ್ ವಿಡಿಯೊವನ್ನು ನಟ ಲೂಸ್ ಮಾದ ಯೋಗಿ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ವಿ. ನಾಗೇಂದ್ರ ಪ್ರಸಾದ್ ಸಾಹಿತ್ಯದ

ಈ ಗೀತೆಗೆ ಎ.ಬಿ.ಮುರಳೀಧರನ್ ಸಂಗೀತ ಸಂಯೋಜಿಸಿದ್ದು, ಶಶಾಂಕ್ ಶೇಷಗಿರಿ ದನಿಯಲ್ಲಿ ಮೂಡಿಬಂದಿದೆ. ಕೆಲ ದಿನಗಳ ಹಿಂದೆ ಸಿ ಸಿನಿಮಾದ ತಂದೆ-ಮಗಳ ಬಾಂಧವ್ಯದ ಕಂದಾ.. ಕಂದಾ.. ಎಂಬ ಬಿಡುಗಡೆಯಾಗಿದ್ದು ಬದುಕಿನ ಬಂಧ ಬೆಸೆಯುವ ಸಾಹಿತ್ಯದ ಈ ಗೀತೆಗೆ ಸಂಗೀತ ಪ್ರಿಯರ ತಲೆದೂಗಿದ್ದರು. ಕಿರಣ್ ಸುಬ್ರಮಣಿ, ಸಿ ಸಿನಿಮಾವನ್ನು ನಿರ್ದೇಶಿಸುವುದರ ಜತೆಗೆ ನಾಯಕ ನಟನಾಗಿಯೂ ಅಭಿನಯಿಸಿದ್ದಾರೆ.

ಬಿಗ್‌ಬಾಸ್‌ಗೆ ಹೋಗಲ್ವಂತೆ ಜ್ಯೋತಿ

ಕಿರುತೆರೆಯಲ್ಲಿ ಖ್ಯಾತಿ ಗಳಿಸಿದ್ದ ನಟಿ ಜ್ಯೋತಿ ರೈ, ಕೆಲವು ಕನ್ನಡ ಸಿನಿಮಾಗಳಲ್ಲಿಯೂ ನಟಿಸಿ ಮನಗೆದ್ದಿದ್ದಾರೆ. ಸದ್ಯ ಮಾಡೆಲಿಂಗ್‌ಕ್ಷೇತ್ರದಲ್ಲಿ ಬ್ಯುಸಿಯಾಗಿದ್ದು, ಗ್ಲಾಮರ್ ಫೋಟೋಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಳ್ಳುತ್ತಿರುತ್ತಾರೆ. ಹೀಗಿರುವಾಗಲೇ ಜ್ಯೋತಿ ರೈಗೆ ಕನ್ನಡದ ಪ್ರಸಿದ್ಧ ರಿಯಾಲಿಟಿ ಶೋಗಳಲ್ಲಿ ಒಂದಾದ ಬಿಗ್‌ಬಾಸ್‌ನಲ್ಲಿ ಅವಕಾಶ ಬಂದಿತ್ತು. ಆದರೆ ಅದನ್ನು ಜ್ಯೋತಿ ನಯವಾಗಿ ತಿರಸ್ಕರಿಸಿದ್ದಾರೆ. ಬಿಗ್‌ಬಾಸ್ ಮುಂದಿನ ಸೀಸನ್‌ನ ಸೀಸನ್‌ನಲ್ಲಿ ಪಾಲ್ಗೊಳ್ಳಲು ನನಗೆ ಅವಕಾಶ ಬಂದಿತ್ತು. ಆದರೆ ನಾನು ಹಲವು ಪ್ರೊಜೆಕ್ಟ್‌ಗಳಲ್ಲಿ ಬ್ಯುಸಿಯಾಗಿರುವುದರಿಂದ ಅದನ್ನು ಗೌರವದಿಂದಲೇ ತಿರಸ್ಕರಿಸಿದ್ದೇನೆ ಎಂದಿದ್ದಾರೆ ಜ್ಯೋತಿ. ಕನ್ನಡದ ಬಿಗ್‌ಬಾಸ್ ರಿಯಾಲಿಟಿ ಶೋ ಸಾಕಷ್ಟು ಜನಪ್ರಿಯವಾಗಿದ್ದು, ಬಿಗ್‌ಬಾಸ್ ಮನೆಗೆ ಪ್ರವೇಶಿಸಲು ಹಲವರು ತುದಿಗಾಲಲ್ಲಿ ನಿಂತಿರುತ್ತಾರೆ. ಆದರೆ ಜ್ಯೋತಿ ಮಾತ್ರ ಬಂದ ಅವಕಾಶವನ್ನು ನಿರಾಕರಿಸಿದ್ದಾರೆ. ಜ್ಯೋತಿ, ನೈಸ್ ರೋಡ್ ಚಿತ್ರದಲ್ಲಿ ನಟಿಸಿದ್ದು, ಈ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಇನ್ನು ಹತ್ತು ಸೀಸನ್‌ಗಳನ್ನು ಯಶಸ್ವಿಯಾಗಿ ಪೂರೈಸಿರುವ ಬಿಗ್‌ಬಾಸ್ ಹನ್ನೊಂದನೇ ಸೀಸನ್ ಅಕ್ಟೋಬರ್‌ನಲ್ಲಿ ಆರಂಭಗೊಳ್ಳಲಿದೆ. ಈ ಬಾರಿಯೂ ಕಿಚ್ಚ ಸುದೀಪ್ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ. ಈ ಬಾರಿ ಬಿಗ್‌ಬಾಸ್ ಮನೆಗೆ ಯಾರೆಲ್ಲಾ ಪ್ರವೇಶಿಸಬಹುದು ಎಂಬ ಕುತೂಹಲ ಈಗಾಗಲೇ ಆರಂಭವಾಗಿದೆ.